ಸೋಮವಾರ, ನವೆಂಬರ್ 7, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 307 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ದೊಡ್ಡವರೆಲ್ಲಾ ಜಾಣರಲ್ಲ...
ಟಿಇಟಿ: ಪರೀಕ್ಷಾ ಕೇಂದ್ರಗಳಲ್ಲಿ ಗೊಂದಲ, ಪರದಾಟ 5
7ನೇ ವೇತನ ಆಯೋಗ: 2 ದಿನದಲ್ಲಿ ಆದೇಶ 6
ಇಂದು ಶಿಕ್ಷಣ 7
ಹಿಮಾಚಲ ಪ್ರದೇಶ: ಪ್ರಣಾಳಿಕೆ ಬಿಡುಗಡೆ ಮಾಡಿದ ಬಿಜೆಪಿ
ಏಕರೂಪ ನಾಗರಿಕ ಸಂಹಿತೆ ಜಾರಿ ಭರವಸೆ 6

ಐದು ವರ್ಷಗಳಲ್ಲಿ 54.32 ಲಕ್ಷ ಹೆಕ್ಟೇರ್ ಬೆಳೆ ಹಾನಿ ● ವಿಶ್ವ ಬ್ಯಾಂಕ್ ನೆರವು ಕೇಳಿದ ಕರ್ನಾಟಕ

ಅತಿವೃಷ್ಟಿ: ₹93,648 ಕೋಟಿ ನಷ್ಟ

● ಮಂಜುನಾಥ ಹೆಬ್ಬಾರ್

ಅತಿವೃಷ್ಟಿ ಹಾನಿ (ಐದು ವರ್ಷಗಳಲ್ಲಿ)

2.62 ಲಕ್ಷ	ಮನೆಗಳು
1.5 ಲಕ್ಷ ಕಿ.ಮೀ	ರಸ್ತೆಗಳು
30,000	ಸೇತುವೆಗಳು
49,000	ಶಾಲಾ ಕಟ್ಟಡಗಳು
9,000	ಜಲಮೂಲಗಳು

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ಅತಿವೃಷ್ಟಿ ಹಾಗೂ ಬರದಿಂದಾಗಿ ಕಳೆದ ಐದು ವರ್ಷಗಳಲ್ಲಿ 54.32 ಲಕ್ಷ ಹೆಕ್ಟೇರ್ (1.36 ಕೋಟಿ ಎಕರೆ) ಕೃಷಿ ಹಾಗೂ ತೋಟಗಾರಿಕಾ ಬೆಳೆಗೆ ಹಾನಿಯಾಗಿದ್ದು, ₹93,648 ಕೋಟಿ ನಷ್ಟ ಉಂಟಾಗಿದೆ.

ಕರ್ನಾಟಕದ ಶೇ 80ರಷ್ಟು ಭೌಗೋಳಿಕ ಪ್ರದೇಶವು ಬರಪೀಡಿತವೆಂದು ಗುರುತಿಸಿಕೊಂಡಿದೆ. ಕಳೆದ 20 ವರ್ಷಗಳಲ್ಲಿ, ಕೆಲವು ಪ್ರದೇಶಗಳು 15 ವರ್ಷ ಬರದಿಂದ ನರಳಿವೆ. ಅದೇ ವೇಳೆ, ಕೆಲವು ಪ್ರದೇಶಗಳಲ್ಲಿ 14 ವರ್ಷ ಅತಿವೃಷ್ಟಿ ಉಂಟಾಗಿ ವ್ಯಾಪಕ ಹಾನಿ ಸಂಭವಿಸಿದೆ. 2018ರಿಂದ ನಿರಂತರ ಐದು ವರ್ಷ ಪ್ರವಾಹ ಕಾಣಿಸಿಕೊಂಡಿದೆ. ಪಶ್ಚಿಮಘಟ್ಟದಲ್ಲಿ ಭೂಕುಸಿತ ಸಾಮಾನ್ಯವಾಗಿದೆ. ಕೆಲವೆಡೆ ಲಘುಭೂಕಂಪನಗಳಾಗಿವೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಕರ್ನಾಟಕ ಸರ್ಕಾರವು ವಿಶ್ವಬ್ಯಾಂಕ್‌ನ ನೆರವು ಯಾಚಿಸಿದೆ. ವಿಶ್ವ ಬ್ಯಾಂಕ್ ಆರು ಮಂದಿ ತಜ್ಞರ ತಂಡವನ್ನು ಕರ್ನಾಟಕಕ್ಕೆ ಕಳುಹಿಸಿದೆ. ಈ ತಜ್ಞರ ತಂಡವು ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಹಾಗೂ ಹಿರಿಯ ಅಧಿಕಾರಿಗಳ ಜತೆಗೆ ಇತ್ತೀಚೆಗೆ ಸಭೆ ನಡೆಸಿ ಹಲವು ಸಲಹೆಗಳನ್ನು ನೀಡಿದೆ. ಜಾಗತಿಕ ತಾಪಮಾನ ಬದಲಾವಣೆಯಿಂದ ಉಂಟಾಗಿರುವ ಸವಾಲುಗಳನ್ನು ಎದುರಿಸುತ್ತಿರುವ ಬಗ್ಗೆಯೂ ತಂಡವು ಸಮಾಲೋಚನೆ ನಡೆಸಿದೆ.

ಪ್ರಜಾವಾಣಿ ವಿಶೇಷ

ಅತಿವೃಷ್ಟಿಯಿಂದಾಗಿ ಉಂಟಾದ ಹಾನಿಗೆ ಎಸ್‌ಡಿಆರ್‌ಎಫ್ ಹಾಗೂ ಎನ್‌ಡಿಆರ್‌ಎಫ್‌ನಿಂದ ತಾತ್ಕಾಲಿಕ ಪರಿಹಾರ ಸಿಕ್ಕಿದೆ. ಮನೆಗಳ ದುರಸ್ತಿ ಹಾಗೂ ಪುನರ್ ನಿರ್ಮಾಣ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಇನ್‌ಪುಟ್ ಸಬ್ಸಿಡಿಯನ್ನು ರಾಜ್ಯ ಸರ್ಕಾರದ ಖಜಾನೆಯಿಂದಲೇ ನೀಡಲಾಗಿದ್ದು, ಇದು ದೊಡ್ಡ ಹೊರೆಯಾಗಿದೆ. ಕಳೆದ 10 ವರ್ಷಗಳಲ್ಲಿ ವಿಪತ್ತು ಪರಿಹಾರ ಕಾಮಗಾರಿಗಳಿಗೆ ₹22,041 ಕೋಟಿ ವೆಚ್ಚ ಮಾಡಲಾಗಿದೆ ಎಂಬ ಮಾಹಿತಿಯನ್ನು ರಾಜ್ಯ ಸರ್ಕಾರದ ಅಧಿಕಾರಿಗಳು ತಜ್ಞರ ಸಮಿತಿಯ ಗಮನಕ್ಕೆ ತಂದಿದ್ದಾರೆ.

'ಎನ್‌ಡಿಆರ್‌ಎಫ್‌ನಿಂದ ತುರ್ತಾಗಿ ನೆರವು ಪಡೆಯಲು ಪ್ರವಾಹದ ಹಾನಿಯ ಲೆಕ್ಕಾಚಾರವನ್ನು ಮಾಡಲಾಗುತ್ತದೆ. ಆದರೆ, ವಾಸ್ತವದಲ್ಲಿ ಕೇಂದ್ರಕ್ಕೆ ಸಲ್ಲಿಸಿದ ಪ್ರಸ್ತಾವಕ್ಕಿಂತಲೂ ಹೆಚ್ಚು ಹಾನಿ ಉಂಟಾಗಿರುತ್ತದೆ. ಸಣ್ಣ ಉದ್ಯಮಗಳಿಗೆ ಉಂಟಾದ ನಷ್ಟ ಹಾಗೂ ಜೀವಹಾನಿಯನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ. ಮೂಲಸೌಕರ್ಯ ಹಾನಿಗೆ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್‌ನಿಂದ ನೆರವು ಸಿಗುವುದಿಲ್ಲ. ಬೆಂಗಳೂರು ವಾಸ್ತವದಲ್ಲಿ ಪ್ರವಾಹ ಪೀಡಿತ ಪ್ರದೇಶ ಅಲ್ಲ. ಅತಿಯಾದ ಮಾನವನ ಹಸ್ತಕ್ಷೇಪದಿಂದಲೇ ನಗರದಲ್ಲಿ ಪ್ರವಾಹ ಉಂಟಾಗುತ್ತಿದೆ. ಇದನ್ನು ತಡೆಗಟ್ಟಲು ಕಠಿಣ ಕಾನೂನು ಚೌಕಟ್ಟು ರೂಪಿಸಬೇಕು ಹಾಗೂ ಸಮಗ್ರ ನಗರ ಯೋಜನೆಯನ್ನು ರೂಪಿಸಬೇಕಿದೆ' ಎಂದು ಕಂದಾಯ ಇಲಾಖೆಯ ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ (ವಿಪತ್ತು ನಿರ್ವಹಣೆ) ಸಭೆಯಲ್ಲಿ ಪ್ರತಿಪಾದಿಸಿದರು.

ಈ ವರ್ಷ ಬೆಂಗಳೂರಿನಲ್ಲಿ ಹಲವು ಬಾರಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಒಂದು ಗಂಟೆಯ ಮಳೆಗೆ ಹಲವು ಬಡಾವಣೆಗಳು ಜಲಾವೃತವಾಗಿವೆ. ರಾಜಧಾನಿಯಲ್ಲಿ ಪ್ರವಾಹ ನಿಯಂತ್ರಣಕ್ಕೆ ಅತ್ಯುತ್ತಮ ಜಾಗತಿಕ ಮಾದರಿಗಳನ್ನು ಅಳವಡಿಸಿಕೊಳ್ಳಲು ರಾಜ್ಯ ಸರ್ಕಾರ ಉತ್ಸುಕವಾಗಿದೆ. ಇದಕ್ಕೆ ವಿಶ್ವ ಬ್ಯಾಂಕ್ ತಾಂತ್ರಿಕ ನೆರವು ನೀಡಬೇಕು ಎಂದು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಕೋರಿದರು. ಕೇರಳ ಹಾಗೂ ಮಹಾರಾಷ್ಟ್ರ ರಾಜ್ಯಗಳಲ್ಲಿ ತಾಪಮಾನ ಹಾಗೂ ಪ್ರವಾಹ ಸ್ಥಿತಿಸ್ಥಾಪಕತ್ವ ಯೋಜನೆಗಳಿಗೆ ವಿಶ್ವ ಬ್ಯಾಂಕ್ ನೆರವು ನೀಡಿದ್ದು, ಅದೇ ಮಾದರಿಯಲ್ಲಿ ಕರ್ನಾಟಕಕ್ಕೂ ಸಹಕಾರ ನೀಡಲು ಸಿದ್ಧ ಎಂದು ತಜ್ಞರ ಸಮಿತಿಯು ಸರ್ಕಾರಕ್ಕೆ ವಾಗ್ದಾನ ನೀಡಿತು ಎಂದು ಮೂಲಗಳು ತಿಳಿಸಿವೆ.

ಶೀಘ್ರ ಜಲನೀತಿ

'ರಾಜ್ಯದಲ್ಲಿ ಜಲಸಂಪನ್ಮೂಲಗಳ ನಿರ್ವಹಣೆಗೆ ಸರ್ಕಾರವು ಸಮಗ್ರ ನೀರಿನ ಸಂಪನ್ಮೂಲ ನಿರ್ವಹಣೆಗೆ ಉನ್ನತ ಕೇಂದ್ರ ಸ್ಥಾಪಿಸಿದೆ. ಗುಣಮಟ್ಟದ ನೀರು ಪೂರೈಕೆ, ಬರ ಹಾಗೂ ಪ್ರವಾಹ ನಿರ್ವಹಣೆ, ಕೈಗಾರಿಕೆ ಹಾಗೂ ಕೃಷಿಗೆ ಅಗತ್ಯ ನೀರು ಒದಗಿಸಲು ಹೊಸ ಜಲ ನೀತಿಯನ್ನು ಸರ್ಕಾರ ಶೀಘ್ರದಲ್ಲಿ ರೂಪಿಸಲಿದೆ ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ತಿಳಿಸಿದರು.

ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಎಐಸಿಸಿ ನೂತನ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೇವಾಲಾ ಬೆಳ್ಳಿ ಗದೆ ನೀಡಿ ಗೌರವಿಸಿದರು –ಪ್ರಜಾವಾಣಿ ಚಿತ್ರ

'ಕೈ' ನಾಯಕರ ಒಗ್ಗಟ್ಟಿಗೆ ವೇದಿಕೆಯಾದ ಸಮಾವೇಶ

ಅಧಿಕಾರಕ್ಕೆ ಬಂದರೆ ಎಲ್ಲ ಹುದ್ದೆಗಳೂ ಭರ್ತಿ: ಖರ್ಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇನ್ನು ಕೇವಲ ಆರು ತಿಂಗಳಲ್ಲಿ ರಾಜ್ಯ ವಿಧಾನಸಭೆ ಚುನಾವಣೆ ಎದುರಾಗಲಿದೆ. ಅದಕ್ಕೆ ಸಾಕಷ್ಟು ಸಿದ್ಧತೆ ಆರಂಭಿಸಿರುವ ಕಾಂಗ್ರೆಸ್ ನಾಯಕರು, ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅಭಿನಂದನೆ ಸಲ್ಲಿಸಲು ಭಾನುವಾರ ಆಯೋಜಿಸಿದ್ದ 'ಸರ್ವೋದಯ ಸಮಾವೇಶ'ವನ್ನೂ ಪಕ್ಷ ಸಂಘಟನೆ, ಚುನಾವಣಾ ಪ್ರಚಾರ, ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯನ್ನಾಗಿ ಬಳಸಿಕೊಂಡರು.

ಎಐಸಿಸಿ ಅಧ್ಯಕ್ಷರಾದ ನಂತರ ಖರ್ಗೆ ಇದೇ ಮೊದಲ ಬಾರಿ ರಾಜ್ಯಕ್ಕೆ ಬಂದ ಹಿನ್ನೆಲೆಯಲ್ಲಿ ಅರಮನೆ ಮೈದಾನದಲ್ಲಿ ಈ ಸಮಾವೇಶ ಹಮ್ಮಿಕೊಳ್ಳಲಾಗಿತ್ತು.

ಭಾರಿ ಸಂಖ್ಯೆಯಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಖರ್ಗೆ, 'ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಖಾಲಿ ಇರುವ ಎಲ್ಲ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ' ಎಂದು ಭರವಸೆ ನೀಡಿದರು.

'ಕರ್ನಾಟಕದ ಚುನಾವಣೆ ಪಕ್ಷದ ಪಾಲಿಗೆ ಬಹಳ ಮಹತ್ವದ್ದು. ನನಗೆ ನಿಜವಾದ ಗೌರವ ಸಲ್ಲಬೇಕಾದರೆ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಬೇಕು' ಎಂದು ಬೇಡಿಕೆ ಇಟ್ಟರು. ಆಗ ಕಾರ್ಯಕರ್ತರು ಚಪ್ಪಾಳೆ, ಹರ್ಷೋದ್ಗಾರಗಳ ಮೂಲಕ ಸ್ಪಂದಿಸಿ, ಸಂಭ್ರಮಿಸಿದರು.

> **ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೂಡಾ ಒಂದು ದಿನ ಎಐಸಿಸಿ ಅಧ್ಯಕ್ಷ ಆಗಬಹುದು ಎಂಬುದಕ್ಕೆ ಖರ್ಗೆಯವರೇ ಸಾಕ್ಷಿ. ಅವರು ಕೇವಲ ಕಾರ್ಯಕರ್ತರ ಮಾತು ಕೇಳುವುದಿಲ್ಲ. ಅವರ ಪರವಾಗಿ ಕೆಲಸ ಮಾಡುತ್ತಾರೆ**
> **ರಣದೀಪ್ ಸಿಂಗ್ ಸುರ್ಜೇವಾಲಾ** ರಾಜ್ಯ ಕಾಂಗ್ರೆಸ್ ಉಸ್ತುವಾರಿ

> **ಖರ್ಗೆ ಅವರು ಜಾತಿ, ಧರ್ಮದ ಮೇಲೆ ನಂಬಿಕೆ ಇಟ್ಟವರಲ್ಲ. ಪರಿಶಿಷ್ಟ ಜಾತಿ ಆಧಾರದ ಮೇಲೆ ಅಧಿಕಾರ ಸಿಗಬೇಕು ಎಂದು ಬಯಸಿದವರಲ್ಲ. ಅವರು ಇಡೀ ರಾಷ್ಟ್ರದಲ್ಲಿ ಪಕ್ಷಕ್ಕೆ ಶಕ್ತಿ ತುಂಬಲಿದ್ದಾರೆ**
> **ಡಿ.ಕೆ. ಶಿವಕುಮಾರ್** ಕೆಪಿಸಿಸಿ ಅಧ್ಯಕ್ಷ

6ನೇ ಪುಟ ನೋಡಿ

ಉಪಚುನಾವಣೆ: ಬಿಆರ್‌ಎಸ್‌ಗೆ ಗೆಲುವು

ಬಿಜೆಪಿ ಮುನ್ನಡೆ, ಕಾಂಗ್ರೆಸ್‌ಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆರು ರಾಜ್ಯಗಳ ಏಳು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯ ಫಲಿತಾಂಶ ಭಾನುವಾರ ಪ್ರಕಟವಾಗಿದೆ. ಇದ್ದ ಎರಡು ಕ್ಷೇತ್ರಗಳನ್ನು ಕಳೆದುಕೊಂಡಿರುವ ಕಾಂಗ್ರೆಸ್ ಹಿನ್ನಡೆ ಅನುಭವಿಸಿದೆ. ಬಿಜೆಪಿ ನಾಲ್ಕು ಕ್ಷೇತ್ರಗಳಲ್ಲಿ ಗೆದ್ದರೆ, ಬಿಆರ್‌ಎಸ್, ಆರ್‌ಜೆಡಿ ಮತ್ತು ಶಿವಸೇನಾ (ಠಾಕ್ರೆ ಬಣ) ತಲಾ ಒಂದು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿವೆ.

ಚುನಾವಣೆ ನಡೆದ ಏಳು ಕ್ಷೇತ್ರಗಳ ಪೈಕಿ ಮೂರರಲ್ಲಿ ಬಿಜೆಪಿ ಶಾಸಕರಿದ್ದರು. ಆದರೆ, ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದು ಮುನ್ನಡೆ ಸಾಧಿಸಿದೆ.

ಭಾರಿ ಕುತೂಹಲ ಕೆರಳಿಸಿದ್ದ ತೆಲಂಗಾಣದ ಮುನುಗೋಡು ಕ್ಷೇತ್ರದಲ್ಲಿ ಬಿಆರ್‌ಎಸ್ ಗೆದ್ದಿದೆ. ಕಾಂಗ್ರೆಸ್‌ನಿಂದ ಗೆದ್ದು ಬಿಜೆಪಿಗೆ ಸೇರಿದ್ದ ಕೊಮಟಿರೆಡ್ಡಿ ರಾಜಗೋಪಾಲ ರೆಡ್ಡಿ ಅವರನ್ನು ಬಿಆರ್‌ಎಸ್‌ನ ಕೆ. ಪ್ರಭಾಕರ ರೆಡ್ಡಿ ಅವರು 10,113 ಮತಗಳ ಅಂತರದಿಂದ ಸೋಲಿಸಿದ್ದಾರೆ. ಇಲ್ಲಿ ತೀರಾ ಜಿದ್ದಾಜಿದ್ದಿನ ಚುನಾವಣಾ ಪ್ರಚಾರ ನಡೆದಿತ್ತು.

ಕಾಂಗ್ರೆಸ್‌ನ ಸ್ಥಿತಿ ಹೀನಾಯವಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಪಲವಿ ಸ್ರಾವಂತಿ ರೆಡ್ಡಿ ಅವರು ಮೂರನೇ ಸ್ಥಾನ ಪಡೆದರೂ ಅವರಿಗೆ ಠೇವಣಿ ಉಳಿಸಿಕೊಳ್ಳುವಷ್ಟು ಮತಗಳೂ ಸಿಕ್ಕಿಲ್ಲ.

6ನೇ ಪುಟ ನೋಡಿ

ಪಕ್ಷೇತರರಿಗಿಂತ ನೋಟಾಕ್ಕೆ ಹೆಚ್ಚು ಮತ

ಮುಂಬೈ (ಪಿಟಿಐ): ಶಿವಸೇನಾದ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ರುತುಜಾ ಲಟ್ಕೆ ಅವರು ಅಂಧೇರಿ (ಪೂರ್ವ) ವಿಧಾನಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ರುತುಜಾ ಅವರಿಗೆ 66,000 ಮತಗಳು ಸಿಕ್ಕಿವೆ. ಅಚ್ಚರಿ ಮೂಡಿಸುವಷ್ಟು ಮತಗಳು ನೋಟಾಕ್ಕೆ ಬಿದ್ದಿವೆ. ನೋಟಾ ಮತಗಳ ಸಂಖ್ಯೆ 12,806. ಈ ಕ್ಷೇತ್ರದಲ್ಲಿ ಒಟ್ಟು 86,570 ಜನರು ಮತ ಚಲಾಯಿಸಿದ್ದರು.

ರುತುಜಾ ಅವರ ಗಂಡ ರಮೇಶ್ ಲಟ್ಕೆ ಅವರ ನಿಧನದಿಂದಾಗಿ ಈ ಕ್ಷೇತ್ರಕ್ಕೆ ಉಪಚುನಾವಣೆ ನಡೆದಿತ್ತು. ಮಹಾ ವಿಕಾಸ್ ಆಘಾಡಿಯ ಮಿತ್ರ ಪಕ್ಷಗಳಾದ ಕಾಂಗ್ರೆಸ್ ಮತ್ತು ಎನ್‌ಸಿಪಿ ರುತುಜಾ ಅವರಿಗೆ ಬೆಂಬಲ ಸೂಚಿಸಿದ್ದವು. ಬಿಜೆಪಿ ತನ್ನ ಅಭ್ಯರ್ಥಿಯನ್ನು ಹಿಂದಕ್ಕೆ ಪಡೆದಿತ್ತು. ಹಾಗಾಗಿ, ರುತುಜಾ ಅವರು ಗೆಲ್ಲುವುದು ಖಚಿತವೇ ಆಗಿತ್ತು. ಅವರ ವಿರುದ್ಧ ಆರು ಪಕ್ಷೇತರ ಅಭ್ಯರ್ಥಿಗಳು ಮಾತ್ರ ಕಣದಲ್ಲಿ ಇದ್ದರು. ಈ ಎಲ್ಲರಿಗೂ ಒಟ್ಟಾಗಿ ನೋಟಾಕ್ಕೆ ಸಿಕ್ಕಷ್ಟು ಮತಗಳೂ ಸಿಕ್ಕಿಲ್ಲ.

> **ಇದು ಹೋರಾಟದ ಆರಂಭ ಮಾತ್ರ. ಚಿಹ್ನೆಯು ಮುಖ್ಯವೇ ಆದರೂ ಜನರು ವ್ಯಕ್ತಿತ್ವವನ್ನೂ ನೋಡುತ್ತಾರೆ. ಜನಬೆಂಬಲವಿದೆ ಎಂಬುದನ್ನು ಫಲಿತಾಂಶವು ತೋರಿಸಿಕೊಟ್ಟಿದೆ**
> **ಉದ್ಧವ್ ಠಾಕ್ರೆ,** ಶಿವಸೇನಾ (ಉದ್ಧವ್ ಬಾಳಾಸಾಹೇಬ್ ಠಾಕ್ರೆ) ಮುಖ್ಯಸ್ಥ

ತಾಂಜಾನಿಯಾ: ಸರೋವರಕ್ಕೆ ಬಿದ್ದ ವಿಮಾನ, 19 ಸಾವು

ದಾರ್ ಎಸ್ ಸಲಾಮ್ (ತಾಂಜಾನಿಯಾ): ತಾಂಜಾನಿಯಾದಲ್ಲಿ 43 ಪ್ರಯಾಣಿಕರನ್ನು ಹೊತ್ತಿದ್ದ ಸಣ್ಣ ಪ್ರಯಾಣಿಕ ವಿಮಾನವೊಂದು ಲ್ಯಾಂಡಿಂಗ್ ವೇಳೆ ತಾಂತ್ರಿಕ ದೋಷ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ಬುಕೋಬ ನಗರದ ವಿಕ್ಟೋರಿಯಾ ಸರೋವರದಲ್ಲಿ ಭಾನುವಾರ ಬಿದ್ದಿದ್ದು, 19 ಮಂದಿ ಮೃತಪಟ್ಟಿದ್ದಾರೆ. 10



ಮನೆ ಬಾಗಿಲಿಗೇ ಕಾಡಾನೆ ಹಿಂಡು

ಹಾಸನ: ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಕಾಫಿ ತೋಟ, ಭತ್ತದ ಗದ್ದೆಗೆ ನುಗ್ಗುತ್ತಿದ್ದ ಆನೆಗಳು ಇದೀಗ ಮನೆ ಬಾಗಿಲಿಗೇ ಬರುತ್ತಿವೆ. ಮನೆಯಿಂದ ಹೊರಗೆ ಹೋಗಲೂ ಆಗದೇ, ಒಳಗಿರಲೂ ಆಗದೇ ರೈತಾಪಿ ಜನರು ತೊಂದರೆ ಅನುಭವಿಸುತ್ತಿದ್ದಾರೆ. 5

ನಾಲ್ಕರ ಘಟ್ಟಕ್ಕೆ ಭಾರತ, ಪಾಕಿಸ್ತಾನ

ಟಿ20 ವಿಶ್ವಕಪ್ ಟೂರ್ನಿಯಲ್ಲಿ ತೀವ್ರ ಕುತೂಹಲ ಕೆರಳಿಸಿದ್ದ ಎರಡನೇ ಗುಂಪಿನ ಕೊನೆಯ ಪಂದ್ಯಗಳಲ್ಲಿ ಜಯಿಸಿದ ಭಾರತ ಹಾಗೂ ಪಾಕಿಸ್ತಾನ ತಂಡಗಳು ಸೆಮಿಫೈನಲ್ ಪ್ರವೇಶಿಸಿದವು. ನೆದರ್ಲೆಂಡ್ಸ್ ಎದುರು ಸೋಲಿನ ಆಘಾತ ಅನುಭವಿಸಿದ ಬಲಾಢ್ಯ ದಕ್ಷಿಣ ಆಫ್ರಿಕಾ ತಂಡ ಟೂರ್ನಿಯಿಂದ ಹೊರಬಿತ್ತು.

ಐಸಿಸಿ ಟ್ವೆಂಟಿ-20 ವಿಶ್ವಕಪ್ ಆಸ್ಟ್ರೇಲಿಯಾ 2022

ಭಾರತ 5ಕ್ಕೆ 186 (20 ಓವರ್‌ಗಳಲ್ಲಿ)
ಜಿಂಬಾಬ್ವೆ 115 (17.2 ಓವರ್‌ಗಳಲ್ಲಿ)
ಭಾರತಕ್ಕೆ 71 ರನ್‌ಗಳ ಜಯ

ಸೂರ್ಯಕುಮಾರ್ ಯಾದವ್ (ಔಟಾಗದೆ 61; 25ಎಸೆತ, 6ಬೌಂಡರಿ, 4ಸಿಕ್ಸರ್)
ಕೆ.ಎಲ್. ರಾಹುಲ್ (51; 35ಎಸೆತ, 3ಬೌಂಡರಿ, 3ಸಿಕ್ಸರ್)

ನೆದರ್ಲೆಂಡ್ಸ್ 4ಕ್ಕೆ 158 (20 ಓವರ್‌ಗಳಲ್ಲಿ)
ದಕ್ಷಿಣ ಆಫ್ರಿಕಾ 8ಕ್ಕೆ 145 (20 ಓವರ್‌ಗಳಲ್ಲಿ)
ಬ್ರೆಂಡನ್ ಗ್ಲೋವರ್ (ನೆದರ್ಲೆಂಡ್ಸ್) 9ಕ್ಕೆ 3
ಕಾಲಿನ್ ಅಕೆರ್ಮನ್ ಔಟಾಗದೆ 41
ನೆದರ್ಲೆಂಡ್ಸ್‌ಗೆ 13ರನ್ ಜಯ

ಬಾಂಗ್ಲಾದೇಶ 8ಕ್ಕೆ 127 (20 ಓವರ್‌ಗಳಲ್ಲಿ)
ಪಾಕಿಸ್ತಾನ 5ಕ್ಕೆ 128 (18.1 ಓವರ್‌ಗಳಲ್ಲಿ)
ಶಾಹೀನ್ ಶಾ ಆಫ್ರಿದಿ (ಪಾಕ್) 22ಕ್ಕೆ 4
ಪಾಕಿಸ್ತಾನಕ್ಕೆ 5ವಿಕೆಟ್ ಜಯ

ಸೆಮಿಫೈನಲ್ ಹಣಾಹಣಿ
ಪಾಕಿಸ್ತಾನ–ನ್ಯೂಜಿಲೆಂಡ್ (ಸಿಡ್ನಿ, ನ.9)
ಭಾರತ–ಇಂಗ್ಲೆಂಡ್ (ಅಡಿಲೇಡ್, ನ.10)
12

ಒಳ ಪುಟಗಳು

ಕಾಶ್ಮೀರದಲ್ಲಿ ಹಿಮ ಚಿರತೆ ಪತ್ತೆ 11
ಮತ್ತೆ ಪುಂಡಾನೆ ಸೆರೆಗೆ ಸಜ್ಜು 5
ಟ್ವಿಟರ್‌ಗೆ ಶುಲ್ಕ: ಭಾರತದಲ್ಲೂ ಶೀಘ್ರ 10
ಶುಕ್ರನಲ್ಲಿಗೆ ನೌಕೆ ಸಂಶೋಧನೆ– ಇಸ್ರೊ ಮುಂದಿನ ಯೋಜನೆ 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಜನರ ಬಳಿ ಇರುವ ನಗದು ಪ್ರಮಾಣ ಶೇ 71ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ದೇಶದ ಜನರ ಕೈಯಲ್ಲಿ ಚಲಾವಣೆಯಲ್ಲಿ ಇರುವ ನಗದು ಮೊತ್ತವು ಅಕ್ಟೋಬರ್ 21ರ ಹೊತ್ತಿಗೆ ₹ 30.88 ಲಕ್ಷ ಕೋಟಿಗೆ ಏರಿಕೆ ಆಗಿದೆ. ನೋಟು ರದ್ದತಿಯು ಜಾರಿಗೆ ಬಂದು ಆರು ವರ್ಷಗಳ ನಂತರವೂ, ದೇಶದಲ್ಲಿ ನಗದು ಚಲಾವಣೆ ಹೆಚ್ಚುತ್ತಲೇ ಇದೆ ಎಂಬುದನ್ನು ಇದು ಹೇಳುತ್ತಿದೆ.

2016ರ ನವೆಂಬರ್ 4ರಂದು ಜನರ ಕೈಯಲ್ಲಿ ಚಲಾವಣೆಯಲ್ಲಿ ಇದ್ದ ನಗದು ಮೊತ್ತಕ್ಕೆ ಹೋಲಿಸಿದರೆ, ಈ ವರ್ಷದ ಅಕ್ಟೋಬರ್ 21ರಂದು ಜನರ ಕೈಯಲ್ಲಿ ಚಲಾವಣೆಯಲ್ಲಿ ಇದ್ದ ನಗದು ಪ್ರಮಾಣವು ಶೇಕಡ 71.84ರಷ್ಟು ಹೆಚ್ಚು. ಪ್ರಧಾನಿ ನರೇಂದ್ರ ಮೋದಿ ಅವರು ಗರಿಷ್ಠ ಮುಖಬೆಲೆಯ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುತ್ತಿರುವುದಾಗಿ 2016ರ ನವೆಂಬರ್ 8ರಂದು ಘೋಷಿಸಿದ್ದರು.

ದೇಶದಲ್ಲಿ ಭ್ರಷ್ಟಾಚಾರ ಹಾಗೂ ಕಪ್ಪು ಹಣವನ್ನು ಕಡಿಮೆ ಮಾಡಲು ಈ ಕ್ರಮ ಕೈಗೊಳ್ಳುತ್ತಿರುವುದಾಗಿ ಅವರು ತಿಳಿಸಿದ್ದರು. ಆರ್‌ಬಿಐ ಮಾಹಿತಿ ಪ್ರಕಾರ 2016ರ ನವೆಂಬರ್ 4ರಂದು ಜನರ ಕೈಯಲ್ಲಿ ಚಲಾವಣೆಯಲ್ಲಿ ಇದ್ದ ನಗದು ಮೊತ್ತ ₹ 17.7 ಲಕ್ಷ ಕೋಟಿ.

ಬಳಸಲು ಸುಲಭವಾದ ಹಾಗೂ ಹೊಸ ಬಗೆಯ ಡಿಜಿಟಲ್ ಪಾವತಿ ವ್ಯವಸ್ಥೆಗಳು ದೇಶದಲ್ಲಿ ಜನಪ್ರಿಯ ಆಗುತ್ತಿದ್ದರೂ, ಜನರು ನಗದು ಬಳಕೆ ಮಾಡುವುದು ನಿರಂತರವಾಗಿ ಏರಿಕೆ ಕಾಣುತ್ತಿದೆ.

ಆದರೆ, ಈಚೆಗೆ ಸಿದ್ಧಪಡಿಸಿದ ವರದಿಯೊಂದರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ಅರ್ಥಶಾಸ್ತ್ರಜ್ಞರು, ಈ ಬಾರಿಯ ದೀಪಾವಳಿ ಸಂದರ್ಭದಲ್ಲಿ ಚಲಾವಣೆಯಲ್ಲಿನ ನಗದು ₹ 7,600 ಕೋಟಿಯಷ್ಟು ಕಡಿಮೆ ಆಗಿದೆ ಎಂದು ಹೇಳಿದ್ದಾರೆ. ದೀಪಾವಳಿ ಸಂದರ್ಭದಲ್ಲಿ ಹೀಗೆ ಆಗಿರುವುದು ಸರಿಸುಮಾರು ಇಪ್ಪತ್ತು ವರ್ಷಗಳಲ್ಲಿ ಇದೇ ಮೊದಲು ಎಂದು ಎಸ್‌ಬಿಐ ಹೇಳಿದೆ.

Exclusive benefits for Teachers, Farmers, Doctors, Lawyers, Architects, Finance Professionals, Pensioners, Government Employees and Select Corporates. Select models available through GeM & CSD. T&C apply.

EXCHANGE PRICE CHALLENGE* | EASY FINANCE | Honda ProCARE CUSTOMER SERVICE | 10 YEAR ANYTIME WARRANTY* | Scan now to Book or Buy Honda From Home

Scheme on select variants/models. ØLoan at the sole discretion of financier/bank partner. Offers and features are model, fuel type and variant specific. Offers are valid for a limited period or till stock lasts. Offers include loyalty, exchange and consumer benefits. For Corporate Sales enquiries, write to corporatesales@hondacarindia.com. Images used are computer generated/enhanced for creative representation purpose and may vary from the actual product. #The 10 year Anytime Warranty is extendable up to the maximum age of 10 years/1 20 000 kilometres by renewing every year and is applicable from the date of purchase of car. *Exchange price challenge offer from dealers. For more details, visit your nearest Honda Dealership. Log on to www.hondacarindia.com for more details. Terms and conditions apply.

Brigade Honda Yelahanka 86575 88450
Whitefield Honda Whitefield Road 86575 89175
Magnum Honda Mekhri Circle: 99000 29164 Kanakapura Rd: 98455 24394 Tumkur: 99160 04127
Dakshin Honda Hosur Road: 86575 88495 Lavelle Road: 86575 89201 Mysore Road: 86575 89889

‘ರಸ್ತೆಗುಂಡಿ: ಮುಖ್ಯಮಂತ್ರಿಗಳೇ ಸ್ವಲ್ಪ ನೋಡಿ’

ರಸ್ತೆ ಅಗೆದಿದ್ದರಿಂದ ಸಂಚಾರಕ್ಕೆ ತೊಂದರೆ: ಸಿ.ಎಂ. ಬೊಮ್ಮಾಯಿ ಅವರಿಗೆ ಬಾಲಕಿ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಿಂಗಳ ಹಿಂದೆಯಷ್ಟೇ ರಸ್ತೆಗೆ ಹಾಕಿದ್ದ ಡಾಂಬರ್ ಅಗೆದು ಹೊಂಡ ತೋಡಿದ್ದನ್ನು ಪ್ರಶ್ನಿಸಿ ಒಂದನೇ ತರಗತಿ ಬಾಲಕಿ ಶಿವನ್ಯಾ ವಿಡಿಯೊ ಹರಿಬಿಟ್ಟಿದ್ದು, ಇದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ವೈಯಾಲಿಕಾವಲ್ 15ನೇ ಅಡ್ಡ-ರಸ್ತೆಯಲ್ಲಿ ತಿಂಗಳ ಹಿಂದೆ ಹಾಕಿದ್ದ ಡಾಂಬರೀಕರಣ ಆಗಿದ್ದ ರಸ್ತೆ ಅಗೆದು, ಹೊಂಡ ತೋಡಲಾಗಿದೆ. ಇದೇ ರಸ್ತೆಯಲ್ಲಿ ಶಾಲೆಗೆ ತೆರಳುವ ಬಾಲಕಿ, ಹೊಂಡದ ಬಳಿಯೇ ವಿಡಿಯೊ ಚಿತ್ರೀಕರಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಪ್ರಶ್ನಿಸಿದ್ದಾಳೆ.

‘ನೋಡಿ ಸರ್. ಡಾಂಬರ್ ಹಾಕಿ 1 ತಿಂಗಳಾಯ್ತು. ಮತ್ತೆ ರೋಡ್‌ನಲ್ಲಿ ಹೊಂಡ ಮಾಡ್ತಾ ಇದ್ದಾರೆ. ಎಷ್ಟು ಕಷ್ಟ ಆಗುತ್ತಿದೆ ನೋಡಿ ನಮಗೆ. ಮುಖ್ಯಮಂತ್ರಿಗಳೇ ಸ್ವಲ್ಪ ನೋಡಿ...’ ಎಂದು ಶಿವನ್ಯಾ ವಿಡಿಯೊದಲ್ಲಿ ಮಾತನಾಡಿದ್ದಾಳೆ. ವಿಡಿಯೊವನ್ನು ಹಲವರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದು, ಬಾಲಕಿಯ ಕಾಳಜಿಯನ್ನು ಹಲವರು ಕೊಂಡಾಡಿದ್ದಾರೆ.

ವಿಡಿಯೊ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಶಿವನ್ಯಾ, ‘ಮೊನ್ನೆ ಶಾಲೆಗೆ ಹೋಗುವಾಗ ಹೊಂಡದಿಂದಾಗಿ ಆಯತಪ್ಪಿ ಬಿದ್ದೆ. ನನ್ನ ಕನ್ನಡಕ ಒಡೆಯಿತು. ತುಂಬಾ ಅಳುತ್ತಿದ್ದೆ. ಹೊಸ ಕನ್ನಡಕ ಕೊಡಿಸುವುದಾಗಿ ತಂದೆ ಹೇಳಿದರು. ಆದರೆ, ಹೊಸ ಕನ್ನಡಕ ಖರೀದಿಗೆ ನಮ್ಮದೇ ಹಣ ಹೋಗುತ್ತದೆ. ಹೊಂಡ ತೋಡಿದ್ದರಿಂದ ಕನ್ನಡಕ ಒಡೆದಿದ್ದು, ನಮ್ಮ ದುಡ್ಡು ಏಕೆ ಕೊಡಬೇಕು. ಸಿಟ್ಟಾಗಿ ವಿಡಿಯೊ ಮಾಡಿದೆ’ ಎಂದಳು.

‘ರಸ್ತೆಗಳನ್ನು ಮೊದಲು ಸರಿಪಡಿಸಬೇಕು. ಮಕ್ಕಳು ಹಾಗೂ ಪೋಷಕರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಬೇಕು. ಹೊಂಡ ಮುಚ್ಚದಿದ್ದರೆ, ಮುಂದಿನ ದಿನಗಳಲ್ಲೂ ಇದೇ ರೀತಿ ವಿಡಿಯೊ ಮಾಡುತ್ತೇನೆ’ ಎಂದು ಬಾಲಕಿ ಹೇಳಿದಳು.

ವೈಯಾಲಿಕಾವಲ್ 15ನೇ ಅಡ್ಡರಸ್ತೆಯಲ್ಲಿ ತೋಡಿರುವ ಹೊಂಡದ ಬಳಿ ನಿಂತು ವಿಡಿಯೊ ಮಾಡಿರುವ ಬಾಲಕಿ ಶಿವನ್ಯಾ

ಓಲಾ–ಉಬರ್ ಆಟೊ ದರ: ಹೈಕೋರ್ಟ್‌ಗೆ ವರದಿ ಇಂದು

ಬೆಂಗಳೂರು: ಆ್ಯಪ್ ಆಧಾರಿತ ಆಟೊರಿಕ್ಷಾ ಪ್ರಯಾಣಿಕ ಸೇವೆಗೆ ಪ್ರತ್ಯೇಕ ದರ ನಿಗದಿ ಸಂಬಂಧ ವರದಿಯನ್ನು ಸಾರಿಗೆ ಇಲಾಖೆ ಸೋಮವಾರ ಹೈಕೋರ್ಟ್‌ಗೆ ಸಲ್ಲಿಸಲಿದೆ.

ಈ ಸಂಬಂಧ ಅಗ್ರಿಗೇಟರ್ ಕಂಪನಿಗಳು ಸಲ್ಲಿಸಿರುವ ಅರ್ಜಿ ಹೈಕೋರ್ಟ್‌ನಲ್ಲಿ ಸೋಮವಾರ ವಿಚಾರಣೆಗೆ ಬರಲಿದೆ. ಅಗ್ರಿಗೇಟರ್ ಕಂಪನಿಗಳಾದ ಓಲಾ, ಉಬರ್, ರ‍್ಯಾಪಿಡೊ ಪ್ರತಿನಿಧಿಗಳ ಜತೆ ಸಾರಿಗೆ ಇಲಾಖೆ ಕಾರ್ಯದರ್ಶಿ ಅವರು ಕಳೆದ ವಾರ ಸಭೆ ನಡೆಸಿ ಮಾಹಿತಿ ಪಡೆದುಕೊಂಡಿದ್ದರು. ಬೇಡಿಕೆಗೆ ತಕ್ಕಂತೆ ದರ ನಿಗದಿ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಕಂಪನಿಗಳು ಪಟ್ಟು ಹಿಡಿದಿದ್ದವು. ಇದಕ್ಕೆ ಒಮ್ಮತ ಮೂಡದೆ ಸಭೆ ಅಂತ್ಯಗೊಂಡಿತ್ತು.

ವಾಹನ ದಟ್ಟಣೆ ಅವಧಿಯಲ್ಲಿ ಸಿಗ್ನಲ್‌ಗಳಲ್ಲೇ ಸಾಕಷ್ಟು ಸಮಯ ವ್ಯರ್ಥವಾಗುತ್ತದೆ. ಸಾಮಾನ್ಯ ಆಟೊರಿಕ್ಷಾಗಳಿಗೆ ವಿಧಿಸಿದಂತೆ ದರ ನಿಗದಿಪಡಿಸಿದರೆ ತೆರಿಗೆ, ಚಾಲಕರಿಗೆ ನೀಡುವ ಪ್ರೋತ್ಸಾಹಧನ ಸೇರಿ ಮತ್ತಿತರ ಸೇವೆ ಒದಗಿಸುವುದು ಕಷ್ಟ. ಆದ್ದರಿಂದ ಬೇಡಿಕೆ ತಕ್ಕಂತೆ ದರ ಪರಿಷ್ಕರಣೆ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಕಂಪನಿಗಳು ಬೇಡಿಕೆ ಇಟ್ಟಿದ್ದವು.

ಬೇಡಿಕೆ ಆಧರಿಸಿ ದರ ಪರಿಷ್ಕರಣೆಗೆ ಅವಕಾಶ ನೀಡಿದರೆ ಪ್ರಯಾಣಿಕರಿಗೆ ಹೊರೆಯಾಗಲಿದೆ ಎಂಬ ಕಾರಣಕ್ಕೆ ಅಧಿಕಾರಿಗಳು ಇದಕ್ಕೆ ಒಪ್ಪಿರಲಿಲ್ಲ.

‘ಸಭೆ ವಿವರವನ್ನು ಹೈಕೋರ್ಟ್‌ಗೆ ಸಲ್ಲಿಸಲಾಗುವುದು. ನ್ಯಾಯಾಲಯದ ಆದೇಶದಂತೆ ಮುಂದುವರಿಯಲಾಗುವುದು’ ಎಂದು ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ.ಪ್ರಸಾದ್ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

‘ಮೆಟ್ರೊ’ ಖರೀದಿಗೆ ಸಜ್ಜಾದ ರಿಲಯನ್ಸ್

ನವದೆಹಲಿ (ಪಿಟಿಐ): ಜರ್ಮನಿ ಮೂಲದ ‘ಮೆಟ್ರೊ ಕ್ಯಾಶ್ ಆ್ಯಂಡ್ ಕ್ಯಾರಿ’ಯ ಭಾರತದ ವಹಿವಾಟನ್ನು ರಿಲಯನ್ಸ್ ಇಂಡಸ್ಟ್ರೀಸ್ ₹ 4,060 ಕೋಟಿಗೆ ಖರೀದಿಸಲು ಸಜ್ಜಾಗಿದೆ ಎಂದು ಮೂಲಗಳು ತಿಳಿಸಿವೆ.

ಮೆಟ್ರೊ ಮಾಲೀಕತ್ವದಲ್ಲಿನ ಸಗಟು ವಿತರಣಾ ಕೇಂದ್ರಗಳು, ಜಮೀನು ಮತ್ತು ಇತರ ಆಸ್ತಿಗಳು ಖರೀದಿಯ ಭಾಗವಾಗಿರಲಿವೆ. ಈ ಖರೀದಿಯು ರಿಲಯನ್ಸ್ ರಿಟೇಲ್ ಕಂಪನಿಗೆ ತನ್ನ ವಹಿವಾಟು ವಿಸ್ತರಿಸಲು ನೆರವಾಗಲಿದೆ.

ರಿಲಯನ್ಸ್ ಮತ್ತು ಮೆಟ್ರೊ ನಡುವೆ ಈ ಖರೀದಿಯ ವಿಚಾರವಾಗಿ ಹಲವು ತಿಂಗಳುಗಳಿಂದ ಮಾತುಕತೆಗಳು ನಡೆಯುತ್ತಿದ್ದವು. ಜರ್ಮನಿಯ ಮಾತೃಸಂಸ್ಥೆಯು ರಿಲಯನ್ಸ್‌ನ ಪ್ರಸ್ತಾವಕ್ಕೆ ಕಳೆದ ವಾರ ಒಪ್ಪಿಗೆ ನೀಡಿದೆ ಎಂದು ಗೊತ್ತಾಗಿದೆ.

ಈ ವಿಚಾರವಾಗಿ ಪ್ರತಿಕ್ರಿಯೆ ನೀಡಲು ಮೆಟ್ರೊ ಹಾಗೂ ರಿಲಯನ್ಸ್ ವಕ್ತಾರರು ನಿರಾಕರಿಸಿದ್ದಾರೆ. ಒಟ್ಟು 34 ದೇಶಗಳಲ್ಲಿ ವಹಿವಾಟು ಹೊಂದಿರುವ ಮೆಟ್ರೊ, ಭಾರತದ ಮಾರುಕಟ್ಟೆಯನ್ನು 2003ರಲ್ಲಿ ಪ್ರವೇಶಿಸಿದೆ.

ಬೆಂಗಳೂರು, ಹೈದರಾಬಾದ್, ಮುಂಬೈ, ದೆಹಲಿ, ತುಮಕೂರು, ಹುಬ್ಬಳ್ಳಿ ಸೇರಿದಂತೆ ಹಲವು ನಗರಗಳಲ್ಲಿ ಮೆಟ್ರೊ ಮಳಿಗೆಗಳನ್ನು ಹೊಂದಿದೆ.

‘ಕುಲಾಂತರಿ ಸಾಸಿವೆಗೆ ಬಹಿಷ್ಕಾರ’

ಪ್ರಯಾಗ್‌ರಾಜ್ (ಉತ್ತರಪ್ರದೇಶ) (ಪಿಟಿಐ): ‘ದೇಶಿಯವಾಗಿ ಅಭಿವೃದ್ಧಿಪಡಿಸಿರುವ ಕುಲಾಂತರಿ ಹೈಬ್ರಿಡ್ ಸಾಸಿವೆ (ಜಿಎಂ) ಪ್ರಾಯೋಗಿಕವಾಗಿ ಬೆಳೆಯುವ ಕೇಂದ್ರ ಸರ್ಕಾರದ ಪ್ರಸ್ತಾವನೆಗೆ ಅವಕಾಶ ನೀಡುವುದಿಲ್ಲ. ಜಿಎಂ ಸಾಸಿವೆಯನ್ನು ಬಹಿಷ್ಕರಿಸುತ್ತೇವೆ’ ಎಂದು ಭಾರತೀಯ ಕಿಸಾನ್ ಯೂನಿಯನ್ (ಬಿಕೆಯು) ನಾಯಕ ರಾಕೇಶ್ ಟಿಕಾಯಿತ್ ಹೇಳಿದರು

ಇಂದಿನಿಂದ ಸಿಬಿಸಿಐ ಸಭೆ

ಬೆಂಗಳೂರು: ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನ ಅನೆಕ್ಸ್–3 ಕಟ್ಟಡದ ಸಭಾಂಗಣದಲ್ಲಿ ಕ್ಯಾಥೊಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾದ 35ನೇ ಸಾಮಾನ್ಯಸಭೆ ನ.7ರಿಂದ 11ರವರೆಗೆ ನಡೆಯಲಿದೆ.

ಭಾರತದಲ್ಲಿ 174 ಧರ್ಮ ಕ್ಷೇತ್ರಗಳಿವೆ. ಸುಮಾರು 200 ಕ್ಯಾಥೊಲಿಕ್ ಬಿಷಪ್‌ಗಳು, 64 ನಿವೃತ್ತ ಬಿಷಪ್‌ಗಳು, ಸಿಬಿಸಿಐನ ವಿವಿಧ ಆಯೋಗಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಭಾಗವಹಿಸುವರು ಎಂದು ಸಿಬಿಸಿಐ ಅಧ್ಯಕ್ಷ ಓಸ್ವಾಲ್ ಕಾರ್ಡಿನಲ್ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಭಾರತದಲ್ಲಿ ಕ್ಯಾಥೊಲಿಕ್ ಚರ್ಚ್‌ನ ಸಹಭಾಗಿತ್ವ, ಪಾಲ್ಗೊಳ್ಳುವಿಕೆ ಹಾಗೂ ಸೇವೆ, ರಾಷ್ಟ್ರ ನಿರ್ಮಾಣಕ್ಕೆ ಸಹಕಾರ, ಪ್ರಸ್ತುತ ಭಾರತವನ್ನು ಬಾಧಿಸುತ್ತಿರುವ ಸಮಸ್ಯೆಗಳ ಕುರಿತು ಚರ್ಚೆ ನಡೆಯಲಿವೆ. ನ.7ರಂದು ಬೆಳಿಗ್ಗೆ 10.30ಕ್ಕೆ ಉದ್ಘಾಟನೆ ನೆರವೇರಲಿದೆ ಎಂದು ತಿಳಿಸಿದರು.

ಹೃದಯಾಘಾತ ಯೋಧ ಸಾವು

ಸಂಕೇಶ್ವರ: ಅಸ್ಸಾಂನಲ್ಲಿ ವಾಯುಪಡೆಯ ಮಾಸ್ಟರ್ ವಾರಂಟ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದ ಸಂಕೇಶ್ವರ ಸಮೀಪದ ಬೋರಗಲ್ಲ ಗ್ರಾಮದ ಯೋಧ ಕೆಂಪಣ್ಣಾ ಮಲ್ಲಪ್ಪಾ ಚೌಗಲಾ (46) ಶನಿವಾರ ಮೃತಪಟ್ಟಿದ್ದಾರೆ.

ಅವರಿಗೆ ತಾಯಿ, ಸಹೋದರ, ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಅಸ್ಸಾಂನಿಂದ ಭಾನುವಾರ ಮೃತದೇಹ ಬಂದ ನಂತರ ಗ್ರಾಮದಲ್ಲಿ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸಂಜೆ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ಜರುಗಿತು.

ಸುಧಾ, ಮಯೂರ ಓದಿರಿ

ಭ್ರಷ್ಟಾಚಾರ ಆರೋಪ– ವರ್ಗಾವಣೆಯಾದರೂ ಸ್ಥಾನ ಬಿಟ್ಟುಕೊಡದ ವ್ಯವಸ್ಥಾಪಕ ನಿರ್ದೇಶಕ

ಅಂಬೇಡ್ಕರ್ ನಿಗಮ: 'ಕುರ್ಚಿ'ಗಾಗಿ ಗುದ್ದಾಟ

• ರಾಜೇಶ್ ರೈ ಚಟ್ಲ

ಬೆಂಗಳೂರು: ಭ್ರಷ್ಟಾಚಾರ ಆರೋಪ ಎದುರಿಸುತ್ತಿರುವ ಡಾ.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ (ಎಂಡಿ) ಕೆ.ಎಂ. ಸುರೇಶ್ ಕುಮಾರ್ ಅವರನ್ನು ರಾಜ್ಯ ಸರ್ಕಾರ ವರ್ಗಾವಣೆ ಮಾಡಿದ್ದರೂ, 'ಕುರ್ಚಿ' ಬಿಟ್ಟು ಕೊಡಲು ಅವರು ನಿರಾಕರಿಸಿದ್ದಾರೆ. ಹೀಗಾಗಿ, ಆ ಹುದ್ದೆಗೆ ವರ್ಗಾವಣೆಗೊಂಡಿರುವ ಕೆ.ಎನ್. ಸುರೇಶ್ ನಾಯ್ಕ್ ಪರದಾಡುತ್ತಿದ್ದು, ಇಬ್ಬರ ಮಧ್ಯೆ 'ಕುರ್ಚಿಗಾಗಿ ಗುದ್ದಾಟ' ನಡೆದಿದೆ.

ಸುರೇಶ್ ಕುಮಾರ್ ವಿರುದ್ಧ ಭ್ರಷ್ಟಾಚಾರದ ಆರೋಪ ಹೊರಿಸಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿ ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿಗೆ ದೂರು ನೀಡಿತ್ತು.

ಅಧಿವೇಶನದಲ್ಲೂ ಅಕ್ರಮ ಪ್ರಸ್ತಾಪ

ಅಂಬೇಡ್ಕರ್ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಿದ 2019-20 ಮತ್ತು 2020-21ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಲ್ಲಿ ಕೊಳವೆ ಬಾವಿ ಕೊರೆಯಲು ಕರೆದಿದ್ದ ಟೆಂಡರ್‌ನಲ್ಲಿ ಭ್ರಷ್ಟಾಚಾರ ನಡೆಸಿರುವ ಆರೋಪದ ಬಗ್ಗೆ ಸುರೇಶ್ ಕುಮಾರ್ ವಿರುದ್ಧ ಅಧಿವೇಶನದಲ್ಲಿ ಪ್ರಸ್ತಾಪವಾಗಿತ್ತು. ಟೆಂಡರ್‌ದಾರರು ಸಲ್ಲಿಸಿದ್ದ ಪ್ರಮಾಣಪತ್ರದ ಬಗ್ಗೆ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಶಾಸಕರ ಸಮಿತಿ ಸಭೆಯಲ್ಲೂ ಆಕ್ಷೇಪ ವ್ಯಕ್ತಪಡಿಸಿದ್ದರು.

ಕೂಡಲೇ ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ನಿರ್ದೇಶನ ನೀಡಿದರೆ, ತಕ್ಷಣವೇ ತನಿಖೆ ನಡೆಸುವಂತೆ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿಗೆ ಮುಖ್ಯ ಕಾರ್ಯದರ್ಶಿಯವರೂ ಸೂಚಿಸಿದ್ದಾರೆ.

ಮುಖ್ಯಮಂತ್ರಿ ಮತ್ತು ಮುಖ್ಯ ಕಾರ್ಯದರ್ಶಿ ಸೂಚನೆಯನ್ನು ಉಲ್ಲೇಖಿಸಿ ಸುರೇಶ್ ಕುಮಾರ್‌ಗೆ ಅ.27 ರಂದು ನೋಟಿಸ್ ನೀಡಿರುವ ಸಮಾಜ ಕಲ್ಯಾಣ ಇಲಾಖೆಯ ಕಾರ್ಯದರ್ಶಿ ಮೇಜರ್ ಮಣಿವಣ್ಣನ್, ಆಪಾದನೆಗಳ ಬಗ್ಗೆ ತನಿಖೆಗೆ ಆದೇಶಿಸುವ ಬಗ್ಗೆ ತಿಳಿಸಿದ್ದಾರೆ. ಆರೋಪಗಳಿಗೆ ಸಂಬಂಧಿಸಿ 15 ದಿನಗಳಲ್ಲಿ ವಿವರಣೆ ನೀಡಬೇಕು ಎಂದೂ ಸೂಚಿಸಿದ್ದಾರೆ. ಅದರ ಬೆನ್ನಲ್ಲೆ, ಸುರೇಶ್ ಕುಮಾರ್ ಅವರನ್ನು (ಅ. 29) ಯಾವುದೇ ಸ್ಥಳ ತೋರಿಸದೆ ವರ್ಗಾವಣೆ ಮಾಡಲಾಗಿದೆ.

ಸುರೇಶ್ ನಾಯ್ಕ್ ಅವರು ಅ.30 ಭಾನುವಾರ ಆಗಿದ್ದರಿಂದ 31ರಂದು ಅಧಿಕಾರ ವಹಿಸಿಕೊಳ್ಳಲು ನಿಗಮಕ್ಕೆ ತೆರಳಿದ್ದರು. ಆದರೆ, ಪ್ರಧಾನ ಕಚೇರಿಯಲ್ಲಿ ಸುರೇಶ್‌ಕುಮಾರ್ ಅಂದು ಬಂದಿರಲಿಲ್ಲ. ಹೀಗಾಗಿ, ಅವರ ಅನುಪಸ್ಥಿತಿಯಲ್ಲಿ ಅಧಿಕಾರ ವಹಿಸಿಕೊಂಡಿದ್ದ ನಾಯ್ಕ್, ಇಲಾಖೆಯ ಕಾರ್ಯದರ್ಶಿ ಮತ್ತು ಸಚಿವರಿಗೆ ಮಾಹಿತಿ ನೀಡಿದ್ದರು.

ನ.1 ರಂದು ರಾಜ್ಯೋತ್ಸವದ ಪ್ರಯುಕ್ತ ಸರ್ಕಾರಿ ರಜೆಯಾಗಿದ್ದು, 2ರಂದು ಮತ್ತೆ ನಾಯ್ಕ್ ಅವರು ಕಚೇರಿಗೆ ಬರುವಷ್ಟರಲ್ಲಿ ಸುರೇಶ್‌ಕುಮಾರ್ ಅವರೇ ಎಂಡಿ ಕುರ್ಚಿಯಲ್ಲಿ ಕುಳಿತಿದ್ದರು. ಸರ್ಕಾರದ ಆದೇಶದಂತೆ ತಾನು ಅಧಿಕಾರ ವಹಿಸಿಕೊಂಡಿರುವ ಬಗ್ಗೆ ನಾಯ್ಕ್ ತಿಳಿಸಿದರೂ ಕೇಳಿಸಿಕೊಳ್ಳದ ಸುರೇಶ್ ಕುಮಾರ್, ಕುರ್ಚಿ ಬಿಟ್ಟುಕೊಟ್ಟಿಲ್ಲ. ಅಲ್ಲದೆ, ತಮ್ಮ ಬೆಂಬಲಿಗರನ್ನೂ ಕರೆಯಿಸಿಕೊಂಡು ಕುಳ್ಳಿರಿಸಿಕೊಂಡಿದ್ದರು ಎಂದೂ ದೂರಲಾಗಿದೆ. ಹೀಗಾಗಿ ಅಂಬೇಡ್ಕರ್ ನಿಗಮ ಕಚೇರಿ ಬದಲು, ಪಕ್ಕದ ಅಂಬಿಗರ ಚೌಡಯ್ಯ ನಿಗಮದ ಕಚೇರಿಯಲ್ಲಿ ನಾಯ್ಕ್ ಕುಳಿತಿದ್ದಾರೆ.

'ಸರ್ಕಾರದ ಹಣ ದುರುಪಯೋಗ, ಅದಕ್ಷ ಆಡಳಿತದಿಂದ ಪರಿಶಿಷ್ಟ ಜಾತಿಯ ಜನರ ಅಭಿವೃದ್ಧಿಗೆ ಸುರೇಶ್ ಕುಮಾರ್ ಅಡ್ಡಿ ಆಗಿದ್ದಾರೆ. ಅವರು ನಿಗಮವನ್ನು ಕುಟುಂಬದ ಟ್ರಸ್ಟ್ ರೀತಿಯಲ್ಲಿ ನಿರ್ವಹಿಸಿ ಸರ್ಕಾರದ ಕಾನೂನುಗಳು, ನಿಯಮಗಳು, ಆದೇಶಗಳು, ಸುತ್ತೋಲೆಗಳನ್ನು ಉಲ್ಲಂಘಿಸಿ ನೂರಾರು ಕೋಟಿ ಭ್ರಷ್ಟಾಚಾರಕ್ಕೆ, ಆರ್ಥಿಕ ನಷ್ಟಕ್ಕೆ ಕಾರಣರಾಗಿದ್ದಾರೆ' ಎಂದು ಆರೋಪಿಸಿ 'ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಮೇಲ್ವಿಚಾರಣೆ ಮತ್ತು ಬಲವರ್ಧನ ಸಮಿತಿ' ದೂರು ನೀಡಿದೆ.

> ನಾನು ಇನ್ನೂ ಹುದ್ದೆಯಿಂದ ಬಿಡುಗಡೆಯಾಗಿಲ್ಲ. ಸರ್ಕಾರ ಬೇರೆ ಹುದ್ದೆಯನ್ನೂ ತೋರಿಸಿಲ್ಲ. ನನ್ನ ಜಾಗಕ್ಕೆ ನಿಯೋಜನೆಗೊಂಡವರು ಅಕ್ರಮವಾಗಿ ಹುದ್ದೆ ವಹಿಸಿಕೊಂಡಿದ್ದಾರೆ
> **ಕೆ.ಎಂ. ಸುರೇಶ್ ಕುಮಾರ್**, ಹಾಲಿ ವ್ಯವಸ್ಥಾಪಕ ನಿರ್ದೇಶಕ

> ನನ್ನನ್ನು ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ಸರ್ಕಾರ ನಿಯೋಜನೆ ಮಾಡಿದೆ. ಆದರೆ, ಹಿಂದಿನ ವ್ಯವಸ್ಥಾಪಕರು ಕುರ್ಚಿ ಬಿಟ್ಟುಕೊಡದೆ, ತಾವೇ ಅಧಿಕಾರ ಚಲಾಯಿಸುತ್ತಿದ್ದಾರೆ
> **ಕೆ.ಎನ್. ಸುರೇಶ್ ನಾಯ್ಕ್**, ನಿಯೋಜಿತ ವ್ಯವಸ್ಥಾಪಕ ನಿರ್ದೇಶಕ

ಪ್ರಜಾವಾಣಿ ವಿಶೇಷ

ಸುದ್ದಿ 2 ನಿಮಿಷ

ಧ್ಯಾನ; ಜಾಗೃತಿ ನಾಗರಿಕರ ಖಂಡನೆ

ಬೆಂಗಳೂರು: ಮಾನಸಿಕ ಮತ್ತು ಬೌದ್ಧಿಕ ದೃಢತೆಗಾಗಿ ಶಾಲೆಗಳಲ್ಲಿ ಮಕ್ಕಳಿಗೆ ಧ್ಯಾನ ಮಾಡಲು ಅವಕಾಶ ನೀಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನಿರ್ಧಾರವನ್ನು 'ಜಾಗೃತ ನಾಗರಿಕರು' ಖಂಡಿಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ.

'ಧ್ಯಾನ ಮಾಡಬೇಕು ಎಂದು ಯಾವ ಶಿಕ್ಷಣ ತಜ್ಞರು, ಮಕ್ಕಳ ತಜ್ಞರು ಶಿಫಾರಸು ಮಾಡಿದ್ದಾರೆ? ಮಕ್ಕಳ ಕಲಿಕೆಗೆ ಧ್ಯಾನ ಪರಿಹಾರ ಎಂದು ಯಾವ ವೈಜ್ಞಾನಿಕ ಸಂಶೋಧನೆಗಳಲ್ಲಿ ವಿವರಿಸಲಾಗಿದೆ? ಯಾವ ಮನೋವೈದ್ಯರು ಸೂಚಿಸಿದ್ದಾರೆ? ಯಾವ ಮಾನದಂಡಗಳನ್ನು ಆಧರಿಸಿ ಈ ನಿರ್ಧಾರ ತೆಗೆದುಕೊಳ್ಳಲಾಯಿತು? ಈ ಕುರಿತು ದಾಖಲೆಗಳಿದ್ದರೆ ಸಾರ್ವಜನಿಕವಾಗಿ ಬಹಿರಂಗಗೊಳಿಸಬೇಕು' ಎಂದು ಒತ್ತಾಯಿಸಿದ್ದಾರೆ.

'ಕೋವಿಡ್ ಕಾರಣ ಕಲಿಕೆಯ ನಷ್ಟ ಮತ್ತು ಕಲಿಕೆಯ ಅಂತರದಿಂದ ಮಕ್ಕಳ ಏಕಾಗ್ರತೆಗೆ ಭಂಗ ಬಂದಿರುತ್ತದೆ. ಸಮಸ್ಯೆ ಸರಿಪಡಿಸುವ ಕಡೆಗೆ ಕಾರ್ಯಪ್ರವೃತ್ತರಾಗುವ ಬದಲು ಯಾವುದೇ ಆಧಾರವಿಲ್ಲದ ಧ್ಯಾನದಂತಹ ವಿವಾದದ ನಡೆಗೆ ಮುಂದಾಗಿದ್ದಾರೆ' ಎಂದು ದೂರಿದ್ದಾರೆ.

ಜಾಗೃತ ನಾಗರಿಕರ ಪರವಾಗಿ ಲೇಖಕರಾದ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ಡಾ.ವಿಜಯಾ, ಎಸ್.ಜಿ. ಸಿದ್ದರಾಮಯ್ಯ, ಬಂಜಗೆರೆ ಜಯಪ್ರಕಾಶ್, ಕೆ.ಎಸ್.ವಿಮಲಾ, ರಾಜೇಂದ್ರ ಚೆನ್ನಿ ಸೇರಿ ಹಲವರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಆಯುಷ್ಮಾನ್: ನೋಂದಣಿಗೆ ಚಾಲನೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ಮತ್ತು ರಾಜ್ಯ ಸರ್ಕಾರದ 'ಜನ ಸೇವಕ' ಸಂಯುಕ್ತವಾಗಿ ಆಯೋಜಿಸಿದ್ದ ಆಯುಷ್ಮಾನ್ ಹೆಲ್ತ್ ಕಾರ್ಡ್ ಮತ್ತು ಇತರೆ ಸೇವೆಗಳ ನೋಂದಣಿ ಕಾರ್ಯಕ್ರಮಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಮಹಿಳಾ ವಿದ್ಯಾರ್ಥಿನಿಲಯ-2ರಲ್ಲಿ ಚಾಲನೆ ನೀಡಲಾಯಿತು.

ಜನಸೇವಕ ಯೋಜನಾ ನಿರ್ದೇಶಕ ಬಿ.ಎನ್.ವರಪ್ರಸಾದ್ ರೆಡ್ಡಿ ಮಾತನಾಡಿ, 'ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕೊಡುಗೆ ಜನಸೇವಕ. ಎಲ್ಲರಿಗೂ ಆರೋಗ್ಯಸೇವೆಗಳನ್ನು ನೀಡಲು ಮನೆ ಬಾಗಿಲಿಗೆ ಹೆಲ್ತ್ ಕಾರ್ಡ್ ಅನ್ನು ಜನಸೇವಕರ ಮೂಲಕ ತಲುಪಿಸಲಾಗುತ್ತದೆ' ಎಂದರು.

ಕುಲಪತಿ ಡಾ.ಎಸ್.ಎಂ.ಜಯಕರ ಮಾತನಾಡಿ, 'ಸಂವಿಧಾನದ ಪ್ರಕಾರ ಎಲ್ಲರೂ ಆರೋಗ್ಯ ಸೇವೆಗಳನ್ನು ಪಡೆಯುವುದು ಮೂಲಭೂತ ಹಕ್ಕು' ಎಂದು ಹೇಳಿದರು.

ಕುಲಸಚಿವ ಎನ್. ಮಹೇಶ್ ಬಾಬು, ವಿದ್ಯಾರ್ಥಿ ಕ್ಷೇಮಾಭಿವೃದ್ಧಿ ವಿಭಾಗದ ನಿರ್ದೇಶಕ ಡಾ.ಸಿ.ಡಿ. ವೆಂಕಟೇಶ್, ಪ್ರಧಾನ ಕ್ಷೇಮಪಾಲಕರು ಡಾ.ಚಂದ್ರಕಾಂತಿ, ಮಹಿಳಾ ವಿದ್ಯಾರ್ಥಿನಿಲಯ ನಂ.2ರ ಪ್ರಧಾನ ಕ್ಷೇಮಪಾಲಕ ಡಾ.ಡಿ.ಕೆ.ಪ್ರಭಾಕರ್ ಇದ್ದರು.

ಪವಿತ್ರ ಮೃತ್ತಿಕೆ ಸಂಗ್ರಹ: ಮಲ್ಲೇಶ್ವರದಲ್ಲಿ ನಾಡಪ್ರಭುವಿನ ಸ್ಮರಣೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಲೋಕಾರ್ಪಣೆ ಭಾಗವಾಗಿ ನಡೆಯುತ್ತಿರುವ ರಾಜ್ಯ ಮಟ್ಟದ ಪವಿತ್ರ ಮೃತ್ತಿಕೆ ಸಂಗ್ರಹಣಾ ಕಾರ್ಯವು ಮಲ್ಲೇಶ್ವರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಭಾನುವಾರ ಮೇರೆ ಮೀರಿದ ಉತ್ಸಾಹದಿಂದ ನಡೆಯಿತು.

ಪವಿತ್ರ ಮೃತ್ತಿಕೆಯನ್ನು ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಅವರಿಗೆ ಕ್ಷೇತ್ರದ ನಾಗರಿಕರು ಹಸ್ತಾಂತರಿಸಿದರು. ಮೊದಲಿಗೆ ಮತ್ತಿಕೆರೆಯ ನೇತಾಜಿ ವೃತ್ತದಲ್ಲಿ ಸಚಿವ ಮುನಿರತ್ನ ಪೂಜೆ ಸಲ್ಲಿಸಿ, ಮೃತ್ತಿಕೆ ಸಂಗ್ರಹಣೆಗೆ ಚಾಲನೆ ನೀಡಿದರು. ನಂತರ ಅಶ್ವತ್ಥನಾರಾಯಣ ಜತೆಗೂಡಿದರು.

ಮೊದಲು ಮತ್ತಿಕೆರೆ 3ನೇ ಮುಖ್ಯರಸ್ತೆಯಲ್ಲಿ ಹೆಜ್ಜೆ ಇಟ್ಟ ಕೆಂಪೇಗೌಡರ ಅಭಿಮಾನಿಗಳು, ನಂತರ 1ನೇ ಮುಖ್ಯ ರಸ್ತೆಯಲ್ಲಿ ಹಬ್ಬದ ವಾತಾವರಣ ಸೃಷ್ಟಿಸಿದರು. ಮಧ್ಯದಲ್ಲಿ ಅಶ್ವತ್ಥನಾರಾಯಣ ಅವರು, ಬಸವಣ್ಣನವರ ಪ್ರತಿಮೆಗೆ ಪೂಜೆ ಸಲ್ಲಿಸಿ, ನಮಿಸಿದರು.

ಮೆರವಣಿಗೆ ಕೆ.ಎನ್ ಬಡಾವಣೆ, ಸುಬೇದಾರ್ ಪಾಳ್ಯ, ತ್ರಿವೇಣಿ ರಸ್ತೆಗಳಲ್ಲಿ ಸಾಗಿಬಂದಿತು. ದಾರಿಯುದ್ದಕ್ಕೂ ಅಲ್ಲಲ್ಲಿ ಇರುವ ದೇವಸ್ಥಾನಗಳ ಬಳಿ ನಾಡಪ್ರಭುವಿನ ರಥಗಳಿಗೆ ಪೂರ್ಣ ಕುಂಭ ಸ್ವಾಗತ ಕೋರಲಾಯಿತು. ಮತ್ತಿಕೆರೆಯ ಮುಸ್ಲಿಮರು ಅಭಿಯಾನದ ಜತೆ ಸೇರಿಕೊಂಡು, ಸಾಮರಸ್ಯದ ಸಂದೇಶ ಸಾರಿದರು.

ನಂತರ ರಾಜಕುಮಾರ್ ರಸ್ತೆ, ಸುಬ್ರಹ್ಮಣ್ಯ ನಗರ, ನಾಗರಾಜ್ ರಸ್ತೆ ಮೂಲಕ ಇನ್ನೊಂದು ಸುತ್ತಿನ ಮೆರವಣಿಗೆ ನಡೆದು, ಮಹಾಕವಿ ಕುವೆಂಪು ರಸ್ತೆಯಲ್ಲಿ ಸಂಪನ್ನಗೊಂಡಿತು.

ಕಾನ್ಶಿರಾಮ್ ನಗರದಲ್ಲಿ ಅಂಬೇಡ್ಕರ್ ಭವನ, ಲೇಕ್ ಪಾರ್ಕ್ ಉದ್ಘಾಟಿಸಿದ ಮುಖ್ಯಮಂತ್ರಿ

'ಮೀಸಲಾತಿ ಹೆಚ್ಚಳ: ಅಪಸ್ವರಕ್ಕೆ ಹೆದರುವುದಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣ ಹೆಚ್ಚಳ ವಿಷಯದಲ್ಲಿ ಕೆಲವರು ಅಪಸ್ವರ ಎತ್ತುತ್ತಿದ್ದು, ಅದಕ್ಕೆ ಹೆದರುವುದಿಲ್ಲ. ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದರೂ ದಲಿತರ ಪರ ಸಮರ್ಥ ಕಾನೂನು ಹೋರಾಟ ನಡೆಸಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಸಮಾಜ ಕಲ್ಯಾಣ ಇಲಾಖೆಯಿಂದ ಲಕ್ಷ್ಮೀಪುರ ಕಾನ್ಶಿರಾಮ್ ನಗರದಲ್ಲಿ ನಿರ್ಮಾಣವಾಗಿರುವ ಅಂಬೇಡ್ಕರ್ ಭವನ, ಬಿಬಿಎಂಪಿಯಿಂದ ಅಭಿವೃದ್ಧಿಪಡಿಸುತ್ತಿರುವ ಭಗವಾನ್ ಬುದ್ಧ ಮತ್ತು ಬಾಬಾ ಸಾಹೇಬ್ ಅಂಬೇಡ್ಕರ್ ಲೇಕ್ ಪಾರ್ಕ್‌ಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಮೀಸಲಾತಿ ಹೆಚ್ಚಿಸುವ ಕ್ರಾಂತಿ ಕಾರಕ ನಿರ್ಣಯ ಕೈಗೊಂಡಿರುವುದು ಕೆಲವರಿಗೆ ಸಹಿಸಲು ಆಗುತ್ತಿಲ್ಲ. ಆದ್ದರಿಂದಲೇ ಅಪಸ್ವರ ಎತ್ತುತ್ತಿದ್ದಾರೆ. ಗೊಂದಲ ಸೃಷ್ಟಿಸುವ ಕೆಲಸ ಮಾಡುತ್ತಿದ್ದಾರೆ. ನಾವು ಸಂವಿಧಾನ ಬದ್ಧವಾಗಿ ಕೆಲಸ ಮಾಡುತ್ತಿದ್ದೇವೆ. ಮೀಸಲಾತಿ ವಿಷಯದಲ್ಲಿ ಯಾವುದೇ ಸಂದರ್ಭದಲ್ಲೂ ದಲಿತರ ಪರವಾಗಿಯೇ ಇರುತ್ತೇನೆ. ಅಗತ್ಯ ಬಿದ್ದರೆ ಕಾನೂನು ಹೋರಾಟಕ್ಕೂ ಸಿದ್ಧ' ಎಂದು ಹೇಳಿದರು.

'ಕೇವಲ ಭಾಷಣ ಮಾಡುವುದರಿಂದ ಸಾಮಾಜಿಕ ನ್ಯಾಯ ಸಿಗುವುದಿಲ್ಲ. ಸಾಮಾಜಿಕ ನ್ಯಾಯದ ಪರ ಭಾಷಣ ಮಾಡಿದವರಿಗೆ ನ್ಯಾಯ ಸಿಕ್ಕಿದೆಯೇ ಹೊರತು ಶೋಷಿತರಿಗೆ ನ್ಯಾಯ ಸಿಕ್ಕಿಲ್ಲ. 60 ವರ್ಷ ರಾಜಕಾರಣ ಮಾಡಿದವರು ಕೇವಲ ಭಾಷಣದಲ್ಲೇ ಕಾಲ ಕಳೆದಿದ್ದಾರೆ' ಎಂದು ಟೀಕಿಸಿದರು.

'ಕಾನ್ಶಿರಾಮ್ ಅವರು ನನ್ನ ತಂದೆಯ ಆಪ್ತರು. ಅವರಿಂದ ಸ್ಫೂರ್ತಿ ಪಡೆದಿದ್ದೇನೆ. ಅವರ ಹೆಸರಿನಲ್ಲಿ ನಿರ್ಮಾಣವಾಗಿರುವ ಬಡಾವಣೆ ಅಭಿವೃದ್ಧಿ ಸರ್ಕಾರ ಬದ್ಧವಾಗಿದೆ. ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿಗೂ ಅನುದಾನ ಬಿಡುಗಡೆ ಮಾಡಲಾಗುವುದು' ಎಂದು ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಮಾತನಾಡಿ, 'ಶೋಷಿತರ ಪರವಾದ ಕಾಳಜಿ ಇರುವ ಮುಖ್ಯಮಂತ್ರಿಯನ್ನು ನಾವು ಪಡೆದಿದ್ದೇವೆ. ರಾಜ್ಯದ 40 ಸಾವಿರ ಪೌರ ಕಾರ್ಮಿಕರನ್ನೂ ಕಾಯಂಗೊಳಿಸಲು ಅವರು ಆಲೋಚನೆ ನಡೆಸುತ್ತಿದ್ದಾರೆ' ಎಂದು ಹೇಳಿದರು.

ಶಾಸಕ ಆರ್.ಮಂಜುನಾಥ್, ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಮಾತನಾಡಿದರು. ಕಾನ್ಶಿರಾಮ್‌ನಗರ ಮತ್ತು ಲಕ್ಷ್ಮೀಪುರದ 50 ಅಡ್ಡರಸ್ತೆ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕಾವೇರಿ ನೀರಿನ ಸೌಕರ್ಯ, ಸರ್ಕಾರಿ ಆಸ್ಪತ್ರೆ, ಪದವಿ ಕಾಲೇಜು, ಬಸ್ ನಿಲ್ದಾಣ, ವಲಸೆ ಕಾರ್ಮಿಕರಿಗೆ ಶೌಚಾಲಯ ಮತ್ತು ಸ್ನಾನಗೃಹ ನಿರ್ಮಾಣ ಸೇರಿ ಬಡಾವಣೆ ಅಭಿವೃದ್ಧಿಗೆ ಅಗತ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವಂತೆ ಮುಖ್ಯಮಂತ್ರಿಗೆ ಮುಖಂಡರು ಮನವಿ ಸಲ್ಲಿಸಿದರು.

ಕಾನ್ಶಿರಾಮ್ ನಗರದಲ್ಲಿ ಅಂಬೇಡ್ಕರ್ ಭವನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಬಿಎಸ್‌ಪಿ ರಾಜ್ಯ ಉಸ್ತುವಾರಿ ಮಾರಸಂದ್ರ ಮುನಿಯಪ್ಪ, ಶಾಸಕ ಆರ್ ಮಂಜುನಾಥ್, ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಇದ್ದರು

'ಪೌರ ಕಾರ್ಮಿಕರ ಕಾಯಂ'

11,136 ಪೌರಕಾರ್ಮಿಕರ ನೌಕರಿ ಕಾಯಂಗೆ ಅಧಿಸೂಚನೆಯನ್ನು ಹೊರಡಿಸಲಾಗಿದೆ. ಉಳಿದ ಪೌರ ಕಾರ್ಮಿಕರನ್ನು ಹಂತ– ಹಂತವಾಗಿ ಕಾಯಂ ಮಾಡಲಾಗುವುದು ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಬೆಂಗಳೂರು ಮಾತ್ರವಲ್ಲ ಬೇರೆ ನಗರಗಳ ಪೌರ ಕಾರ್ಮಿಕರನ್ನೂ ಕಾಯಂ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಮಕ್ಕಳ ಶಿಕ್ಷಣಕ್ಕೆ ಆದ್ಯತೆ ನೀಡಿ: ಶಾಸಕ ಎಸ್. ಸುರೇಶ್ ಕುಮಾರ್

ಬೆಂಗಳೂರು: ಕಾರ್ಮಿಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣವನ್ನು ಕೊಡಿಸುವ ಮೂಲಕ ಅವರು ಸಮಾಜದಲ್ಲಿ ಉನ್ನತ ಸ್ಥಾನ ಪಡೆಯಲು ಅವಕಾಶ ಕಲ್ಪಿಸಿಕೊಡಬೇಕು ಎಂದು ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಸ್. ಸುರೇಶ್ ಕುಮಾರ್ ಸಲಹೆ ನೀಡಿದರು.

ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಟ್ರೇಡ್ ಯೂನಿಯನ್ ನೇತೃತ್ವದಲ್ಲಿ ಶಿವನಗರದಲ್ಲಿ ಭಾನುವಾರ ನಡೆದ ಕಾರ್ಮಿಕರ ಸಮಾವೇಶ ಹಾಗೂ ಯು.ಕೆ. ಜನಸೇವಾ ಸಂಘ ಉದ್ಘಾಟಿಸಿ ಅವರು ಮಾತನಾಡಿದರು.

'ಆರ್ಥಿಕ ಸಂಕಷ್ಟ, ಶಾಲೆಗಳ ಕೊರತೆ ಮತ್ತಿತರ ಕಾರಣದಿಂದ ಅನಿವಾರ್ಯವಾಗಿ ಶಿಕ್ಷಣದಿಂದ ದೂರ ಉಳಿದು ದುಡಿಮೆಗೆ ಇಳಿಯಬೇಕಾದ ಪರಿಸ್ಥಿತಿ ಇತ್ತು. ಇನ್ನು ಮುಂದೆ ಕಾರ್ಮಿಕರು ತಮ್ಮ ಮಕ್ಕಳನ್ನು ಶಿಕ್ಷಣದಿಂದ ದೂರ ಇಡಬಾರದು' ಎಂದರು.

ಬಿಜೆಪಿ ರಾಜಾಜಿನಗರ ಮಂಡಲ ಅಧ್ಯಕ್ಷ ರಾಘವೇಂದ್ರ ರಾವ್, ಕರ್ನಾಟಕ ರಾಜ್ಯ ಕಟ್ಟಡ ನಿರ್ಮಾಣ ಮತ್ತು ಕಾರ್ಮಿಕರ ಟ್ರೇಡ್ ಯೂನಿಯನ್ ಅಧ್ಯಕ್ಷ ಸಂಗಮೇಶ್ ಗೌಡರ, ಗೌರವಾಧ್ಯಕ್ಷ ಬಿ.ಜಿ. ಅವಟಿ, ಮಹಿಳಾ ಘಟಕದ ಅಧ್ಯಕ್ಷೆ ವೀಣಾದೇವಿ ಎಲ್. ಉಪಸ್ಥಿತರಿದ್ದರು.

ಗಬ್ಬು ನಾರುತ್ತಿದೆ ಕಸ: ರೋಗದ ಭೀತಿ!

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಚಿಕ್ಕಬಾಣಾವರ ನಗರಸಭೆ ವ್ಯಾಪ್ತಿಯಲ್ಲಿನ ಕಸದ ಸಮಸ್ಯೆ ಬಗೆಹರಿದಿಲ್ಲ. ಎಲ್ಲಿ ನೋಡಿದರೂ ರಾಶಿ ರಾಶಿ ಕಸ ಇದರಿಂದ ಬೇಸತ್ತ ಜನರು ಅಧಿಕಾರಿಗಳಿಗೆ ಹಾಗೂ ರಾಜಕಾರಣಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಚಿಕ್ಕಬಾಣಾವರ ವ್ಯಾಪ್ತಿಯ ಗಣಪತಿ ನಗರ ರಸ್ತೆಯ ಅಕ್ಕಪಕ್ಕದಲ್ಲಿ, ಹೆಸರಘಟ್ಟ ಮುಖ್ಯರಸ್ತೆ, ಅಂಗನವಾಡಿ ಮುಂಭಾಗ, ಎನ್ ಆರ್ ಆರ್ ಕಾಲೇಜು ರಸ್ತೆ, ಕೆರೆ ರಸ್ತೆ, ಅಬ್ಬಿಗೆರೆ ರಸ್ತೆ, ದ್ವಾರಕಾ ನಗರ ರಸ್ತೆ ಅಕ್ಕಪಕ್ಕದಲ್ಲಿ ಕಸದ ರಾಶಿ ಇದೆ.

'ಈ ಭಾಗದಲ್ಲಿ ಅಧಿಕಾರಿಗಳು ಹಾಗೂ ಜನ ಪ್ರತಿನಿಧಿಗಳು ಕಸದ ಸಮಸ್ಯೆ ಬಗ್ಗೆ ನಿರ್ಲಕ್ಷ್ಯವಹಿಸಿದ್ದಾರೆ' ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆಯ ನೀರಿಗೆ ಕೊಳೆತ ಕಸ ದುರ್ನಾತ ಬೀರಿ ಸಾಂಕ್ರಾಮಿಕ ರೋಗ ಹರಡುವಂತಾಗಿದೆ. ಕೊಳೆತ ಕಸದಲ್ಲಿ ನೊಣ, ಸೊಳ್ಳೆಗಳು ಹೆಚ್ಚಾಗಿ ಜನರು ಭಯಭೀತರಾಗಿದ್ದಾರೆ. ಕೆಲವೊಂದು ಬೀಡಾಡಿ ಹಸುಗಳು, ನಾಯಿಗಳು ಕಸವನ್ನು ರಸ್ತೆಗೆಲ್ಲ ಹರಡಿ ಪರಿಸರವನ್ನು ಹಾಳು ಮಾಡುತ್ತಿವೆ.

'ಹಲವು ಬಾರಿ ಕಸದ ಸಮಸ್ಯೆಯ ಬಗ್ಗೆ ದೂರು ನೀಡಿದ್ದೇವೆ. ಆದರೂ ಸಮಸ್ಯೆ ಬಗೆಹರಿದಿಲ್ಲ. ವಾಹನ ಮತ್ತು ಕಾರ್ಮಿಕರ ಸಮಸ್ಯೆ ಹೇಳುತ್ತಾರೆ. ಇಲ್ಲಿ ರಾತ್ರಿ ವೇಳೆ ಕಸ ತಂದು ಹಾಕುತ್ತಾರೆ. ಅದನ್ನು ವಿಲೇವಾರಿ ಮಾಡುತ್ತಿಲ್ಲ' ಎಂದು ಸ್ಥಳೀಯ ನಿವಾಸಿ ಹನುಮಂತ ರಾಜು ಬೇಸರ ವ್ಯಕ್ತಪಡಿಸಿದರು.

'ಕಸದ ಸಮಸ್ಯೆ ತುಂಬಾ ದಿನಗಳಿಂದ ಇದೆ. ಕಸ ತೆಗೆದುಕೊಂಡು ಹೋಗಿ ಸೋಮಶೆಟ್ಟಿಹಳ್ಳಿಯ ಜಾಗಕ್ಕೆ ಹಾಕಬೇಕು. ಅಲ್ಲಿ ಸಾರ್ವಜನಿಕರು ವಿರೋಧಿಸುತ್ತಿದ್ದಾರೆ. ಮುಖ್ಯ ಅಧಿಕಾರಿ ಅವರು ಕೂಡ ಜಿಲ್ಲಾಧಿಕಾರಿಯವರಿಗೆ ದೂರು ನೀಡಿದ್ದಾರೆ. ಕಸವನ್ನು ಒಂದೆಡೆ ಸುರಿಯಲು ಜಾಗ ಹುಡುಕಲಾಗುತ್ತಿದೆ. ಆದಷ್ಟು ಬೇಗ ಈ ಸಮಸ್ಯೆ ಬಗೆಹರಿಸುತ್ತೇವೆ' ಎಂದು ಪುರಸಭೆ ಪರಿಸರ ಅಭಿಯಂತರ ಹರೀಶ್ ಪ್ರತಿಕ್ರಿಯಿಸಿದರು.

ಎನ್‌ಆರ್‌ಆರ್ ಕಾಲೇಜು ರಸ್ತೆ ಸಂತೆ ಬೀದಿ ಹತ್ತಿರ ಕಸ ಹರಡಿರುವುದು

ರಸ್ತೆ ಗುಂಡಿಯಲ್ಲಿ ಸವಾರರ ಪರದಾಟ ತಪ್ಪಿಸಿ

ಗೊರಗುಂಟೆಪಾಳ್ಯ ಮುಖ್ಯ ರಸ್ತೆಯಲ್ಲಿ 100 ಮೀಟರ್ ಅಂತರದಲ್ಲಿ 15 ದೊಡ್ಡ ಗುಂಡಿಗಳಿವೆ. ಗುಂಡಿ ತಪ್ಪಿಸಲು ಹೋಗಿ ಚಾಲಕರು ಅಪಘಾತಕ್ಕೆ ಆಹ್ವಾನ ನೀಡಿದಂತಾಗಿದೆ. ದ್ವಿಚಕ್ರ ವಾಹನ ಸವಾರರು ಸರ್ಕಸ್ ಮಾಡಬೇಕಾದ ಸ್ಥಿತಿ ಇದೆ. ಇಷ್ಟು ದೊಡ್ಡ ಗುಂಡಿಗಳಿದ್ದರೂ ಮುಚ್ಚಲು ಬಿಬಿಎಂಪಿ ಅಧಿಕಾರಿಗಳು ಕ್ರಮ ಕೈಗೊಂಡಿಲ್ಲ. ಈ ರಸ್ತೆಯಲ್ಲಿ ಓಡಾಡುವ ವಾಹನಗಳು ಹಾಳಾಗುತ್ತಿವೆ. ಸವಾರರು ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗೆ ಯಾರು ಹೊಣೆ? ಕೂಡಲೇ ರಸ್ತೆ ದುರಸ್ತಿ ಮಾಡಬೇಕು.

ಆದಿತ್ಯ ಜೇವೂರ್, ವಾಹನ ಚಾಲಕ

ಕುಂದು ಕೊರತೆ | ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ಶೌಚಾಲಯ ನಿರ್ಮಿಸಲು ಮನವಿ

ನಾಗರಬಾವಿಯ ಕಲ್ಯಾಣ ನಗರ ಮೇಲ್ಸೇತುವೆಯು ಕಸ ಎಸೆಯುವ ತಾಣವಾಗಿದೆ. ಬಿಬಿಎಂಪಿ ಪೌರಕಾರ್ಮಿಕರು ಹಾಗೂ ಸ್ಥಳೀಯ ಸಂಸ್ಥೆ ಸ್ವಯಂ ಜಾಗೃತಿ ಸೇವಾ ಟ್ರಸ್ಟ್ ಸದಸ್ಯರು ಈ ಸ್ಥಳವನ್ನು ಹಲವು ಬಾರಿ ಸ್ವಚ್ಛ ಮಾಡಿ ಜನರಲ್ಲಿ ಜಾಗೃತಿ ಮೂಡಿಸಿದ್ದಾರೆ. 'ನಿಮ್ಮ ಗಂಧದಗುಡಿ' ಎಂಬ ಕಾರ್ಯಕ್ರಮದ ಮೂಲಕ ಅಪ್ಪು ಅವರ ಸಂಸ್ಮರಣೆ ಕಾರ್ಯಕ್ರಮ ಮಾಡಿ ಅರಿವು ಮೂಡಿಸಲಾಯಿತು. ಒಂದೆರೆಡು ದಿನವಾದ ನಂತರ ಮತ್ತೆ ಕಸ ಹಾಕುತ್ತಿದ್ದಾರೆ. ಹೊರ ರಾಜ್ಯಗಳಿಂದ ಕೆಲಸಕ್ಕೆ ಬರುವ ಜನರು ಈ ಕಸವನ್ನು ಹಾಕುತ್ತಿದ್ದಾರೆ. ಇವರಿಗೆ ಎಷ್ಟು ಹೇಳಿದರೂ ಅರಿವಾಗುತ್ತಿಲ್ಲ. ಹೀಗಾಗಿ ಈ ಜಾಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸುವ ಮೂಲಕ ಕಸಮುಕ್ತವನ್ನಾಗಿ ಮಾಡಬೇಕು. ಸುತ್ತ ಮುತ್ತ ಸಾರ್ವಜನಿಕ ಶೌಚಾಲಯ ಇಲ್ಲದಿರುವುದರಿಂದ ಅನುಕೂಲವಾಗುತ್ತದೆ. ಶಾಸಕರು ತಮ್ಮ ಅನುದಾನದಲ್ಲಿ ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸಲು ಬಿಬಿಎಂಪಿಗೆ ಸೂಚಿಸಬೇಕು ಎಂದು ಮನವಿ ಮಾಡಿಕೊಳ್ಳುತ್ತೇವೆ.

ಅಜಯ್‌ಕುಮಾರ್ ಹಾಗೂ ಸ್ವಯಂ ಜಾಗೃತಿ ಸೇವಾ ಟ್ರಸ್ಟ್‌ನ ಪದಾಧಿಕಾರಿಗಳು, ಕಲ್ಯಾಣನಗರ

ಮರಕ್ಕೆ ಹಾನಿ ತಡೆಯಿರಿ

ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 3ನೇ ಬ್ಲಾಕ್‌ನಲ್ಲಿ ಬಿಡಿಎ ವತಿಯಿಂದ ಚರಂಡಿ ನಿರ್ಮಾಣ ಕಾರ್ಯ ನಡೆಯುತ್ತಿದ್ದು, ಅದಕ್ಕಾಗಿ ಮರಗಳನ್ನು ಮನಬಂದಂತೆ ಕಡಿಯಲಾಗಿದೆ. ಚರಂಡಿಗೆ ಯಾವುದೇ ರೀತಿಯಲ್ಲೂ ಹಾನಿಮಾಡದ ಮರಗಳ ಕೊಂಬೆಗಳನ್ನೂ ಕತ್ತರಿಸಲಾಗಿದೆ. ಕೆಲವು ಮರಗಳ ಬುಡವನ್ನೂ ತೆಗೆದಿದ್ದು, ಹಲವು ಬುಡಗಳಿಗೆ ಹಾನಿ ಮಾಡಲಾಗಿದೆ. ಕಾಮಗಾರಿ ಉಸ್ತುವಾರಿ ಎಂಜಿನಿಯರ್ ಸ್ಥಳಕ್ಕೆ ಬರುತ್ತಿಲ್ಲ. ಗುತ್ತಿಗೆದಾರರು ಮತ್ತೆ ಕೆಲಸ ಮಾಡದಂತೆ ತಡೆಹಿಡಿಯಲಾಗಿದೆ. ಬಿಡಿಎ ಕಾರ್ಯಪಾಲಕ ಎಂಜಿನಿಯರ್, ಎಂಜಿನಿಯರಿಂಗ್ ವಿಭಾಗದ ಸದಸ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿ ಅವರಿಗೂ ದೂರು ನೀಡಲಾಗಿದೆ. ಇತ್ತ ಯಾರೂ ಸುಳಿದಿಲ್ಲ. ನಾನು 16 ವರ್ಷಗಳಿಂದ ಬೆಳಸಿದ್ದ ಮರಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಒಂದೇ ಕ್ಷಣದಲ್ಲಿ ಹಾಳು ಮಾಡಿದ್ದಾರೆ. ಇವರಿಗೆ ಕಾನೂನು ಪ್ರಕಾರ ಶಿಕ್ಷೆಯಾಗಬೇಕು.

ಗೌಡಯ್ಯ, ಸರ್ ಎಂ.ವಿಶ್ವೇಶ್ವರಯ್ಯ ಬಡಾವಣೆ 3ನೇ ಬ್ಲಾಕ್, ಉಲ್ಲಾಳು ಮುಖ್ಯರಸ್ತೆ

'ಸಿದ್ದರಾಮಯ್ಯ ಸ್ಪರ್ಧೆ: ಹೈಕಮಾಂಡ್‌ಗೆ ಬಿಟ್ಟದ್ದು'

ಕೋಲಾರ: 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಕೋಲಾರದಲ್ಲಿ ಸ್ಪರ್ಧಿಸುವ ವಿಚಾರ ಹೈಕಮಾಂಡ್ ತೀರ್ಮಾನಕ್ಕೆ ಬಿಟ್ಟದ್ದು' ಎಂದು ಶಾಸಕ ಕೆ.ಆರ್.ರಮೇಶ್ ಕುಮಾರ್ ತಿಳಿಸಿದರು.

ಭಾನುವಾರ ಮಾತನಾಡಿ, 'ನಾನೇನು ಎಐಸಿಸಿ ಅಧ್ಯಕ್ಷನೇ? ಪಕ್ಷದ ಪದ್ಧತಿಯಂತೆ ಎಲ್ಲರೂ ಟಿಕೆಟ್‌ಗೆ ಅರ್ಜಿ ಸಲ್ಲಿಸಬೇಕು. ರಾಜ್ಯ, ಕೇಂದ್ರ ಚುನಾವಣಾ ಸಮಿತಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಿದೆ. ಆ ತೀರ್ಮಾನಕ್ಕೆ ಎಲ್ಲರೂ ಶಿರಬಾಗಬೇಕು' ಎಂದು ಹೇಳಿದರು.

ದಾರಿಯುದ್ದಕ್ಕೂ ಗಮನಸೆಳೆದ ಪಕ್ಷದ ಬಾವುಟ, ಕಟೌಟ್‌ಗಳು

ಖರ್ಗೆಗೆ ರಾಜ್ಯ ಕಾಂಗ್ರೆಸ್‌ನಿಂದ ಅದ್ದೂರಿ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಐಸಿಸಿಯ ಚುಕ್ಕಾಣಿ ಹಿಡಿದ ಬಳಿಕ ಮೊದಲ ಬಾರಿ ರಾಜ್ಯಕ್ಕೆ ಭಾನುವಾರ ಬಂದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯ ಕಾಂಗ್ರೆಸ್ ಘಟಕದ ವತಿಯಿಂದ ಅದ್ದೂರಿ ಸ್ವಾಗತ ನೀಡಲಾಯಿತು.

ದೆಹಲಿಯಿಂದ ವಿಮಾನದ ಮೂಲಕ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂದಿಳಿದ ಖರ್ಗೆ ಅವರನ್ನು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ರಾಜ್ಯ ನಾಯಕರು ಆತ್ಮೀಯವಾಗಿ ಬರಮಾಡಿಕೊಂಡರು. ಖರ್ಗೆ ಅವರಿಗೆ ಸ್ವಾಗತ ಕೋರಿ ರಸ್ತೆಯುದ್ದಕ್ಕೂ ಕಾಂಗ್ರೆಸ್ ಬಾವುಟಗಳು, ಬೃಹತ್ ಗಾತ್ರದ ಕಟೌಟ್ ಅಳವಡಿಸಲಾಗಿತ್ತು.

ದೇವನಹಳ್ಳಿ ಟೋಲ್ ಗೇಟ್, ಬ್ಯಾಟರಾಯನಪುರ ಹಾಗೂ ಹೆಬ್ಬಾಳ ಬಳಿ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಖರ್ಗೆ ಅವರಿಗೆ ಸ್ವಾಗತ ಕೋರಿ, ಜೈಕಾರ ಕೂಗಿದರು. ಬಳಿಕ ಸದಾಶಿವನಗರದ ತಮ್ಮ ನಿವಾಸಕ್ಕೆ ಖರ್ಗೆ ತೆರಳಿದರು. ಈ ವೇಳೆ, ಖರ್ಗೆ ಅವರ ನಿವಾಸದಲ್ಲಿ ಭಾರಿ ಸಡಗರ ಕಾಣಿಸಿತು. ಕಲಬುರಗಿಯಿಂದ ಬಂದಿದ್ದ ಅವರ ಅಭಿಮಾನಿಗಳು ಖರ್ಗೆಯವರನ್ನು ನೋಡುತ್ತಲೇ ಸಂಭ್ರಮಿಸಿದರು.

ಮಧ್ಯಾಹ್ನ ಎರಡು ಗಂಟೆಗೆ ಅರಮನೆ ಮೈದಾನದ ತ್ರಿಪುರವಾಸಿನಿ ಸಭಾಂಗಣದಲ್ಲಿ 'ಸರ್ವೋದಯ ಸಮಾವೇಶ' ನಡೆಯಿತು. ಮೈದಾನದಲ್ಲಿ ಅದ್ದೂರಿ ಸ್ವಾಗತಕ್ಕೆ ಬೃಹತ್ ಕಮಾನು ನಿರ್ಮಿಸಲಾಗಿತ್ತು. ಕಮಾನಿನ ಒಂದು ಬದಿಯಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಮತ್ತೊಂದು ಬದಿಯಲ್ಲಿ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರ ಬೃಹತ್ ಕಟೌಟ್‌ಗಳನ್ನು ಅಳವಡಿಸಲಾಗಿತ್ತು.

ಸಮಾವೇಶದಲ್ಲಿ ಖರ್ಗೆ ಅವರನ್ನು ಪಕ್ಷದ ನಾಯಕರು ಶಾಲು ಹೊದಿಸಿ, ಬೆಳ್ಳಿ ಗದೆ ನೀಡಿ ಅಭಿನಂದಿಸಿದರು. ಸಮಾವೇಶಕ್ಕೆ ಜನಸಾಗರ ಹರಿದುಬರುವ ನಿರೀಕ್ಷೆ ಇದ್ದುದರಿಂದ ಅರಮನೆ ಮೈದಾನದಲ್ಲಿ ಭಾರಿ ಪೊಲೀಸ್ ಭದ್ರತೆ ಏರ್ಪಡಿಸಲಾಗಿತ್ತು.

ಸಮಾವೇಶಕ್ಕೆ ಬಂದಿದ್ದ ಖರ್ಗೆ ಅಭಿಮಾನಿಯೊಬ್ಬ ತನ್ನ ಕೇಶ ವಿನ್ಯಾಸದಿಂದ ಗಮನಸೆಳೆದ. ತಲೆಕೂದಲಿನಲ್ಲಿ ಎಐಸಿಸಿ ಅಧ್ಯಕ್ಷ ಖರ್ಗೆ ಎಂದು ಕೇಶ ವಿನ್ಯಾಸ, ದೇಹದ ಮೇಲೆ ಖರ್ಗೆ ಭಾವಚಿತ್ರ ಅಂಟಿಸಿಕೊಂಡು ಬಂದಿದ್ದ ಆ ಅಭಿಮಾನಿಯನ್ನು ಪಕ್ಷದ ಕಾರ್ಯಕರ್ತರು ಅಭಿನಂದಿಸಿದರು.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮ್ಮದ್, ಧ್ರುವ ನಾರಾಯಣ್, ಮುಖಂಡರಾದ ರೆಹಮಾನ್ ಖಾನ್, ಕೆ.ಎಚ್. ಮುನಿಯಪ್ಪ, ಕೆ.ಜೆ. ಜಾರ್ಜ್, ವೀರಪ್ಪ ಮೊಯಿಲಿ, ಸಂಸದ ಡಿ.ಕೆ. ಸುರೇಶ್, ಎಂ.ಆರ್. ಸೀತಾರಾಂ, ಹಾಲಿ - ಮಾಜಿ ಶಾಸಕರು, ಕೆಪಿಸಿಸಿ ಪದಾಧಿಕಾರಿಗಳು, ಮುಂಚೂಣಿ ಘಟಕಗಳ ಅಧ್ಯಕ್ಷರು ಸಮಾವೇಶದಲ್ಲಿ ಭಾಗವಹಿಸಿದರು.

ಸರ್ವೋದಯ ಸಮಾವೇಶದಿಂದಾಗಿ ಸ್ಯಾಂಕಿ ರಸ್ತೆಯಲ್ಲಿ ಉಂಟಾಗಿದ್ದ ದಟ್ಟಣೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು – ಪ್ರಜಾವಾಣಿ ಚಿತ್ರ

ಬಳ್ಳಾರಿ ರಸ್ತೆ ಸುತ್ತಮುತ್ತ ಸಂಚಾರ ದಟ್ಟಣೆ

ಸರ್ವೋದಯ ಸಮಾವೇಶಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರಿಂದ ಬಳ್ಳಾರಿ ರಸ್ತೆ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ವಿಪರೀತ ದಟ್ಟಣೆ ಉಂಟಾಯಿತು.

ಸಮಾವೇಶ ಆರಂಭ ಹಾಗೂ ಮುಕ್ತಾಯದ ಸಮಯದಲ್ಲಂತೂ ಬಳ್ಳಾರಿ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಸಮಾವೇಶಕ್ಕೆ ಬಂದಿದ್ದ ಜನ, ವಾಹನಗಳ ಮಧ್ಯೆಯೇ ರಸ್ತೆಯ ಒಂದು ಬದಿಯಿಂದ ಮತ್ತೊಂದು ಬದಿಗೆ ಸಂಚರಿಸಿದರು. ಈ ವೇಳೆ ವಾಹನಗಳ ಸಂಚಾರವೇ ಬಂದ್ ಆಗಿತ್ತು.

ಅರಮನೆ ಮೈದಾನ ಎದುರಿನ ಮುಖ್ಯರಸ್ತೆ, ಹೆಬ್ಬಾಳ, ಬಸವೇಶ್ವರ ವೃತ್ತ, ರೇಸ್‌ಕೋರ್ಸ್ ರಸ್ತೆ, ಸದಾಶಿವನಗರ, ಯಶವಂತಪುರ, ಹೆಬ್ಬಾಳ ಹಾಗೂ ಸುತ್ತಮುತ್ತ ದಟ್ಟಣೆ ಕಂಡುಬಂತು.

ಜಿಕೆವಿಕೆ ಆವರಣದಲ್ಲಿ ಆಯೋಜಿಸಿದ್ದ ಕೃಷಿ ಮೇಳಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬಂದಿದ್ದರು. ಬಹುಪಾಲು ಜನರು ಬಳ್ಳಾರಿ ರಸ್ತೆ ಬಳಸಿಯೇ ಜಿಕೆವಿಕೆ ಆವರಣ ಪ್ರವೇಶಿಸಿದರು. ಇದು ಸಹ ದಟ್ಟಣೆ ಹೆಚ್ಚಳಕ್ಕೆ ಕಾರಣವಾಯಿತು.

ಜಿಕೆವಿಕೆ ಆವರಣದಲ್ಲಿ ಆಯೋಜಿಸಿರುವ ಕೃಷಿ ಮೇಳದಲ್ಲಿ ಜನರು ಅಲಂಕಾರಿಕ ಗಿಡಗಳನ್ನು ಖರೀದಿಸಿದರು (1) ಜನರು ವಿವಿಧ ಸಸ್ಯ ತಳಿಗಳನ್ನು ವೀಕ್ಷಿಸಿದರು– ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್ (2) ಕೃಷಿ ಮೇಳದಲ್ಲಿ ತೆರೆಯಲಾಗಿದ್ದ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಳಿಗೆಗೆ ಭಾನುವಾರ ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್‌ವಿ.ಸುರೇಶ್ (ಎಡದಿಂದ ಮೂರನೆಯವರು) ಭೇಟಿ ನೀಡಿದರು

ಕಡಿಮೆ ಜಮೀನಿನಲ್ಲಿ ಅಧಿಕ ಇಳುವರಿ ಪಡೆದ ಸಾಧಕ ರೈತರು • ಬರದ ನಡುವೆಯೂ ಕೃಷಿಯಲ್ಲಿ ಆದಾಯ ಗಳಿಸಿದ ರೈತ ಮಹಿಳೆ

ಸಮಗ್ರ ಕೃಷಿ: ರೈತರ ಯಶೋಗಾಥೆ ಅನಾವರಣ

• ಆದಿತ್ಯ ಕೆ.ಎ.

ಬೆಂಗಳೂರು: ಹೈನುಗಾರಿಕೆ, ಕೋಳಿ – ಕುರಿ ಸಾಕಣೆ, ಜೇನು ಕೃಷಿ, ಮೀನುಸಾಕಣೆ, ಸ್ವಂತಜಮೀನಿನಲ್ಲಿ ಖಾಸಗಿ ಅರಣ್ಯ ಬೆಳೆಸಿದ ರೈತರು, ಬರದ ನಡುವೆಯೂ ಕೃಷಿಯಲ್ಲಿ ಆದಾಯ ಗಳಿಸಿದ ರೈತ ಮಹಿಳೆ, ಸಾವಯವ ಕೃಷಿಯಲ್ಲಿ ಯಶಸ್ಸು, ಔಷಧಿ ಸಸ್ಯ ಬೆಳೆಸಿ ಬದುಕು ಕಟ್ಟಿಕೊಂಡ ಕುಟುಂಬ...

–ಹೀಗೆ ಸಮಗ್ರ ಕೃಷಿ ಅಳವಡಿಸಿಕೊಂಡ ಸಾಧಕ ರೈತರ ಯಶೋಗಾಥೆಗಳು ಈ ಬಾರಿಯ ಕೃಷಿ ಮೇಳದಲ್ಲಿ ಅನಾವರಣ ಗೊಂಡವು. ಕಡಿಮೆ ಜಮೀನಿನಲ್ಲಿ ಹೆಚ್ಚು ಇಳುವರಿ ಪಡೆದ ರೈತರ ಸಾಹಸಗಳು ಹಲವರಿಗೆ ಪ್ರೇರಣೆ ನೀಡಿದವು. 120 ಸಾಧಕ ರೈತರನ್ನು ಕೃಷಿ ವಿಶ್ವ-ವಿದ್ಯಾಲಯ ಗುರುತಿಸಿ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕುಮಟ್ಟದ ಪ್ರಶಸ್ತಿ ನೀಡಿದೆ.

ಕೃಷಿ ಮೇಳದಲ್ಲಿ ಭಾನುವಾರ ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು —ಪ್ರಜಾವಾಣಿ ಚಿತ್ರ



ಕೃಷಿ ಮೇಳದ ಲಾಂಛನ

ಹಾಸನ ಜಿಲ್ಲೆ ಹೊಳೆನರಸಿಪುರ ತಾಲ್ಲೂಕಿನ ಬಂಟರತಳಾಲು ಗ್ರಾಮದ ಎಂ.ಕವಿತಾ ಅವರು, 9 ಎಕರೆ ಜಮೀನಿನಲ್ಲಿ ಸಮಗ್ರ ಕೃಷಿ ಅಳವಡಿಸಿಕೊಂಡು ಯಶಸ್ಸು ಗಳಿಸಿದ್ದಾರೆ. ಅವರ ಜಮೀನಿನಲ್ಲಿ ಭತ್ತ, ರಾಗಿ, ಜೋಳ, ದ್ವಿದಳ ಧಾನ್ಯಗಳು ಹಾಗೂ ತೋಟಗಾರಿಕೆ ಬೆಳೆಗಳಾದ ತೆಂಗು, ಅಡಿಕೆ, ಬಾಳೆ, ದಾಳಿಂಬೆ, ಚಕೋತಾ, ಮೂಸಂಬಿ, ನಿಂಬೆ, ಪಪ್ಪಾಯ, ಸಪೋಟ, ಸೀತಾಫಲ, ಬೆಣ್ಣೆಹಣ್ಣು, ಸೀಬೆ, ಪನ್ನೇರಳೆ, ಜಂಬು ನೇರಳೆ, ಅಂಜೂರ, ವಿವಿಧ ಬಗೆಯ ತರಕಾರಿಗಳು, ಹೂವಿನ ಬೆಳೆಗಳು ನಳನಳಿಸುತ್ತಿವೆ.

ಕೋಳಿ ಹಾಗೂ ಮೀನು ಸಾಕಣೆಯಿಂದಲೂ ಆದಾಯ ಗಳಿಸುತ್ತಿದ್ದಾರೆ. ಜಾನುವಾರುಗಳಿಗೆ ತಮ್ಮ ಜಮೀನಿನಲ್ಲಿಯೇ ಮೇವು ಬೆಳೆಯುತ್ತಿದ್ದಾರೆ. ಹೈನುಗಾರಿಕೆಯೂ ಕೈಹಿಡಿದಿದೆ.

'ನಮ್ಮ ಭಾಗದಲ್ಲಿ ಮಳೆ ಸಕಾಲಿಕವಾಗಿ ಬೀಳುವುದಿಲ್ಲ. ನೀರಾವರಿ ಸೌಲಭ್ಯ ಮಾಡಿಕೊಂಡಿದ್ದೇವೆ. ಭೂಮಿಯ ಪೋಷಕಾಂಶ ನಿರ್ವಹಣೆಗೆ ಕೊಟ್ಟಿಗೆ ಗೊಬ್ಬರ, ಹಸಿರೆಲೆ, ಎರೆಗೊಬ್ಬರ, ಜೀವಾಮೃತ ಬಳಕೆ ಮಾಡುತ್ತಿದ್ದೇನೆ' ಎಂದು ತಿಳಿಸಿದರು.

ತೋಟದ ತ್ಯಾಜ್ಯದಿಂದ ಗೊಬ್ಬರ ತಯಾರಿಕೆ: ಶಿಡ್ಲಘಟ್ಟ ತಾಲ್ಲೂಕು ಮಳ್ಳೂರಿನ ಎಂ.ಟಿ.ಮುನೇಗೌಡ ಅವರು ಸಮಗ್ರ ಕೃಷಿ ಅಳವಡಿಸಿಕೊಂಡಿದ್ದಾರೆ. 28 ಎಕರೆ ಜಮೀನಿಗೂ ತಾವೇ ತಯಾರಿಸಿದ ಸಾವಯವ ಗೊಬ್ಬರ ಬಳಸಿ ಬೆಳೆ ಬೆಳೆಯುತ್ತಿದ್ದಾರೆ. ತೋಟದಲ್ಲಿ ಬಿದ್ದ ಒಂದು ಎಲೆಯನ್ನೂ ಅವರು ವ್ಯರ್ಥ ಮಾಡುತ್ತಿಲ್ಲ.

'ಪ್ರತ್ಯೇಕ ಘಟಕ ನಿರ್ಮಿಸಿ ಗೊಬ್ಬರ ತಯಾರಿಸುತ್ತಿದ್ದೇನೆ. ರಸಾಯನಿಕ ಗೊಬ್ಬರ ಬಳಕೆ ದೂರ ಮಾಡಿದ್ದು, ಈ ಪದ್ಧತಿಯಿಂದ ಬೆಳೆಗಳಿಗೆ ರೋಗ ಬಾಧೆ ದೂರವಾಗಿದೆ' ಎಂದು ಮುನೇಗೌಡ ಹೇಳಿದರು.

ಕೈಹಿಡಿದ ತರಕಾರಿ ಬೆಳೆ: ದೊಡ್ಡಬಳ್ಳಾಪುರ ಲಕ್ಷ್ಮೀದೇವರಪುರದ ಸಿ.ನವಿಕ್ರಮ್ ಅವರು, 24 ಎಕರೆಯಲ್ಲಿ ತೋಟಗಾರಿಕಾ ಬೆಳೆಗಳಾದ ಮಾವು, ದ್ರಾಕ್ಷಿ, ಸೀಬೆ, ಸಪೋಟ, ನೇರಳೆ, ಹಲಸು, ಡ್ರಾಗನ್ ಫ್ರೂಟ್, ನಿಂಬೆ, ದಾಳಿಂಬೆ, ಬಾಳೆ, ಪರಂಗಿ, ಮೂಸಂಬಿ, ಸೀತಾಫಲ, ಚಕೋತ, ಅಂಜೂರ, ನೆಲ್ಲಿ, ಕಿತ್ತಳೆ, ಅನಾನಸ್ ಬೆಳೆದು ಅವುಗಳಿಗೆ ವೈಜ್ಞಾನಿಕ ಮಾರುಕಟ್ಟೆ ಕಲ್ಪಿಸಿಕೊಂಡಿದ್ದಾರೆ. ಜತೆಗೆ ತರಕಾರಿ ಬೆಳೆಗಳೂ ನಳನಳಿಸುತ್ತಿವೆ.

ಸೌತೆಕಾಯಿ, ಕೊತ್ತಂಬರಿ, ಹೂಕೋಸು, ಆಲೂಗಡ್ಡೆ, ಟೊಮೆಟೊ, ಹೀರೇಕಾಯಿ, ಹಾಗಲಕಾಯಿ, ಬೂದುಗುಂಬಳ, ಮೂಲಂಗಿ, ಕುಂಬಳ, ನುಗ್ಗೆ, ಗಡ್ಡೆಕೋಸು, ಹೂವಿನ ಬೆಳೆಗಳಾದ ಚೆಂಡುಹೂವು, ಸೇವಂತಿಗೆ ಬೆಳೆಯುತ್ತಿದ್ದಾರೆ.

'ಕೀಟ ಮತ್ತು ರೋಗ ನಿರ್ವಹಣೆಗೆ ಬೇವಿನ ಬೀಜದ ಕಷಾಯ, ಹಳದಿ ಅಂಟು ಪಟ್ಟಿ, ಮೋಹಕ ಬಲೆ ಬಳಸುತ್ತಿದ್ದೇನೆ. ಕೃಷಿಗೆ ಕಾರ್ಮಿಕರು ಲಭಿಸುತ್ತಿಲ್ಲ. ಹೀಗಾಗಿ, ಯಂತ್ರೋಪಕರಣಗಳ ಮೊರೆ ಹೋಗಿದ್ದೇನೆ. ಟ್ರ್ಯಾಕ್ಟರ್, ಪವರ್ ಸ್ಪ್ರೇಯರ್, ರೊಟೊವೇಟರ್ ಮತ್ತು ಬೂಮರ್ ಸ್ಪ್ರೆಯರ್ ಬಳಸಿ ಕೃಷಿ ಚಟುವಟಿಕೆ ಸರಳ ಮಾಡಿಕೊಂಡಿದ್ದೇನೆ' ಎಂದು ನವಿಕ್ರಮ್ 'ಪ್ರಜಾವಾಣಿ'ಗೆ ತಿಳಿಸಿದರು

ಕೋಳಿ ಸಾಕಣೆ: ಲಕ್ಷಾಂತರ ಆದಾಯ

ದೊಡ್ಡಬಳ್ಳಾಪುರ ತಾಲ್ಲೂಕು ತಗಳವಾರದ ವೆಂಕಮ್ಮ ಅವರು ಕೋಳಿ ಸಾಕಣೆಯನ್ನೇ ಉಪ ಕಸುಬು ಮಾಡಿಕೊಂಡು ಲಕ್ಷಾಂತರ ರೂಪಾಯಿ ಆದಾಯಗಳಿಸುತ್ತಿದ್ದಾರೆ. ರಾಗಿ, ಜೋಳ ಬೆಳೆ ಕೈಕೊಟ್ಟಾಗ ಕೋಳಿ ಸಾಕಣೆ ಅವರ ಕೈಹಿಡಿದಿದೆ.

'15 ಸಾವಿರ ಕೋಳಿ ಸಾಕಣೆ ಮಾಡಿದ್ದು, ನಿತ್ಯ 6 ಸಾವಿರ ಮೊಟ್ಟೆ ಮಾರುತ್ತಿದ್ದೇನೆ. ವಾರ್ಷಿಕ ₹ 6 ಲಕ್ಷ ಆದಾಯ ಇದೆ. ಫಾರಂ ತಳಿ ಕೋಳಿ ಜತೆಗೆ ನಾಟಿ ಕೋಳಿ ಸಾಕಣೆ ಆದಾಯ ಮೂಲವಾಗಿದೆ' ಎಂದು ವೆಂಕಮ್ಮ ಹೇಳಿದರು.

ಇವರು ಖಾಸಗಿ ಅರಣ್ಯವನ್ನು ಬೆಳೆಸಿದ್ದಾರೆ. ಮಹೋಗನಿ, ಹುಣಸೆ, ಸಿಲ್ವರ್ ಓಕ್, ತೇಗ, ಹಲಸು, ಸುಬಾಬುಲ್, ನೇರಳೆ ಮರಗಳು ಬೃಹತ್ ಆಗಿ ಬೆಳೆದಿವೆ. ಭವಿಷ್ಯದಲ್ಲಿ ಈ ಮರಗಳು ವರಮಾನ ನೀಡಲಿವೆ ಎಂದು ಹೇಳಿದರು.

ಕೃಷಿಯನ್ನು ಶ್ರದ್ಧೆಯಿಂದ ಮಾಡಿದರೆ ಲಾಭ ಗಳಿಸಲು ಸಾಧ್ಯ. ಆನ್‌ಲೈನ್‌ನಲ್ಲಿ ಮಾಹಿತಿ ತಿಳಿದು ನಾನೇ ನೇರವಾಗಿ ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಪೂರೈಸುತ್ತಿದ್ದೇನೆ.

ಎಚ್.ಜಿ.ಗೋಪಾಲಗೌಡ
ಹಿತ್ತನಹಳ್ಳಿ, ಶಿಡ್ಲಘಟ್ಟ ತಾಲ್ಲೂಕು

ಸಾವಯವ ಕೃಷಿಗೆ ಆದ್ಯತೆ ನೀಡಿದ್ದೇನೆ. ಕೊಟ್ಟಿಗೆ ಗೊಬ್ಬರ, ಎರೆಹುಳು ಗೊಬ್ಬರ, ಜೀವಾಮೃತ, ಪಂಚಗವ್ಯ, ಹಸಿರೆಲೆ ಗೊಬ್ಬರದಿಂದ ಜಮೀನಿನ ಫಲವತ್ತತೆ ಹೆಚ್ಚಿಸಿದ್ದೇನೆ.

ಸಿ.ನವಿಕ್ರಮ್
ಕೃಷಿ ಸಾಧಕ, ದೊಡ್ಡಬಳ್ಳಾಪುರ

ಸಾಧಕ ಕೃಷಿಕ ಮುನೇಗೌಡ ಅವರು ಕೃಷಿ ಬೆಳೆಗೆ ವ್ಯವಸ್ಥೆ ಮಾಡಿಕೊಂಡಿರುವ ನೀರಾವರಿ ಸೌಲಭ್ಯ

ಕೃಷಿ ಜಮೀನಿನಲ್ಲಿ ಎಂ.ಕವಿತಾ

ಕೃಷಿ ಮೇಳಕ್ಕೆ ತೆರೆ – 17 ಲಕ್ಷ ಜನರಿಂದ ವೀಕ್ಷಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಕೃಷಿ ವಿಶ್ವ-ವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ನಾಲ್ಕು ದಿನಗಳಿಂದ ನಡೆದ ಕೃಷಿಮೇಳಕ್ಕೆ ಭಾನುವಾರ ಸಂಭ್ರಮದ ತೆರೆ ಬಿತ್ತು.

ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ನಂತರ ಮಾತನಾಡಿದ ಕುಲಪತಿ ಡಾ.ಎಸ್.ವಿ.ಸುರೇಶ್, 'ಮೇಳಕ್ಕೆ ನಾಲ್ಕು ದಿನಗಳಲ್ಲಿ ಸುಮಾರು 17 ಲಕ್ಷ ಜನರು ಭೇಟಿ ನೀಡಿದ್ದರು. ಸುಮಾರು ₹ 9 ಕೋಟಿ ವಹಿವಾಟು ನಡೆದಿದೆ' ಎಂದು ತಿಳಿಸಿದರು.

'ಮುಂದಿನ ದಿನಗಳಲ್ಲಿ ರೈತಸ್ನೇಹಿ ಸಂಶೋಧನೆಗಳನ್ನು ಕೃಷಿಕರ ಹೊಲಗಳಲ್ಲಿಯೂ ಕೈಗೊಳ್ಳುವ ಮೂಲಕ ನಮ್ಮ ಆವರಣದಿಂದ ಹೊರಗೂ ಕೃಷಿ ಕಾರ್ಯ ಚಟುವಟಿಕೆ ನಡೆಸಲಾಗುವುದು' ಎಂದು ಹೇಳಿದರು.

'ವಿವಿಧ ಪ್ರಶಸ್ತಿಗಳನ್ನು ಪಡೆದ ಪ್ರಗತಿಪರ ರೈತರು, ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳನ್ನು ಇತರೆ ರೈತರಿಗೂ ತಲುಪಿಸುವ ಮೂಲಕ ಕೃಷಿ ವಿಶ್ವವಿದ್ಯಾಲಯದ ರಾಯಭಾರಿಗಳಾಗಿ ಕಾರ್ಯ ನಿರ್ವಹಿಸಬೇಕು' ಎಂದು ಮನವಿ ಮಾಡಿದರು.

ಕೃಷಿ ಮೇಳ ವೀಕ್ಷಣೆಗೆ ಭಾನುವಾರ ಸೇರಿದ್ದ ಜನಸ್ತೋಮ —ಪ್ರಜಾವಾಣಿ ಚಿತ್ರ

'ಕೃಷಿಕರು ಕೇವಲ ಕೃಷಿ ಮಾಡಿದರೆ ಸಾಲದು. ಉತ್ತಮ ಉದ್ಯಮಿಗಳಾಗಬೇಕೆಂಬುದು ಕೃಷಿ ವಿಶ್ವವಿದ್ಯಾಲಯದ ಆಶಯವಾಗಿದೆ. ಉತ್ಪಾದನೆ ಮಾಡುವವರು ತಮ್ಮ ಬೆಳೆಗಳನ್ನು ಸಂಸ್ಕರಿಸಿ, ಅದರಿಂದ ಉತ್ತಮವಾದ ಪದಾರ್ಥಗಳನ್ನು ತಯಾರು ಮಾಡುವ ಮೂಲಕ ಮೌಲ್ಯವರ್ಧನೆ ವೃದ್ಧೀಕರಿಸಿಕೊಳ್ಳಬೇಕು. ಇದರಿಂದ ರೈತರ ಆದಾಯವೂ ಹೆಚ್ಚಾಗಲು ಸಾಧ್ಯವಾಗುತ್ತದೆ' ಎಂದರು.

ಕೋಲಾರ ಸಂಸದ ಎಸ್. ಮುನಿಸ್ವಾಮಿ ಮಾತನಾಡಿ, 'ಕೃಷಿ ಇಲಾಖೆ, ಕೃಷಿ ವಿಶ್ವವಿದ್ಯಾಲಯಗಳು ಮತ್ತು ರೈತರು ಮಾಡಿರುವ ಹೊಸ ಸಂಶೋಧನೆಗಳನ್ನು ಕಷ್ಟಪಟ್ಟು ವ್ಯವಸಾಯ ಮಾಡುತ್ತಿರುವ ಅವಿದ್ಯಾವಂತ ರೈತರಿಗೂ ತಲುಪಿಸಬೇಕು. ಆ ಮೂಲಕ ರೈತರ ಆದಾಯವನ್ನು ದ್ವಿಗುಣಗೊಳಿಸಿ, ಅವರ ಜೀವನಮಟ್ಟ ಸುಧಾರಣೆಯಾಗಲು ಎಲ್ಲರೂ ಒಟ್ಟಾಗಿ ಕಾರ್ಯ ನಿರ್ವಹಿಸಬೇಕು' ಎಂದು ತಿಳಿಸಿದರು.

ಕೃಷಿ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕ ಡಾ.ಕೆ.ನಾರಾಯಣಗೌಡ, ಸಂಶೋಧನಾ ನಿರ್ದೇಶಕ ಡಾ.ಕೆ. ಬಿ.ಉಮೇಶ್ ಉಪಸ್ಥಿತರಿದ್ದರು.

ಐದು ವರ್ಷಗಳಲ್ಲಿ ಕೃಷಿ ಮೇಳದಲ್ಲಿ ಭಾಗವಹಿಸಿದವರ ಸಂಖ್ಯೆ

ಕ್ರ.ಸಂ	ವರ್ಷ	ಕೃಷಿ ಮೇಳ ನಡೆದ ದಿನಗಳು	ಭಾಗವಹಿಸಿದವರ ಸಂಖ್ಯೆ (ಲಕ್ಷಗಳಲ್ಲಿ)
1	2018-19	4	13.10
2	2019-20	4	14.50
3	2020-21	3	ಕೋವಿಡ್ ನಿಯಮದಂತೆ ಪ್ರತಿದಿನ 200 ಮಂದಿ
4	2021-22	4	8.10
5	2022-23	4	17.35

ಪ್ರಶಸ್ತಿ ಪ್ರದಾನ

ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ ಜಿಲ್ಲಾಮಟ್ಟದ ಅತ್ಯುತ್ತಮ ರೈತ ಮತ್ತು ರೈತ ಮಹಿಳಾ ಪ್ರಶಸ್ತಿ, ತಾಲ್ಲೂಕು ಮಟ್ಟದ ಅತ್ಯುತ್ತಮ ಯುವ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗಳನ್ನು ವಿತರಿಸಲಾಯಿತು.
ವಸ್ತು ಪ್ರದರ್ಶನ ಮಳಿಗೆಗಳಿಗೆ ಹಾಗೂ ಕೃಷಿ ಮೇಳದ ವಿಶಿಷ್ಟ ಪ್ರಶಸ್ತಿಗಳನ್ನು ವಿವಿಧ ಸಂಸ್ಥೆಗಳಿಗೆ ನೀಡಲಾಯಿತು.

'ಸೌರ ವಿದ್ಯುತ್ ಘಟಕಗಳ ಅಕ್ರಮದ ಸಮಗ್ರ ತನಿಖೆ'

ಬೆಂಗಳೂರು: 'ಹಿಂದಿನ ಸರ್ಕಾರದ ಅವಧಿಯಲ್ಲಿ ಸೌರವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಖಾಸಗಿಯವರಿಗೆ ಪರವಾನಗಿ ನೀಡುವಲ್ಲಿ ನಡೆದಿರುವ ಅವ್ಯವಹಾರದ ಕುರಿತು ಸಮಗ್ರ ತನಿಖೆ ನಡೆಯುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭಾನುವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಪರವಾನಗಿಗೆ ಅರ್ಜಿ-ಸಲ್ಲಿಸುವ ಪ್ರಕ್ರಿಯೆಯನ್ನು 7 ಸೆಕೆಂಡ್‌ನಲ್ಲಿ ಪೂರ್ಣಗೊಳಿಸಿರು-ವುದನ್ನು ನೋಡಿದರೆ ಏನೆಲ್ಲಾ ನಡೆದಿರಬಹುದು ಎಂದು ತಿಳಿಯುತ್ತದೆ. ಅವ್ಯವಹಾರವನ್ನು ಮುಚ್ಚಿ ಹಾಕಲು ಕೆಲವರು ಯತ್ನಿಸುತ್ತಿದ್ದಾರೆ' ಎಂದರು.

ಎಲ್ಲ ಆಯಾಮಗಳಲ್ಲಿ ತನಿಖೆ: 'ಶಾಸಕ ಎಂ.ಪಿ.ರೇಣುಕಾಚಾರ್ಯ ಅವರ ತಮ್ಮನ ಮಗನ ಸಾವಿಗೆ ಸಂಬಂಧಿಸಿ ಶಾಸಕರ ಜತೆ ಮಾತನಾಡಿದ್ದೇನೆ. ಅವರ ಅಭಿಪ್ರಾಯ ಪಡೆದಿದ್ದು, ಮಾಹಿತಿಯನ್ನು ಐಜಿಪಿ ಹಾಗೂ ಜಿಲ್ಲಾ ಎಸ್‌ಪಿಯವರಿಗೂ ತಿಳಿಸಿದ್ದೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮರಣೋತ್ತರ ಪರೀಕ್ಷೆ ವರದಿ ಬಳಿಕ ತನಿಖೆ ಯಾವ ದಿಕ್ಕಿನಲ್ಲಿ ಮುಂದುವರಿಸಬೇಕು ಎಂಬುದನ್ನು ನಿರ್ಧರಿಸಲಾಗುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುವುದು ಎಂದು ತಿಳಿಸಿದರು.

ಯಾತ್ರೆ ಮುಂದುವರಿಯಲಿದೆ: ಜನ ಸಂಕಲ್ಪ ಯಾತ್ರೆ ಸೋಮವಾರದಿಂದ ಮುಂದುವರಿಯಲಿದೆ.
ಉಡುಪಿ, ಗದಗ, ಹಾವೇರಿ, ಬೆಳಗಾವಿ ಜಿಲ್ಲೆಗಳಲ್ಲಿ ಮುಂದಿನ ಮೂರು ದಿನ ಸತತವಾಗಿ ಸಮಾವೇಶ ನಡೆಸಲಾಗುವುದು. ಡಿಸೆಂಬರ್‌ವರೆಗೂ ಯಾತ್ರೆ ನಡೆಯಲಿದೆ ಎಂದು ಹೇಳಿದರು.

ನವೆಂಬರ್ 20ರಂದು ಬಳ್ಳಾರಿಯಲ್ಲಿ ಪರಿಶಿಷ್ಟ ಪಂಗಡಗಳ ಮೋರ್ಚಾ ಸಮಾವೇಶ ಹಾಗೂ ನ. 30 ರಂದು ಮೈಸೂರಿನಲ್ಲಿ ಪರಿಶಿಷ್ಟ ಜಾತಿ ಮೋರ್ಚಾ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ ಎಂದರು.

ನಗರದಲ್ಲಿ ಇಂದು

ರಾಮನ್ ಸಂಶೋಧನಾ ಸಂಸ್ಥೆಯ ಅಮೃತ ಮಹೋತ್ಸವ: ಮುಖ್ಯ ಅತಿಥಿ: ಎಸ್.ಚಂದ್ರಶೇಖರ್, ಗೌರವ ಅತಿಥಿ: ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್, ಸ್ಥಳ: ರಾಮನ್ ಸಂಶೋಧನಾ ಸಂಸ್ಥೆ, ಬೆಳಿಗ್ಗೆ 9.30

ರಾಷ್ಟ್ರಪತಿ ಪದಕ ಪ್ರದಾನ ಸಮಾರಂಭ: ಭಾಗವಹಿಸುವವರು: ಥಾವರಚಂದ್ ಗೆಹಲೋತ್, ಬಸವರಾಜ ಬೊಮ್ಮಾಯಿ, ಆರಗ ಜ್ಞಾನೇಂದ್ರ, ಅಮರ್‌ಕುಮಾರ್ ಪಾಂಡೆ, ಸ್ಥಳ: ರಾಜಭವನದ ಗಾಜಿನ ಮನೆ, ಬೆಳಿಗ್ಗೆ 10.30

ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಶಿಕ್ಷಕರ ಶಿಕ್ಷಣ ಕುರಿತ ರಾಜ್ಯ ಮಟ್ಟದ ಒಂದು ದಿನ ವಿಚಾರ ಸಂಕಿರಣ ಮತ್ತು ಪ್ರೊ. ಹಸೀನ್ ತಾಜ್ ಅವರಿಗೆ ಅಭಿನಂದನಾ ಕಾರ್ಯಕ್ರಮ: ಉದ್ಘಾಟನೆ: ಎಸ್. ಎಂ.ಜಯಕರ, ಅತಿಥಿಗಳು: ಎಂ.ಮಹೇಶ್ ಬಾಬು, ಪುಟ್ಟಣ್ಣ, ಜೆ.ಟಿ.ದೇವರಾಜು, ಎಂ.ಎಸ್.ತಳವಾರ್, ಪ್ರೊ.ಕೆ.ಬಿ.ಪ್ರವೀಣ, ಆರ್.ವಿಜಯಕುಮಾರ್, ಅಧ್ಯಕ್ಷತೆ: ಎಂ.ನಾರಾಯಣಸ್ವಾಮಿ, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಪ್ರೊ. ವೆಂಕಟಗಿರಿಗೌಡ ಸ್ಮಾರಕ ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ 10.30

ನುಡಿ ಸಂಭ್ರಮ– ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಮುಖ್ಯ ಅತಿಥಿಗಳು: ಚಂದ್ರಶೇಖರ ಕಂಬಾರ, ಅತಿಥಿಗಳು: ಎಚ್.ಎಸ್.ವೆಂಕಟೇಶಮೂರ್ತಿ, ಚಿರಂಜೀವಿ ಸಿಂಗ್, ಗೌರವ ಉಪಸ್ಥಿತಿ: ಪಿ.ದಯಾನಂದ ಪೈ, ಬಿ.ಎಸ್.ರಾಗಿಣಿ ನಾರಾಯಣ್, ಆಯೋಜನೆ: ಬಿಎಂಎಸ್ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಸ್ಥಳ: ಬಿಎಂಎಸ್ ಕಾಲೇಜಿನ ಸಭಾಂಗಣ, ವಿ.ವಿ.ಪುರ, ಬೆಳಿಗ್ಗೆ 11

ಚಂದ್ರಶೇಖರ ಕಂಬಾರ

ಕರ್ನಾಟಕ ರಾಜ್ಯೋತ್ಸವ ಆಚರಣೆ: ಉದ್ಘಾಟನೆ: ಪಿ.ಸಿ.ಮೋಹನ್, ರಿಜ್ವಾನ್ ಅರ್ಷದ್, ಸಿ.ಎಸ್. ಷಡಾಕ್ಷರಿ, ಎಂ.ಗೌತಮ್‌ಕುಮಾರ್, ಸಾ.ರಾ.ಗೋವಿಂದು, ಅತಿಥಿಗಳು: ರಾಕೇಶ್‌ಸಿಂಗ್, ತುಷಾರ್ ಗಿರಿನಾಥ್, ದೊಡ್ಡಣ್ಣ, ಎಸ್.ರಂಗಪ್ಪ, ಟಿ.ಯೋಗೇಶ್, ಆಯೋಜನೆ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೌಕರರ ಕನ್ನಡ ಸಂಘ, ಸ್ಥಳ: ಬಿಬಿಎಂಪಿ ಕೇಂದ್ರ ಕಚೇರಿ ಆವರಣ, ಸಂಜೆ 5.30(ಮಧ್ಯಾಹ್ನ 3ರಿಂದ ಸಾಂಸ್ಕೃತಿಕ ಕಾರ್ಯಕ್ರಮ)

ದಿ. ಹೊ.ನಂಜುಂಡಪ್ಪ ನೆನಪಿನಲ್ಲಿ 52ನೇ ಬಹುಭಾಷಾ ನಾಟಕ ಸ್ಪರ್ಧೆ: ಉದ್ಘಾಟನೆ: ಸುಬ್ಬು ಹೊಲೆಯಾರ್, ಅತಿಥಿಗಳು: ರಾಜೇಂದ್ರ ಐಹೊಳೆ, ಗೌರಮ್ಮ, ನರಸಿಂಹನಾಯ್ಕ, ಜಿ.ಬಾಲಕೃಷ್ಣಯ್ಯ, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಬಿಇಎಲ್, ಜಾಲಹಳ್ಳಿ, ಸಂಜೆ 6

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಮತ

'ತಂತ್ರಜ್ಞಾನದಿಂದ ಚಿಂತನಾ ಶಕ್ತಿ ಕುಸಿತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಸ್ತಾರ ಮೀಡಿಯಾ ಪ್ರೈವೇಟ್ ಲಿಮಿಟೆಡ್‌ನ 'ವಿಸ್ತಾರ ಸುದ್ದಿವಾಹಿನಿ'ಗೆ ಭಾನುವಾರ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ ಬೊಮ್ಮಾಯಿ, ಅವರು, 'ಮಾಧ್ಯಮಗಳು ಜನರ ದನಿಯಾಗಬೇಕು. ಇಂದು ತಂತ್ರಜ್ಞಾನ ಇಡೀ ಬದುಕನ್ನು ಆವರಿಸಿದೆ. ಆದರೆ ನಮ್ಮ ಚಿಂತನಾ ಶಕ್ತಿ ಕಡಿಮೆ ಆಗುತ್ತಿದೆ. ಒಂದು ಬಟನ್ ಒತ್ತಿದರೆ ಎಲ್ಲವೂ ಸಿಗುವಂತೆ ತಂತ್ರಜ್ಞಾನ ಬೆಳೆದಿದೆ' ಎಂದರು.

'ಆದರೆ, ಇಂತಹ ಸಂದರ್ಭದಲ್ಲಿ ಅಂತಃಕರಣ, ಮಾನವೀಯತೆ, ಪ್ರೀತಿ, ವಿಶ್ವಾಸವನ್ನು ಮರೆಯಬಾರದು. ಅದನ್ನು ತಂತ್ರಜ್ಞಾನ ಹೇಳಿಕೊಡದು. ಯಾವುದೇ ರಾಜಕಾರಣಿಯ ತಲೆ ತಣ್ಣಗಿರಬೇಕು, ಹೃದಯ ಬೆಚ್ಚಗಿರಬೇಕು ಎಂದು ಹಿರಿಯರು ಹೇಳುತ್ತಾರೆ 'ಎಂದು ಬಸವರಾಜ ಬೊಮ್ಮಾಯಿ ಅವರು ನುಡಿದರು.

ವಿಸ್ತಾರ ಸುದ್ದಿವಾಹಿನಿಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಸಚಿವ ಆರ್.ಅಶೋಕ ಇದ್ದರು.

ಕಾರ್ಯಕ್ರಮದಲ್ಲಿ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ವಿಧಾನಸಭೆ ಅಧ್ಯಕ್ಷ ವಿಶ್ವೇಶರ ಹೆಗಡೆ ಕಾಗೇರಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವರಾದ ಭೈರತಿ ಬಸವರಾಜ, ಆರ್.ಅಶೋಕ, ಎಸ್.ಟಿ.ಸೋಮಶೇಖರ್, ಡಾ.ಕೆ. ಸುಧಾಕರ್, ವಿಸ್ತಾರ ಮೀಡಿಯಾದ ಸಿಇಒ ಹರಿಪ್ರಕಾಶ್ ಕೋಣೆಮನೆ ಇದ್ದರು.

ಖಾಕಿ, ಖಾವಿ, ಖಾದಿ ಗೌರವ ಉಳಿದಿಲ್ಲ: ಡಿ.ಕೆ.ಶಿವಕುಮಾರ್

ಬೆಂಗಳೂರು: 'ಈಗ ಖಾಕಿ, ಖಾವಿ, ಖಾದಿ ಈ ಯಾವುದರ ಗೌರವವೂ ಉಳಿದಿಲ್ಲ. ಎಲ್ಲ ಗೋವಿಂದಾ, ಗೋವಿಂದ ಆಗಿ ಹೋಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

'ವಿಸ್ತಾರ' ಸುದ್ದಿ ವಾಹಿನಿಯ ಉದ್ಘಾಟನೆ ಸಮಾರಂಭದಲ್ಲಿ 'ನಿಮ್ಮೊಡನೆ ನಾವು' ಸಹಾಯವಾಣಿ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, 'ಹಿಂದೆ ಶಾಸಕರೆಂದರೆ ದೊಡ್ಡ ಗೌರವ ಇತ್ತು. ನಾನು ಬಾಲಕನಾಗಿದ್ದಾಗ ಖಾಸಗಿ ಶಾಲೆಯಲ್ಲಿ ಸೀಟು ಬೇಕು ಎಂದು ನನ್ನ ತಂದೆ ನನ್ನನ್ನು ಶಾಸಕ ಕರಿಯಪ್ಪ ಅವರ ಬಳಿ ಕರೆದುಕೊಂಡು ಹೋಗಿ ಕಾಲಿಗೆ ಬೀಳು ಅಂತ ಅಂದಿದ್ದರು. ಆಗ ಶಾಸಕರೆಂದರೆ ಅಷ್ಟು ಗೌರವ. ಆದರೆ, ಈಗ ಪರಿಸ್ಥಿತಿ ಕೆಟ್ಟು ಹೋಗಿದೆ. ಟಿವಿಯಲ್ಲಿ ಖಾಕಿ ಬಟ್ಟೆ ಹಾಕಿಕೊಂಡಿರುವವರನ್ನು ನೋಡಿದರೆ ಕಳ್ಳ, ಕಳ್ಳ ಎನ್ನುತ್ತಾರೆ' ಎಂದರು.

'ಪ್ರಜಾಪ್ರಭುತ್ವದ ನಾಲ್ಕನೇ ಅಂಗವಾದ ಮಾಧ್ಯಮರಂಗ ಗೌರವ ಉಳಿಸಿಕೊಂಡಿದೆ. ರಾಜಕಾರಣಿಗಳ ಗೌರವದ ಬಗ್ಗೆಯೂ ಸ್ವಲ್ಪ ಯೋಚಿಸಿ' ಎಂದರು.

'ಸಹಾಯವಾಣಿಗೆ ಕರೆ ಮಾಡಿ ಯಾವುದಕ್ಕೆ ಎಷ್ಟು ದುಡ್ಡು ಮತ್ತಿತರ ವಿಚಾರಗಳ ಬಗ್ಗೆ ಸಿ.ಎಂಗೆ ದೂರು ಕೊಡೋಣ ಎಂದುಕೊಂಡೆ. ನನ್ನ ದೂರುಗಳು ಇದ್ದವು. ಆದರೆ, ವಿರೋಧಪಕ್ಷದ ಕೆಲಸ ಮಾಡಬೇಕಲ್ಲ. ಬೇರೆ ಸಂದರ್ಭದಲ್ಲಿ ಮಾಡಬಹುದೆಂಬ ಸುಮ್ಮನಾದೆ' ಎಂದು ಅವರು ಹೇಳಿದರು.

ಕಾಲಮಿತಿ ಕೈಬಿಡಲು ಒತ್ತಾಯಿಸಿ ಪಾದಯಾತ್ರೆ

ಮಂಗಳೂರು: ಕಟೀಲು ಶ್ರೀ ದುರ್ಗಾ-ಪರಮೇಶ್ವರಿ ದಶಾವತಾರ ಯಕ್ಷಗಾನ ಮಂಡಳಿಯ ಮೇಳಗಳು (ಕಟೀಲು ಮೇಳ) ಪ್ರದರ್ಶಿಸುವ ಹರಕೆ ಸೇವೆಯ ಬಯಲಾಟಕ್ಕೆ ಕಾಲಮಿತಿ ನಿಗದಿಪಡಿಸು-ವುದು ಬೇಡ ಎಂದು ಒತ್ತಾಯಿಸಿ ಭಕ್ತರು ಬಜಪೆಯಿಂದ ಕಟೀಲು ಕ್ಷೇತ್ರದವರೆಗೆ ಭಾನುವಾರ 'ಶ್ರೀ ಕಟೀಲಮ್ಮನೆಡೆ ಭಕ್ತರ ನಡೆ' ಪಾದಯಾತ್ರೆ ನಡೆಸಿದರು.

ಕಟೀಲು ಮೇಳದ ಯಕ್ಷಗಾನ ಸೇವೆ ಪರಂಪರಾನುಗತವಾಗಿ ರಾತ್ರಿಯಿಂದ ಬೆಳಗಿನವರೆಗೆ ನಡೆಯುತ್ತಾ ಬಂದಿದೆ. ರಾತ್ರಿ 10 ಗಂಟೆ ಬಳಿಕ ಧ್ವನಿವರ್ಧಕ ಬಳಕೆಗೆ ನಿಷೇಧ ಇರುವ ಕಾರಣ ಈ ವರ್ಷದಿಂದ ಯಕ್ಷಗಾನ ಮೇಳಗಳ ಪ್ರದರ್ಶನವನ್ನು ರಾತ್ರಿ 10ರ ಒಳಗೆ ಮುಕ್ತಾಯಗೊಳಿಸುವ ನಿರ್ಧಾರವನ್ನು ಮೇಳದ ವ್ಯವಸ್ಥಾಪನಾ ಸಮಿತಿ ಕೈಗೊಂಡಿದೆ.

ಇದನ್ನು ವಿರೋಧಿಸಿ ಶ್ರೀಕಟೀಲು ಯಕ್ಷಸೇವಾ ಸಮನ್ವಯ ಸಮಿತಿ ನೇತೃತ್ವ ದಲ್ಲಿ ನಡೆದ ಪಾದಯಾತ್ರೆಯಲ್ಲಿ ಸಾವಿರಾರು ಮಂದಿ ಭಾಗವಹಿಸಿದ್ದರು. ಕಟೀಲು ದುರ್ಗಾಪರಮೇಶ್ವರಿ ಸನ್ನಿಧಿಯಲ್ಲಿ ಭಕ್ತರು, 'ಪರಂಪರೆಯ ಪ್ರಕಾರ ರಾತ್ರಿಯಿಂದ ಬೆಳಿಗ್ಗೆವರೆಗೆ ಹರಕೆ ಬಯಲಾಟ ನಡೆಯುವಂತಾಗಬೇಕು' ಎಂದು ಪ್ರಾರ್ಥನೆ ಸಲ್ಲಿಸಿದರು.

ಪಾಕ್ ಪೊಲೀಸರು ದಿಢೀರ್ ಕೋಟ್ಯಧಿಪತಿ

ಕರಾಚಿ (ಪಿಟಿಐ): ಪಾಕಿಸ್ತಾನದ ಪೊಲೀಸ್ ಅಧಿಕಾರಿಗಳು ಈಗ ರಾತ್ರೋರಾತ್ರಿ ಕೋಟ್ಯಧಿಪತಿಗಳಾಗುತ್ತಿದ್ದು, ಮುಂದಿನ ಸರದಿ ಯಾರದಿರಬಹುದು ಎಂದು ಕಾಯುವಂತಾಗಿದೆ!

ಕರಾಚಿಯ ಬಹುದೂರ ಬಾದ್ ಪೊಲೀಸ್ ಠಾಣೆಯ ತನಿಖಾಧಿಕಾರಿ ಆಮಿರ್ ಗೋಪಂಗ್ ಅವರ ಬ್ಯಾಂಕ್ ಖಾತೆಗೆ ವೇತನವೂ ಸೇರಿ ₹ 10 ಕೋಟಿ (100 ಮಿಲಿಯನ್) ಅನಾಮಧೇಯ ಮೂಲದಿಂದ ಜಮೆ ಆಗಿದೆ. ಹೀಗೇ ಲರ್ಕಾನದ ಮೂವರು ಅಧಿಕಾರಿಗಳು ಹಾಗೂ ಸುಕ್ಕೂರು ಠಾಣೆಯ ಒಬ್ಬ ಅಧಿಕಾರಿಯ ಬ್ಯಾಂಕ್ ಖಾತೆಗೆ ₹ 5 ಕೋಟಿ ರೂಪಾಯಿ (50 ಮಿಲಿಯನ್) ಜಮೆ ಆಗಿದೆ. ಈ ಬಗ್ಗೆ ತನಿಖೆ ಆರಂಭವಾಗಿದೆ.

ಪೌರಕಾರ್ಮಿಕರ ರಾಜ್ಯಮಟ್ಟದ ಹಕ್ಕೊತ್ತಾಯ ಸಮಾವೇಶ

48 ಸಾವಿರ ಪೌರಕಾರ್ಮಿಕರ ಕಾಯಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಕಾಯಂಗೊಳಿಸುವವರೆಗೆ ಹೋರಾಟ ನಡೆಸಲು ನಿರ್ಧಾರ
- ಘನತೆ ಜೀವನ ಒದಗಿಸಿಕೊಡಲು ಸರ್ಕಾರಕ್ಕೆ ಆಗ್ರಹ
- ಗುತ್ತಿಗೆ ಪದ್ಧತಿಯನ್ನು ರದ್ದುಪಡಿಸಲು ಒತ್ತಾಯ

ಬೆಂಗಳೂರು: ರಾಜ್ಯದ ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ 48 ಸಾವಿರ ಪೌರ ಕಾರ್ಮಿಕರ ಸೇವೆ ಕಾಯಂಗೊಳಿಸಬೇಕು ಎಂದು ಬಿಬಿಎಂಪಿ ಪೌರಕಾರ್ಮಿರ ಸಂಘದ ಅಧ್ಯಕ್ಷೆ ನಿರ್ಮಲಾ ಆಗ್ರಹಿಸಿದರು.

ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ ಭಾನುವಾರ ಹಮ್ಮಿಕೊಂಡಿದ್ದ ಪೌರಕಾರ್ಮಿಕರ ರಾಜ್ಯಮಟ್ಟದ ಹಕ್ಕೊತ್ತಾಯ ಸಮಾವೇಶದಲ್ಲಿ ಅವರು ಮಾತನಾಡಿದರು.

ರಾಜ್ಯದ ಎಲ್ಲ ಪೌರ ಕಾರ್ಮಿಕರನ್ನು ಕಾಯಂಗೊಳಿಸಲು ಸಂಘಟನೆ ಜುಲೈನಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಂಡಿತ್ತು. ಸ್ಥಳೀಯ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುವ ಎಲ್ಲಾ ಪೌರಕಾರ್ಮಿಕರನ್ನು ಕಾಯಂಗೊಳಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಲಿಖಿತ ರೂಪದಲ್ಲಿ ಭರವಸೆ ನೀಡಿದ್ದರು. ಅದಕ್ಕಾಗಿ ಸಮಿತಿ ರಚಿಸಿದ್ದರು. ಸಮಿತಿ ವರದಿ ನೀಡುವ ಮೊದಲೇ 11 ಸಾವಿರ ಪೌರಕಾರ್ಮಿಕರನ್ನು ನೇಮಕ ಮಾಡಿಕೊಳ್ಳುವುದಾಗಿ ಹೇಳಿದ್ದಾರೆ. ಎಲ್ಲರನ್ನೂ ಕಾಯಂಗೊಳಿಸುವವರೆಗೆ ಮತ್ತೆ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಅಂಬೇಡ್ಕರ್ ಭವನದಲ್ಲಿ ಭಾನುವಾರ ನಡೆದ ರಾಜ್ಯಮಟ್ಟದ ಗುತ್ತಿಗೆ ಪೌರಕಾರ್ಮಿಕರ ಸಮಾವೇಶದಲ್ಲಿ ಎಐಸಿಸಿಟಿಯುನ ಮುಖಂಡರಾದ ಅಪ್ಪಣ್ಣ, ಕ್ಲಿಫ್ಟನ್ ಡಿ' ರೊಜಾರಿಯೊ, ನಿರ್ಮಲಾ, ಮನಿಯಮ್ಮ ರತ್ನಮ್ಮ ಇದ್ದರು —ಪ್ರಜಾವಾಣಿ ಚಿತ್ರ

ಪೌರ ಕಾರ್ಮಿಕರು ಅನುಭವಿಸುತ್ತಿರುವ ಎಲ್ಲಾ ಸಂಕಷ್ಟಗಳ ಪರಿಹಾರಕ್ಕಾಗಿ ಹಕ್ಕೊತ್ತಾಯ ಸಮಾವೇಶ ನಡೆಸುತ್ತಿದ್ದೇವೆ. ಬೇಡಿಕೆ ಈಡೇರುವ ವರೆಗೂ ವಿಶ್ರಮಿಸುವುದಿಲ್ಲ ಎಂದು ಘೋಷಿಸಿದರು.

ಎಐಸಿಸಿಟಿಯುನ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪಣ್ಣ, ಪೌರಕಾರ್ಮಿರಿಗೆ ಸರ್ಕಾರ ಘನತೆ ಜೀವನವನ್ನು ಒದಗಿಸಿಕೊಡಬೇಕು. ಅದಕ್ಕಾಗಿ ಸೇವೆ ಕಾಯಂಗೊಳಿಸುವ ಜತೆಗೆ, ಇತರೆ ಎಲ್ಲ ಬೇಡಿಕೆಗಳನ್ನೂ ಈಡೇರಿಸಬೇಕು ಎಂದು ಒತ್ತಾಯಿಸಿದರು.

ತ್ಯಾಜ್ಯ ಸಾಗಿಸುವ ವಾಹನ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ಕೇಶವ್, ತ್ಯಾಜ್ಯ ಸಾಗಿಸುವ ಎಲ್ಲಾ ವಾಹನ ಚಾಲಕರು ಮತ್ತು ಸಹಾಯಕರನ್ನು ಪೌರಕಾರ್ಮಿಕರೆಂದು ಪರಿಗಣಿಸಬೇಕು. ಗುತ್ತಿಗೆ ಪದ್ಧತಿ ರದ್ದು ಮಾಡಬೇಕು. ಜೀವನ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದರು.

ಸಿಪಿಐ(ಎಂಎಲ್) ಲಿಬರೇಷನ್ ಪಕ್ಷದ ಕಾರ್ಯದರ್ಶಿ ಕ್ಲಿಫ್ಟನ್, ಮುನಿಯಮ್ಮ, ಪೌರಕಾರ್ಮಿಕರಾದ ರತ್ನಮ್ಮ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಸಂಸತ್ ಆವರಣದಲ್ಲಿ ಕೆಂಪೇಗೌಡ ಪ್ರತಿಮೆ ಸ್ಥಾಪನೆಗೆ ಎಚ್‌ಡಿಡಿ ಆಗ್ರಹ

ಬೆಂಗಳೂರು: ಸಂಸತ್ ಆವರಣದಲ್ಲಿ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ಸ್ಥಾಪನೆಗೆ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ರಾಜ್ಯಸಭಾ ಸದಸ್ಯರೂ ಆಗಿರುವ ಜೆಡಿಎಸ್ ವರಿಷ್ಠ ಎಚ್. ಡಿ. ದೇವೇಗೌಡ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ.

ಬೆಂಗಳೂರು ಸಂಸ್ಥಾಪಕ ಕೆಂಪೇಗೌಡ ಕೇಂದ್ರ ಸಮಿತಿ ಸಲ್ಲಿಸಿರುವ ಮನವಿಯನ್ನು ಲಗತ್ತಿಸಿ ಭಾನುವಾರ ಪತ್ರ ಬರೆದಿರುವ ಅವರು, '16ನೇ ಶತಮಾನದಲ್ಲಿ ಕೆಂಪೇಗೌಡರು ಬೆಂಗಳೂರನ್ನು ನಿರ್ಮಿಸಿದರು. ಅವರು ಬಿತ್ತಿದ ಬೀಜಗಳು ಹೆಮ್ಮರವಾಗಿ ಅಂತರರರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿವೆ' ಎಂದು ಹೇಳಿದ್ದಾರೆ.

ಬೆಂಗಳೂರು ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಕೇಂದ್ರವಾಗಿರುವುದಕ್ಕೆ ಕೆಂಪೇಗೌಡರು ಆರಂಭದ ದಿನಗಳಲ್ಲಿ ಕೈಗೊಂಡ ಕ್ರಮಗಳೂ ಕಾರಣ. ದೇಶದ ಬೇರೆ ಯಾವ ನಗರಗಳಲ್ಲೂ ಇಷ್ಟೊಂದು ಸಂಖ್ಯೆಯ ಸರ್ಕಾರಿ ಮತ್ತು ಖಾಸಗಿ ವೈಜ್ಞಾನಿಕ ಹಾಗೂ ತಾಂತ್ರಿಕ ಸಂಶೋಧನಾ ಸಂಸ್ಥೆಗಳು ಇಲ್ಲ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕಲ್ಯಾಣ ಮಂಟಪ ನಿರಾಕರಣೆ: ದೇಗುಲ ಸಮಿತಿ ವ್ಯವಸ್ಥಾಪಕರ ವಿರುದ್ಧ ಪ್ರಕರಣ

ಗುಡಿಬಂಡೆ: ಮುಜರಾಯಿ ಇಲಾಖೆಗೆ ಸೇರಿದ ಇಲ್ಲಿನ ಲಕ್ಷ್ಮಿವೆಂಕಟರಮಣಸ್ವಾಮಿ ದೇವಸ್ಥಾನದ ಕಲ್ಯಾಣ ಮಂಟಪವನ್ನು ಪರಿಶಿಷ್ಟ ಜಾತಿಯವರ ವಿವಾಹಕ್ಕೆ ನೀಡಲು ನಿರಾಕರಿಸಿದ ಆರೋಪದಡಿ ದೇವಾಲಯದ ಸಮಿತಿ ವ್ಯವಸ್ಥಾಪಕ ಮಾಚಾವಲಹಳ್ಳಿ ವೆಂಕಟರಾಯಪ್ಪ ವಿರುದ್ಧ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಗುಡಿಬಂಡೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಟ್ರಸ್ಟ್‌ನ ವ್ಯವಸ್ಥಾಪಕರು ದುರುದ್ದೇಶದಿಂದ ಪರಿಶಿಷ್ಟ ಜಾತಿಗೆ ಸೇರಿದ ಕುಟುಂಬದ ಮದುವೆಗೆ ಕಲ್ಯಾಣ ಮಂಟಪ ನೀಡಲು ನಿರಾಕರಿಸಿರುವುದು ತಿಳಿದುಬಂದಿದೆ. ದೂರು ದಾಖಲಿಸಿಕೊಳ್ಳಲು ಗುಡಿಬಂಡೆ ಪೊಲೀಸರಿಗೆ ಸೂಚಿಸಲಾಗಿದೆ ಎಂದು ತಹಶೀಲ್ದಾರ್ ಸಿಗ್ಬತುಲ್ಲಾ ತಿಳಿಸಿದ್ದಾರೆ. ದೂರುದಾಖಲಿಸುವಂತೆ ಪೊಲೀಸರಿಗೆ ಸಮಾಜ ಕಲ್ಯಾಣ ಇಲಾಖೆ ತಾಲ್ಲೂಕು ಸಹಾಯಕ ನಿರ್ದೇಶಕರು ಸಹ ತಿಳಿಸಿದ್ದಾರೆ.

ತಾಲ್ಲೂಕಿನ ಬ್ರಾಹ್ಮಣರಹಳ್ಳಿಯ ಪರಿಶಿಷ್ಟ ಜಾತಿಯ ವೆಂಕಟಲಕ್ಷ್ಮಿ ಅವರ ವಿವಾಹ ನ.3 ರಂದು ನಿಶ್ಚಯವಾಗಿತ್ತು. ಇದಕ್ಕಾಗಿ ದೇವಾಲಯದ ಕಲ್ಯಾಣ ಮಂಟಪ ಕಾಯ್ದಿರಿಸಲು ವಧುವಿನ ಸಹೋದರ ಆವುಲಕೊಂಡಪ್ಪ ದೇವಾಲಯದ ಸಮಿತಿ ವ್ಯವಸ್ಥಾಪಕರನ್ನು ಸಂಪರ್ಕಿಸಿದ್ದರು.

ಆದರೆ ನ.3ರಂದು ಕಲ್ಯಾಣ ಮಂಟಪನ್ನು ಯಾರು ಕಾಯ್ದಿರಿಸದಿದ್ದರೂ ನ.3ರಂದು ಬೇರೊಂದು ವಿವಾಹ ನಿಗದಿ ಆಗಿದೆ ಎಂದು ಸುಳ್ಳು ಹೇಳಿ ನಿರಾಕರಿಸಲಾಗಿದೆ ಟ್ರಸ್ಟ್ ವ್ಯವಸ್ಥಾಪಕರ ವಿರುದ್ಧ ತಹಶೀಲ್ದಾರ್‌ಗೆ ದೂರು ಸಲ್ಲಿಸಿದ್ದರು.

ಹುಕ್ಕಾ ಬಾರ್‌ಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮೂರು ಹುಕ್ಕಾ ಬಾರ್‌ಗಳ ಮೇಲೆ ಸಿಸಿಬಿ ಪೊಲೀಸರು ಶನಿವಾರ ರಾತ್ರಿ ದಾಳಿ ಮಾಡಿದ್ದು, ಮಾಲೀಕರು ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

'ಅವಧಿ ಮೀರಿ ವಹಿವಾಟು ನಡೆಸುತ್ತಿದ್ದ ಮಾಹಿತಿ ಇತ್ತು. ಹೀಗಾಗಿ, ಜೀವನ್‌ಬಿಮಾನಗರದ ಕಶೀಶ್ ಕೆಫೆ, ಕಮರ್ಷಿಯಲ್ ಸ್ಟ್ರೀಟ್‌ನ ಬುರ್ನೌಟ್ ಕೆಫೆ ಹಾಗೂ ಮಡಿವಾಳದ ದಿ ಎಮಿರೆಟ್ಸ್ ಶೇಷಾ ಹೋಟೆಲ್ ಆ್ಯಂಡ್ ರೆಸ್ಟೋರೆಂಟ್‌ನ ಹುಕ್ಕಾ ಬಾರ್ ಮೇಲೆ ದಾಳಿ ಮಾಡಲಾಗಿದೆ. ನಗದು, ಹುಕ್ಕಾ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ–562 101
ದೂರವಾಣಿ ಸಂಖ್ಯೆ: ಕಛೇರಿ: 08156–295427 ಫ್ಯಾಕ್ಸ್: 08156–295427 ಇಮೇಲ್: eemidcbpura@gmail.com

ಅಲ್ಪಾವಧಿ ಟೆಂಡರ್ ಅಧಿಸೂಚನೆ

ಸಂಖ್ಯೆ : ಕಾಸಇ/ತಾಂಸ/ಸ.ಇಂ–1/ ಟೆಂಡರ್ ಪ್ರಕಟಣೆ ಸಂಖ್ಯೆ: 12/2022–23, ದಿನಾಂಕ : 02/11/2022

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ ರವರಿಂದ, ಶಿಡ್ಲಘಟ್ಟ ಮತ್ತು ಚಿಂತಾಮಣಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 4702 ವಿಶೇಷ ಘಟಕ ಯೋಜನೆ, 4702 ಪ್ರಧಾನ ಕಾಮಗಾರಿಗಳು ಅಣೆಕಟ್ಟು ಮತ್ತು ಪಿಕಪ್ ಮತ್ತು 4702 ಪ್ರಧಾನ ಕಾಮಗಾರಿಗಳು ಕೆರೆಗಳ ಆಧುನೀಕರಣ ಯೋಜನೆ ಅಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಕೆ.ಡಬ್ಲೂ 2 ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಏಕ ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 1, 2, ಮತ್ತು 3 ನೇ ದರ್ಜೆ (ಸಣ್ಣ ನೀರಾವರಿ ಇಲಾಖೆಯಲ್ಲಿ ನೊಂದಾಯಿತ) ಅರ್ಹ ಗುತ್ತಿಗೆದಾರರಿಂದ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಇ.ಎಂ.ಡಿ ಮೊತ್ತ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಇದ್ದಂತೆ. ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ 21/11/2022 ಸಾಯಂಕಾಲ 4.00 ಗಂಟೆಯವರೆಗೆ ಟೆಂಡರ್ ತೆರೆಯುವ ದಿನಾಂಕ : 24/11/2022 ಬೆಳಿಗ್ಗೆ 11.00 ಗಂಟೆಯ ನಂತರ (ಸಾಧ್ಯವಾದ್ದಲ್ಲಿ) ಸದರಿ ಕಾಮಗಾರಿಯ ಟೆಂಡರ್‌ಗಳ ಮೊತ್ತ ಅಥವಾ ಇ.ಎಂ.ಡಿ ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತಗಳು ಅಂತಿಮವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ – 08156–270427 ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ದೂರವಾಣಿ ಸಂಖ್ಯೆ: 080–25501216 ಮತ್ತು 080–25501227 ರಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿಕ್ಕಬಳ್ಳಾಪುರ

ಹನಿಟ್ರ್ಯಾಪ್: ವಿಡಿಯೊ ಚಿತ್ರೀಕರಿಸಿ ಸುಲಿಗೆ

ಸುದ್ದಗುಂಟೆಪಾಳ್ಯ ಠಾಣೆ ಪ್ರಕರಣ • ನಗದು, ಕಾರು ಒಯ್ದಿದ್ದ ಆರೋಪಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಉತ್ಪನ್ನ ಮಾರಾಟ ಮಳಿಗೆ ಮಾಲೀಕರೊಬ್ಬರನ್ನು ಹನಿಟ್ರ್ಯಾಪ್ ಜಾಲಕ್ಕೆ ಸಿಲುಕಿಸಿ ಹಣ ಹಾಗೂ ಕಾರು ಸುಲಿಗೆ ಮಾಡಿದ್ದ ಆರೋಪದಡಿ ಯುವತಿ ಸೇರಿ ಐವರನ್ನು ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹಲೀಮಾ ಸಾದಿಯಾ ಅಲಿಯಾಸ್ ಪ್ರಿಯಾ, ಜಾಹೀದ್ ಖುರೇಷಿ, ಸೈಯ್ಯದ್ ಮುತಾಹೀರ್, ಫರ್ಹಾನ್ ಖಾನ್ ಹಾಗೂ ಇಸ್ಮಾಯಿಲ್ ಬಂಧಿತರು.

'32 ವರ್ಷದ ದೂರುದಾರ, ಸಾಮಾಜಿಕ ಮಾಧ್ಯಮದಲ್ಲಿ ಖಾತೆ ಹೊಂದಿದ್ದ. ಪ್ರಿಯಾ ಹೆಸರಿನಲ್ಲಿ ಸಂದೇಶ ಕಳುಹಿಸಿದ್ದ ಆರೋಪಿ ಹಲೀಮಾ, ಸ್ನೇಹ ಬೆಳೆಸಿದ್ದಳು. ದೂರುದಾರ ಸಹ ಸಲುಗೆಯಿಂದ ಮಾತನಾಡಿದ್ದರು' ಎಂದು ಪೊಲೀಸರು ಹೇಳಿದರು.

'ನನ್ನ ಮನೆಯಲ್ಲಿ ಯಾರೂ ಇಲ್ಲ. ನಿಮ್ಮನ್ನು ಭೇಟಿಯಾಗಬೇಕು. ಮನೆಗೆ ಬನ್ನಿ' ಎಂಬುದಾಗಿ ಆರೋಪಿ ಹಲೀಮಾ ಅ 28ರಂದು ಸಂದೇಶ ಕಳುಹಿಸಿದ್ದಳು. ನಂಬಿದ್ದ ದೂರುದಾರ, ಯುವತಿ ಹೇಳಿದ್ದ ಗುರಪ್ಪನಪಾಳ್ಯದಲ್ಲಿರುವ ವಿಳಾಸಕ್ಕೆ ಹೋಗಿದ್ದರು' ಎಂದರು.

'ದೂರುದಾರನನ್ನು ಮನೆಯ ಕೊಠಡಿಗೆ ಕರೆದೊಯ್ದಿದ್ದು, ಆಗಲೇ ಇತರೆ ಆರೋಪಿಗಳು ಬಂದಿದ್ದರು. ದೂರುದಾರರನ್ನು ಒತ್ತಾಯದಿಂದ ಯುವತಿ ಪಕ್ಕದಲ್ಲಿ ಕೂರಿಸಿ ಸಲುಗೆ ರೀತಿಯಲ್ಲಿ ವಿಡಿಯೊ ಚಿತ್ರೀಕರಿಸಿದ್ದರು. ನಂತರ, ₹ 1 ಲಕ್ಷ ನೀಡುವಂತೆ ಒತ್ತಾಯಿಸಿದ್ದರು. ಹಣ ನೀಡದಿದ್ದರೆ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡುವುದಾಗಿ ಬೆದರಿಸಿದ್ದರು' ಎಂದರು.

'ದೂರುದಾರನಿಂದ ₹ 26 ಸಾವಿರ ನಗದು ಹಾಗೂ ಮೊಬೈಲ್ ಕಸಿದುಕೊಂಡಿದ್ದರು. ದೂರುದಾರರ ಸಹೋದರರಿಂದ ₹ 25 ಸಾವಿರ ಯುಪಿಐ ಮೂಲಕ ಹಾಕಿಸಿಕೊಂಡು, ಅದನ್ನೂ ಖಾತೆಗೆ ವರ್ಗಾಯಿಸಿಕೊಂಡಿದ್ದರು. ನಂತರ, ದೂರುದಾರನ ಕಾರಿನ ಸಮೇತ ಪರಾರಿಯಾಗಿದ್ದರು. ಮತ್ತೆ ಕರೆಮಾಡಿ ಮಾಡಿ ಕಾರು ಮರಳಿಸಲು ₹ 60 ಸಾವಿರಕ್ಕೆ ಬೇಡಿಕೆ ಇಟ್ಟಿದ್ದರು' ಎಂದು ದೂರು ನೀಡಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

'ಯುವತಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗ, ಇತರೆ ಆರೋಪಿಗಳು ಸಿಕ್ಕಿಬಿದ್ದರು. ಆರೋಪಿಗಳು ಮತ್ತಷ್ಟು ಮಂದಿಯನ್ನು ಹನಿಟ್ರ್ಯಾಪ್ ಜಾಲಕ್ಕೆ ಬೀಳಿಸಿ ಹಣ ಸುಲಿಗೆ ಮಾಡಿರುವ ಮಾಹಿತಿ ಇದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ಬೇಕರಿಗೆ ನುಗ್ಗಿ ಸುಲಿಗೆ: ರೌಡಿ ಬಂಧನ

ಬೆಂಗಳೂರು: ಬೇಕರಿ ಮಾಲೀಕರಿಂದ ಹಣ ಸುಲಿಗೆ ಮಾಡಿದ್ದ ಆರೋಪದಡಿ ರೌಡಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ. ಆನೆಪಾಳ್ಯದ ಸೈಮನ್ ಗ್ಯಾಬ್ರಿಯಲ್ (26), ಸಾರಾಯಿಪಾಳ್ಯದ ಶೇಖ್ ಶಫಿ ಅಲಿಯಾಸ್ ಲಂಗ್ಡಾ (26), ಪೀಣ್ಯದ ಸಿಕಂದರ್ (21) ಬಂಧಿತರು.

'ಅ.6ರಂದು ರಾತ್ರಿ 8.30ಗಂಟೆಗೆ ಅಶೋಕನಗರ ಠಾಣೆ ವ್ಯಾಪ್ತಿಯ ಬೇಕರಿಗೆ ಏಕಾಏಕಿ ನುಗ್ಗಿದ್ದ ಆರೋಪಿಗಳು, ಚಾಕು ತೋರಿಸಿ ಕೊಲೆ ಬೆದರಿಕೆ ಒಡ್ಡಿ ₹ 20 ಸಾವಿರ ದೋಚಿಕೊಂಡು ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಕ್ಯಾಪ್ ಧರಿಸಿ ಕೃತ್ಯ ಎಸಗಿದ್ದರು. ದೂರು ದಾಖಲಾಗುತ್ತಿದ್ದಂತೆ, ಸಿಸಿಟಿವಿ ಕ್ಯಾಮೆರಾದ ದೃಶ್ಯಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ನಗದು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

'ಬಂಧಿತ ಸೈಮನ್ ಹೆಸರು ರೌಡಿ ಪಟ್ಟಿಯಲ್ಲಿತ್ತು. ಸಹಚರರನ್ನು ಸೇರಿಸಿಕೊಂಡು ತಂಡ ಕಟ್ಟಿದ್ದ ಈತ, ಜನರನ್ನು ಬೆದರಿಸಿ ಸುಲಿಗೆ ಮಾಡುತ್ತಿದ್ದ. ಈತನ ವಿರುದ್ಧ ಹಲವು ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದವು' ಎಂದು ಹೇಳಿದರು.

ಅಪರಾಧ ಸುದ್ದಿ

ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಮೇಸ್ತ್ರಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಕೆಎಸ್‌ಆರ್‌ಟಿಸಿ ಬಸ್ ಗುದ್ದಿ ಪಾದಚಾರಿ ರಾಮಯ್ಯ (32) ಎಂಬುವರು ಮೃತಪಟ್ಟಿದ್ದಾರೆ.

'ದೊಡ್ಡಬಳ್ಳಾಪುರದ ರಾಮಯ್ಯ, ಕಟ್ಟಡ ನಿರ್ಮಾಣ ಕಾರ್ಮಿಕರ ಮೇಸ್ತ್ರಿ ಆಗಿ ಕೆಲಸ ಮಾಡುತ್ತಿದ್ದರು. ಶನಿವಾರ ರಾತ್ರಿ ಮನೆಯತ್ತ ಹೊರಟಿದ್ದಾಗ, ಸಾದಹಳ್ಳಿ ಗೇಟ್ ಬಳಿ ಈ ಅವಘಡ ಸಂಭವಿಸಿದೆ' ಎಂದು ಪೊಲೀಸರು ಹೇಳಿದರು.

'ಕೆಎಸ್‌ಆರ್‌ಟಿಸಿ ಬಸ್ ಗುದ್ದಿ ತೀವ್ರ ಗಾಯಗೊಂಡು ಪ್ರಜ್ಞೆ ತಪ್ಪಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ತಪಾಸಣೆ ನಡೆಸಿದ ವೈದ್ಯರು, ರಾಮಯ್ಯ ಮೃತಪಟ್ಟಿರುವುದಾಗಿ ಹೇಳಿದರು' ತಿಳಿಸಿದರು.

'ಚಾಲಕ ಅತೀ ವೇಗವಾಗಿ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದರಿಂದ ಅಪಘಾತ ಸಂಭವಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಬಸ್ ಜಪ್ತಿ ಮಾಡಿ ಚಾಲಕನನ್ನು ವಶಕ್ಕೆ ಪಡೆಯಲಾಗಿದೆ' ಎಂದು ಪೊಲೀಸರು ಹೇಳಿದರು.

ಒಂದೇ ದಿನದಲ್ಲಿ ಮೂರು ಸಾವು: ಹಲಸೂರು ಗೇಟ್, ರಾಜಾಜಿನಗರ ಹಾಗೂ ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕೆಎಸ್‌ಆರ್‌ಟಿಸಿ ಬಸ್‌ಗಳಿಂದ ಶನಿವಾರ (ನ. 6) ಒಂದೇ ದಿನ ಮೂರು ಅಪಘಾತಗಳು ಸಂಭವಿಸಿವೆ.

'ಶನಿವಾರ ಬೆಳಿಗ್ಗೆ ಸಂಭವಿಸಿದ್ದ ಅಪಘಾತದಲ್ಲಿ ಬೈಕ್ ಸವಾರರಾದ ಶ್ರೀಧರ್ ಹಾಗೂ ರಮೇಶ್ ಮೃತಪಟ್ಟಿದ್ದರು. ರಾತ್ರಿ ಅಪಘಾತದಲ್ಲಿ ಪಾದಚಾರಿ ರಾಮಯ್ಯ ಪ್ರಾಣ ಕಳೆದುಕೊಂಡಿದ್ದಾರೆ.

ಅಪಘಾತ ಸಂಬಂಧ ಕೆಎಸ್‌ಆರ್‌ಟಿಸಿಯ ಮೂವರು ಚಾಲಕ ರನ್ನು ಬಂಧಿಸಲಾಗಿದೆ. ನಿಗಮದ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿದೆ. ಸುರಕ್ಷಿತವಾಗಿ ಎಚ್ಚರಿಕೆಯಿಂದ ಬಸ್ ಚಾಲನೆ ಮಾಡಲು ಚಾಲಕರಿಗೆ ಸೂಚಿಸಲು ತಿಳಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಉಪ್ಪುಚ್ಚಿಮುಳ್ಳು' ಕಥಾ ಸಂಕಲನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೆಣ್ಣಿಗೆ ಲೋಕದ ಬಂಧನ ದಾಟುವುದಕ್ಕಿಂತ ನಮಗೆ ನಾವೇ ಹಾಕಿಕೊಳ್ಳುವ ಬಂಧನ ಮಹಿಳಾ ಲೋಕದ ದೊಡ್ಡ ಸಮಸ್ಯೆ' ಎಂದು ವಿಮರ್ಶಕಿ ಎಂ.ಎಸ್.ಆಶಾದೇವಿ ಅಭಿಪ್ರಾಯಪಟ್ಟರು.

ಹಾಡ್ಲಹಳ್ಳಿ ಪಬ್ಲಿಕೇಷನ್ ವತಿಯಿಂದ ಚಿತ್ರಕಲಾ ಪರಿಷತ್ ಆವರಣದಲ್ಲಿ ಏರ್ಪಡಿಸಿದ್ದ ದಯಾ ಗಂಗನಘಟ್ಟ ಅವರ 'ಉಪ್ಪುಚ್ಚಿಮುಳ್ಳು' ಕಥಾ ಸಂಕಲನ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕೆಲವು ತೊಡಕುಗಳನ್ನು ಮೀರುವ ಕೆಲಸವನ್ನು ದಯಾ ಗಂಗನಗಟ್ಟ ಅವರು ತಮ್ಮ ಕಥೆಗಳ ಮೂಲಕ ಮಾಡಿದ್ದಾರೆ. ಹೆಣ್ಣಿನ ದೃಷ್ಟಿಕೋನದಿಂದ ನೋಡಿದ ಕತೆಗಳು ಗೆದ್ದ ಕತೆಗಳಾಗಿವೆ ಎಂದು ಹೇಳಿದರು.

ಸಾಹಿತಿ ಹಾಡ್ಲಹಳ್ಳಿ ನಾಗರಾಜ್ ಮಾತನಾಡಿ, 'ವಿನಯತೆ ಇಲ್ಲವಾಗಿ, ಉದಯೋನ್ಮುಖ ಎಂಬ ಪರಿಧಿ ಇಲ್ಲದ ಈ ಸಾಹಿತ್ಯ ಕಾಲಘಟ್ಟದಲ್ಲಿ ದಯಾ ಗಂಗನಗಟ್ಟ ಅವರ ಕತೆಗಳು ವಿನಯ ಹಾಗೂ ವಿದೇಯತೆಯ ಜೊತೆಗೆ ನಮ್ಮ ಮುಂದೆ ನಿಲ್ಲುತ್ತವೆ' ಎಂದು ತಿಳಿಸಿದರು.

ಕಥಾ ಸಂಕಲನವನ್ನು ಹಾಡ್ಲಹಳ್ಳಿ ನಾಗರಾಜ್ ಬಿಡುಗಡೆ ಮಾಡಿದರು. ವಿಮರ್ಶಕಿ ಎಂ.ಎಸ್. ಆಶಾದೇವಿ, ಕಥೆಗಾರ ಕೇಶವ ಮುಳಗಿ, ನಾಟಕಕಾರ ಬೇಲೂರು ರಘುನಂದನ್, ದಯಾ ಗಂಗನಘಟ್ಟ, ಚಲಂ ಹಾಡ್ಲಹಳ್ಳಿ ಇದ್ದರು —ಪ್ರಜಾವಾಣಿ ಚಿತ್ರ

'ಈ ಸಮಯದಲ್ಲಿ ಮಹಿಳಾ ಸಾಹಿತ್ಯ ಮುಂಚೂಣಿಗೆ ಬರುತ್ತಿವೆ. ಅದು ಪ್ರಖರವಾಗಿ ಎಲ್ಲೆಡೆ ಪ್ರಕಟವಾಗುತ್ತಿದೆ. ಧಾವಂತದ ವಾತಾವರಣವನ್ನು ಈಗಿನ ಸ್ಪರ್ಧೆಗಳು ರೂಪಿಸುತ್ತಿವೆ. ಈ ರೀತಿಯ ಧಾವಂತವನ್ನು ದಾಟಬೇಕಾದ ಅನಿವಾರ್ಯತೆ ಈ ಕಾಲದ ಕತೆಗಾರರಿಗೆ ಇದೆ' ಎಂದು ಹಿರಿಯ ಸಾಹಿತಿ ಕೇಶವ ಮಳಗಿ ಅವರು ಹೇಳಿದರು. ಪ್ರಕಾಶಕ ಚಲಂ ಹಾಡ್ಲಹಳ್ಳಿ, ನಾಟಕಕಾರ ಬೇಲೂರು ರಘುನಂದನ್ ಮಾತನಾಡಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ತಾಂತ್ರಿಕ ದೋಷ: ವಿಮಾನ ಹಾರಾಟ ಸ್ಥಗಿತ

ಮುಂಬೈ (ಪಿಟಿಐ): ಪುಣೆಯಿಂದ ಬೆಂಗಳೂರಿಗೆ ಹೊರಡಲು ಸಿದ್ಧವಾಗಿದ್ದ ಏರ್‌ಏಷ್ಯಾ ಇಂಡಿಯಾ ವಿಮಾನದಲ್ಲಿ ಭಾನುವಾರ ತಾಂತ್ರಿಕ ದೋಷ ಕಾಣಿಸಿಕೊಂಡ ಪರಿಣಾಮ ಕೊನೇ ಕ್ಷಣದಲ್ಲಿ ಹಾರಾಟವನ್ನು ಸ್ಥಗಿತಗೊಳಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಿಮಾನದಲ್ಲಿ ಎಷ್ಟು ಮಂದಿ ಪ್ರಯಾಣಿಕರಿದ್ದರು ಎಂಬುದು ತಿಳಿದು ಬಂದಿಲ್ಲ ಎಂದು ಮೂಲಗಳು ತಿಳಿಸಿವೆ. ಈ ಕುರಿತು ಹೆಚ್ಚಿನ ಮಾಹಿತಿಯನ್ನು ವಿಮಾನಯಾನ ಸಂಸ್ಥೆಯು ತಿಳಿಸಿಲ್ಲ.

'ಭಟ್ಟಂಗಿತನ ದೊಡ್ಡ ಕಾಯಿಲೆ'

ಬೆಂಗಳೂರು: 'ಅಧಿಕಾರದಲ್ಲಿ ಇದ್ದವರನ್ನು ಹೊಗಳಿ ಸರ್ವಾಧಿಕಾರಿ ಮಾಡುವ ಭಟ್ಟಂಗಿತನವೇ ಭಾರತದ ಬಹುದೊಡ್ಡ ಕಾಯಿಲೆ' ಎಂದು ಚಿಂತಕ ನಟರಾಜ್ ಹುಳಿಯಾರ್ ಅಭಿಪ್ರಾಯಪಟ್ಟರು.

ಕೇಂದ್ರ ಸಾಹಿತ್ಯ ಅಕಾಡೆಮಿ ಸಹಯೋಗದಲ್ಲಿ ಈಚೆಗೆ ಬಿಎಂಎಸ್ ಕಾಲೇಜ್ ಆಫ್ ಕಾಮರ್ಸ್ ಆ್ಯಂಡ್ ಮ್ಯಾನೇಜ್‌ಮೆಂಟ್ ಆಯೋಜಿಸಿದ್ದ 'ಲಂಕೇಶರ ನಾಟಕಗಳು: ವಿಶೇಷ ಉಪನ್ಯಾಸ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಧಿಕಾರದಲ್ಲಿ ಇದ್ದವರನ್ನು ಹೊಗಳುತ್ತಾ ಹೋದರೆ, ಅವರು ಸರ್ವಾಧಿಕಾರಿಯಾಗಿ ಪರಿವರ್ತನೆಯಾಗುತ್ತಾರೆ. ಒಮ್ಮೆ ಸರ್ವಾಧಿಕಾರಿಯಾಗಿ ಬೆಳೆದರೆ ಅವರಿಂದ ಅಪಾಯವೇ ಹೆಚ್ಚು. ಆದ್ದರಿಂದ ಹೊಗಳಿಕೆ ಕಾಯಿಲೆಯಿಂದ ಭಾರತೀಯರು ಹೊರಬರಬೇಕಿದೆ' ಎಂದು ಹೇಳಿದರು.

एन पी टी आई NPTI
National Power Training Institute, Government of India
Organized by Hotline Training Center, Bangalore
Start up your own E-charging station & retro fitting business
Electric Vehicle Charging Station & Retro Fitting Business
EV Charging Station Unit visit and Live Demo
Course duration: 2 Days | Course dates:
Timing: 9.30 am To 6.30 pm | 12,13 November 2022
Email id: directorhltc@gmail.com
Venue: Power Systems Training Institute, Subramanyapura Road, BSK-II Stage, Near Yarab Nagar Bus Stop, Banshankari, Bangalore - 560 070
Course fees: Rs. 4700/- + 18%GST (including breakfast, lunch & unit visit)
Technical Details: 8329281625 | Local Assistance: 9731376888
Contents: E Charging Stations & Technology, Types of charging Station, Implementation Mechanism, Solar powered EV Charging Stations Technology, Retro Fitting Concept, Scope, Categories & Kit Sourcing, Approval & Permission of RTO registration
Contact:9579757360 / 7030837190 / 7709706763
Document required : Aadhar card xerox, education document & 2 passport photograph

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Marketing & Sales

FOSROC CONSTRUCTION CHEMICALS Authorised Distributors are looking for Sales Engineer's for Distribution and Building Segments B.E/ Diploma - Civil Graduates V-Tech Building Systems Rajajinagar 9108513150

General

IMMEDIATE APPOINTMENT HRD,Administration,Accounts,Manager, Supervisor, Software,Hardware,Electronics,Mechanical,Electrical Engineers 7676760299/7676760399

Part-Time Jobs

RETIRED/ VRS Persons And Age above 45 Years Earn 2nd Income 35K to 40K PM in their life here no Retirement: 9886641282/ 7019215243

Wanted

WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

BUSINESS

Business Offers

General

PETROL BUNK in Bangalore city having own site, interested to do new Petrol Bunk. 8971625963.

Finance

WANTED BUSINESS Partner Veg Hotel 10 Lakhs Investment Monthly Income 1 Lakhs Contact: 8892501007/ 9606701007

PERSONAL

Change of Name

I DEEPAK G Deshpande Residing at No#309 Flat No 202 CMRS Jayanthi Enclave 9th Main BEML Layout 6th Stage Thubrahalli, Bangalore-66 have changed my Daughters Name from Vandita to VANDITA D DESHPANDE vide affidavit dated 03-11-2022 before Notary Harish.G. Bangalore.

I DEEPAK G Deshpande Residing at No#309 Flat No 202 CMRS Jayanthi Enclave 9th Main BEML Layout 6th Stage Thubrahalli, Bangalore-66 have changed my Daughters Name from VARIDHI to VARIDHI D DESHPANDE vide affidavit dated 03-11-2022 before Notary Harish.G. Bangalore.

CONNECT

ಪಂಚೆಗಳು RAMRAJ UATHAYAM MINISTER WHITE® DHOTIES, TOWELS & other Items PRAKASH Corporation Ph : 080 42156845 # 186, Prem Plaza, Chickpet Bangalore - 560 053

I DEEPAK Residing at No#309 Flat No.202 CMRS Jayanthi Enclave 9th Main BEML Layout 6th Stage Thubrahalli, Bangalore-66 have changed my Name to DEEPAK G DESHPANDE vide affidavit dated 03-11-2022 before Notary Harish.G. Bangalore.

I RAJASHREE Residing at No#309 Flat No.202 CMRS Jayanthi Enclave 9th Main BEML Layout 6th Stage Thubrahalli, Bangalore-66 have changed my Name to RAJASHREE D DESHPANDE vide affidavit dated 03-11-2022 before Notary Harish.G. Bangalore.

I, NOOR AYESHA S residing at #16, 4th Main Road, Kausernagar, R.T.Nagar Post, Bengaluru-560032 have changed my name to NOOR AYESHA, vide affidavit dated:02-11-2022 before Notary SIVAKUMARA M N, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

DH ಪ್ರಜಾವಾಣಿ Classifieds
Book Your Classifieds Ads Online Log in to dhclassifieds.com
Contact : 9845114560 : 9731810277 9901641752 : 9886213331 080 - 45557163 / 164
DH DECCAN HERALD ಪ್ರಜಾವಾಣಿ

ಕರ್ನಾಟಕ ಸರ್ಕಾರ – ಸಹಕಾರ ಇಲಾಖೆ
ಶ್ರೀ ಆಂಜನೇಯ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560 003.

ಸ್ಥಿರಾಸ್ತಿಯ ಬಹಿರಂಗ ಹರಾಜು ಇಸ್ತಿಹಾರು

ಈ ಮೂಲಕ ಸಮಸ್ತ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ
ಶ್ರೀಮತಿ ಕೆ.ಎಸ್. ವಿಜಯಲಕ್ಷ್ಮಿ (ಅ.ನಂ 11848) ಇವರು ಮರಣ ಹೊಂದಿದ್ದು, ಇವರ ಕಾನೂನು ವಾರಸುದಾರರಾದ 1(ಎ) ಶ್ರೀ ಜೈಪ್ರಕಾಶ್ ಬಾಬು ಕೆ.ಎಸ್, ಮೊದಲನೇ ಮಗ 1(ಬಿ) ಶ್ರೀ ಚೇತನ್ ಪ್ರಸಾದ್ ಬಾಬು ಕೆ.ಎಸ್. ಎರಡನೇ ಮಗ. ನಂ. 278 (ಹಳೇ ನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡ್ ನಂ.29 ಪಿಐಡಿ ನಂ. 29–68–278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯರಸ್ತೆ, ಬೆಂಗಳೂರು–560053, ಇವರುಗಳು ಮೇಲ್ಕಂಡ ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಬಸವೇಶ್ವರನಗರ ಶಾಖೆಯಲ್ಲಿ ತಮ್ಮ ಸ್ಥಿರಾಸ್ತಿಯನ್ನು ಬ್ಯಾಂಕಿಗೆ ಈಡು ಮಾಡಿ ಸಾಲವನ್ನು ಪಡೆದಿದ್ದರು. ಸದರಿ ಸಾಲಗಾರರು ಸಾಲದ ಕರಾರಿನ ರೀತ್ಯಾ ಸಕಾಲದಲ್ಲಿ ಸಾಲ ಮರುಪಾವತಿ ಮಾಡದೆ ಸುಸ್ತಿದಾರರಾಗಿದ್ದರಿಂದ ಇವರ ವಿರುದ್ಧ ಸಾಲದ ಹಣ ವಸೂಲಾತಿಗಾಗಿ ಸಹಕಾರ ಸಂಘಗಳ ಕಾಯ್ದೆ ಕಲಂ 70 ರ ರೀತ್ಯಾ ಸಾಲ ವಸೂಲಾತಿಗಾಗಿ ದಾವಾವನ್ನು ಹೂಡಲಾಗಿತ್ತು. ಈ ದಾವಾದ ಪ್ರಕಾರ ವ್ಯಾಜ್ಯ ಸಂಖ್ಯೆ: ಜೆಆರ್‌ಡಿ/ಯುಬಿಎಫ್/951/2018–2019, ದಿನಾಂಕ:16.10.2019 ರಲ್ಲಿದ್ದಂತೆ ಸಾಲಗಾರರ ಸ್ಥಿರಾಸ್ತಿಯನ್ನು ಬಹಿರಂಗ ಹರಾಜು ಮಾಡುವ ಮೂಲಕ ಸ್ಥಿರ ಸ್ವತ್ತನ್ನು ಮಾರಾಟ ಮಾಡಿ ಸಾಲದ ಮೊಬಲಗಿಗೆ ಶೇ.16% ರಂತೆ ಸರಳ ಬಡ್ಡಿ, ಶೇ.2% ರಂತೆ ದಂಡದ ಬಡ್ಡಿ, ದಾವಾ ಫೀ ಅಮಲ್ದಾರಿ ಫೀ ಮತ್ತು ಇತ್ಯಾದಿಗಳನ್ನು ವಸೂಲಿ ಮಾಡಿಕೊಳ್ಳುವಂತೆ ಆದೇಶ ನೀಡಲಾಗಿದೆ. ಈ ಆದೇಶ ರೀತ್ಯಾ ಸಹಕಾರ ಸಂಘಗಳ ಸಹಾಯಕ ನಿಬಂಧಕರು (ನಿ–441) ಹಾಗೂ ವಸೂಲಾಧಿಕಾರಿಗಳು ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ನಂ.132, ಕೆ.ಹೆಚ್.ರಸ್ತೆ, ಬೆಂಗಳೂರು–560027, ರವರು ತಮ್ಮ ಹುಕುಂ ಸಿ.ಇ.ಪಿ.ನಂ.ಎಆರ್‌ಇ/ಯುಬಿಎಫ್/419/2019–2020, ದಿನಾಂಕ: 30–12–2019 ರ ಪ್ರಕಾರ ಬ್ಯಾಂಕಿನ ಮಾರಾಟಾಧಿಕಾರಿಯವರಿಗೆ ಅಮಲ್ದಾರಿ ಕ್ರಮ ನಡೆಸುವಂತೆ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಪ್ರಕಾರ ಈ ಕೆಳಕಂಡ ಸ್ವತ್ತಿನ ಬಹಿರಂಗ ಹರಾಜನ್ನು ಸ್ವತ್ತಿನ ಸ್ಥಳದಲ್ಲಿಯೇ ದಿನಾಂಕ: 17–11–2022 ರಂದು ಗುರುವಾರ ಬೆಳಿಗ್ಗೆ 11.00 ಘಂಟೆಗೆ ಸಹಕಾರ ಸಂಘಗಳ ನಿಯಮಾನುಸಾರ ಮಾರಾಟ ಷರತ್ತಿಗೆ ಒಳಪಟ್ಟು ಹರಾಜನ್ನು ನಡೆಸಲಾಗುತ್ತದೆ. ಹರಾಜಿನಲ್ಲಿ ಪಾಲ್ಗೊಳ್ಳುವವರು ಷರತ್ತಿಗೆ ಒಳಪಟ್ಟಂತೆ ಪಾಲ್ಗೊಳ್ಳಬಹುದು.

ಕ್ರಮ ಸಂಖ್ಯೆ	ಸಾಲ ಪಡೆದವರ ಹೆಸರು	ಸಿ.ಇ.ಪಿ.ನಂ ಮತ್ತು ದಿನಾಂಕ	ಹರಾಜು ಮಾಡುವ ಆಸ್ತಿಯ ವಿವರ	ಹರಾಜು ಮಾಡುವ ದಿನಾಂಕ ಮತ್ತು ಸಮಯ	ಹರಾಜು ಮಾಡುವ ಸ್ಥಳ	ಸುಸ್ತಿದಾರರಿಂದ ವಸೂಲಾಗಬೇಕಾಗಿರುವ ಮೊಬಲಗು
1.	ಶ್ರೀಮತಿ ಕೆ.ಎಸ್.ವಿಜಯಲಕ್ಷ್ಮಿ ಇವರು ಮರಣ ಹೊಂದಿದ್ದು, ಇವರ ಕಾನೂನು ವಾರಸುದಾರರಾದ 1(ಎ) ಶ್ರೀ ಜೈಪ್ರಕಾಶ್ ಬಾಬು ಕೆ.ಎಸ್. ಮೊದಲನೇ ಮಗ 1(ಬಿ) ಶ್ರೀ ಚೇತನ್ ಪ್ರಸಾದ್ ಬಾಬು ಕೆ.ಎಸ್.ಎರಡನೇ ಮಗ	ಸಿ.ಇ.ಪಿ.ನಂ. ಎಆರ್‌ಇ/ ಯುಬಿಎಫ್/419/ 2019–2020 ದಿನಾಂಕ: 30–12–2019	ನಂ.278 (ಹಳೇ ನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡ್ ನಂ.29 ಪಿಐಡಿ ನಂ. 29–68–278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯರಸ್ತೆ, ಬೆಂಗಳೂರು–560053. ಚಕ್ಕುಬಂಧಿ : ಪೂರ್ವಕ್ಕೆ : ಕೆ.ಪಿ.ಮುನಿರಾಜುರವರ ಸ್ವತ್ತು ಪಶ್ಚಿಮಕ್ಕೆ : ಜ್ಯೋತಿಬಾಯಿರವರ ಸ್ವತ್ತು ಉತ್ತರಕ್ಕೆ : ಬಳ್ಳಾರಿ ಬಸಪ್ಪರವರ ಹೋಟೆಲ್ ದಕ್ಷಿಣಕ್ಕೆ : ಸಾಮಾನ್ಯ ಪ್ರವೇಶಕ್ಕೆ ಆರು ಅಡಿ ಅಗಲದ ಜಾಗವನ್ನು ಹೊಂದಿದ್ದು ಸ್ವತ್ತುಗಳಾದ 276, 276/1, 277, ಮತ್ತು 279 ಕ್ಕೂ ಸಾಮಾನ್ಯ ಪ್ರವೇಶಕ್ಕೆ ಅನ್ವಯಿಸುತ್ತದೆ. East to West 31'.09"+29'/2 Feet and North to South 23'+22'.06"/2 Feet in all Measuring 691 Square Feets. ನೆಲಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿಗಳು ಹೊಂದಿರುವ ವಸತಿ ಕಟ್ಟಡದ ಬಿಲ್ಟ್ ಅಪ್ ಪ್ರದೇಶ ಸರಿ ಸುಮಾರು 1800 ಚದರ ಅಡಿಗಳು	17–11–2022 ಗುರುವಾರ ಬೆಳಿಗ್ಗೆ 11.00 ಘಂಟೆಗೆ	ಆಸ್ತಿ ಇರುವ ಸ್ಥಳದಲ್ಲಿ ನಂ.278 (ಹಳೇ ನಂ.14) ಅಕ್ಕಮಹಾದೇವಿ ರಸ್ತೆ, ವಾರ್ಡ್ ನಂ.29 ಪಿಐಡಿ ನಂ. 29–68–278, ಕಾಟನ್ ಪೇಟೆ, ಅಕ್ಕಿಪೇಟೆ ಮುಖ್ಯರಸ್ತೆ, ಬೆಂಗಳೂರು 560053.	ರೂ.56,68,849/– (ಅಸಲು ಮತ್ತು ಬಡ್ಡಿ ಸೇರಿ ದಿನಾಂಕ: 26–09–2022 ರವರೆಗೆ) ಮತ್ತು ಮುಂದುವರೆದ ಬಡ್ಡಿ ಹಾಗೂ ಮುಂದುವರೆದ ಇತರೆ ವೆಚ್ಚಗಳು.

ಹೆಚ್ಚಿನ ವಿವರಗಳನ್ನು ಮೇಲ್ಕಂಡ ಬ್ಯಾಂಕಿನ ಪ್ರಧಾನ ವ್ಯವಸ್ಥಾಪಕರು ಅಥವಾ ಮಾರಾಟಾಧಿಕಾರಿರವರುಗಳಿಂದ ಪಡೆಯಬಹುದು. ಹಾಗೂ ಡಿಕ್ರಿ ಅವಾರ್ಡಿನ ತಾರೀಖಿನಿಂದ ಹರಾಜು ತಾರೀಖಿನವರೆಗೆ ಡಿಕ್ರಿ ಮೊಬಲಗು ಹಾಗೂ ಬಡ್ಡಿ ಮತ್ತು ಇತರೆ ಖರ್ಚುಗಳು ಸುಸ್ತಿದಾರರಿಂದ ಬರಬೇಕಾಗಿರುತ್ತದೆ. (ಅಂದಿನಿಂದ ಅವರು ಪಾವತಿ ಮಾಡಿರುವುದನ್ನು ಕಳೆದು) ಸದರೀ ಹರಾಜನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು.(ನಿ.441), ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,ನಂ 132. ಕೆ.ಹೆಚ್.ರಸ್ತೆ. ಬೆಂಗಳೂರು–27 ಇವರ ಹುಕುಂ ಮೇರೆಗೆ ಹೊರಡಿಸಲಾಗಿದೆ. ದೂರವಾಣಿ: 08023564151 /23563302 ಮೊಬೈಲ್ : 6363581188.

ಹರಾಜಿನ ಷರತ್ತುಗಳು

1. ಹರಾಜಿನಲ್ಲಿ ಭಾಗವಹಿಸಲಿಚ್ಚಿಸುವವರು ಹರಾಜಿನ ಮುನ್ನ ಇ.ಎಂ.ಡಿ.ಯಾಗಿ ರೂ.25,000/–ಗಳನ್ನು ಮಾರಾಟಾಧಿಕಾರಿಯವರಲ್ಲಾಗಲೀ ಅಥವಾ ಬ್ಯಾಂಕಿನಲ್ಲಾಗಲೀ ನಗದು/ಡಿಡಿ ಮೂಲಕ ಪಾವತಿಸಿ ರಶೀದಿ ಪಡೆದು ಹರಾಜಿನಲ್ಲಿ ಭಾಗವಹಿಸತಕ್ಕದ್ದು.
2. ಹರಾಜಿನಲ್ಲಿ ಹೆಚ್ಚಿನ ಬಿಡ್ ನಿಂತವರು (Higher Bidder) ಹರಾಜು ಮೊಬಲಗಿನ ಶೇ.15% ರಷ್ಟು ಹಣವನ್ನು ಸ್ಥಳದಲ್ಲಿಯೇ ನಗದು /ಡಿಡಿ ಮೂಲಕ ಪಾವತಿಸಿ ರಸೀತಿಯನ್ನು ಪಡೆಯತಕ್ಕದ್ದು. ಉಳಿದ ಮೊಬಲಗನ್ನು ಮತ್ತು ಇದಕ್ಕೆ ತಗಲುವ ಸ್ಟ್ಯಾಂಪ್ ಪೇಪರ್ ಹಾಗೂ ಇತರೆ ವೆಚ್ಚಗಳ ಮೊಬಲಗನ್ನು ಬಿಡ್ ಮಾಡಿದ 45 ದಿವಸಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಬಿಡ್ ದಿವಸ ಪಾವತಿಯಾಗಿರುವ ಮೊಬಲಗನ್ನು ವಾಪಸು ಕೊಡಲಾಗುವುದಿಲ್ಲ. ಇದನ್ನು ಬ್ಯಾಂಕಿಗೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
3. ಹರಾಜಿನ ಇತರೆ ಷರತ್ತುಗಳನ್ನು ಫಾರಂ.8 ರಲ್ಲಿ ಪ್ರಕಟಿಸಿ ಬಹಿರಂಗ ಪಡಿಸಿರುತ್ತೆ.
4. ನಿವೇಶನ ಮತ್ತು ಕಟ್ಟಡದ ವಿಸ್ತೀರ್ಣದ ವಿಷಯದಲ್ಲಿ ಏನಾದರೂ ವ್ಯತ್ಯಾಸಗಳಿದ್ದರೆ ಬ್ಯಾಂಕಿನವರು ಜವಾಬ್ದಾರರಲ್ಲವೆಂಬುದನ್ನು ತಿಳಿದಿರತಕ್ಕದ್ದು.
5. ಮೇಲ್ಕಂಡ ಸ್ವತ್ತನ್ನು ಯಾವ ಸ್ಥಿತಿಯಲ್ಲಿದೆಯೋ ಹಾಗೆಯೇ ಹರಾಜು ಮಾಡಲಾಗುವುದು. ಇದನ್ನು ಬಿಡ್ಡುದಾರರು ತಿಳಿದಿರತಕ್ಕದ್ದು.
6. ಸರ್ಕಾರಿ ಮಾರ್ಗದರ್ಶಿ ದರಕ್ಕಿಂತ ಕಡಿಮೆ ಮೊಬಲಗಿಗೆ ಬಿಡ್ (ಸವಾಲು) ಮಾಡಿದರೆ ಆ ಆಸ್ತಿಯನ್ನು ಬಿಡ್ ದಾರರಿಗೆ ಬಿಡುವುದು ಅಥವಾ ಬಿಡದಿರುವುದು ಕೆ.ಸಿ.ಎಸ್.ರೂಲ್ಸ್ 38(6)ರ ಪ್ರಕಾರ ಮಾರಾಟಾಧಿಕಾರಿಯವರ ವಿವೇಚನೆಗೆ ಬಿಟ್ಟಿರುತ್ತದೆ.
7. ಹರಾಜು ಒಪ್ಪುವುದು ಅಥವಾ ತಿರಸ್ಕರಿಸುವ ಸಂಪೂರ್ಣ ಅಧಿಕಾರ ಮಾರಾಟಾಧಿಕಾರಿಯವರಿಗೆ ಸೇರಿರುತ್ತದೆ.
8. ಸುಸ್ತಿದಾರರು ಹರಾಜಿಗೆ ಮುನ್ನ ಪೂರ್ಣ ಸಾಲ ಮತ್ತು ಸಾಲದ ಬಡ್ಡಿ ಇತರೆ ಮೊಬಲಗನ್ನು ಮರು ಪಾವತಿ ಮಾಡಿದರೆ ಬಹಿರಂಗ ಹರಾಜನ್ನು ರದ್ದುಗೊಳಿಸಲಾಗುವುದು.

ದಿನಾಂಕ : 07–11–2022
ಸ್ಥಳ : ಬೆಂಗಳೂರು

ಸಹಿ/– ಮಾರಾಟಾಧಿಕಾರಿ
ಶ್ರೀ ಆಂಜನೇಯ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ.38, ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ರಸ್ತೆ, (ಲಿಂಕ್ ರಸ್ತೆ), ಮಲ್ಲೇಶ್ವರಂ, ಬೆಂಗಳೂರು–560003
ದೂ : 080–23564151 / 23563302. ಮೊ : 6363581188.

ಹೆಚ್ಚಿದ ಕಾಡಾನೆಗಳ ಉಪಟಳ • ಮನೆಯಿಂದ ಹೊರ ಹೋಗಲೂ ಭಯ

ಮನೆ ಬಾಗಿಲಿಗೇ ಕಾಡಾನೆ ಹಿಂಡು

• ಚಿದಂಬರಪ್ರಸಾದ

ಹಾಸನ: ಜಿಲ್ಲೆಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದೆ. ಕಾಫಿ ತೋಟ, ಭತ್ತದ ಗದ್ದೆಗೆ ನುಗ್ಗುತ್ತಿದ್ದ ಆನೆಗಳು ಇದೀಗ ಮನೆ ಬಾಗಿಲಿಗೇ ಬರುತ್ತಿವೆ. ಮನೆಯಿಂದ ಹೊರಗೆ ಹೋಗಲೂ ಆಗದೇ, ಒಳಗಿರಲೂ ಆಗದೇ ರೈತಾಪಿ ಜನರು ತೊಂದರೆ ಅನುಭವಿಸುತ್ತಿದ್ದಾರೆ.

ಈಚೆಗಷ್ಟೇ ದೇವಸ್ಥಾನಕ್ಕೆ ಹೋಗಿ ಬರುತ್ತಿದ್ದ 32 ವರ್ಷದ ಯುವಕನ ಮೇಲೆ ಆನೆ ದಾಳಿ ಮಾಡಿದ್ದು, ಯುವಕ ಸ್ಥಳದಲ್ಲಿಯೇ ಮೃತಪಟ್ಟಿದ್ದಾನೆ. ಈ ವರ್ಷ ಜಿಲ್ಲೆಯಲ್ಲಿ ಐವರು ಕಾಡಾನೆ ದಾಳಿಯಿಂದ ಮೃತಪಟ್ಟಿದ್ದಾರೆ.

2019ರಿಂದ ಇಲ್ಲಿಯವರೆಗೆ 18 ಜನರು ಪ್ರಾಣ ಕಳೆದುಕೊಂಡಿದ್ದು, 15ಕ್ಕೂ ಹೆಚ್ಚು ಜನರು ಗಾಯ ಗೊಂಡಿದ್ದಾರೆ. 450ಕ್ಕೂ ಅಧಿಕ ಜಾನುವಾರುಗಳು ಆನೆ ದಾಳಿಗೆ ಮೃತಪಟ್ಟಿವೆ.

ಸಕಲೇಶಪುರ, ಆಲೂರು ತಾಲ್ಲೂಕಿನ ಸುತ್ತ 100ಕ್ಕೂ ಹೆಚ್ಚು ಕಾಡಾನೆಗಳಿವೆ ಎಂದು ಅಂದಾಜಿಸಲಾಗಿದೆ. ಕೆಲ ಬಾರಿ ಆನೆಗಳ ಹಿಂಡು ದಾಳಿ ಮಾಡಿದರೆ, ಕೆಲ ಬಾರಿ ಒಂಟಿ ಸಲಗಗಳು ದಾಳಿ ಮಾಡುತ್ತಿವೆ.

ಸಂತ್ರಸ್ತ ಆನೆಗಳು: ಗೊರೂರು ಬಳಿ ಹೇಮಾವತಿ ನದಿಗೆ ಅಣೆಕಟ್ಟು ನಿರ್ಮಾಣ ಮಾಡಿದ ಸಂದರ್ಭದಲ್ಲಿ ಹಿನ್ನೀರು ತಗ್ಗು ಪ್ರದೇಶವನ್ನು ಆವರಿಸಿತು. ಇದರಿಂದ ಕಾಡಾನೆಗಳು ತಗ್ಗು ಪ್ರದೇಶವನ್ನು ಬಿಟ್ಟು, ಮೇಲಿನ ಭಾಗಕ್ಕೆ ವಲಸೆ ಬಂದವು.

ಹಿನ್ನೀರಿನ ಸಂತ್ರಸ್ತರಿಗೆ ಬ್ಯಾಬ ಅರಣ್ಯ ಪ್ರದೇಶದಲ್ಲಿ ಜಮೀನು ನೀಡಲಾಯಿತು. ಇದರಿಂದ ಅರಣ್ಯ ಪ್ರದೇಶ ನಾಶ ಮಾಡಲಾಯಿತು. ಮತ್ತೊಂದೆಡೆ ಕಾಡಾನೆಗಳು ಆಹಾರಕ್ಕಾಗಿ ಈ ಕಾಡಿನತ್ತ ಬರಲಾರಂಭಿಸಿದವು. ಆಗ ಕಾಡಾನೆ ಮತ್ತು ಮಾನವ ನಡುವಿನ ಸಂಘರ್ಷ ಶುರುವಾಯಿತು. ನಾಲ್ಕು ದಶಕ ಕಳೆದರೂ ಸಂಘರ್ಷ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ.

ಮನೆಗೆ ನುಗ್ಗುವ ಆನೆ: ಆನೆಗಳು, ಮನೆಯೊಳಗೆ ದಾಸ್ತಾನು ಇರುವ ಭತ್ತವನ್ನು ವಾಸನೆ ಮೂಲಕವೇ ಪತ್ತೆ ಹಚ್ಚಿ ದಾಳಿ ಮಾಡುತ್ತಿವೆ.

'ಸಕಲೇಶಪುರ ತಾಲ್ಲೂಕಿನ ಕ್ಯಾನಹಳ್ಳಿ, ಬೊಮ್ಮನಕೆರೆ, ಸತ್ತಿಗಾಲ, ಉದೇವಾರ, ಕಲ್ಲಹಳ್ಳಿ ಸೇರಿದಂತೆ ಹಲವೆಡೆ ಕಾಡಾನೆಗಳು ಮನೆಗಳ ಕಿಟಕಿ, ಬಾಗಿಲು ಮುರಿದು ಭತ್ತ ತಿಂದು ಹೋಗಿವೆ' ಎನ್ನುತ್ತಾರೆ ಇಲ್ಲಿನ ಜನರು.

'ಬೆಳಗಾಗುವರೆಗೂ ನಾವೆಲ್ಲಾ ಜೀವ ಭಯದಿಂದ ಒಂದು ಮೂಲೆಯಲ್ಲಿ ಕುಳಿತಿದ್ದೆವು. ಮರು ಹುಟ್ಟು ಪಡೆದ ಅನುಭವವಾಯಿತು' ಎಂದು ಆನೆ ದಾಳಿಗೆ ಒಳಗಾದ ಕ್ಯಾನಹಳ್ಳಿ-ನೂದರಹಳ್ಳಿಯ ಕೆಂಚಮ್ಮ ಹೇಳಿದರು.

'ಎರಡಕ್ಕಿಂತ ಹೆಚ್ಚು ಆನೆ ಹಿಡಿಯಲು ಕೇಂದ್ರ ಸರ್ಕಾರದ ಅನುಮತಿ ಬೇಕು. ಎಲ್ಲ ಆನೆಗಳನ್ನು ಸ್ಥಳಾಂತರಿಸಲು ಸಾಧ್ಯವಾಗುವುದಿಲ್ಲ. ಅನುಭವ ಇರುವವರು ಸಮಿತಿಯಲ್ಲಿದ್ದು, ಆಗುಹೋಗುಗಳ ಬಗ್ಗೆ ಚರ್ಚಿಸಿ ಸೂಕ್ತ ತೀರ್ಮಾನ ಕೈಗೊಳ್ಳಬೇಕು' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ವಲಯ ಅರಣ್ಯಾಧಿಕಾರಿಯೊಬ್ಬರು ಹೇಳುತ್ತಾರೆ.

ಆಲೂರು ತಾಲ್ಲೂಕಿನ ಕಾಫಿ ತೋಟದಲ್ಲಿ ಬೀಡು ಬಿಟ್ಟಿದ್ದ ಕಾಡಾನೆಗಳ ಹಿಂಡು

ಪ್ರಜಾವಾಣಿ ವಿಶೇಷ

ಅಧಿಕಾರಿಗಳ ತಂಡ ಭೇಟಿ

ಹಾಸನ, ಕೊಡಗು ಜಿಲ್ಲೆಗಳಲ್ಲಿ ಮಾನವ–ವನ್ಯಜೀವಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಪರಿಶೀಲನೆಗೆ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಅಧ್ಯಕ್ಷತೆಯಲ್ಲಿ ತಂಡ ರಚಿಸಲಾಗಿದ್ದು, ಈ ತಂಡವು ನ.7ರಿಂದ 9ರವರೆಗೆ ಪ್ರವಾಸ ಕೈಗೊಳ್ಳಲಿದೆ.

7ರಂದು ಹಾಸನಕ್ಕೆ ಬರುವ ತಂಡ ಸಕಲೇಶಪುರ ತಾಲ್ಲೂಕಿನ ಬೆಳಗೋಡು, ಮಾದಿಹಳ್ಳಿ, ಭರತ್ತೂರು, ನಾಗವಾರ ಗ್ರಾಮಗಳಿಗೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಸಂವಾದ ನಡೆಸಲಿದೆ.

8ರಂದು ಕೊಡಗು ಜಿಲ್ಲೆಗೆ ಭೇಟಿ ನೀಡಲಿದೆ. ದುಬಾರೆ, ಎಡವನಾಡು, ಸಿದ್ದಾಪುರ, ಅತ್ತೂರು, ನೆಲ್ಲಿಹುದಿಕೇರಿಯ ಕಾಫಿ ತೋಟದ ರೈತರೊಂದಿಗೆ ಚರ್ಚಿಸಲಿದೆ. 9ರಂದು ಮಡಿಕೇರಿ, ವಿರಾಜಪೇಟೆ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶಗಳ ಆನೆ ಕಾರಿಡಾರ್‌ಗಳ ಕ್ಷೇತ್ರ ಪರಿವೀಕ್ಷಣೆ ನಡೆಸಲಿದೆ.

74 ಕಾಡಾನೆ ಸೆರೆ

ಜಿಲ್ಲೆಯಲ್ಲಿ 2000ರಿಂದ ಇಲ್ಲಿಯವರೆಗೆ ಒಟ್ಟು 74 ಕಾಡಾನೆಗಳನ್ನು ಸೆರೆ ಹಿಡಿಯಲಾಗಿದ್ದು, ಬೇರೆಡೆ ಸ್ಥಳಾಂತರಿಸಲಾಗಿದೆ. 23 ಆನೆಗಳು ಮೃತಪಟ್ಟಿವೆ.

ರೈಲು ಕಂಬಿಯ ಬ್ಯಾರಿಕೇಡ್ ಅಳವಡಿಕೆ ಹಾಗೂ ಸೌರ ಬೇಲಿ ಅಳವಡಿಕೆ ಮಾಡಲಾಗುತ್ತಿದೆ. ಇದುವರೆಗೆ 9.50 ಕಿ.ಮೀ. ರೈಲು ಕಂಬಿಯ ಬ್ಯಾರಿಕೇಡ್ ಹಾಗೂ 14 ಕಿ.ಮೀ. ಸೌರ ವಿದ್ಯುತ್ ಬೇಲಿ ಅಳವಡಿಸಲಾಗಿದೆ.

ಮುಖ್ಯಾಂಶಗಳು

- ತೊಂದರೆ ಅನುಭವಿಸುತ್ತಿರುವ ಜನರು
- ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಸಂಘರ್ಷ
- ಮನೆಯಲ್ಲಿನ ಭತ್ತ ತಿಂದು ಹೋಗಿವೆ!

ಕಾಡಾನೆಗಳು ಒಂದು ತೋಟಕ್ಕೆ ನುಗ್ಗಿದರೆ ಕನಿಷ್ಠ ₹ 50 ಸಾವಿರದಿಂದ ₹ 1 ಲಕ್ಷ ನಷ್ಟ ಉಂಟಾಗುತ್ತದೆ. ವರ್ಷದಲ್ಲಿ 3–4 ಬಾರಿ ಅದೇ ತೋಟಗಳಿಗೆ ಬಂದು ಹೋಗುತ್ತವೆ

ದಯಾನಂದ್, ಹಲಸುಲಿಗೆ ಕೃಷಿಕ

ಸಕಲೇಶಪುರ ತಾಲ್ಲೂಕಿನ ಗ್ರಾಮೀಣ ಪ್ರದೇಶಗಳ ಕಾಫಿ ತೋಟಗಳು ಕಾಡಾನೆಗಳ ಆವಾಸ ಸ್ಥಾನ ಅಲ್ಲ. ಹಾಗಾಗಿ ಎಲ್ಲ ಕಾಡಾನೆಗಳನ್ನು ಕೂಡಲೇ ಸ್ಥಳಾಂತರಿಸಬೇಕು

ಎಚ್‌.ಎಂ.ವಿಶ್ವನಾಥ್, ಮುಖಂಡ

ಬಾದಾಮಿ ಹಾರ

ಮೈಸೂರಿನ ಸಂಗಮ್ ಚಿತ್ರಮಂದಿರದಲ್ಲಿ ಭಾನುವಾರ 'ಗಂಧದ ಗುಡಿ' ಚಿತ್ರ ಪ್ರದರ್ಶನ ಅಂಗವಾಗಿ ಅಭಿಮಾನಿ ಬಳಗದವರು ಪುನೀತ್ ರಾಜ್‌ಕುಮಾರ್ ಕಟೌಟ್‌ಗೆ 600 ಕೆ.ಜಿ. ಬಾದಾಮಿ ಹಾರವನ್ನು ಹಾಕಿ ಸಂಭ್ರಮಿಸಿದರು -ಪ್ರಜಾವಾಣಿ ಚಿತ್ರ

'ಗಂಧದಗುಡಿ' ಟಿಕೆಟ್ ದರ ಇಳಿಕೆ

ಬೆಂಗಳೂರು: 'ಗಂಧದಗುಡಿ' ಸಿನಿಮಾ ಟಿಕೆಟ್ ದರವನ್ನು ನ.7 ರಿಂದ 10ರ ವರೆಗೆ ಇಳಿಕೆ ಮಾಡಲಾಗಿದೆ.

ಹೊಸ ದರಗಳ ಅನ್ವಯ ಸಿಂಗಲ್ ಸ್ಕ್ರೀನ್‌ಗೆ ₹ 56 ಹಾಗೂ ಮಲ್ಟಿಪ್ಲೆಕ್ಸ್ ₹112 ನಿಗದಿಪಡಿಸಲಾಗಿದೆ ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಗಂಧದಗುಡಿ ಸಿನಿಮಾ ಪುನೀತ್ ಅವರ ಕನಸು. ರಾಜ್ಯದ ವನ್ಯ ಸಂಪತ್ತು ಹಾಗೂ ಪ್ರಕೃತಿ ಸೌಂದರ್ಯವನ್ನು ಕನ್ನಡಿಗರಿಗೆ ಪರಿಚಯಿಸುವ ಹಂಬಲ ಈ ಸಿನಿಮಾ ತಂಡದ್ದು. ಎಲ್ಲ ಕನ್ನಡಿಗರು ಹಾಗೂ ಮಕ್ಕಳು ಈ ಚಿತ್ರ ವೀಕ್ಷಣೆ ಮಾಡಬೇಕೆಂಬ ಉದ್ದೇಶದಿಂದ ವಿತರಕರು ಹಾಗೂ ಪ್ರದರ್ಶಕರ ಸಹಕಾರದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ರಾಜ್ಯದಾದ್ಯಂತ ದಿನದ ಎಲ್ಲ ಪ್ರದರ್ಶನಕ್ಕೂ ಇದು ಅನ್ವಯವಾಗಲಿದೆ' ಎಂದು ತಿಳಿಸಿದ್ದಾರೆ.

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸಂವಾದ
ಚಿಕಿತ್ಸೆ ನಿರಾಕರಣೆ: ತುಮಕೂರಲ್ಲಿ ತಾಯಿ, ಅವಳಿ ಹಸುಗೂಸು ಸಾವು
ಭಾಗವಹಿಸುವವರು

ಪ್ರಮೀಳಾ ನಾಯ್ಡು, ಅಧ್ಯಕ್ಷೆ, ಕರ್ನಾಟಕ ರಾಜ್ಯ ಮಹಿಳಾ ಆಯೋಗ
ಕೃಪಾ ಆಳ್ವ, ಮಾಜಿ ಅಧ್ಯಕ್ಷೆ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ
ಕವಿತಾ ರತ್ನ, ನಿರ್ದೇಶಕಿ, ಕನ್ಸರ್ನ್ಡ್ ಫಾರ್ ವರ್ಕಿಂಗ್ ಚಿಲ್ಡ್ರನ್
ರೂಪ ಹಾಸನ, ಲೇಖಕಿ, ಮಕ್ಕಳ ಹಕ್ಕುಗಳ ಕಾರ್ಯಕರ್ತೆ
ಮಧ್ಯಾಹ್ನ 12ರಿಂದ 1ರವರೆಗೆ
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8 ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ಕನ್ನಡ ಧ್ವನಿ

ಪಿಟಿಸಿಎಲ್ ಜಮೀನು ಭೂಪರಿವರ್ತನೆ: ಜಿಲ್ಲಾಧಿಕಾರಿಗಳಿಗೆ ಅಧಿಕಾರ

ಬೆಂಗಳೂರು: ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) (ಪಿಟಿಸಿಎಲ್) ಕಾಯ್ದೆ ಅಡಿಯಲ್ಲಿ ಮಂಜೂರಾದ ಜಮೀನುಗಳಲ್ಲಿ ನಾಲ್ಕು ಗುಂಟೆಯವರೆಗೂ ಸ್ವಂತ ವಾಸದ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಿ ಕಂದಾಯ ಇಲಾಖೆ ಶನಿವಾರ ಸುತ್ತೋಲೆ ಹೊರಡಿಸಿದೆ.

ರಾಜ್ಯ ಸರ್ಕಾರದ ವಿರುದ್ಧ ಮುನ್ನಯ್ಯ ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್, ಪಿಟಿಸಿಎಲ್ ಕಾಯ್ದೆಯ ವ್ಯಾಪ್ತಿಯಲ್ಲಿರುವ ಜಮೀನುಗಳನ್ನು ಪರಭಾರೆ ಮಾಡಲು ಮುಕ್ತ ಅವಕಾಶ ನೀಡಿದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರು ಭೂರಹಿತರಾಗಲು ಕಾರಣವಾಗುತ್ತದೆ ಎಂದು ಹೇಳಿತ್ತು. ರಾಜ್ಯ ಸರ್ಕಾರದ ಪೂರ್ವಾನುಮತಿ ಪಡೆಯದೇ ಇಂತಹ ಜಮೀನುಗಳನ್ನು ಭೂಪರಿವರ್ತನೆ ಮಾಡುವಂತಿಲ್ಲ ಎಂದು 2021ರ ಜುಲೈ 5ರಂದು ಆದೇಶ ಹೊರಡಿಸಿತ್ತು.

ಪಿಟಿಸಿಎಲ್ ಕಾಯ್ದೆ ವ್ಯಾಪ್ತಿಯಲ್ಲಿರುವ ಜಮೀನುಗಳ ಮಾಲೀಕರು ಸ್ವಂತ ವಾಸದ ಉದ್ದೇಶ ಹಾಗೂ ವಾಣಿಜ್ಯ ಉದ್ದೇಶಕ್ಕೆ 10 ಸೆಂಟ್ಸ್ ಅಥವಾ ನಾಲ್ಕು ಗುಂಟೆಯವರೆಗೆ ಬಳಸಿಕೊಳ್ಳುವುದಕ್ಕೆ ಪೂರಕವಾಗಿ ಭೂಪರಿವರ್ತನೆ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿ ಹಾಗೂ ತಹಶೀಲ್ದಾರ್‌ಗಳಿಗೆ ನೀಡುವಂತೆ ವಿಧಾನಸಭೆಯ ಭರವಸೆಗಳ ಸಮಿತಿ ಅಧ್ಯಕ್ಷ ಕೆ. ರಘುಪತಿ ಭಟ್ ಕಂದಾಯ ಸಚಿವ ಆರ್. ಅಶೋಕ ಅವರಿಗೆ ಮನವಿ ಸಲ್ಲಿಸಿದ್ದರು.

ಅದರಂತೆ ಭೂ ಪರಿವರ್ತನೆ ಮಾಡಿಕೊಡಲು ಡಿ.ಸಿಗಳಿಗೆ ಅಧಿಕಾರ ನೀಡಲಾಗಿದ್ದು, ಈ ಜಮೀನನ್ನು ಮಾರಾಟ ಮಾಡಲು ಸರ್ಕಾರದ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕಿರುವ ವ್ಯವಸ್ಥೆ ಮುಂದುವರಿಯಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ನ.19ರಿಂದ 23ರವರೆಗೆ ಧರ್ಮಸ್ಥಳ ಲಕ್ಷ ದೀಪೋತ್ಸವ

ಉಜಿರೆ: ಧರ್ಮಸ್ಥಳ ಮಂಜುನಾಥ ಸ್ವಾಮಿಯ ಲಕ್ಷ ದೀಪೋತ್ಸವ ನ.19ರಿಂದ 23ರವರೆಗೆ ನಡೆಯಲಿದೆ. ನ.22ರಂದು ಸಂಜೆ 5 ಗಂಟೆಗೆ ಸರ್ವಧರ್ಮ ಸಮ್ಮೇಳನದ 90ನೇ ಅಧಿವೇಶನವನ್ನು ಕೇಂದ್ರ ಸಚಿವೆ ಸ್ಮೃತಿ ಇರಾನಿ ಉದ್ಘಾಟಿಸುವರು. ವಕೀಲ ಎಂ.ಆರ್. ಸತ್ಯನಾರಾಯಣ ಅಧ್ಯಕ್ಷತೆ ವಹಿಸುವರು.

ಬಸ್ರೀಕಟ್ಟೆ ಚರ್ಚ್‌ನ ಫಾ. ಮಾರ್ಸೆಲ್ ಪಿಂಟೊ, ವಿಜಯಪುರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಹಾಸಿಂಪೀರ ಇ. ವಾಲೀಕಾರ ಮತ್ತು ಮೂಡುಬಿದಿರೆ ಜೈನ ಪ್ರೌಢಶಾಲೆಯ ನಿವೃತ್ತ ಮುಖ್ಯ ಶಿಕ್ಷಕ ಮುನಿರಾಜ ರೆಂಜಾಳ ಧಾರ್ಮಿಕ ಉಪನ್ಯಾಸ ನೀಡುವರು. ರಾತ್ರಿ 9ರಿಂದ ಸಂಗೀತ ಕಾರ್ಯಕ್ರಮ ನಡೆಯಲಿದೆ.

ನ.23ರಂದು ಸಂಜೆ 5ಕ್ಕೆ ಸಾಹಿತ್ಯ ಸಮ್ಮೇಳನವನ್ನು ಚಿತ್ರ ನಿರ್ದೇಶಕ ಪಿ. ಶೇಷಾದ್ರಿ ಉದ್ಘಾಟಿಸುವರು. ಮೈಸೂರಿನ ಡಾ. ಎಚ್‌.ವಿ. ನಾಗರಾಜ್ ರಾವ್ ಅಧ್ಯಕ್ಷತೆ ವಹಿಸುವರು. ಸತ್ಯೇಶ್ ಎನ್. ಬೆಳ್ಳೂರ್, 'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಐನಕೈ, ಲೇಖಕಿ ಡಾ. ಗೀತಾವಸಂತ ಉಪನ್ಯಾಸ ನೀಡುವರು. ರಿಕಿ ಕೇಜ್ ಬಳಗದಿಂದ ಸಂಗೀತ, ನೃತ್ಯ ವೈವಿಧ್ಯ ನಡೆಯಲಿದೆ. ರಾತ್ರಿ 12 ಗಂಟೆ ಬಳಿಕ ಮಂಜುನಾಥ ಸ್ವಾಮಿಯ ಲಕ್ಷದೀಪೋತ್ಸವ ನಡೆಯಲಿದೆ. ಈ ಅಂಗವಾಗಿ ಕೆಎಸ್‌ಆರ್‌ಟಿಸಿ ರಾಜ್ಯದ ವಿವಿಧ ಭಾಗಗಳಿಂದ ಧರ್ಮಸ್ಥಳಕ್ಕೆ ವಿಶೇಷ ಬಸ್ ಸೌಲಭ್ಯ ಕಲ್ಪಿಸಿದೆ.

ನಾಲ್ಕನೇ ಬಾರಿಯೂ ಹೆಣ್ಣು ಮಗು: ತಂದೆ ಆತ್ಮಹತ್ಯೆ

ಶ್ರೀನಿವಾಸಪುರ: ನಾಲ್ಕನೇ ಬಾರಿಯೂ ಪತ್ನಿ ಹೆಣ್ಣು ಮಗುವಿಗೆ ಜನ್ಮ ನೀಡಿದಳು ಎಂದು ಬೇಸರಗೊಂಡ ವ್ಯಕ್ತಿಯೊಬ್ಬ ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಗಂಡು ಮಗುವಿನ ನಿರೀಕ್ಷೆಯಲ್ಲಿದ್ದ ಯಲ್ದೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶೆಟ್ಟಿಹಳ್ಳಿ ಗ್ರಾಮದ ನಿವಾಸಿ ಲೋಕೇಶ್(38) ಎಂಬುವರು ಶನಿವಾರ ರಾತ್ರಿ ಮನೆಯಲ್ಲಿ ಫ್ಯಾನಿಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಈ ಬಾರಿ ಗಂಡು ಮಗು ಹುಟ್ಟುತ್ತದೆ ಎಂಬ ನಿರೀಕ್ಷೆಯಲ್ಲಿದ್ದ ಲೋಕೇಶ್ ಅವರಿಗೆ ಬೇಸರವಾಗಿತ್ತು ಎಂದು ಮೃತನ ಅಣ್ಣ ಮಂಜುನಾಥ್ ಪೊಲೀಸರಿಗೆ ದೂರು ನೀಡಿದ್ದಾರೆ.

ವಿದ್ಯುತ್ ಸ್ಪರ್ಶ: ಮೂರು ರೈತರ ಸಾವು

ತಿ.ನರಸೀಪುರ (ಮೈಸೂರು ಜಿಲ್ಲೆ): ತಾಲ್ಲೂಕಿನ ನಿಲಸೋಗೆ ಗ್ರಾಮದಲ್ಲಿ ಬೆಳೆಗೆ ರಾಸಾಯನಿಕ ಔಷಧ ಸಿಂಪಡಿಸುವಾಗ ವಿದ್ಯುತ್ ತಂತಿ ಸ್ಪರ್ಶಿಸಿ ಮೂವರು ರೈತರು ಮೃತಪಟ್ಟಿದ್ದಾರೆ.

ಅದೇ ಗ್ರಾಮದ ರಾಚಯ್ಯ (60), ಹರೀಶ್ (32) ಹಾಗೂ ಮಹದೇವಸ್ವಾಮಿ (40) ಮೃತರು.

ದಸರಾ ಆನೆ ಅಭಿಮನ್ಯು ಸಾರಥ್ಯ

ಮತ್ತೆ ಪುಂಡಾನೆ ಸೆರೆಗೆ ಸಜ್ಜು

• ಆರ್. ಜಿತೇಂದ್ರ

ರಾಮನಗರ: ಕಾಡಂಚಿನ ಗ್ರಾಮಗಳಿಗೆ ನುಗ್ಗಿ ಬೆಳೆ ಹಾನಿ ಮಾಡುತ್ತಿರುವ ಗಜಪಡೆ ಸೆರೆ ಹಿಡಿಯಲು ಇಲ್ಲವೇ ಮರಳಿ ಕಾಡಿಗಟ್ಟಲು ಎರಡನೇ ಹಂತದ ಕಾರ್ಯಾಚರಣೆ ಶೀಘ್ರ ಆರಂಭಗೊಳ್ಳಲಿದೆ. ಈ ಬಾರಿ ದಸರಾ ಆನೆ ಅಭಿಮನ್ಯು ಸಾರಥ್ಯ ವಹಿಸಲಿದ್ದಾನೆ.

ಈ ಬಾರಿಯ ಕಾರ್ಯಾಚರಣೆಯಲ್ಲಿ ಮತ್ತಿಗೋಡು ಶಿಬಿರದಿಂದ ನಾಲ್ಕು ಸಾಕಾನೆಗಳು ಪಾಲ್ಗೊಳ್ಳುವ ಸಾಧ್ಯತೆ ಇದೆ. ಇದರೊಟ್ಟಿಗೆ ಆನೆತಜ್ಞರು, ಅರಿವಳಿಕೆ ಸಿಬ್ಬಂದಿ ಹಾಗೂ ಅರಣ್ಯ ಇಲಾಖೆಯ ಅಧಿಕಾರಿಗಳು ಭಾಗಿ ಆಗಲಿದ್ದಾರೆ. ಇನ್ನು ಕೆಲವೇ ದಿನದಲ್ಲಿ ಈ ಕಾರ್ಯಾಚರಣೆ ಆರಂಭ ಆಗಲಿದ್ದು, ಕನಿಷ್ಠ 4–5 ದಿನಗಳ ಕಾಲ ನಡೆಯುವ ಸಾಧ್ಯತೆ ಇದೆ.

ಚನ್ನಪಟ್ಟಣ ತಾಲ್ಲೂಕು ಹಾಗೂ ರಾಮನಗರ–ಕನಕಪುರ ಗಡಿಭಾಗದಲ್ಲಿ ಕಾಡಾನೆಗಳ ದಾಳಿ ನಿರಂತರವಾಗಿದೆ. ಇದರಿಂದಾಗಿ ಬೆಳೆ ಹಾನಿ ಜೊತೆಗೆ ಜನ–ಜಾನುವಾರುಗಳ ಪ್ರಾಣ ಹಾನಿಯಾಗುತ್ತಿದೆ. ಆಗಸ್ಟ್‌ನಲ್ಲಿ ನಡೆದ ಮೊದಲ ಹಂತದ ಕಾರ್ಯಾಚರಣೆಯಲ್ಲಿ ಐದು ಸಾಕಾನೆಗಳ ಮೂಲಕ ಕಾರ್ಯಾಚರಣೆ ನಡೆದಿತ್ತು. ಎರಡು ಗಜಗಳನ್ನು ಸೆರೆ ಹಿಡಿಯಲಾಗಿತ್ತು.

ಆದಾಗ್ಯೂ ಚನ್ನಪಟ್ಟಣ ಭಾಗದಲ್ಲಿ ಮತ್ತೆ ಕಾಡಾನೆ ದಾಳಿ ನಿರಂತರವಾಗಿದೆ. ಒಂದೆಡೆ ಒಂಟಿ ಸಲಗಗಳು ಕಾಡಿಗೆ ನುಗ್ಗುತ್ತಿದ್ದರೆ, ಮತ್ತೊಂದೆಡೆ ನಾಲ್ಕಾರು ಆನೆಗಳ ಹಿಂಡು ಚನ್ನಪಟ್ಟಣ ಹಾಗೂ ರಾಮನಗರದ ಚಿಕ್ಕಮಣ್ಣುಗುಡ್ಡೆ, ತೆಂಗಿನಕಲ್ಲು ಅರಣ್ಯದ ಆಸುಪಾಸಿನ ಗ್ರಾಮಗಳಲ್ಲಿ ದಾಂದಲೆ ನಡೆಸುತ್ತಿವೆ. ಹೀಗಾಗಿ ಮತ್ತೆ ಆನೆಗಳ ಸೆರೆಗೆ ಸಾರ್ವಜನಿಕರಿಂದ ಒತ್ತಾಯ ಹೆಚ್ಚುತ್ತಿದೆ.

'ದಸರಾ ಅಂಬಾರಿ ಹೊರುವ ಅಭಿಮನ್ಯು ಸಾರಥ್ಯದಲ್ಲಿ ಈ ಬಾರಿ ಆನೆ ಸೆರೆ ಕಾರ್ಯಾಚರಣೆ ನಡೆಯಲಿದೆ. ಜಿಲ್ಲೆಯಲ್ಲಿ 20–25 ಆನೆಗಳ ಗುಂಪು ಓಡಾಡುತ್ತಿದ್ದು, ಇವುಗಳ ಪೈಕಿ ಸಾಕಷ್ಟು ಆನೆಗಳನ್ನು ಆಗಸ್ಟ್‌ನಲ್ಲಿ ಕಾಡಿಗೆ ಅಟ್ಟಲಾಗಿತ್ತು. ಇನ್ನೂ 5–6 ಆನೆಗಳು ಗ್ರಾಮಗಳ ಆಸುಪಾಸು ತಿರುಗಾಡುತ್ತಿದ್ದು, ಅವುಗಳನ್ನು ಓಡಿಸಲು ಹಾಗೂ ಅಗತ್ಯಬಿದ್ದಲ್ಲಿ ಸೆರೆ ಹಿಡಿಯಲು ಸಿದ್ಧತೆ ಮಾಡಿಕೊಂಡಿದ್ದೇವೆ' ಎಂದು ಪ್ರಾದೇಶಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ದೇವರಾಜು 'ಪ್ರಜಾವಾಣಿ'ಗೆ ತಿಳಿಸಿದರು.

ಆಗಸ್ಟ್‌ನಲ್ಲಿ ತೆಂಗಿನಕಲ್ಲು ಅರಣ್ಯದಲ್ಲಿ ನಡೆದಿದ್ದ ಕಾರ್ಯಾಚರಣೆ

ಎರಡನೇ ಸುತ್ತಿನ ಕಾಡಾನೆ ಸೆರೆ ಕಾರ್ಯಾಚರಣೆ ಶೀಘ್ರವೇ ಆರಂಭ ಆಗಲಿದೆ. ದಸರಾ ಆನೆ ಅಭಿಮನ್ಯು ಸಾರಥ್ಯದಲ್ಲಿ ನಾಲ್ಕು ಸಾಕಾನೆಗಳು ಇಲ್ಲಿಗೆ ಬರಲಿವೆ

ದೇವರಾಜು, ಡಿಸಿಎಫ್, ರಾಮನಗರ

ಸರ್ಕಾರಿ ನೌಕರರೆಂದು ಪರಿಗಣಿಸಲು ಆಗ್ರಹ

ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಒಕ್ಕೊರಲ ನಿರ್ಣಯ

ಪ್ರಜಾವಾಣಿ ವಾರ್ತೆ

ವಿಜಯಪುರ: ಅಂಗನವಾಡಿ ನೌಕರರನ್ನು 'ಸಿ' ಮತ್ತು 'ಡಿ' ದರ್ಜೆಯ ಸರ್ಕಾರಿ ನೌಕರರೆಂದು ಪರಿಗಣಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಒಳಗೊಂಡ ನಿರ್ಣಯಗಳನ್ನು ನಗರದಲ್ಲಿ ಎರಡು ದಿನ ನಡೆದ ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಪ್ರಥಮ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಕೈಗೊಳ್ಳಲಾಯಿತು.

ಕೊಡುಗೆಯಾಧಾರಿತ ಪಿಂಚಣಿ ಯೋಜನೆ ಕೈಬಿಟ್ಟು ನಿವೃತ್ತಿ ವೇತನ ನೀಡಬೇಕು, ಕಾರ್ಮಿಕರೆಂದು ಪರಿಗಣಿಸಿ ಕನಿಷ್ಠ ವೇತನ, ರಜೆ, ಇಪಿಎಫ್, ಇಎಸ್‌ಐ ಸೌಲಭ್ಯಗಳನ್ನು ನೀಡಬೇಕು, ಅಂಗನವಾಡಿ ಕೇಂದ್ರಗಳ ಬಾಡಿಗೆ ದರ, ಮೊಟ್ಟೆ ದರ, ಅನುದಾನಗಳನ್ನು ಹೆಚ್ಚಿಸುವಂತೆ ಆಗ್ರಹಿಸಿ ದೊಡ್ಡ ಮಟ್ಟದಲ್ಲಿ ಸಂಘಟಿತ ಹೋರಾಟಗಳನ್ನು ನಡೆಸುವ ನಿರ್ಧಾರವನ್ನು ಕೂಡ ಸಮ್ಮೇಳನದಲ್ಲಿ ಕೈಗೊಳ್ಳಲಾಯಿತು.

ಪ್ರತಿನಿಧಿ ಅಧಿವೇಶನದಲ್ಲಿ ಮಾತನಾಡಿದ ಎಐಯುಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಕೆ.ಸೋಮಶೇಖರ, 'ಕಾರ್ಮಿಕರು ಯಾವುದೇ ರಾಜಕೀಯ ಪಕ್ಷಗಳನ್ನು ನೆಚ್ಚಿಕೊಳ್ಳದೇ ಸಂಘಟಿತರಾಗಿ ತಮ್ಮ ನ್ಯಾಯಯುತ ಬೇಡಿಕೆಗಳಿಗೆ ನಿರಂತರ ಹೋರಾಟ ಮಾಡಬೇಕು' ಎಂದರು.

ನೂತನ ರಾಜ್ಯ ಸಮಿತಿಗೆ ಆಯ್ಕೆ: ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ರಾಜ್ಯ ಘಟಕಕ್ಕೆ ನೂತನ ಅಧ್ಯಕ್ಷರಾಗಿ ಕೆ.ಸೋಮಶೇಖರ ಯಾದಗಿರಿ, ಉಪಾಧ್ಯಕ್ಷರಾಗಿ ವಿ.ಜಿ ದೇಸಾಯಿ, ಮಲ್ಲಿಕಾರ್ಜುನ. ಎಚ್‌.ಟಿ, ಡಿ.ಉಮಾದೇವಿ, ನಾಗಮ್ಮ ಮಠ, ಸಾವಿತ್ರಿ ನಾಗರತ್ತಿ, ಕಮಲಾಬಾಯಿ ತೇಲಿ, ಅನ್ನಪೂರ್ಣ ಪಾಟೀಲ, ಅಯ್ಯಮ್ಮ, ನಾಗಮಣಿ ಹಾಗೂ ಕಾರ್ಯದರ್ಶಿಯಾಗಿ ಎಂ.ಉಮಾದೇವಿ ಅವರನ್ನು ಆಯ್ಕೆಮಾಡಲಾಯಿತು.

ಜಂಟಿ ಕಾರ್ಯದರ್ಶಿಯಾಗಿ ಲಕ್ಷ್ಮೀ ಲಕ್ಷೆಟ್ಟಿ, ಶೋಭಾ ಪಾಟೀಲ, ಕಸ್ತೂರಿ ಅಂಗಡಿ, ಶಿವಲೀಲಾ, ರಾಧಾ ರೆಡ್ಡಿ, ರೇಣುಕಾ ಪಾಟೀಲ, ರಶ್ಮಿ ಗುತ್ತೇದಾರ, ಸವಿತಾ ತೇರದಾಳ ಮತ್ತು ಖಜಾಂಚಿಯಾಗಿ ಭುವನ ಆಯ್ಕೆಯಾದರು.

ರಾಜ್ಯ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ರೇಣುಕಾ ಹಡಪದ, ವಿಜಯಲಕ್ಷ್ಮೀ ಹುಣಶ್ಯಾಳ, ಭಾಗಿರಥಿ, ಲಕ್ಷ್ಮೀ ಕದಲಾಪುರ, ಮಂಜುಳಾ ನಾಯಕ ಲಕ್ಷ್ಮೀ ಕದಚಾಲ, ಎ.ಎಸ್. ಮಾಳಿ, ಶಾರದಾ ದೇವಿ, ನಿರ್ಮಲಾ ಅವರು ಆಯ್ಕೆಯಾದರು. ಜೊತೆಗೆ 45 ಜನರನ್ನು ಒಳಗೊಂಡ ಕೌನ್ಸಿಲ್ ಚುನಾಯಿಸಲಾಯಿತು.

ನೂತನವಾಗಿ ಆಯ್ಕೆಯಾದ ರಾಜ್ಯ ಕಾರ್ಯದರ್ಶಿ ಉಮಾದೇವಿ, ಡಿಸೆಂಬರ್ 26 ರಿಂದ ಅಂಗನವಾಡಿ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನಾ ಸಪ್ತಾಹ ಘೋಷಿಸಿದರು.

ವಿಜಯಪುರ ನಗರದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸಂಯುಕ್ತ ಅಂಗನವಾಡಿ ನೌಕರರ ಪ್ರಥಮ ರಾಜ್ಯ ಸಮ್ಮೇಳನದ ಪ್ರತಿನಿಧಿ ಅಧಿವೇಶನದಲ್ಲಿ ಪಾಲ್ಗೊಂಡಿದ್ದ ಅಂಗನವಾಡಿ ಕಾರ್ಯಕರ್ತೆಯರು

ನಮ್ಮ ಕಾರ್ಮಿಕರು ಕೇವಲ ಹೋರಾಟ ಮಾಡಿದರೆ ಸಾಲದು, ರಾಜಕೀಯವಾಗಿ ಪ್ರಬುದ್ಧರಾಗಬೇಕು

ಕೆ.ಸೋಮಶೇಖರ, ಎಐಯುಟಿಯುಸಿ. ರಾಜ್ಯ ಘಟಕದ ಅಧ್ಯಕ್ಷ

ಶಿಕ್ಷಕರ ಅರ್ಹತಾ ಪರೀಕ್ಷೆ: ಪರೀಕ್ಷಾ ಕೇಂದ್ರಗಳಲ್ಲಿ ಗೊಂದಲ, ಪರದಾಟ

ಬೆಂಗಳೂರು: ಪರೀಕ್ಷಾ ಕೇಂದ್ರಗಳ ಗೊಂದಲಗಳಿಂದ ಭಾನುವಾರ ನಡೆದ ಶಿಕ್ಷಕರ ಅರ್ಹತಾ ಪರೀಕ್ಷೆಗೆ (ಟಿಇಟಿ) ಹಾಜರಾಗಲು ರಾಜ್ಯದ ಹಲವೆಡೆ ವಿದ್ಯಾರ್ಥಿಗಳು ಪರದಾಡಿದರು.

ಕರ್ನಾಟಕ ಶಿಕ್ಷಕರ ಅರ್ಹತಾ ಪರೀಕ್ಷೆ ಬೆಳಿಗ್ಗೆ 9.30 ರಿಂದ 12 ಹಾಗೂ ಮಧ್ಯಾಹ್ನ 2ರಿಂದ 4.30ರವರೆಗೆ ನಡೆಯಿತು. ಪತ್ರಿಕೆ–1ರ ಪರೀಕ್ಷೆಗೆ 1,40,801 (ಶೇ 90.88) ಅಭ್ಯರ್ಥಿಗಳು, ಪತ್ರಿಕೆ–2ರ ಪರೀಕ್ಷೆಗೆ 1,92,112 (ಶೇ 93.88) ಅಭ್ಯರ್ಥಿಗಳು ಹಾಜರಾಗಿದ್ದರು.

ಬೆಳಿಗ್ಗೆ ನಡೆದ ಪತ್ರಿಕೆ 1ಕ್ಕೆ 1,54,929 ಅಭ್ಯರ್ಥಿಗಳು, ಮಧ್ಯಾಹ್ನ ನಡೆದ ಪತ್ರಿಕೆಗೆ 2ಕ್ಕೆ 06456 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಪತ್ರಿಕೆ 1ರ ಪರೀಕ್ಷೆ 589 ಪರೀಕ್ಷಾ ಕೇಂದ್ರಗಳಲ್ಲಿ ಹಾಗೂ ಪತ್ರಿಕೆ 2 ರ ಪರೀಕ್ಷೆ 781 ಕೇಂದ್ರಗಳಲ್ಲಿ ನಿಗದಿಯಾಗಿತ್ತು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ವೆಬ್‌ಸೈಟ್‌ನಿಂದ ಅಭ್ಯರ್ಥಿಗಳು ಪರೀಕ್ಷಾ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡಿದ್ದರೂ, ಪರೀಕ್ಷಾ ಪ್ರವೇಶ ಪತ್ರದಲ್ಲಿ ನಮೂದಾಗಿದ್ದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆಗಳು ನಿಗದಿಯಾಗಿರಲಿಲ್ಲ. ಕೆಲವೆಡೆ ನಮೂದಿಸಿದ ಕೇಂದ್ರಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ತಾಳೆಯಾಗುತ್ತಿರಲಿಲ್ಲ. ಕೊನೆಯ ಕ್ಷಣದಲ್ಲಿ ವಿದ್ಯಾರ್ಥಿಗಳು ಡೌನ್‌ಲೋಡ್ ಮಾಡಿಕೊಂಡ ಪ್ರವೇಶ ಪತ್ರದ ಸಾಫ್ಟ್ ಪ್ರತಿ ತೋರಿಸಿದರೂ, ಪರೀಕ್ಷಾ ಮೇಲ್ವಿಚಾರಕರು ಪರೀಕ್ಷೆ ಬರೆಯಲು ಅವಕಾಶ ನೀಡಲಿಲ್ಲ ಎಂದು ಅಭ್ಯರ್ಥಿಗಳು ದೂರಿದರು.

'ಟಿಇಟಿ ಪರೀಕ್ಷೆಗಾಗಿ ಬಳ್ಳಾರಿ ಜಿಲ್ಲೆಯಿಂದ ಬಂದಿದ್ದೇನೆ. ಮೂರು ದಿನಗಳ ಹಿಂದೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿ ಪ್ರಿಂಟ್ ತೆಗೆದುಕೊಂಡಿದ್ದೆ. ಪರೀಕ್ಷಾ ಕೇಂದ್ರ ಚಿಕ್ಕಮಗಳೂರಿನ ಬೇಲೂರು ರಸ್ತೆ ಸರ್ಕಾರಿ ಪಿಯು ಕಾಲೇಜು ಎಂದು ನಮೂದಾಗಿತ್ತು. ಪರೀಕ್ಷಾ ಕೇಂದ್ರದ ಪಟ್ಟಿಯಲ್ಲಿ ಹೆಸರು ಇರಲಿಲ್ಲ. ಮತ್ತೆ ವೆಬ್‌ಸೈಟ್‌ನಲ್ಲಿ ಪರಿಶೀಲಿಸಿದ ನಂತರ ಬಸವನಹಳ್ಳಿ ಕಾಲೇಜು ಎಂದು ನಮೂದಾಗಿತ್ತು. ಸಮಯವಾದ್ದರಿಂದ ಪ್ರಿಂಟ್ ತೆಗೆದುಕೊಳ್ಳಲು ಆಗಲಿಲ್ಲ. ಆದರೆ, ಮೇಲ್ವಿಚಾರಕರು ಪ್ರವೇಶ ನಿರಾಕರಿಸಿದರು' ಎಂದು ಅಭ್ಯರ್ಥಿ ಅವಿನಾಶ್ ದೂರಿದರು.

ಕಲಬುರಗಿ ಜಿಲ್ಲೆ ಜೇವರ್ಗಿ ತಾಲ್ಲೂಕು ಸೊನ್ನ ಗ್ರಾಮದ ಬಾಣಂತಿಯೊಬ್ಬರು 20 ದಿನದ ಕೂಸಿನೊಂದಿಗೆ ಬಂದು ಪರೀಕ್ಷೆ ಬರೆದರು.

ಲಕ್ಷ್ಮಿ ಮೇತ್ರೆಗೆ ನೈಟಿಂಗೇಲ್ ರಾಷ್ಟ್ರೀಯ ಪ್ರಶಸ್ತಿ

ಬೀದರ್: ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವತಿಯಿಂದ ಅತ್ಯುತ್ತಮ ಸೇವೆಗೆ ಕೊಡುವ 2021ನೇ ಸಾಲಿನ ರಾಷ್ಟ್ರೀಯ ಫ್ಲಾರೆನ್ಸ್ ನೈಟಿಂಗೇಲ್ ಪ್ರಶಸ್ತಿ ಹುಮನಾಬಾದ್ ತಾಲ್ಲೂಕಿನ ಘಾಟಬೋರಾಳ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯ ಘೋಡವಾಡಿ ಉಪ ಕೇಂದ್ರದ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿ ಲಕ್ಷ್ಮಿ ಮೇತ್ರೆ ಅವರಿಗೆ ಲಭಿಸಿದೆ.

ನವೆಂಬರ್ 7ರಂದು ರಾಷ್ಟ್ರಪತಿ ಭವನದಲ್ಲಿ ಆಯೋಜಿಸಿರುವ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಲಕ್ಷ್ಮಿ ಮೇತ್ರೆ ಅವರಿಗೆ ಈ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ.

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ವಿರುದ್ಧ ಹೋರಾಟ: ಉಮೇಶ್

'ಕಾರ್ಮಿಕ ಸಂಘಟನೆಗಳ ಸಮಾವೇಶ' ಜ.30ಕ್ಕೆ

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಷ್ಟ್ರೀಯ ಆಸ್ತಿ ನಗದೀಕರಣ (ಎನ್‌ಎಂಪಿ) ಯೋಜನೆಯಡಿ ದೇಶವನ್ನು ಬಂಡವಾಳಶಾಹಿಗಳಿಗೆ ಒಪ್ಪಿಸುತ್ತಿರುವ ಕೇಂದ್ರ ಸರ್ಕಾರದ ವಿರುದ್ಧ ಎಲ್ಲ ಕಾರ್ಮಿಕ ಸಂಘಟನೆಗಳು ಒಂದಾಗಿದ್ದು, 2023ರ ಜ.30ರಂದು ದೆಹಲಿಯಲ್ಲಿ ನಡೆಯಲಿರುವ ಕೇಂದ್ರ ಕಾರ್ಮಿಕ ಸಂಘಟನೆಗಳ ಜಂಟಿ ಸಮಾವೇಶದಲ್ಲಿ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುವುದು' ಎಂದು ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್.ಉಮೇಶ್ ತಿಳಿಸಿದರು.

ನಗರದಲ್ಲಿ 'ಅಂಚೆ ನೌಕರರ ರಾಷ್ಟ್ರೀಯ ಒಕ್ಕೂಟದಿಂದ (ಎನ್‌ಎಫ್ ಪಿಇ) ಭಾನುವಾರ ಆಯೋಜಿಸಿದ್ದ ರಾಷ್ಟ್ರಮಟ್ಟದ 12ನೇ ಅಧಿವೇಶನವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಜೆಟ್ ಅಧಿವೇಶನದ ವೇಳೆ 5 ಲಕ್ಷ ರೈತರು, ಕಾರ್ಮಿಕರು ಹಾಗೂ ಕೂಲಿ ಕಾರ್ಮಿಕರು ಸಂಸತ್ ಚಲೋ ನಡೆಸಲಿದ್ದಾರೆ. ರೈತ ಹೋರಾಟದ ಮಾದರಿಯಲ್ಲಿಯೇ ಕಾರ್ಮಿಕರು ಹೋರಾಟ ನಡೆಸಲಿದ್ದಾರೆ' ಎಂದರು.

ಕರ್ನಾಟಕ ವೃತ್ತದ ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಎಸ್. ರಾಜೇಂದ್ರಕುಮಾರ್ ಮಾತನಾಡಿ, 'ಕೊರಿಯರ್ ಕಂಪನಿಗಳಿಂದ ಅಂಚೆ ಇಲಾಖೆಯು ಸವಾಲುಗಳನ್ನು ಎದುರಿಸುತ್ತಿದೆ. ಗ್ರಾಹಕರ ಅಪೇಕ್ಷೆಗಳಿಗೆ ತಕ್ಕಂತೆ ಕರ್ತವ್ಯದ ಅವಧಿ ಬದಲಿಸಿಕೊಳ್ಳಬೇಕು. ಹೊಸ ಆಲೋಚನೆಗಳಿಂದ ಸೇವೆಯನ್ನು ವಿಸ್ತರಿಸಿ, ಲಾಭ ಗಳಿಕೆ ಹೆಚ್ಚಿಸಬೇಕು' ಎಂದರು. ಕಾರ್ಯದರ್ಶಿ ಜನಾರ್ದನ್ ಮಜುಂದಾರ್, ಸಿ.ಸಿ. ಪಿಳ್ಳೈ, ಕೆ.ರಾಘವೇಂದ್ರನ್ ಇದ್ದರು.

ಮೈಸೂರಿನಲ್ಲಿ 'ನ್ಯಾಷನಲ್ ಫೆಡರೇಷನ್ ಆಫ್ ಪೋಸ್ಟಲ್ ಎಂಪ್ಲಾಯೀಸ್' ಭಾನುವಾರ ಆಯೋಜಿಸಿದ್ದ 12ನೇ ರಾಷ್ಟ್ರಮಟ್ಟದ ಅಧಿವೇಶನ ಉದ್ಘಾಟಿಸಿದ ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಕೆ.ಎನ್.ಉಮೇಶ್ ಮಾತನಾಡಿದರು. ಕಾರ್ಯದರ್ಶಿ ಜನಾರ್ದನ್ ಮಜುಂದಾರ್, ಚೀಫ್ ಪೋಸ್ಟ್ ಮಾಸ್ಟರ್ ಜನರಲ್ ಎಸ್.ರಾಜೇಂದ್ರಕುಮಾರ್, ಎನ್‌ಎಫ್‌ಪಿಇ ಕಾರ್ಯಕಾರಿ ಅಧ್ಯಕ್ಷ ಯು.ಕೆ.ತಿವಾರಿ, ಆರ್.ಎನ್.ಪರಾಶರ್, ಕೇಂದ್ರ ಸರ್ಕಾರ ನೌಕರರ ಒಕ್ಕೂಟದ ಉಪಾಧ್ಯಕ್ಷ ಕೆ.ಕೆ.ಎನ್. ಕುಟ್ಟಿ ಇದ್ದರು —ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ಎಸ್.ಎಸ್.ಪೂಜಾರಿ

ಬೆಳಗಾವಿ: ಇಲ್ಲಿನ ಸದಾಶಿವ ನಗರದ ನಿವಾಸಿ, ವಿಧಾನ ಪರಿಷತ್ ಮಾಜಿ ಸದಸ್ಯ ಶ್ರೀಕಾಂತ ಸಿದ್ದಪ್ಪ ಪೂಜಾರಿ (89) ಭಾನುವಾರ ನಿಧನರಾದರು.

ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ. 1980ರಿಂದ 2004ರವರೆಗೆ 4 ಬಾರಿ ಸ್ವತಂತ್ರವಾಗಿ ಸ್ಪರ್ಧಿಸಿ ವಿಧಾನ ಪರಿಷತ್ ಸದಸ್ಯರಾಗಿದ್ದ ಪೂಜಾರಿ, ಸರ್ಕಾರದ ಗಮನ ಸೆಳೆದು ಶಿಕ್ಷಕರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅಂತ್ಯಕ್ರಿಯೆ ಸಂಜೆ ನೆರವೇರಿತು.

ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
ಖಾದಿ ಭವನ, ನಂ:10, ಜಸ್ಮಾಭವನ ರಸ್ತೆ, ಬೆಂಗಳೂರು–560 052.
ದೂರವಾಣಿ:080–2226 6852, ಇಮೇಲ್: kviboardbangkar@gmail.com
ಸಂ.ಖಾಮಂ/ಮಾರುಕಟ್ಟೆ–1/11/2022–23 ದಿನಾಂಕ:05.11.2022
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಮಂಡಳಿಯ ರಾಜ್ಯಮಟ್ಟದ ಖಾದಿ ಉತ್ಸವ–2022ನ್ನು ಮಂಗಳೂರು ನಗರದಲ್ಲಿ ದಿನಾಂಕ:24.11.2022 ರಿಂದ 08.12.2022ರವರೆಗೆ 15 ದಿನಗಳ ಕಾಲ ಆಯೋಜಿಸುತ್ತಿರುವ ವಸ್ತು ಪ್ರದರ್ಶನಕ್ಕೆ ಅವಶ್ಯಕವಿರುವ ಮಳಿಗೆ ನಿರ್ಮಾಣ ಹಾಗೂ ಮೂಲಭೂತ ಸೌಕರ್ಯ ಒದಗಿಸಲು ಕಾಮಗಾರಿಗಳನ್ನು ನಿರ್ವಹಿಸಲು ಆಸಕ್ತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ದ್ವಿ–ಲಕೋಟೆ ಅಲ್ಪಾವಧಿ ಇ–ಟೆಂಡರ್‌ನ್ನು ಆಹ್ವಾನಿಸಲಾಗಿದೆ, ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 14.11.2022 ರಂದು 16:00 ಗಂಟೆಯುವರೆಗೆ ಹೆಚ್ಚಿನ ವಿವರಗಳಿಗೆ http://eproc.karnataka.gov.in ವೀಕ್ಷಿಸಬಹುದು.
ಸಹಿ/– ಟೆಂಡರ್ ಆಹ್ವಾನಿಸುವ ಅಧಿಕಾರಿ
ಖಾದಿ ಮಂಡಳಿ, ಬೆಂಗಳೂರು.

ಹಿಮಾಚಲ ಪ್ರದೇಶ: ಬಿಜೆಪಿ ಪ್ರಣಾಳಿಕೆ ಬಿಡುಗಡೆ • ನೌಕರಿಯಲ್ಲಿ ಮಹಿಳೆಯರಿಗೆ ಶೇ 33 ಮೀಸಲು ವಾಗ್ದಾನ

ಏಕರೂಪ ನಾಗರಿಕ ಸಂಹಿತೆ ಜಾರಿ ಭರವಸೆ

ಶಿಮ್ಲಾ (ಪಿಟಿಐ): ಹಿಮಾಚಲ ಪ್ರದೇಶದಲ್ಲಿ ಮರಳಿ ಅಧಿಕಾರಕ್ಕೆ ಬಂದರೆ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೆ ತರಲಾಗುವುದು ಎಂದು ಬಿಜೆಪಿ ಭರವಸೆ ನೀಡಿದೆ. ಸರ್ಕಾರಿ ನೌಕರಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲು ನೀಡಲಾಗುವುದು ಎಂಬ ಭರವಸೆಯೂ ಇರುವ ಪ್ರಣಾಳಿಕೆಯನ್ನು ಪಕ್ಷದ ಅಧ್ಯಕ್ಷ ಜೆ.ಪಿ. ನಡ್ಡಾ ಭಾನುವಾರ ಬಿಡುಗಡೆ ಮಾಡಿದರು.

ಹಿಂದುತ್ವ, ಅಭಿವೃದ್ಧಿ ಮತ್ತು ಸಮಾಜ ಕಲ್ಯಾಣ ಕಾರ್ಯಕ್ರಮಗಳು ಪ್ರಣಾಳಿಕೆಯಲ್ಲಿ ಇವೆ. ಮಹಿಳೆಯರಿಗೆ ಪ್ರತ್ಯೇಕ ಪ್ರಣಾಳಿಕೆಯನ್ನು ನಡ್ಡಾ ಅವರು ಪ್ರಕಟಿಸಿದರು. ಉಚಿತ ಧಾನ್ಯ, ಅಡುಗೆ ಅನಿಲ ಸಂಪರ್ಕ, ಶೌಚಾಲಯ ಸೌಲಭ್ಯದಂತಹ ಕೊಡುಗೆಗಳು ಬೇರೆ ಬೇರೆ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯ ನೆರವಿಗೆ ಬಂದಿವೆ. ಹಾಗಾಗಿಯೇ ಮಹಿಳೆಯರನ್ನು ಕೇಂದ್ರೀಕರಿಸಿ ಬಿಜೆಪಿ ಪ್ರಣಾಳಿಕೆ ರಚಿಸಿದೆ ಎನ್ನಲಾಗಿದೆ.

ಸರ್ಕಾರಿ ನೌಕರಿಯೂ ಸೇರಿಸಿ ಎಂಟು ಲಕ್ಷ ಉದ್ಯೋಗ ಸೃಷ್ಟಿಸಲಾಗುವುದು, 6ರಿಂದ 12ರವರೆಗಿನ ವಿದ್ಯಾರ್ಥಿನಿಯರಿಗೆ ಉಚಿತ ಸೈಕಲ್ ನೀಡಲಾಗುವುದು, ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿನಿಯರಿಗೆ ಸ್ಕೂಟರ್ ನೀಡಲಾಗುವುದು ಎಂಬ ಭರವಸೆಗಳು ಪ್ರಣಾಳಿಕೆಯಲ್ಲಿ ಇವೆ.

ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವ ಅನುರಾಗ್ ಠಾಕೂರ್, ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಜೈರಾಮ್ ಠಾಕೂರ್ ಹಾಗೂ ಇತರರು ಶಿಮ್ಲಾದಲ್ಲಿ ಚುನಾವಣಾ ಪ್ರಣಾಳಿಕೆಯನ್ನು ಭಾನುವಾರ ಬಿಡುಗಡೆ ಮಾಡಿದರು –ಪಿಟಿಐ ಚಿತ್ರ

ರಾಜ್ಯದಲ್ಲಿ ಐದು ವೈದ್ಯಕೀಯ ಕಾಲೇಜು ಆರಂಭಿಸಲಾಗುವುದು, ವಕ್ಫ್ ಆಸ್ತಿಗಳ ಸಮೀಕ್ಷೆ ನಡೆಸಿ, ಅವುಗಳ ದುರ್ಬಳಕೆಯನ್ನು ತಡೆಯಲಾಗುವುದು ಎಂದು 'ಸಂಕಲ್ಪ ಪತ್ರ'ದಲ್ಲಿ ಹೇಳಲಾಗಿದೆ.

ತಮ್ಮ ಪಕ್ಷದ ಈ ಭರವಸೆಗಳು ಉಚಿತ ಕೊಡುಗೆಗಳು ಅಲ್ಲ. ಸಶಕ್ತೀಕರಣ ಮತ್ತು ಪ್ರಲೋಭನೆಯ ನಡುವೆ ದೊಡ್ಡ ವ್ಯತ್ಯಾಸ ಇದೆ. ಸಮಾಜದ ವಿವಿಧ ವರ್ಗಗಳ ಸಬಲೀಕರಣಕ್ಕೆ ಬಿಜೆಪಿ ಯತ್ನಿಸುತ್ತಿದೆ. ತಮ್ಮ ಪಕ್ಷವು ಪ್ರಲೋಭನೆ ಒಡ್ಡುವುದರ ವಿರುದ್ಧ ಇದೆ. ಚುನಾವಣಾ ಆಯೋಗವು ಉಚಿತ ಕೊಡುಗೆಗಳ ವಿಚಾರದಲ್ಲಿ ನಡೆಸಿದ ಸಂವಾದದಲ್ಲಿ ಬಿಜೆಪಿ ಇದೇ ನಿಲುವನ್ನು ವ್ಯಕ್ತಪಡಿಸಿದೆ ಎಂದು ನಡ್ಡಾ ಹೇಳಿದ್ದಾರೆ. ಮತ ಪಡೆಯುವುದಕ್ಕಾಗಿ ಬೊಕ್ಕಸದ ಹಣವನ್ನು ಪೋಲು ಮಾಡುವುದನ್ನು ಪ್ರಧಾನಿ ನರೇಂದ್ರ ಮೋದಿ ಅವರು 'ರೆವ್ಡಿ' (ಮಿಠಾಯಿ) ಎಂದು ಕರೆದಿದ್ದರು.

ಕಾಂಗ್ರೆಸ್ ಪಕ್ಷವು ಶನಿವಾರ ಬಿಡುಗಡೆ ಮಾಡಿದ ಪ್ರಣಾಳಿಕೆಯನ್ನು ನಡ್ಡಾ ಟೀಕಿಸಿದರು. ಆ ಪ್ರಣಾಳಿಕೆಗೆ ಕಾಣ್ಕೆ ಮತ್ತು ದಿಕ್ಕು ಎರಡೂ ಇಲ್ಲ ಎಂದರು. ಕಾಂಗ್ರೆಸ್ ಮತ್ತು ಬಿಜೆಪಿಯ ಪ್ರಣಾಳಿಕೆಗಳ ನಡುವೆ ತುಲನೆಯೇ ಇಲ್ಲ. ವಿರೋಧ ಪಕ್ಷವು ಜನಪ್ರಿಯ ಘೋಷಣೆಗಳನ್ನು ಮಾಡಿದೆ. ಈಡೇರಿಸಲು ಪ್ರಯತ್ನವೇ ಮಾಡುವುದಿಲ್ಲ ಎಂಬುದು ಸ್ಪಷ್ಟವಾಗಿರುವುದರಿಂದಲೇ ಕಾಂಗ್ರೆಸ್ ದೊಡ್ಡ ದೊಡ್ಡ ಭರವಸೆಗಳನ್ನು ಕೊಟ್ಟಿದೆ ಎಂದು ನಡ್ಡಾ ಹೇಳಿದ್ದಾರೆ.

ಪ್ರಣಾಳಿಕೆಯ ಮುಖ್ಯಾಂಶಗಳು

- ಬಿಜೆಪಿಯ ಪ್ರಣಾಳಿಕೆಯಲ್ಲಿ 11 'ಬದ್ಧತೆಗಳು' ಇವೆ
- ಕೇಂದ್ರ ಸರ್ಕಾರ ನೀಡುವ ₹6,000 ನೆರವಿನ ಜತೆಗೆ ರೈತರಿಗೆ ವಾರ್ಷಿಕ ₹3,000 ನೆರವು
- ಎಲ್ಲ ಗ್ರಾಮಗಳಿಗೆ ರಸ್ತೆ ಸಂಪರ್ಕಕ್ಕಾಗಿ ಶಕ್ತಿ ಯೋಜನೆ ಜಾರಿ
- ಮುಂದಿನ 10 ವರ್ಷಗಳಲ್ಲಿ ಸಾರಿಗೆ ಮತ್ತು ದೇವಾಲಯಗಳ ಸುತ್ತಲಿನ ಮೂಲಸೌಕರ್ಯ ಅಭಿವೃದ್ಧಿಗೆ ₹12,000 ಕೋಟಿ ಮೀಸಲು
- ಸೇಬಿನ ಮೇಲಿನ ಜಿಎಸ್‌ಟಿ ಕಡಿತ, ನವೋದ್ಯಮ ಅಭಿವೃದ್ಧಿಗೆ ₹900 ಕೋಟಿ ನಿಧಿ
- ಬಡವರಿಗೆ ವರ್ಷಕ್ಕೆ ಮೂರು ಅಡುಗೆ ಅನಿಲ ಸಿಲಿಂಡರ್ ಉಚಿತ
- ಬಡ ಕುಟುಂಬದ ಹೆಣ್ಣು ಮಕ್ಕಳ ಮದುವೆಗೆ ಆರ್ಥಿಕ ನೆರವು

ಬಿಜೆಪಿ ಪ್ರಣಾಳಿಕೆ ಸುಳ್ಳುಗಳ ಮೂಟೆ: ಕಾಂಗ್ರೆಸ್

ಐದು ವರ್ಷ ಹಿಂದೆ ನೀಡಿದ್ದ ಅವೇ ಭರವಸೆಗಳನ್ನು ಬಿಜೆಪಿ ಪುನರಾವರ್ತಿಸಿದೆ. ಹಾಗೆಯೇ ಕಾಂಗ್ರೆಸ್ ಪಕ್ಷವು ನೀಡಿರುವ ಕೆಲವು ಭರವಸೆಗಳನ್ನು ನಕಲು ಮಾಡಿದೆ ಎಂದು ಕಾಂಗ್ರೆಸ್ ಟೀಕಿಸಿದೆ.

2022ರ ಅವರ ಪ್ರಣಾಳಿಕೆಯು ಸುಳ್ಳುಗಳ ಮೂಟೆ. ಈ ಹಿಂದಿನ ಐದು ವರ್ಷಗಳಲ್ಲಿ ಅವುಗಳನ್ನು ಈಡೇರಿಸದವರು ಮುಂದೆ ಈಡೇರಿಸುತ್ತಾರೆಯೇ ಎಂದು ಹಿಮಾಚಲ ಪ್ರದೇಶಕ್ಕೆ ಕಾಂಗ್ರೆಸ್ ಉಸ್ತುವಾರಿ ರಾಜೀವ್ ಶುಕ್ಲಾ ಪ್ರಶ್ನಿಸಿದ್ದಾರೆ.

'ಹಳೆಯ ಪಿಂಚಣಿ ಯೋಜನೆ ಜಾರಿ ಮಾಡಿ ಎಂಬುದು ಬಹುದೊಡ್ಡ ಬೇಡಿಕೆಯಾಗಿದೆ. ಆದರೆ, ಅದರ ಬಗ್ಗೆ ಪ್ರಣಾಳಿಕೆಯಲ್ಲಿ ಏನನ್ನೂ ಹೇಳಿಲ್ಲ. ರಾಜಸ್ಥಾನ ಮತ್ತು ಛತ್ತೀಸಗಡದಲ್ಲಿ ಇರುವ ನಮ್ಮ ಸರ್ಕಾರಗಳು ಈ ಭರವಸೆಯನ್ನು ಈಡೇರಿಸಿವೆ' ಎಂದರು. ಏಕರೂಪ ನಾಗರಿಕ ಸಂಹಿತೆ ಜಾರಿ ಕುರಿತು ಮಾತನಾಡಿದ ಅವರು, ಉತ್ತರಾಖಂಡದಲ್ಲಿಯೂ ಅವರು ಇದೇ ಭರವಸೆ ಕೊಟ್ಟಿದ್ದರು. ಆದರೆ ಅಲ್ಲಿಯೂ ಈಡೇರಿಸಿಲ್ಲ. ಅವರು ಈಡೇರಿಸುವುದನ್ನು ತಡೆದವರು ಯಾರು ಎಂದು ಶುಕ್ಲಾ ಕೇಳಿದ್ದಾರೆ.

ಇದೇ 4ರಂದು ಬಿಜೆಪಿಯ ಪ್ರಣಾಳಿಕೆ ಬಿಡುಗಡೆ ಆಗಬೇಕಿತ್ತು. ಕಾಂಗ್ರೆಸ್ ಪ್ರಣಾಳಿಕೆ ಐದರಂದು ಬಿಡುಗಡೆ ಆಗುವ ಮಾಹಿತಿ ಸಿಕ್ಕ ಅವರು ತಮ್ಮ ಪ್ರಣಾಳಿಕೆ ಬಿಡುಗಡೆಯನ್ನು ಮುಂದೂಡಿದರು. ಕಾಂಗ್ರೆಸ್ ಪ್ರಣಾಳಿಕೆಯಿಂದ ಕೆಲವು ಅಂಶಗಳನ್ನು ಅವರು ನಕಲು ಮಾಡಿದ್ದಾರೆ ಎಂದು ಶುಕ್ಲಾ ಆಪಾದಿಸಿದ್ದಾರೆ.

ತವರು ರಾಜ್ಯದಲ್ಲಿ ಪ್ರಧಾನಿ ಮೋದಿ ಮೊದಲ ಚುನಾವಣಾ ಪ್ರಚಾರ ರ‍್ಯಾಲಿ

'ಗುಜರಾತನ್ನು ಅಪಮಾನಿಸುವವರಿಗೆ ಉಳಿಗಾಲವಿಲ್ಲ'

ನಾನಪೋಡ (ಗುಜರಾತ್) (ಪಿಟಿಐ): ದ್ವೇಷ ಹರಡುವವರು ಹಾಗೂ ಗುಜರಾತ್ ಅನ್ನು ಅಪಮಾನಿಸುವವರನ್ನು ಈ ಬಾರಿಯ ವಿಧಾನಸಭಾ ಚುನಾವಣೆಯು ರಾಜ್ಯದಿಂದಲೇ ಗುಡಿಸಿ ಹಾಕಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಹೇಳಿದ್ದಾರೆ. ಬಿಜೆಪಿ ಈ ಬಾರಿ ಮತ್ತೊಮ್ಮೆ ಗೆಲ್ಲುವ ಮೂಲಕ ದಾಖಲೆ ನಿರ್ಮಿಸಲಿದೆ ಎಂದೂ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ತವರು ರಾಜ್ಯದ ಮೊದಲ ಚುನಾವಣಾ ರ‍್ಯಾಲಿಯಲ್ಲಿ 'ಇದು ನಾನು ಮಾಡಿದ ಗುಜರಾತ್' ಎಂಬ ಹೊಸ ಘೋಷಣೆಯೊಂದಿಗೆ ಪ್ರಚಾರ ಆರಂಭಿಸಿದ ಅವರು, ತಮ್ಮ 25 ನಿಮಿಷಗಳ ಭಾಷಣದ ಉದ್ದಕ್ಕೂ ಈ ಘೋಷಣೆಯನ್ನು ಜನರಿಂದ ಹಲವು ಬಾರಿ ಹೇಳಿಸಿದರು.

ಗುಜರಾತ್‌ನಲ್ಲಿ ಈ ಬಾರಿ ಬಿಜೆಪಿ ದಾಖಲೆ ಅಂತರದಲ್ಲಿ ಗೆಲ್ಲಲಿದೆ ಎಂದು ನನಗೆ ಮಾಹಿತಿ ಬಂದಿದೆ. ನನ್ನ ಹಿಂದಿನ ದಾಖಲೆಗಳನ್ನು ಮುರಿಯಲು ಮತ್ತೆ ಬಂದಿದ್ದೇನೆ
ನರೇಂದ್ರ ಮೋದಿ, ಪ್ರಧಾನಿ

'ದ್ವೇಷ ಕಾರುವವರನ್ನು ಗುಜರಾತ್ ಎಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂಬುದು ಸಾಬೀತಾಗಿದೆ. ಹಿಂದಿನ ಹಲವು ಚುನಾವಣೆಗಳಲ್ಲಿ ಗುಜರಾತ್ ಅನ್ನು ಅಪಮಾನಿಸಲು ಯತ್ನಿಸಿದವರನ್ನು ರಾಜ್ಯದ ಜನರು ಹೊರಹಾಕಿದ್ದಾರೆ. ಈ ಚುನಾವಣೆಯಲ್ಲಿಯೂ ಅಂತಹ ಯತ್ನ ಮಾಡುವವರು ಅದೇ ಪರಿಣಾಮ ಎದುರಿಸಲಿದ್ದಾರೆ' ಎಂದು ಪ್ರಧಾನಿ ಎಚ್ಚರಿಸಿದರು.

ಬುಡಕಟ್ಟು ಜನರ ಪ್ರಾಬಲ್ಯದ ವಲಸಾಡ್ ಜಿಲ್ಲೆಯ ಕಪರಾಡಾ ತಾಲ್ಲೂಕಿನ ನಾನ ಪೋಡ ಎಂಬಲ್ಲಿ ಅವರು ಮತಯಾಚನೆ ಮಾಡಿದರು.

ಯಾರ ಹೆಸರನ್ನೂ ಉಲ್ಲೇಖಿಸದೆ ಮಾತನಾಡಿದ ಪ್ರಧಾನಿ, 'ಕಳೆದ ಎರಡು ದಶಕಗಳಿಂದ 'ಒಂದು ಗುಂಪು' ಗುಜರಾತ್‌ನ ಹೆಸರು ಕೆಡಿಸುವ ಯತ್ನದಲ್ಲಿ ತೊಡಗಿದೆ. ಆದರೆ ಜನರು ಅವರನ್ನು ನಂಬಿಲ್ಲ. ತಮ್ಮ ಸುಳ್ಳು ಪ್ರಚಾರವನ್ನು ಜನರು ಏಕೆ ನಂಬುತ್ತಿಲ್ಲ ಎಂಬ ವಿಚಾರ ಆ ಗುಂಪಿನವರಿಗೆ ಅಚ್ಚರಿಯಾಗಿಯೇ ಉಳಿದಿದೆ' ಎಂದರು. ಕಠಿಣ ಪರಿಶ್ರಮದಿಂದ ಗುಜರಾತ್‌ಅನ್ನು ಕಟ್ಟಿರುವ ಜನರು, ಆ 'ಒಂದು ಗುಂಪಿನವರಿಗೆ' ಷಡ್ಯಂತ್ರ ರೂಪಿಸಲು ಅವಕಾಶ ನೀಡುತ್ತಿಲ್ಲ ಎಂದು ಶ್ಲಾಘಿಸಿದರು.

'ರಾಜ್ಯದ ಬುಡಕಟ್ಟು ಪ್ರದೇಶದಲ್ಲಿ ಎರಡು ದಶಕಗಳ ಹಿಂದೆ ಒಂದೂ ವಿಜ್ಞಾನ ಕಾಲೇಜು ಇರಲಿಲ್ಲ. ಈಗ ಬುಡಕಟ್ಟು ಜನರಿಗೆ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಪ್ರವೇಶಾತಿ ಸಾಧ್ಯವಾಗಿದೆ. ದಕ್ಷಿಣ ಗುಜರಾತಿನ ಉಮರ್‌ಗಾಮ್‌ನಿಂದ ಉತ್ತರ ಭಾಗದ ಅಂಬಾಜಿವರೆಗೆ ಐದು ವೈದ್ಯಕೀಯ ಕಾಲೇಜುಗಳು ಸ್ಥಾಪನೆಯಾಗಿವೆ' ಎಂದು ಪ್ರಧಾನಿ ಹೇಳಿದರು. ಜನರು ದಿನದ 24 ಗಂಟೆಯೂ ವಿದ್ಯುತ್ ಪಡೆಯುತ್ತಿದ್ದಾರೆ ಎಂದರು.

2002ರಲ್ಲಿ ಮೋದಿ ಅವರ ನೇತೃತ್ವದಲ್ಲಿ ಬಿಜೆಪಿಯು ದಾಖಲೆಯ 127 ಸ್ಥಾನಗಳಲ್ಲಿ ಗೆಲುವು ಕಂಡಿತ್ತು. 2017ರಲ್ಲಿ 99 ಕ್ಷೇತ್ರಗಳಿಗೆ ಸೀಮಿತಗೊಂಡಿತ್ತು. ಈ ಅವಧಿಯಲ್ಲಿ ಕಾಂಗ್ರೆಸ್ ಗೆದ್ದ ಕ್ಷೇತ್ರಗಳು 16ರಿಂದ 77ಕ್ಕೆ ಜಿಗಿದಿದ್ದು, ತನ್ನ ಸಾಧನೆಯನ್ನು ಉತ್ತಮಪಡಿಸಿಕೊಂಡಿದೆ.

'ಇದು ನಾನು ಮಾಡಿದ ಗುಜರಾತ್'

'ಇದು ನಾನು ಮಾಡಿದ ಗುಜರಾತ್' ಎಂಬ ಘೋಷಣೆಯು ಪ್ರಧಾನಿ ಸಮಾವೇಶದಲ್ಲಿ ಅನುರಣಿಸಿತು. 'ಆದಿವಾಸಿಯಾಗಿರಲಿ, ಮೀನುಗಾರರಾಗಿರಲೀ, ಗ್ರಾಮೀಣ ಭಾಗ ಅಥವಾ ನಗರ ಭಾಗದವರೇ ಇರಲಿ, ಎಲ್ಲ ಗುಜರಾತಿಯೂ ಇಂದು ಸಂಪೂರ್ಣ ವಿಶ್ವಾಸದಲ್ಲಿದ್ದಾರೆ. ಹೀಗಾಗಿಯೇ ಪ್ರತಿಯೊಬ್ಬ ಗುಜರಾತಿಯೂ 'ಇದು ನಾನು ಮಾಡಿದ ಗುಜರಾತ್' ಎಂದು ಹೇಳುತ್ತಿದ್ದಾರೆ. ಜನರು ತಮ್ಮ ಕಠಿಣ ಪರಿಶ್ರಮದಿಂದ ಗುಜರಾತ್ ರಾಜ್ಯವನ್ನು ಕಟ್ಟಿದ್ದಾರೆ' ಎಂದು ಪ್ರಧಾನಿ ಪ್ರಶಂಸಿಸಿದರು.

ಡಬಲ್ ಎಂಜಿನ್ ವಂಚನೆಯಿಂದ ರಕ್ಷಣೆ: ರಾಹುಲ್

ನವದೆಹಲಿ (ಪಿಟಿಐ): ಗುಜರಾತ್‌ನ ಜನರಿಗೆ ನೀಡಲಾಗಿರುವ ಎಲ್ಲ ಭರವಸೆಗಳನ್ನು ತಮ್ಮ ಪಕ್ಷವು ಈಡೇರಿಸಲಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ. ಬಿಜೆಪಿಯ 'ಡಬಲ್ ಎಂಜಿನ್ ವಂಚನೆ'ಯಿಂದ ಗುಜರಾತ್‌ನ ಜನರನ್ನು ಕಾಂಗ್ರೆಸ್ ರಕ್ಷಿಸಲಿದೆ ಎಂದಿದ್ದಾರೆ. ರಾಜ್ಯದಲ್ಲಿ ಬದಲಾವಣೆಯ ಹಬ್ಬ ಆಚರಿಸಲಾಗುವುದು ಎಂದೂ ಹೇಳಿದ್ದಾರೆ.

ಡಿ.1 ಮತ್ತು ಡಿ. 5ರಂದು ಇಲ್ಲಿ ಎರಡು ಹಂತಗಳಲ್ಲಿ ಮತದಾನ ನಡೆಯಲಿದೆ. ಡಿ. 8ರಂದು ಮತ ಎಣಿಕೆ ನಡೆಯಲಿದೆ.

ಎಎಪಿ ಕೂಡ ವ್ಯಾಪಕ ಪ್ರಚಾರ ನಡೆಸುತ್ತಿರುವುದರಿಂದ ಬಿಜೆಪಿ–ಕಾಂಗ್ರೆಸ್–ಎಎಪಿ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡುವ ಸಾಧ್ಯತೆ ಇದೆ.

ನುಡಿ–ಕಿಡಿ



ಅವರು (ಕಾಂಗ್ರೆಸ್) ಕೊಡುವ ಭರವಸೆಗಳನ್ನು ಯಾರಾದರೂ ನಂಬುತ್ತಾರೆಯೇ? ಅವರು 10 ವರ್ಷ ಆಳ್ವಿಕೆ ನಡೆಸಿದ್ದಾರೆ. ಆಗ ದೊಡ್ಡ ಹಗರಣಗಳನ್ನು ಮಾತ್ರ ಮಾಡಿದ್ದಾರೆ. ಈಗ, ಹಿಮಾಚಲ ಪ್ರದೇಶದ ಮುಗ್ಧ ಜನರಿಗೆ ಮೋಸ ಮಾಡುವುದಕ್ಕಾಗಿ ಭರವಸೆಗಳನ್ನು ನೀಡುತ್ತಿದ್ದಾರೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

ಕಾಂಗ್ರೆಸ್ ಹಿಮಾಚಲ ಪ್ರದೇಶದಲ್ಲಿ ಅನುಕೂಲಕರ ಸ್ಥಿತಿಯಲ್ಲಿದೆ. ಅದು ನಮ್ಮ ಬಯಕೆ ಕೂಡ. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಗೆಲುವು ದೊರೆಯಲಿದೆ
ಕೆ.ಸಿ. ತ್ಯಾಗಿ, ಜೆಡಿಯು ಮುಖಂಡ

ಡಬಲ್ ಎಂಜಿನ್‌ಗೆ ತುಕ್ಕು ಹಿಡಿದಿದೆ. ಅದು ಹಳೆಯದಾಗಿದೆ ಮತ್ತು ಹಾಳಾಗಿದೆ. ನೀವು ಡಬಲ್ ಎಂಜಿನ್ ತಂದರೆ ಮೊರ್ಬಿ ಸೇತುವೆ ಮತ್ತೆ ಕುಸಿಯುತ್ತದೆ. ನೀವು ಹೊಸ ಎಂಜಿನ್ ತಂದರೆ ಮೊರ್ಬಿ ಸೇತುವೆಯನ್ನು ಗಟ್ಟಿಯಾಗಿ ಕಟ್ಟಬಹುದು
ಅರವಿಂದ ಕೇಜ್ರಿವಾಲ್, ಎಎಪಿ ಮುಖ್ಯಸ್ಥ

ಬಿಜೆಪಿ ಮುನ್ನಡೆ, ಕಾಂಗ್ರೆಸ್‌ಗೆ ಹಿನ್ನಡೆ

ಒಂದನೇ ಪುಟದಿಂದ...

ಉಪಚುನಾವಣೆಗಳು ನಡೆದಂತೆ ಕಾಂಗ್ರೆಸ್ ಸ್ಥಾನಗಳನ್ನು ಕಳೆದುಕೊಳ್ಳುತ್ತಲೇ ಹೋಗುತ್ತಿದೆ. ಬಿಜೆಪಿಯ ಸ್ಥಿತಿ ಉತ್ತಮಗೊಳ್ಳುತ್ತಿದೆ. ಹೀಗಾಗಿ, ಮುಖ್ಯ ವಿರೋಧ ಪಕ್ಷವಾಗಿ ಕಾಂಗ್ರೆಸ್ ಉಳಿಯುವುದು ಕಷ್ಟ ಎನ್ನುವಂತಾಗಿದೆ.

ಹರಿಯಾಣದ ಆದಂಪುರ ಕ್ಷೇತ್ರದಲ್ಲಿ ಬಿಜೆಪಿಯ ಭವ್ಯ ಬಿಷ್ಣೋಯಿ ಅವರು ಗೆಲುವು ಕಂಡಿದ್ದಾರೆ. ಬಿಷ್ಣೋಯಿ ಅವರು ಹರಿಯಾಣದ ಮಾಜಿ ಮುಖ್ಯಮಂತ್ರಿ ಭಜನ್‌ಲಾಲ್ ಅವರ ಮೊಮ್ಮಗ. ಕಾಂಗ್ರೆಸ್ ನಾಯಕ ಭೂಪೇಂದ್ರ ಹೂಡ ಅವರಿಗೆ ಇದೊಂದು ಹಿನ್ನಡೆ ಎನ್ನಲಾಗಿದೆ. ಕಾಂಗ್ರೆಸ್‌ನಲ್ಲಿದ್ದ ಬಿಷ್ಣೋಯಿ ಅವರು ಪಕ್ಷ ಮತ್ತು ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಬಿಜೆಪಿ ಸೇರಿದ್ದರು.

ಎನ್‌ಡಿಎಯಿಂದ ಜೆಡಿಯು ಹೊರಬಂದ ಬಳಿಕ ಬಿಹಾರದಲ್ಲಿ ನಡೆದ ಮೊದಲ ಚುನಾವಣೆಯಲ್ಲಿ ಮೋಕಾಮಾದಲ್ಲಿ ಆರ್‌ಜೆಡಿಗೆ ಗೆಲುವು ಸಿಕ್ಕಿದೆ. ಈ ಹಿಂದೆಯೂ ಈ ಕ್ಷೇತ್ರವನ್ನು ಆರ್‌ಜೆಡಿ ಪ್ರತಿನಿಧಿಸಿತ್ತು. ಶಸ್ತ್ರಾಸ್ತ್ರ ಕಾಯ್ದೆಯಡಿ ತಪ್ಪಿತಸ್ಥರಾದ ಅನಂತ್ ಸಿಂಗ್ ಅವರು ಅನರ್ಹರಾದ ಕಾರಣದಿಂದ ಇಲ್ಲಿ ಉಪಚುನಾವಣೆ ನಡೆದಿದೆ. ಅನಂತ್ ಅವರ ಹೆಂಡತಿ ನೀಲಂ ಸಿಂಗ್ ಅವರು ಇಲ್ಲಿ ಗೆದ್ದಿದ್ದಾರೆ. ಆದರೆ, ಅವರ ಗೆಲುವಿನ ಅಂತರ ಕಳೆದ ಬಾರಿಗಿಂತ ಬಹಳ ಕಡಿಮೆ ಇದೆ. ಕಳೆದ ಬಾರಿ 35,757 ಮತಗಳ ಅಂತರದಿಂದ ಆರ್‌ಜೆಡಿ ಗೆದ್ದಿತ್ತು. ಈ ಬಾರಿ ಅದು 16,741ಕ್ಕೆ ಇಳಿದಿದೆ.

ಬಿಹಾರದ ಗೋಪಾಲ್‌ಗಂಜ್ ಕ್ಷೇತ್ರದಲ್ಲಿ ಬಿಜೆಪಿಗೆ ಜಯ ಸಿಕ್ಕಿದೆ. ಬಿಜೆಪಿಯ ಕುಸುಮ್ ದೇವಿ ಎದುರು ಆರ್‌ಜೆಡಿಯ ಮೋಹನ್ ಗುಪ್ತಾ ಅವರು 1,794 ಮತಗಳ ಅಂತರದಿಂದ ಸೋತಿದ್ದಾರೆ. ಬಿಎಸ್‌ಪಿ ಮತ್ತು ಎಐಎಂಐಎಂ ಅಭ್ಯರ್ಥಿಗಳು ಕಣದಲ್ಲಿ ಇದ್ದರು. ಈ ಇಬ್ಬರಿಗೆ ಒಟ್ಟು ಸುಮಾರು 20 ಸಾವಿರ ಮತಗಳು ಸಿಕ್ಕಿವೆ.

ಉತ್ತರ ಪ್ರದೇಶದ ಗೋಲ ಗೋರಖನಾಥ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿದೆ. ಬಿಜೆಪಿಯ ಅನಂತ್ ಗಿರಿ ಅವರ ನಿಧನದಿಂದ ತೆರವಾಗಿದ್ದ ಕ್ಷೇತ್ರದಲ್ಲಿ ಅವರ ಮಗ ಅಮನ್ ಗಿರಿ ಗೆದ್ದಿದ್ದಾರೆ. ಒಡಿಶಾದ ಧಾಮ್‌ನಗರ ಕ್ಷೇತ್ರವನ್ನು ಬಿಜೆಪಿ ಉಳಿಸಿಕೊಂಡಿದೆ. ಬಿಜೆಪಿಯ ಸೂರ್ಯವಂಶಿ ಸೂರಜ್ ಅವರು 9,881 ಅಂತರದಲ್ಲಿ ಗೆದ್ದಿದ್ದಾರೆ.

ನಗದು ವೆಚ್ಚ ಮಿತಿ ₹2,000ಕ್ಕೆ ಇಳಿಕೆ?

ನವದೆಹಲಿ (ಪಿಟಿಐ): ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಯು ಪ್ರಚಾರಕ್ಕಾಗಿ ಮಾಡುವ ನಗದು ವೆಚ್ಚವನ್ನು ಈಗಿರುವ ₹10,000ದಿಂದ ₹2,000ಕ್ಕೆ ಇಳಿಸಲು ಚುನಾವಣಾ ಆಯೋಗ ಮುಂದಾಗಿದೆ. ಚುನಾವಣಾ ಪ್ರಚಾರದಲ್ಲಿ ಅಭ್ಯರ್ಥಿಯ ಪ್ರಚಾರ ವೆಚ್ಚದಲ್ಲಿ ಹೆಚ್ಚು ಪಾರದರ್ಶಕತೆ ಕಾಯ್ದುಕೊಳ್ಳುವುದು ಇದರ ಉದ್ದೇಶ ಎಂದು ಮೂಲಗಳು ತಿಳಿಸಿವೆ.

ಚುನಾವಣಾ ನಿಯಮಗಳಲ್ಲಿ ತಿದ್ದುಪಡಿ ತರುವ ಸಂಬಂಧ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಆಯೋಗ, ಅಭ್ಯರ್ಥಿಯು ಎರಡು ಸಾವಿರ ರೂಪಾಯಿಗಿಂತ ಹೆಚ್ಚಿನ ಮೊತ್ತವನ್ನು ಚೆಕ್, ಆನ್‌ಲೈನ್ ಅಥವಾ ಡಿಜಿಟಲ್ ರೂಪದಲ್ಲಿ ಪಾವತಿ ಮಾಡಬೇಕು ಎಂದು ಶಿಫಾರಸು ಮಾಡಿದೆ. ಚುನಾವಣೆ ವೆಚ್ಚಗಳನ್ನು ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಬೇಕಿದೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ಸಾಮಾಜಿಕ ಕಳಕಳಿ...

ನನ್ನಂಥ ಓದುಗರಿಗೆ ತಿಂಡಿಯ ಮೇಲೆ ಆಸಕ್ತಿ ಇದೆಯೋ ಗೊತ್ತಿಲ್ಲ. ಆದರೆ ಬೆಳ್ಳಂಬೆಳಗ್ಗೆ ಬಿಸಿ ಚಹದ ಜೊತೆ ಬಿಸಿ, ಅರ್ಥಪೂರ್ಣ ಸುದ್ದಿಗಳನ್ನು ಬಿತ್ತರಿಸುವ ಪ್ರಜಾವಾಣಿ ಬೇಕೇಬೇಕು. ಬೌದ್ಧಿಕತೆಯನ್ನು ಉಣಬಡಿಸುವ ಪತ್ರಿಕೆ ಇದು.

ವಿಶ್ವಾಸಾರ್ಹ ಹಾಗೂ ವಸ್ತುನಿಷ್ಠ ಸುದ್ದಿಯನ್ನು ನೀಡುವ ಜೊತೆಗೆ ಸಾಮಾಜಿಕ ಕಳಕಳಿ ಇರುವ ಪತ್ರಿಕೆ ಪ್ರಜಾವಾಣಿ ಎಂದರೆ ಅತಿಶಯೋಕ್ತಿ ಆಗಲಾರದು. ಮುಂದೆಯೂ ಹೀಗೆ ಉತ್ತಮ ಸುದ್ದಿ ಹಾಗೂ ಲೇಖನಗಳು ಪ್ರಕಟವಾಗಲಿ ಎಂದು ಆಶಿಸುತ್ತೇನೆ.

ಡಾ.ಎನ್. ಸತೀಶ್ ಗೌಡ, ಸಹ-ಪ್ರಾಧ್ಯಾಪಕ, ವಿ.ವಿ. ಕಾನೂನು ಕಾಲೇಜು

ಅವಿನಾಭಾವ ಸಂಬಂಧ

ಪ್ರಜಾವಾಣಿ ಪತ್ರಿಕೆ ಕೈಗೆ ಬರುವವರೆಗೆ ಕಾತರ. ಬಂದ ನಂತರ ಓದುವ ಆತುರ. ತಂದೆಯವರಿದ್ದಾಗ ಅವರು ಇಂಚಿಂಚು ಬಿಡದೆ ಓದಿ ಪತ್ರಿಕೆ ನಮ್ಮ ಕೈಗೆ ಬರುವವರೆಗೂ ಚಡಪಡಿಕೆ...ಅಪ್ಪಿತಪ್ಪಿ ತಾಯಿಯವರ ಕೈ ಸೇರಿದರೆ ಅವರು ಕಣ್ಣಿಗೆ ಚಶ್ಮವನ್ನೇರಿಸಿ ಓದಿ ಮುಗಿಸಿದ ನಂತರವೇ ನಮ್ಮ ಸರದಿ...ಇಷ್ಟು ಹೇಳಲು ಕಾರಣ, ನನಗೆ ಬುದ್ಧಿ ಬಂದಾಗಿಂದಲೂ ಈ ಪತ್ರಿಕೆ ಕುಟುಂಬದ ಜೊತೆ ಅವಿನಾಭಾವ ಸಂಬಂಧ ಹೊಂದಿದೆ.

ಬಳಸುವ ಭಾಷಾಶೈಲಿ, ವೈವಿಧ್ಯಮಯ ಪುರವಣಿಗಳು, ಭಾನುವಾರದ ವಿಶೇಷಗಳು ಇದರ ವೈಶಿಷ್ಟ್ಯ. ಪ್ರಜಾವಾಣಿ ಅಂದಿಗೂ ಇಂದಿಗೂ ನಮ್ಮೆಲ್ಲರ ಅಚ್ಚುಮೆಚ್ಚಿನ ಪತ್ರಿಕೆ.

ಸುಲೋಚನ ಜೆ ರಾವ್, ಶಿಕ್ಷಕಿ, ಮಲ್ಲೇಶ್ವರಂ, ಬೆಂಗಳೂರು

'ಓದುವ ಹವ್ಯಾಸ ಬೆಳೆಸಿದ್ದೇ ಪ್ರಜಾವಾಣಿ'

ನನಗೂ ಪ್ರಜಾವಾಣಿಗೂ ಸುಮಾರು 58 ವರ್ಷಗಳ ನಂಟು. 5ನೇ ತರಗತಿಯಿಂದ ಪ್ರಜಾವಾಣಿ ಓದುತ್ತಿದ್ದೇನೆ. ಓದುವ ಹವ್ಯಾಸ ಬೆಳೆಸಿದ್ದು ಪ್ರಜಾವಾಣಿ. ಈ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಕಾಮಿಕ್ಸ್, ಫ್ಯಾಂಟಮ್, ಮೊದ್ದುಮಣಿ, ಕಥೆಗಳು ಮುಂತಾದ ವಿಷಯಗಳನ್ನು ಹಲವಾರು ವರ್ಷಗಳಿಂದ ನಿರಂತರವಾಗಿ ಸಂಗ್ರಹಿಸಿಟ್ಟುಕೊಂಡಿದ್ದೆ. ಸಾಂಸ್ಕೃತಿಕ, ಕ್ರೀಡೆ ಸೇರಿದಂತೆ ಸಮಗ್ರವಾಗಿ ಎಲ್ಲ ಕ್ಷೇತ್ರದ ವಿಷಯಗಳನ್ನು ಪ್ರಜಾವಾಣಿ ಒಳಗೊಂಡಿರುವುದರಿಂದ ಜ್ಞಾನ ವೃದ್ಧಿಸುವ ಪತ್ರಿಕೆ ಇದಾಗಿದೆ. ವಾಚಕರವಾಣಿ, ಕುಂದುಕೊರತೆಗೂ ನಾನು ಬರೆಯುತ್ತಿದ್ದೆ. 1982ರಲ್ಲಿ ದೀಪಾವಳಿ ಸಂಚಿಕೆಯಲ್ಲಿ ನನ್ನ ಹಾಸ್ಯ ಲೇಖನ ಪ್ರಕಟವಾಗಿತ್ತು. ಪ್ರಜಾವಾಣಿ ನೀಡಿದ ಚೆಕ್‌ನಿಂದ ನಾನು ಬ್ಯಾಂಕ್ ಖಾತೆ ತೆರೆಯುವಂತಾಯಿತು. ಅಲ್ಲಿಯವರೆಗೂ ನನ್ನ ಖಾತೆಯೇ ಇರಲಿಲ್ಲ.

ಈಗ ಪ್ರತಿ ಭಾನುವಾರ ಪ್ರಕಟವಾಗುವ 'ಮಜಕೂರ' ಅನ್ನು ಮೊಮ್ಮಕ್ಕಳಿಗೂ ಓದಿಸುತ್ತಿದ್ದೇನೆ. ಇದರಿಂದ, ಅವರು ಕನ್ನಡ ಕಲಿಯುವಂತಾಗಿದೆ. 'ಮಜಕೂರ' ಪ್ರಕಟಿಸಲು ಆರಂಭಿಸಿದ ದಿನದಿಂದಲೂ ಸಂಗ್ರಹಿಸುತ್ತಿದ್ದೇನೆ.

ಬಿ. ನಾಗರತ್ನ, ನಿವೃತ್ತ ಶೀಘ್ರಲಿಪಿಗಾರರು, ಅಡ್ವೋಕೇಟ್ ಜನರಲ್ ಕಚೇರಿ, ಹೈಕೋರ್ಟ್

ಕಾವೇರಿ ಗಲಾಟೆಯಲ್ಲಿ ಕಾಪಾಡಿದ ಪತ್ರಿಕೆ

ಮೂವತ್ತೈದು ವರ್ಷಗಳಿಂದ ದಿನವೂ 'ಪ್ರಜಾವಾಣಿ' ಕೊಂಡು ಓದುತ್ತಿರುವೆ. ಕನ್ನಡ ಬರೆಯಲು, ಮಾತನಾಡಲು ಇದು ಬಹಳ ಸಹಕಾರಿ. 1991ರ ಜುಲೈನಲ್ಲಿ ಕಾವೇರಿ ಗಲಭೆ ನಡೆದ ಸಂದರ್ಭದಲ್ಲಿ ಕೆಲ ದುರುಳರು ನಮ್ಮ ಮೇಲೆ ಹಲ್ಲೆ ಮಾಡಲು ಮನೆಗೆ ಬಂದರು. ಆಗ ನಮ್ಮ ತಾಯಿ, 'ನಾವು ಕನ್ನಡಿಗರು. ದಿನವೂ ಪತ್ರಿಕೆಯನ್ನು ಕೊಂಡು ಓದುತ್ತೇವೆ' ಎಂದು ಹೇಳಿ 'ಪ್ರಜಾವಾಣಿ' ತೋರಿಸಿದರು. ಆಗ ಗಲಭೆ ಮಾಡಲು ಬಂದವರು ವಾಪಸ್ ಹೋದರು.

ನನ್ನ ನೆಚ್ಚಿನ ಈ ಪತ್ರಿಕೆಯಲ್ಲಿ ಸಂಪಾದಕೀಯ ಬಹಳ ಚೆನ್ನಾಗಿ ಬರುತ್ತಿದೆ.

ಆರ್. ಶಂಕರ್ ಮಣಿ, ಬೆಂಗಳೂರು

ನೆಚ್ಚಿನ ಪತ್ರಿಕೆ...

ಪ್ರಜಾವಾಣಿಯು 75ನೇ ವರ್ಷ ಆಚರಿಸುತ್ತಿರುವುದು ಸಂತಸದ ವಿಷಯ. ತಂತ್ರಜ್ಞಾನ ಎಷ್ಟೇ ಬೆಳೆದರೂ, ನಮ್ಮ ದೈನಂದಿನ ಬದುಕಿನಲ್ಲಿ ಅಳವಡಿಸಿಕೊಂಡರೂ, ಬೆಳಗ್ಗೆ ಎದ್ದು ದಿನಪತ್ರಿಕೆಯನ್ನು ಓದದಿದ್ದರೆ ಆ ದಿನವೇ ಅಧೂರ. ಎಲ್ಲರ ಅಭಿರುಚಿಯನ್ನು ಒಳಗೊಂಡಿರುವ, ಎಲ್ಲರನ್ನು ಆಕರ್ಷಿಸುವ ನನ್ನ ನೆಚ್ಚಿನ ವಾಣಿ - ಪ್ರಜಾವಾಣಿಗೆ ತುಂಬು ಹೃದಯದಿಂದ ಅಭಿನಂದನೆಗಳು.

ಅರಕೆರೆ ಹುಚ್ಚಪ್ಪ, ಲಗ್ಗೆರೆ, ಬೆಂಗಳೂರು

'ಕೆಲಸ ಸಿಗಲು ಪ್ರಜಾವಾಣಿ ಕಾರಣ'

ಕಳೆದ 60 ವರ್ಷಗಳಿಂದ ನಾನು 'ಪ್ರಜಾವಾಣಿ'ಯ ಓದುಗ ಅಭಿಮಾನಿ. ಒಂದೇ ಒಂದು ದಿನ ಈ ಪತ್ರಿಕೆಯನ್ನು ಓದದಿದ್ದರೆ ಆ ದಿನ ಏನನ್ನೋ ಕಳೆದುಕೊಂಡಂತಹ ದುಗುಡ, ಸಂಕಟದ ಅನುಭವವಾಗುತ್ತದೆ. ನನಗೆ ಮೈಕೊ (ಇಂದಿನ ಬಾಷ್) ಕಂಪನಿಯಲ್ಲಿ ಕೆಲಸ ಸಿಗಲು ಒಂದು ರೀತಿಯಲ್ಲಿ ಪ್ರಜಾವಾಣಿಯೇ ಕಾರಣ.

ಉದ್ಯೋಗಾವಕಾಶದ ಬಗ್ಗೆ ಮೈಕೊ ಕಂಪನಿಯು 1969ರಲ್ಲಿ ಜಾಹೀರಾತು ಪ್ರಕಟಿಸಿತ್ತು. ಆ ಜಾಹೀರಾತು ಆಕಸ್ಮಿಕವಾಗಿ ನನ್ನ ಕಣ್ಣಿಗೆ ಬಿತ್ತು. ತಡಮಾಡದೆ ಕೆಲಸಕ್ಕೆ ಅರ್ಜಿ ಹಾಕಿದೆ. ಬೆಂಗಳೂರಿನ ಆಡುಗೋಡಿ ಬಳಿ ಇದ್ದ ಕಂಪನಿಯಲ್ಲಿ ಕೆಲಸವೂ ಸಿಕ್ಕಿತು. ಅದರಿಂದಾಗಿ ನಾನು ಉತ್ತಮ ಜೀವನ ಕಟ್ಟಿಕೊಳ್ಳಲು, ಮಗನಿಗೆ ವಿದ್ಯಾಭ್ಯಾಸ ಕೊಡಿಸಲು ಸಾಧ್ಯವಾಯಿತು. ಮಗ ಸಿ. ವೆಂಕಟೇಶ್ ಸದ್ಯ ದೆಹಲಿಯಲ್ಲಿ ಲೆಫ್ಟಿನೆಂಟ್ ಕರ್ನಲ್ ಆಗಿ ದೇಶಕ್ಕೆ ಸೇವೆ ಸಲ್ಲಿಸುತ್ತಿದ್ದಾನೆ.

ಎಂ. ಚನ್ನಪ್ಪ, ಸುಬ್ರಹ್ಮಣ್ಯನಗರ, ಬೆಂಗಳೂರು

ವಿವಿಗಳಲ್ಲಿ ಇನ್ನು ಶೈಕ್ಷಣಿಕ ಬರಹ ಕೇಂದ್ರ

ಸಂಶೋಧನೆಗಳ ಪ್ರಕಟಣೆ, ಬಾಹ್ಯ ಅನುದಾನ ಪಡೆಯಲು ಅನುವು

• ಕೆ.ನರಸಿಂಹಮೂರ್ತಿ

ಮೈಸೂರು: ಹಸಿರುಮಯ ಆಪ್ತ ವಾತಾವರಣದಲ್ಲಿ ಸಹಪಾಠಿಗಳು ಹಾಗೂ ಮಾರ್ಗದರ್ಶಕರೊಂದಿಗೆ ಕಾಫಿ ಕುಡಿಯುತ್ತಾ, ಪರಸ್ಪರ ಚರ್ಚಿಸುತ್ತಾ, ಪದಕೋಶ, ಪರಾಮರ್ಶನ ಗ್ರಂಥಗಳನ್ನು ಪಕ್ಕದಲ್ಲಿಟ್ಟುಕೊಂಡು ಸಂಶೋಧನೆ ಬರಹಗಳನ್ನು ಬರೆಯುವಂತಿದ್ದರೆ ಹೇಗೆ? ಅಂಥ ಬರಹಗಳಿಗೆ ಅನುದಾನವೂ ಸಿಗುವಂತಿದ್ದರೆ?

–ಇದೇನೂ ಕಲ್ಪನೆಯಲ್ಲ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳು ಹಾಗೂ ಕಾಲೇಜುಗಳಲ್ಲಿ ರೂಪುಗೊಳ್ಳಲಿರುವ ಶೈಕ್ಷಣಿಕ ಬರಹ ಕೇಂದ್ರಗಳ (ಅಕಾಡೆಮಿಕ್ ರೈಟಿಂಗ್ ಸೆಂಟರ್) ಅಸಲಿ ಚಿತ್ರಣ. ಎಲ್ಲರಿಗೂ ಅಗತ್ಯಕ್ಕೆ ತಕ್ಕ ಬರಹದ ಕೌಶಲ ಕಲಿಸುವುದೇ ಪ್ರಧಾನ ಆಶಯ.

ವಿದ್ಯಾರ್ಥಿಗಳು ಮತ್ತು ಬೋಧಕರು ತಮ್ಮ ಸಂಶೋಧನೆಗಳನ್ನು ಪ್ರಕಟಿಸಲು ಹಾಗೂ ಬಾಹ್ಯ ಅನುದಾನ ಪಡೆಯಲು ಇಂಥ ಕೇಂದ್ರಗಳನ್ನು ಸ್ಥಾಪಿಸಿ ತರಬೇತಿ ನೀಡಲು ಉನ್ನತ ಶಿಕ್ಷಣ ಇಲಾಖೆ ನಿರ್ಧರಿಸಿದೆ.

ಈ ಸಂಬಂಧ, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಎಲ್ಲ ಸರ್ಕಾರಿ ಮತ್ತು ಖಾಸಗಿ ವಿಶ್ವವಿದ್ಯಾಲಯಗಳಿಗೆ ಅ.1ರಂದು ಇ–ಮೇಲ್ ಕಳಿಸಿದ್ದು, ಕೇಂದ್ರದ ರೂಪುರೇಷೆಯ ಮಾರ್ಗಸೂಚಿಯನ್ನೂ ನೀಡಿದೆ.

ಸಾಮಾನ್ಯ, ಸಂಶೋಧನಾ ಹಾಗೂ ಪದವೀಧರರ ಬರಹಗಳು, ಅನುದಾನ, ಉದ್ಯೋಗಕ್ಕಾಗಿ ಸಿದ್ಧಪಡಿಸಬೇಕಾದ ಬರಹಗಳು, ಬೋಧಕರ ಬರಹಗಳನ್ನು ಆದ್ಯತೆ ಮೇರೆಗೆ ಸಿದ್ಧಪಡಿಸುವ ಅಗತ್ಯವನ್ನು ಉಲ್ಲೇಖಿಸಲಾಗಿದೆ. ನಕಲು ತಪ್ಪಿಸುವಂತೆಯೂ ತಿಳಿಸಲಾಗಿದೆ.

'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಶೈಕ್ಷಣಿಕ ಯಶಸ್ಸಿಗೆ ಉತ್ತಮ ಬರಹ ಕೇಂದ್ರಗಳಿರಬೇಕೆಂಬುದು ಜಾಗತಿಕವಾಗಿ ಒಪ್ಪಿರುವ ವಿಚಾರ. ಇಂಥ ಕೇಂದ್ರಗಳು ಬರಹಗಾರರೊಂದಿಗೆ ಕಾರ್ಯನಿರ್ವಹಿಸುವುದಷ್ಟೇ ಅಲ್ಲದೆ, ವಿದ್ಯಾರ್ಥಿಗಳಿಗೆ ಬರಹಕ್ಕೆ ಸಂಬಂಧಿಸಿದ ಕೋರ್ಸ್ ಹಾಗೂ ವಿಶೇಷ ಕಾರ್ಯಕ್ರಮ ರೂಪಿಸಿ ಮಾರ್ಗದರ್ಶನವನ್ನೂ ನೀಡುತ್ತವೆ. ಓದುವ, ಬರೆಯುವ ಮತ್ತು ಕೇಳಿಸಿಕೊಳ್ಳುವ ಕೌಶಲವನ್ನೂ ಕಲಿಸುತ್ತವೆ' ಎಂದು ಸ್ಪಷ್ಟಪಡಿಸಲಾಗಿದೆ.

'ಗುರಿ, ಕಾರ್ಯಸೂಚಿ ಸ್ಪಷ್ಟವಾಗಿರಬೇಕು. ವಾರ್ಷಿಕ ಮೌಲ್ಯಮಾಪನ ನಡೆಯಬೇಕು. ತರಗತಿಗಳ ಬಳಿಕ ನಿರ್ದಿಷ್ಟ ಅವಧಿಯಲ್ಲಿ ಕಾರ್ಯನಿರ್ವಹಿಸಬೇಕು. ಆಯಾ ವಿ.ವಿ–ಕಾಲೇಜುಗಳೇ ಅನುದಾನ ನೀಡಬೇಕು. ಆಸಕ್ತಿ ಇರುವವರಿಗೇ ಕೇಂದ್ರದ ಹೊಣೆಗಾರಿಕೆ ನೀಡಬೇಕು' ಎಂದೂ ಸೂಚಿಸಲಾಗಿದೆ.

'ತರಬೇತುದಾರರಿಗೆ ಅಂತರರಾಷ್ಟ್ರೀಯ ಕೇಂದ್ರದಿಂದ ತರಬೇತಿ ಕೊಡಿಸಬೇಕು. ಅಂತಹ ಸಂಸ್ಥೆಯೊಂದಿಗೆ ಸಹಭಾಗಿತ್ವದ ಜೊತೆ ಸದಸ್ಯತ್ವವನ್ನೂ ಪಡೆಯಬೇಕು. ಕೇಂದ್ರದಲ್ಲಿ ಆಪ್ತ ವಾತಾವರಣ ಇರಬೇಕು' ಎಂದು ನಿರ್ದೇಶನ ನೀಡಲಾಗಿದೆ.

ಮುಖ್ಯಾಂಶಗಳು

- ಉನ್ನತ ಶಿಕ್ಷಣ ಇಲಾಖೆಯ ನಿರ್ಧಾರ
- ಎಲ್ಲ ಸರ್ಕಾರಿ, ಖಾಸಗಿ ವಿವಿಗಳಿಗೆ ಪತ್ರ

ಅಧಿಕಾರಕ್ಕೆ ಬಂದರೆ ಎಲ್ಲ ಹುದ್ದೆಗಳೂ ಭರ್ತಿ: ಖರ್ಗೆ

ಒಂದನೇ ಪುಟದಿಂದ...

'ಸಣ್ಣಪುಟ್ಟ ವ್ಯತ್ಯಾಸಗಳನ್ನು ಬದಿಗಿಟ್ಟು ಎಲ್ಲ ನಾಯಕರು ಒಂದಾಗಿ ಕೆಲಸ ಮಾಡಬೇಕು. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಇನ್ನು ರಾಜ್ಯದಲ್ಲೇ ಹೆಚ್ಚು ಕಾಲ ಇರುತ್ತಾರೆ. ಪಕ್ಷದಲ್ಲಿ ಎಲ್ಲೆಲ್ಲಿ ಬಿರುಕು ಇರುತ್ತೋ ಅದನ್ನು ಮುಚ್ಚಬೇಕು. ಮುನಿಸಿಕೊಂಡಿರುವ ಮತ್ತು ಪಕ್ಷದಿಂದ ದೂರ ಸರಿದಿರುವವರನ್ನು ಜೊತೆಯಲ್ಲಿ ಕರೆದುಕೊಳ್ಳಬೇಕು. ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು. ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಇದೆ. ನಮ್ಮನ್ನು ಬೇರ್ಪಡಿಸಲು ಯಾರಿಂದಲೂ ಸಾಧ್ಯವಿಲ್ಲ. ಒಗ್ಗಟ್ಟಿನಿಂದ ಹೋದರೆ ಗೆಲುವು ಸಾಧ್ಯವಾಗಲಿದೆ' ಎಂದು ಪಕ್ಷದ ನಾಯಕರಿಗೆ ಖರ್ಗೆ ಕಿವಿಮಾತು ಹೇಳಿದರು.

ತಳಮಟ್ಟದಿಂದ ಎಐಸಿಸಿ ಅಧ್ಯಕ್ಷ ಸ್ಥಾನವರೆಗೆ ಬೆಳೆದ ರಾಜಕೀಯ ದಿನಗಳನ್ನು ನೆನಪಿಸಿಕೊಂಡ ಖರ್ಗೆ, 'ಏಕಾಏಕಿ ಈ ಸ್ಥಾನಕ್ಕೆ ಬಂದಿಲ್ಲ. ಹಂತ ಹಂತವಾಗಿ ಪಕ್ಷದಲ್ಲಿ ಬೆಳೆದು ಬಂದಿದ್ದೇನೆ. ಆದರೆ, ಈಗ ದಿಢೀರ್ ಆಗಿ ಶಾಸಕ, ಸಚಿವ, ಮುಖ್ಯಮಂತ್ರಿ ಆಗಬೇಕೆಂದು ಬಯಸುತ್ತಾರೆ. ಸೇವೆ ಮಾಡಬೇಕು, ಗುರಿ ತಲುಪಬೇಕೆಂಬ ಉದ್ದೇಶ ಹೊಂದಿರಬೇಕು. ಆಗ ಮಾತ್ರ ಉನ್ನತ ಸ್ಥಾನಕ್ಕೆ ಬೆಳೆಯಲು ಸಾಧ್ಯ. ಪಕ್ಷ ಎಲ್ಲರ ಕೈ ಹಿಡಿಯುತ್ತದೆ. ಕೆಲವರು ನನಗೆ ಅವಕಾಶ ನೀಡಲಿಲ್ಲವೆಂದು ಬೇಸರ ಮಾಡಿಕೊಳ್ಳುತ್ತಾರೆ. ಪಕ್ಷದ ತತ್ವ, ಸಿದ್ಧಾಂತ ನಂಬಿಕೊಂಡು, ಬದ್ಧರಾಗಿ ಕೆಲಸ ಮಾಡಬೇಕು. ಪಕ್ಷ ಸಿದ್ಧಾಂತ ನಂಬಿದವರು ಎಂದೂ ಪಕ್ಷವನ್ನು ಬಿಡುವುದಿಲ್ಲ. ಏನೇ ಬೇಸರ, ನೋವು ಇದ್ದರೂ ಪಕ್ಷಕ್ಕೆ ಧಕ್ಕೆಯಾಗುವ ಕೆಲಸ ಮಾಡಬಾರದು' ಎಂದು ಸಲಹೆ ನೀಡಿದರು.

'ಸರ್ವೋದಯ ಸಮಾವೇಶ'ದಲ್ಲಿ ಸೇರಿದ್ದ ಕಾಂಗ್ರೆಸ್ ಕಾರ್ಯಕರ್ತರು. ಪ್ರಜಾವಾಣಿ ಚಿತ್ರ

'ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಪದೇ ಪದೇ ಕಿರುಕುಳ ಕೊಡುತ್ತಿದ್ದಾರೆ. ಸೋನಿಯಾ ಗಾಂಧಿ ಬಗ್ಗೆ ಮಾತನಾಡುವುದನ್ನು ಅವರು ಬಿಡುತ್ತಿಲ್ಲ. ಅವರಿಗೆ ನಮ್ಮ ಚಿಂತೆ ಯಾಕೆ? ಅವರು ಇಷ್ಟೆಲ್ಲ ಮಾತನಾಡುತ್ತಿದ್ದರೂ ನಮ್ಮ ಯುವಕರು ತುಟಿ ಬಿಚ್ಚುತ್ತಿಲ್ಲ. ಇದು ಯುವಕರಿಗೆ ಯಾಕೆ ಅರ್ಥವಾಗುತ್ತಿಲ್ಲವೋ ನನಗೆ ತಿಳಿಯುತ್ತಿಲ್ಲ' ಎಂದು ಅಸಮಾಧಾನವನ್ನೂ ವ್ಯಕ್ತಪಡಿಸಿದರು.

'ರಾಜ್ಯ, ಕೇಂದ್ರದಲ್ಲಿರುವ ಬಿಜೆಪಿ ಸರ್ಕಾರ ಮನಬಂದಂತೆ ನಡೆದುಕೊಳ್ಳುತ್ತಿವೆ. ಈ ಹಿಂದೆ ಯಾವುದೇ ಸರ್ಕಾರ ಇಷ್ಟೊಂದು ಕೆಟ್ಟದಾಗಿ ನಡೆದುಕೊಂಡಿರಲಿಲ್ಲ. ನಾವು (ಕಾಂಗ್ರೆಸ್) 70 ವರ್ಷಗಳಲ್ಲಿ ದೇಶದಲ್ಲಿ ಏನೂ ಮಾಡಿಲ್ಲ ಎಂದು ಬಿಜೆಪಿಯವರು ಆರೋಪಿಸುತ್ತಾರೆ. ಕಾಂಗ್ರೆಸ್ ಇಷ್ಟೆಲ್ಲ ಮಾಡದೇ ಇದ್ದಿದ್ದರೆ ದೇಶ ಇಷ್ಟು ಗಟ್ಟಿಯಾಗಿ ಉಳಿಯುತ್ತಿರಲಿಲ್ಲ. ಅಂಬೇಡ್ಕರ್ ಬರೆದಿರುವ ಸಂವಿಧಾನ ಉಳಿಯಬೇಕು. ಎಲ್ಲರೂ ಎದ್ದು ನಿಂತು ಹೋರಾಟ ಮಾಡಬೇಕು. ಹೆದರಿ ಮನೆಯಲ್ಲಿ ಕುಳಿತರೆ ಏನೂ ಪ್ರಯೋಜನ ಇಲ್ಲ' ಎಂದರು.

ಖರ್ಗೆ ನೀಡಿದ ಎಚ್ಚರಿಕೆಯಂತೆ ನಡೆದುಕೊಳ್ಳುತ್ತೇವೆ: ಸಿದ್ದರಾಮಯ್ಯ

'ಮಲ್ಲಿಕಾರ್ಜುನ ಖರ್ಗೆ ಅವರಿಗೆ ಸಂತೋಷ ಆಗಬೇಕಾದರೆ ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಸರ್ಕಾರವನ್ನು ಕಿತ್ತು ಹಾಕಬೇಕು. ನನ್ನ ಪ್ರಕಾರ, ಭ್ರಷ್ಟ, ದುರಾಡಳಿತದ ಬಿಜೆಪಿ ಸರ್ಕಾರವನ್ನು ಕಿತ್ತು ಹಾಕಬೇಕೆಂದು ಜನ ಈಗಾಗಲೇ ಸಂಕಲ್ಪ ಮಾಡಿದ್ದಾರೆ. ಇದರಲ್ಲಿ ಯಾವ ಸಂಶಯವೂ ಬೇಡ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಸಣ್ಣ ಪುಟ್ಟ ಭಿನ್ನಾಭಿಪ್ರಾಯ ಇರಬಹುದು. ಆದರೆ, ಕರ್ನಾಟಕದಲ್ಲಿ ಕೋಮುವಾದಿ, ಬಡವರ ವಿರೋಧಿ, ರೈತರ ಮತ್ತು ಅಲ್ಪಸಂಖ್ಯಾತರ ವಿರೋಧಿ ಸರ್ಕಾರವನ್ನು ಕಿತ್ತುಹಾಕಬೇಕು ಎಂಬುದು ನಮಗಿರುವ ಸವಾಲು' ಎಂದ ಸಿದ್ದರಾಮಯ್ಯ, 'ನಾನು ಕಂಡಂತೆ ಕರ್ನಾಟಕದಲ್ಲಿ ಸಮಚಿತ್ತವಿರುವ, ಮೌಢ್ಯವಿರೋಧಿ, ಪ್ರಗತಿಪರ ರಾಜಕಾರಣಿ ಇದ್ದರೆ ಅದು ಖರ್ಗೆ. ಅವರು ನೀಡಿರುವ ಎಚ್ಚರಿಕೆಯ ಮಾತುಗಳಂತೆ ನಾವು ನಡೆದುಕೊಳ್ಳುತ್ತೇವೆ' ಎಂದರು.

7ನೇ ವೇತನ ಆಯೋಗ: 2 ದಿನದಲ್ಲಿ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ 7 ವೇತನ ಆಯೋಗ ರಚನೆ ಮಾಡಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಮ್ಮತಿಸಿದ್ದು, ಎರಡು ದಿನಗಳಲ್ಲಿ ಆದೇಶ ಹೊರಬೀಳಲಿದೆ.

ಪ್ರಸಕ್ತ ವರ್ಷದ ಅಕ್ಟೋಬರ್ ಅಂತ್ಯದ ಒಳಗೆ ವೇತನ ಆಯೋಗ ರಚನೆ ಮಾಡುವುದಾಗಿ ಈ ಹಿಂದೆ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಭಾನುವಾರ ಭೇಟಿ ಮಾಡಿದ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಅವರ ನಿಯೋಗ ಜತೆ ಬೊಮ್ಮಾಯಿ ಅವರು ಮಾತುಕತೆ ನಡೆಸಿದರು.

'ಎರಡು ದಿನಗಳಲ್ಲಿ (ನ.8) ವೇತನ ಆಯೋಗ ರಚಿಸಲಾಗುವುದು. ತ್ವರಿತವಾಗಿ ಮಧ್ಯಂತರ ವರದಿ ನೀಡಲು ಸೂಚಿಸಲಾಗುವುದು. 2023ರ ಮಾರ್ಚ್ ಒಳಗೆ ಆಯೋಗದ ಶಿಫಾರಸುಗಳನ್ನು ಜಾರಿ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

ಐದು ವರ್ಷ ಪೂರ್ಣಕ್ಕೂ ಮೊದಲೇ ಆಯೋಗ: ಐದು ವರ್ಷಗಳಿಗೆ ಒಮ್ಮೆ ವೇತನ ಆಯೋಗ ರಚನೆ ಮಾಡಲಾಗುತ್ತಿತ್ತು. ಇದೇ ಮೊದಲ ಬಾರಿ 4 ವರ್ಷ 7 ತಿಂಗಳಿಗೆ ರಚನೆ ಮಾಡಲಾಗುತ್ತಿದೆ ಎಂದು ಹೇಳಿದರು.

ಚುನಾವಣೆ ನೀತಿ ಸಂಹಿತೆ ಘೋಷಣೆಗೂ ಮೊದಲೇ ನೌಕರರಿಗೆ ಮೂಲ ವೇತನದಲ್ಲಿ ಗಣನೀಯ ಹೆಚ್ಚಳವಾಗಲಿದೆ. ಇದಕ್ಕೆ ಕಾರಣರಾದ ಮುಖ್ಯಮಂತ್ರಿ ಬೊಮ್ಮಾಯಿ ಅವರನ್ನು ರಾಜ್ಯ ಎಲ್ಲ ನೌಕರರ ಪರವಾಗಿ ನ.10ರಂದು ರೇಸ್‌ಕೋರ್ಸ್ ರಸ್ತೆಯ ಅವರ ನಿವಾಸದಲ್ಲಿ ಸನ್ಮಾನಿಸಲಾಗುವುದು ಎಂದು ಷಡಾಕ್ಷರಿ ಅವರು ಮಾಹಿತಿ ನೀಡಿದರು.

ಸುರೇಶ್ ಬಾಬು ಚಿ.ನಾ. ಹಳ್ಳಿ ಜೆಡಿಎಸ್ ಅಭ್ಯರ್ಥಿ

ಪ್ರಜಾವಾಣಿ ವಾರ್ತೆ

ಶಿರಾ: ಮಾಜಿ ಶಾಸಕ ಸಿ.ಬಿ.ಸುರೇಶ್ ಬಾಬು ಅವರನ್ನು ಚಿಕ್ಕನಾಯಕನಹಳ್ಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಘೋಷಣೆ ಮಾಡಿದ್ದಾರೆ.

ತಾಲ್ಲೂಕಿನ ಜಾನಕಲ್ಲು ಗ್ರಾಮದಲ್ಲಿ ಭಾನುವಾರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ವೃತ್ತಿಪರತೆಯ ಬೇಬಿಸಿಟ್ಟಿಂಗ್ ಇಂಟರ್ನ್‌ಷಿಪ್

ಗುರುರಾಜ್ ಎಸ್. ದಾವಣಗೆರೆ

‘ನಾನು ಕೆನಡಾಗೆ ಎಕ್ಸ್‌ಚೇಂಜ್ ಪ್ರೋಗ್ರಾಂಗೆ ಹೋಗಲ್ಲ. ನನಗೆ ಇಲ್ಲೇ ಒಳ್ಳೆ ಕಂಪನಿಯಲ್ಲಿ ಇಂಟರ್ನ್‌ಷಿಪ್ ಸಿಕ್ಕಿದೆ. ಎಕ್ಸ್‌ಚೇಂಜ್ ಪ್ರೋಗ್ರಾಂಗಿಂತ ಇದು ಮುಖ್ಯ’ ಎಂದು ಹೇಳಿದ ಎಂಜಿನಿಯರಿಂಗ್ ಪದವೀಧರ ರೋಹಿತ್, ವಿದೇಶದಲ್ಲಿ ಕಲಿಯುವ ಅವಕಾಶವನ್ನೇ ನಿರಾಕರಿಸಿ, ಕಂಪನಿಯೊಂದರಲ್ಲಿ ಇಂಟರ್ನ್‌ಷಿಪ್‌ಗೆ ಸೇರಿದ. ಆತ ಈಗ ಅದೇ ಕಂಪನಿಯಲ್ಲಿ ಪೂರ್ಣ ಪ್ರಮಾಣದ ನೌಕರ !

ಏನಿದು ಇಂಟರ್ನ್‌ಷಿಪ್

ಓದಿದ್ದನ್ನು ಪ್ರಾಯೋಗಿಕವಾಗಿ ಬಳಸುವುದು ಹೇಗೆಂದು ಹೇಳಿಕೊಡುವ ಈ ಇಂಟರ್ನ್‌ಷಿಪ್, ಈಗ ಅಭ್ಯರ್ಥಿಗಳಿಗೆ ಕೇವಲ ಕಲಿಕಾ ಭಾಗವಷ್ಟೇ ಆಗದೇ, ಕೌಶಲ ವೃದ್ಧಿಸಿ, ಉದ್ಯೋಗ ನೀಡುವ ಒಂದು ಅದ್ಭುತ ಪ್ರಕ್ರಿಯೆಯೂ ಆಗಿದೆ. ಹಾಗಾಗಿಯೇ, ರೋಹಿತ್ ನಂತಹ ವಿದ್ಯಾರ್ಥಿಗಳು ವಿದೇಶದ ಕಲಿಕೆಯನ್ನೇ ಕೈಬಿಟ್ಟು ಇಂಟರ್ನ್‌ಷಿಪ್‌ನತ್ತ ಹೆಜ್ಜೆ ಹಾಕುತ್ತಿದ್ದಾರೆ. ಪಠ್ಯಕ್ರಮದಲ್ಲಿ(ಸಿಲಬಸ್) ನಿಗದಿತ ಕೆಲವೇ ಗಂಟೆಗಳ ಪ್ರಾಯೋಗಿಕ(ಲ್ಯಾಬ್)ಕಲಿಕೆ ಇರುತ್ತದೆ. ದಿನವೂ ಬದಲಾಗುತ್ತಿರುವ ತಂತ್ರಜ್ಞಾನದ ಹೊಸ ಕಾಣ್ಕೆಗಳು ಪಠ್ಯಕ್ರಮದಲ್ಲಿ ಇರುವುದಿಲ್ಲ. ಆದರೆ ತರಗತಿಯಲ್ಲಿ ಕಲಿಸಲಾಗುವ ಮೂಲಭೂತ ಅಂಶಗಳಿಗೂ ಹೊಸ ಅವಿಷ್ಕಾರ, ಅಭಿವೃದ್ಧಿಗಳಿಗೆ ಸಂಬಂಧವಿರುತ್ತದೆ.

ಇಂದಿನ ತಾಂತ್ರಿಕ ಶಿಕ್ಷಣದ ಅವಿಭಾಜ್ಯ ಅಂಗವೇ ಆಗಿರುವ ಇಂಟರ್ನ್‌ಷಿಪ್, ವಿದ್ಯಾರ್ಥಿ ತರಗತಿಯಲ್ಲಿ ಓದಿದ್ದನ್ನು ಪ್ರಾಯೋಗಿಕವಾಗಿ ಮಾರುಕಟ್ಟೆ ಅಗತ್ಯಕ್ಕೆ ತಕ್ಕಂತೆ ಬಳಸುವುದು ಹೇಗೆ ಎಂಬುದನ್ನು ಸಮಗ್ರವಾಗಿ ಕಲಿಸಿಕೊಡುತ್ತದೆ. ತಂತ್ರಜ್ಞಾನ ಸಂಸ್ಥೆಗಳಲ್ಲಿ ‘ಹ್ಯಾಂಡ್ಸ್ ಆನ್’ ಅನುಭವ ನೀಡಿ, ವಿದ್ಯಾರ್ಥಿಗಳ ಒಣಕಲಿಕೆಗೆ ಹಸಿ ಹೂರಣ ತುಂಬಿ ಅವರನ್ನು ಉದ್ಯೋಗರಂಗದಲ್ಲಿ ದುಡಿಯಲು ಸಿದ್ಧಗೊಳಿಸುವುದಲ್ಲದೇ, ಪುಸ್ತಕಗಳಲ್ಲಿರುವುದನ್ನು ಕೆಲಸದ ರೂಪಕ್ಕಿಳಿಸಿ ತಾವು ಕಲಿತಿದ್ದನ್ನು ಯಾವಾಗ ಅಳವಡಿಸಬೇಕೆಂಬ ಪ್ರಶ್ನೆಗೆ ಉತ್ತರ ನೀಡುತ್ತದೆ. ಜೊತೆಗೆ ಕಲಿಕೆಯ ಆತ್ಮವಿಶ್ವಾಸವನ್ನೂ ಹೆಚ್ಚಿಸುತ್ತದೆ.

ಭಾರತದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಿಸುವ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ(AICTE) ಇಂಟರ್ನ್‌ಷಿಪ್ ಅನ್ನು ಎಂಜಿನಿಯರಿಂಗ್ ಪದವಿ ವಿದ್ಯಾರ್ಥಿಗಳಿಗೆ ಕಡ್ಡಾಯಗೊಳಿಸಿದೆ. NACE - ನ್ಯಾಷನಲ್ ಅಸೋಸಿಯೇಷನ್ ಆಫ್ ಕಾಲೇಜಸ್ ಆ್ಯಂಡ್ ಎಂಪ್ಲಾಯರ್ಸ್ ಸಮೀಕ್ಷೆ ಪ್ರಕಾರ ಪದವಿ ಶಿಕ್ಷಣ ಪೂರೈಸುವ ಶೇ 56 ರಷ್ಟು ವಿದ್ಯಾರ್ಥಿಗಳು ಒಂದಲ್ಲಾ ಒಂದು ಇಂಟರ್ನ್‌ಷಿಪ್ ಮಾಡುತ್ತಾರೆ. ವಿದ್ಯಾರ್ಥಿಗಳನ್ನು ‘ಇಂಟರ್ನ್’ ಗಳೆಂದು ಕರೆಯುತ್ತಾರೆ.

> ವಿದ್ಯಾರ್ಥಿಗಳಿಗೆ ‘ಸಾಫ್ಟ್‌ಸ್ಕಿಲ್’ ಕೌಶಲದ ಜೊತೆಗೆ, ಸಂವಹನಕಲೆ, ನಾಯಕತ್ವದ ಗುಣ, ಸಂಯಮ, ತಾಳ್ಮೆ ಮತ್ತು ಸಮಸ್ಯೆಗಳನ್ನು ಬಿಡಿಸುವಂತಹ ಜ್ಞಾನ ಕಲಿಸುವ ಇಂಟರ್ನ್‌ಷಿಪ್, ಉದ್ಯೋಗಾಕಾಂಕ್ಷಿಗಳ ‘ಬೇಬಿ ಸಿಟ್ಟಿಂಗ್’ ಎಂದೇ ಪ್ರಸಿದ್ಧಿಪಡೆದಿದೆ.

ಕೈಗಾರಿಕೆಗಳಲ್ಲಿ, ಸಂಶೋಧನಾ ಕೇಂದ್ರ, ಕಂಪನಿಗಳಲ್ಲಿ ಶೇ 60ರಷ್ಟು ತರಬೇತಿಗಳಿಗೆ ಸ್ಟೈಫಂಡ್ ನೀಡಲಾಗುತ್ತದೆ. ಉಚಿತ ಹಾಗೂ ಶುಲ್ಕ ತೆಗೆದುಕೊಂಡು ಇಂಟರ್ನ್‌ಷಿಪ್‌ಗೆ ಅವಕಾಶ ನೀಡುವ ಅನೇಕ ತಾಂತ್ರಿಕ ಸಂಸ್ಥೆಗಳು, ಕಾಲೇಜುಗಳು, ಸರ್ಕಾರೇತರ ಸಂಸ್ಥೆಗಳು, ಮಾಧ್ಯಮಗಳು, ಸಂಶೋಧನಾ ಕೇಂದ್ರಗಳು ಇವೆ. ಹಲವು ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜುಗಳು ತಮ್ಮಲ್ಲಿರುವ ಕೋರ್ಸ್‌ಗಳಿಗೆ ಸಂಬಂಧಿಸಿದ ತಂತ್ರಜ್ಞಾನ ಬಳಸುವಂತಹ ಪ್ರಸಿದ್ಧ ಕಂಪನಿಗಳ ಜೊತೆ ಒಪ್ಪಂದ ಮಾಡಿಕೊಂಡು ಅಂತಿಮ ವರ್ಷದ ಪದವಿಯ ವಿದ್ಯಾರ್ಥಿಗಳನ್ನು ನೇರ ಕಂಪನಿಗೇ ಕಳಿಸಿಕೊಡುತ್ತವೆ. ಕೆಲವು ಕಂಪನಿಗಳು ಕಾಲೇಜಿನಲ್ಲೇ ತಮ್ಮ ಇನ್‌ಕ್ಯುಬೇಶನ್ ಸೆಂಟರ್ ತೆರೆದು ಅಲ್ಲೇ ಪ್ರಾಯೋಗಿಕ ತರಬೇತಿ ನೀಡುವುದೂ ಇದೆ.

ಇಂಟರ್ನ್‌ಷಿಪ್‌ಗೆ ಸೇರಲು ಸಹಾಯ ಮಾಡುವ ಅನೇಕ ವೆಬ್‌ಸೈಟ್‌ಗಳು ನಮ್ಮಲ್ಲಿವೆ. ಅವುಗಳಲ್ಲಿ ಪ್ರಮುಖವಾದವು
www.internshala.com, www.unistaleducation.com, www.mentormind.in, www.letsintern.com, www.twenty19.com, www.wayup.com, www.hellointern.com, www.worldinternships.org, www.global experiences.com, www.xcelcorp.com, www.nyinst.com.

ಇಂಟರ್ನ್‌ಷಿಪ್ ಯಾಕೆ?

ಓದು ಮುಗಿದ ತಕ್ಷಣ ಉದ್ಯೋಗ ಪಡೆದುಕೊಳ್ಳಲು ಓದಿನ ಜೊತೆಗೆ ವಿದ್ಯಾರ್ಥಿ ಕಲಿತಿರುವ ಇತರ ಕೌಶಲಗಳೇನು ಎಂಬುದು ಮುಖ್ಯವಾಗುತ್ತದೆ. ಲಿಂಕ್ಡ್‌ಇನ್ ಕಂಪನಿಯ ಸರ್ವೆಯ ಪ್ರಕಾರ ವಿದ್ಯಾರ್ಥಿಯ ಹಲವು ಕೌಶಲಗಳಲ್ಲಿ ‘ಸಾಫ್ಟ್‌ಸ್ಕಿಲ್’ ಕೌಶಲಕ್ಕೆ ಹೆಚ್ಚು ಬೇಡಿಕೆ ಇದೆ. ಅಲ್ಲದೆ ಸಂವಹನಕಲೆ, ನಾಯಕತ್ವದ ಗುಣ, ತಂಡದಲ್ಲೊಬ್ಬನಾಗಿ ದುಡಿಯುವ ತಾಳ್ಮೆ ಮತ್ತು ಸಮಸ್ಯೆ ಬಿಡಿಸುವ ತಾಕತ್ತುಗಳಿಗೆ ಹೆಚ್ಚಿನ ಆದ್ಯತೆ ಇದ್ದು ಇವುಗಳನ್ನೆಲ್ಲಾ ಕಲಿಸುವ ಇಂಟರ್ನ್‌ಷಿಪ್ ಉದ್ಯೋಗಾಕಾಂಕ್ಷಿಗಳ ‘ಬೇಬಿ ಸಿಟ್ಟಿಂಗ್’ ಎಂದೇ ಪ್ರಸಿದ್ಧವಾಗಿದೆ. ವಿದೇಶದ ವಿದ್ಯಾಭ್ಯಾಸದ ಕನಸು ಕಾಣುವ ವಿದ್ಯಾರ್ಥಿಗಳಿಗೆ ಬಹಳ ಮುಖ್ಯ ಮತ್ತು ಇದು ವಿದ್ಯಾರ್ಥಿಗಳ ಅರ್ಜಿಯ ತೂಕವನ್ನು ಹೆಚ್ಚಿಸಿ ಅಲ್ಲಿನ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ಅವರಿಗೆ ಮುಕ್ತ ಸ್ವಾಗತ ಕೋರುತ್ತವೆ. ಎರಡಕ್ಕಿಂತ ಹೆಚ್ಚು ತರಬೇತಿ ಪಡೆದವರಿಗೆ ಹಲವು ಅವಕಾಶಗಳ ಬಾಗಿಲು ತೆರೆಯುತ್ತವೆ. ಅಲ್ಲದೆ ಶೈಕ್ಷಣಿಕ ಮೌಲ್ಯಮಾಪನಕ್ಕೆ ಕ್ರೆಡಿಟ್ ಸ್ಕೋರ್ ಕೂಡ ಸಿಗುತ್ತದೆ.

ಯಾವ್ಯಾವ ವಿಷಯಗಳು?

ಎಲ್ಲ ಕಂಪನಿಗಳೂ ಇಂಟರ್ನ್‌ಷಿಪ್ ನೀಡುವುದಿಲ್ಲ. ಕೆಲವು ಕಂಪನಿಗಳು ಲಿಖಿತ ಪರೀಕ್ಷೆ ಇಲ್ಲವೆ ಸಂದರ್ಶನ ನಡೆಸಿ ಅಭ್ಯರ್ಥಿಗಳನ್ನು ಆಯ್ಕೆ ಮಾಡುತ್ತವೆ. ನಾಲ್ಕು ವಾರಗಳಿಂದ ಹಿಡಿದು ಆರು ತಿಂಗಳವರೆಗಿನ ತರಬೇತಿ ಲಭ್ಯವಿರುತ್ತದೆ. ಡಿಪ್ಲೊಮಾ, ಐಟಿಐನಿಂದ ಹಿಡಿದು ಪತ್ರಿಕೋದ್ಯಮ, ಎಂಜಿನಿಯರಿಂಗ್, ವೈದ್ಯಕೀಯ ಕ್ಷೇತ್ರ, ಮಾರ್ಕೆಟಿಂಗ್, ಮ್ಯಾನೇಜ್‌ಮೆಂಟ್ ವೈದ್ಯಕೀಯ ಸೇವೆ, ಹೀಗೆ ಎಲ್ಲ ರಂಗದಲ್ಲೂ ಈಗ ಇಂಟರ್ನ್‌ಷಿಪ್ ಕಡ್ಡಾಯ ವಾಗಿದೆ. ಪ್ರತಿಷ್ಠಿತ ಕಂಪನಿಗಳಲ್ಲಿ ಅವಕಾಶ ದೊರೆತು, ಅಭ್ಯರ್ಥಿಗಳು ಬುದ್ಧಿವಂತರಾಗಿದ್ದರೆ ಓದು ಮುಗಿದ ನಂತರ ಅಲ್ಲೇ ಕೆಲಸ ಗಿಟ್ಟಿಸಬಹುದು.

ಎಲ್ಲೆಲ್ಲಿದೆ?

ಇಂಟೆಲ್, ಹ್ಯಾಟ್ ಹೋಟೆಲ್ಸ್, ಅತಿಥಿ ಸತ್ಕಾರ ಉದ್ಯಮದ ಮ್ಯಾರಿಯಟ್ ಇಂಟರ್‌ನ್ಯಾಷನಲ್ ಯುಟ್ಯೂಬ್, ಲಿಂಕ್ಡ್‌ಇನ್, ಫೋರ್ಡ್, ಸಿಸ್ಕೊ, ಐಬಿಎಂ, ಫೇಸ್‌ಬುಕ್, ಬ್ಲಾಕ್ ಬರ್ರಿ, ಆ್ಯಪಲ್, ಅಮೆರಿಕನ್ ಎಕ್ಸ್‌ಪ್ರೆಸ್, ಅಮೆಜಾನ್, ಅಕ್ಸೆಂಚರ್, ಕಾರ್ ಮ್ಯಾಕ್ಸ್, ಚಾನೆಲ್ 4, ಗೂಗಲ್, ಡಿಸ್ಕವರಿ ಕಮ್ಯುನಿಕೇಶನ್ಸ್, ಜನರಲ್ ಮಿಲ್ಸ್‌ಗಳು ಅಂತರರಾಷ್ಟ್ರೀಯ ವೇದಿಕೆಯ ಬಹು ಬೇಡಿಕೆಯ ತಾಣಗಳಾಗಿವೆ. ವಾಣಿಜ್ಯ ವಿಷಯ(ಕಾಮರ್ಸ್) ಓದಿದವರಿಗೆ ಅವಕಾಶ ನೀಡುವ ಕೆಪಿಎಂಜಿ ಕಂಪನಿ ತಿಂಗಳಿಗೆ ₹15 ಸಾವಿರದವರೆಗೆ ಸಹಾಯಧನ ನೀಡಿದರೆ, ಹ್ಯಾಟ್ ಹೋಟೆಲ್ ಗಂಟೆಗೆ ₹12 ಡಾಲರ್ ನೀಡುತ್ತದೆ. ಫೋರ್ಡ್ ಕಂಪನಿ ಇಂಟರ್ನ್‌ಷಿಪ್‌ಗೆ ಬರುವ ವಿದ್ಯಾರ್ಥಿಗಳನ್ನು ತನ್ನ ಕಾಯಂ ನೌಕರರಷ್ಟೇ ಸಮಾನವಾಗಿ ನಡೆಸಿಕೊಳ್ಳುತ್ತದೆ. ಇವೆಲ್ಲ ಒಂದಷ್ಟು ಉದಾಹರಣೆಗಳಷ್ಟೇ. ಅಕ್ಸೆಂಚರ್ ಕಂಪನಿಯಲ್ಲಿ ಇಂಟರ್ನ್‌ಷಿಪ್ ಪಡೆಯಲು ನೀವು ಕಾಲೇಜಿನ ಪದವೀಧರರೇ ಆಗಬೇಕೆಂದಿಲ್ಲ. ವಿದ್ಯಾಭ್ಯಾಸ ಪಡೆದು ನಿಮ್ಮಲ್ಲಿ ಸಾಫ್ಟ್‌ವೇರ್, ಮಾಹಿತಿ ತಂತ್ರಜ್ಞಾನ, ಮಾನವ ಸಂಪನ್ಮೂಲ ನಿರ್ವಹಣೆಗಳಲ್ಲಿ ಆಸಕ್ತಿ ಮತ್ತು ಅಲ್ಪ ಪರಿಣತಿ ಇದ್ದರೂ ಸಾಕು, ನೀವು ಅವಕಾಶ ಪಡೆಯಬಹುದು. ಎಂಬಿಎ ವಿದ್ಯಾರ್ಥಿಗಳು ಮೆಕಿನ್ಸೀ, ಗೋಲ್ಡ್‌ಮನ್ ಸಾಚ್ಸ್, ಜೆ.ಪಿ.ಮೋರ್ಗನ್ ಚೇಸ್, ಬೇನ್ ಆ್ಯಂಡ್ ಕಂಪನಿ, ಬೋಸ್ಟನ್ ಕನ್ಸಲ್ಟಿಂಗ್ ಗ್ರೂಪ್, ಗೂಗಲ್, ಡೆಲಾಯಿಟ್‌ಗಳಲ್ಲಿ ಇಂಟರ್ನ್‌ಗೆ ಸೇರಬಹುದು. ‘ವಿಂಗ್ಸ್’ (WINGS) ಯೋಜನೆಯ ಅಡಿ ಅವಕಾಶ ನೀಡುವ ಅಮೆರಿಕನ್ ಎಕ್ಸ್‌ಪ್ರೆಸ್ ಸಂಸ್ಥೆ ತಿಂಗಳಿಗೆ ₹68,000 ಸ್ಟೈಫಂಡ್ ನೀಡುತ್ತದೆ. ಭಾರತದ ಹದಿನಾರು ಮುಖ್ಯ ನಗರಗಳಲ್ಲಿ ಶಾಖೆ ಹೊಂದಿರುವ ಜರ್ಮನ್ ಮೂಲದ ಡಾಯ್ಚ್ ಬ್ಯಾಂಕ್ ತಿಂಗಳಿಗೆ ₹57,000 ನೀಡುತ್ತದೆ. ಪೇ ಪಲ್, ಐಟಿಸಿ, ಕ್ಯಾಡ್‌ಬರಿ, ಅರಿಸ್ಟಾ ಕಂಪ್ಯೂಟರ್ ಕಂಪನಿ, ಮೈಕ್ರೊಸಾಫ್ಟ್, ಅಡೋಬ್, ಬಿಎಂಡಬ್ಲೂ, ಶೆಲ್, ಮೋರ್ಗನ್ ಸ್ಟಾನ್ಲಿ, ಫ್ಲಿಪ್‌ಕಾರ್ಟ್, ನೆಟ್ ಆ್ಯಪ್, ಟಾಟಾ ಮೋಟರ್ಸ್, ಯಾಹೂ, ಒರಾಕಲ್, ಸ್ಯಾಪ್, ವಿಎಂ ವೇರ್‌ಗಳೂ ಕನಿಷ್ಠ ₹35 ಸಾವಿರ ಸ್ಟೈಪೆಂಡ್ ನೀಡಿ, ಕೆಲಸವನ್ನೂ ಕಲಿಸುತ್ತವೆ.

ರಾಜಕೀಯಕ್ಕೆ ಸೇರುವವರಿಗೆ ಆಮ್ ಆದ್ಮಿ ಪಾರ್ಟಿ ಎರಡು ತಿಂಗಳ ಇಂಟರ್ನ್‌ಷಿಪ್ ನೀಡುತ್ತದೆ. ಟೆಕ್ ಮಹೀಂದ್ರ, ಥಾಮಸ್ ಕುಕ್, ಓಯೋ ರೂಮ್ಸ್, ಔಟ್‌ಲುಕ್ ಮ್ಯಾಗಜಿನ್, ಟೈಟನ್ ಕಂಪನಿ, ಬುಕ್ ಮೈ ಶೋ ಕಂಪನಿಗಳು ಭಾರತದ ವಿದ್ಯಾರ್ಥಿಗಳಿಗೆ ಇಂಟರ್ನ್‌ಷಿಪ್ ಸೌಲಭ್ಯ ಕಲ್ಪಿಸುವ ಪ್ರಮುಖ ಸಂಸ್ಥೆಗಳಾಗಿವೆ.

(ಲೇಖಕರು: ಪ್ರಾಚಾರ್ಯರು, ವಿಡಿಯಾ ಪೂರ್ಣಪ್ರಜ್ಞ ಪದವಿ ಪೂರ್ವ ಕಾಲೇಜು, ಬೆಂಗಳೂರು

ಜಿಪಿಎಸ್‌ಟಿಆರ್ ಪರೀಕ್ಷೆ ಹೇಗಿರುತ್ತದೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1. ನಾನು ಪಿಯುಸಿ (ವಿಜ್ಞಾನ) ಮತ್ತು ಡಿಪ್ಲೊಮಾ (ಎಜುಕೇಷನ್) ಕೋರ್ಸ್ ಮುಗಿಸಿ 8 ವರ್ಷವಾಯಿತು. ಕೌಟುಂಬಿಕ ಕಾರಣಗಳಿಂದ ಪದವಿ ಓದುವುದನ್ನು ಅರ್ಧಕ್ಕೆ ನಿಲ್ಲಿಸಿದೆ. ಈಗ ಪೂರ್ಣಗೊಳಿಸಲು ನಿರ್ಧರಿಸಿದ್ದೇನೆ. ಆದರೆ, ಜಿಪಿಎಸ್‌ಟಿಆರ್ ಪರೀಕ್ಷೆ ತೆಗೆದುಕೊಳ್ಳಲು ಬಿಎ ಅಥವಾ ಬಿ.ಎಸ್ಸಿ ಯಾವುದು ಉತ್ತಮ? ಸದ್ಯ ಬಿ.ಎಸ್ಸಿ ಓದಲು ಕಷ್ಟವಾಗಬಹುದು; ಆದರೆ ಶಿಕ್ಷಕಿಯಾಗಲೇಬೇಕು. ದಯಮಾಡಿ, ಇದರ ಬಗ್ಗೆ ಹೆಚ್ಚಿನ ಮಾಹಿತಿ ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ನೀವು ಶಾಲೆಯಲ್ಲಿ ಬೋಧಿಸಲು ಇಚ್ಛಿಸುವ ವಿಷಯವನ್ನು ಪದವಿಯಲ್ಲಿ ಓದಿರಬೇಕು. ಹಾಗಾಗಿ, ಆಸಕ್ತಿ, ಅಭಿರುಚಿ ಮತ್ತು ಅನುಕೂಲದಂತೆ, ಯಾವ ಪದವಿಯನ್ನು ಮಾಡಬೇಕೆನ್ನುವುದನ್ನು ನಿರ್ಧರಿಸಿ.

ಕರ್ನಾಟಕ ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಯಲ್ಲಿ (ಜಿಪಿಎಸ್‌ಟಿಆರ್) 400 ಅಂಕಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಲಾಗುತ್ತದೆ. ಪರೀಕ್ಷೆಯ ಮಾದರಿ ಹೀಗಿರುತ್ತದೆ:

- ಸಾಮಾನ್ಯ ಜ್ಞಾನ (ಬಹು ಆಯ್ಕೆ ಮಾದರಿ): ಇದು ಎಲ್ಲ ವಿಷಯದ ಹುದ್ದೆಗಳಿಗೆ ಕಡ್ಡಾಯ; ಗರಿಷ್ಠ ಅಂಕ 150.
- ವಿಷಯ ಸಾಮರ್ಥ್ಯ/ಜ್ಞಾನ (ನಿರ್ದಿಷ್ಟ ವಿಷಯದ ಪತ್ರಿಕೆ): ಗರಿಷ್ಠ ಅಂಕ 150.
- ಭಾಷಾ ಸಾಮರ್ಥ್ಯ ಪತ್ರಿಕೆ (ವಿವರಣಾತ್ಮಕ ಮಾದರಿಯ ಪ್ರಶ್ನೆಗಳು): ಆಯಾ ವಿಷಯದ ಬೋಧನಾ ಮಾಧ್ಯಮಕ್ಕೆ ಸಂಬAಧಿಸಿದ ಭಾಷಾ ಸಾಮರ್ಥ್ಯದ ಪರೀಕ್ಷೆ; ಗರಿಷ್ಠ ಅಂಕ 150.
- **ಹೆಚ್ಚಿನ ಮಾಹಿತಿಗಾಗಿ ಗಮನಿಸಿ:** https://www.schooleducation.kar.nic.in/

2. ಎಂಸಿಎ ಪೂರ್ಣಗೊಳಿಸಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಸದ್ಯಕ್ಕೆ ಎಂಬಿಎ ಮಾಡಬೇಕು ಎಂದುಕೊಂಡಿದ್ದೇನೆ. ಆದರೆ, ಯಾವ ವಿಷಯದಲ್ಲಿ ಎಂಬಿಎ ಮಾಡಬೇಕು ಎಂದು ತಿಳಿಯುತ್ತಿಲ್ಲ. ಸಲಹೆ ನೀಡಿ.

ಎಸ್, ಸವಿತಾ, ಊರು ತಿಳಿಸಿಲ್ಲ.

ಎಂಬಿಎ ನಂತರ ಮುಂದೇನು ಎನ್ನುವುದರ ಬಗ್ಗೆ ಸ್ಪಷ್ಟತೆಯಿದ್ದರೆ ಅಥವಾ ನಿಮ್ಮ ಅಭಿರುಚಿ ಮತ್ತು ಆಸಕ್ತಿಯನ್ನು ಗಮನದಲ್ಲಿಟ್ಟುಕೊಂಡು, ಭವಿಷ್ಯದ ಕನಸುಗಳಂತೆ ವೃತ್ತಿಯೋಜನೆಯನ್ನು ಮಾಡಿದರೆ, ಯಾವ ವಿಷಯದಲ್ಲಿ ಎಂಬಿಎ ಮಾಡಬೇಕು ಎನ್ನುವುದು ಅರಿವಾಗುತ್ತದೆ.

ಉದಾಹರಣೆಗೆ; ತಂತ್ರಜ್ಞಾನ ಕ್ಷೇತ್ರದಲ್ಲೇ ಭವಿಷ್ಯವನ್ನು ರೂಪಿಸಿಕೊಳ್ಳಬೇಕೇ ಅಥವಾ ಇನ್ನಿತರ ಕ್ಷೇತ್ರಗಳ ಅವಕಾಶಗಳನ್ನು ಬಳಸಿಕೊಳ್ಳಬೇಕೇ ಎನ್ನುವುದು ಸ್ಪಷ್ಟವಾಗಬೇಕು. ಈಗ ಎಂಬಿಎ ಕೋರ್ಸ್ ಅನ್ನು ಸುಮಾರು 25ಕ್ಕೂ (ಐಟಿ, ಮಾರ್ಕೆಟಿಂಗ್, ಎಚ್‌ಆರ್, ಆಪರೇಷನ್ಸ್, ಸಪ್ಲೈ ಚೈನ್, ಹಾಸ್ಪಿಟಲ್, ಸ್ಪೋರ್ಟ್ಸ್, ಇವೆಂಟ್ಸ್, ಸೈಬರ್ ಸೆಕ್ಯೂರಿಟಿ ಇತ್ಯಾದಿ) ಹೆಚ್ಚು ವಿಭಾಗಗಳಲ್ಲಿ ಮಾಡಬಹುದು. ವೃತ್ತಿ ಯೋಜನೆಯನ್ನು ಕುರಿತ ಮಾರ್ಗದರ್ಶನಕ್ಕಾಗಿ, ಈ ವಿಡಿಯೊ ವೀಕ್ಷಿಸಿ:

https://www.youtube.com/c/EducationalExpertManagementCareerConsultant

3. ನನಗೀಗ 28 ವರ್ಷ. 2013ರಲ್ಲಿ ಪಿಯುಸಿ (ವಿಜ್ಞಾನ) ಉತ್ತೀರ್ಣನಾಗಿದ್ದೇನೆ. ಕುಟುಂಬದ ಆರ್ಥಿಕ ಸಮಸ್ಯೆಗಳಿಂದ, ಶಿಕ್ಷಣ ಮುಂದುವರಿಸಲಾಗದೆ ಉದ್ಯೋಗ ಮಾಡಬೇಕಾಯಿತು, ಆದರೆ, ಪಶುವೈದ್ಯನಾಗಬೇಕೆಂದು ನನ್ನ ಕನಸಾಗಿತ್ತು. ಈಗ, ನಾನು ಬಿವಿಎಸ್‌ಸಿ ಕೋರ್ಸ್ ಮಾಡಬಹುದೇ? ಉದ್ಯೋಗಾವಕಾಶಗಳ ಬಗ್ಗೆ ತಿಳಿಸಿ ಮತ್ತು ಶೈಕ್ಷಣಿಕ ಸಾಲ ದೊರೆಯುವುದೇ? ದಯವಿಟ್ಟು ತಿಳಿಸಿ.

ವಿಸ್ಮಯ್, ತುಮಕೂರು.

ನೀಟ್ ಪರೀಕ್ಷೆಗಿದ್ದ ಗರಿಷ್ಠ ವಯೋಮಿತಿಯನ್ನು ಇತ್ತೀಚೆಗಷ್ಟೇ ತೆಗೆದುಹಾಕಲಾಗಿದೆ. ಹಾಗಾಗಿ, ನೀವು ನೀಟ್ ಪ್ರವೇಶ ಪರೀಕ್ಷೆಯ ಮೂಲಕ ಬಿವಿಎಸ್‌ಸಿ ಕೋರ್ಸ್ ಮಾಡಬಹುದು.

ವೆಟರ್ನರಿ ಸೈನ್ಸ್ ಈಗ ಬೇಡಿಕೆಯಲ್ಲಿರುವ ಕ್ಷೇತ್ರ. ಬಿವಿಎಸ್‌ಸಿ ಕೋರ್ಸ್ ನಂತರ ಕೃಷಿ ಮತ್ತು ಪಶುಪಾಲನಾ ಇಲಾಖೆಗಳು, ಕೋಳಿ ಸಾಕಣೆ ಕೇಂದ್ರಗಳು(ಪೌಲ್ಟ್ರಿ), ಪಶುವೈದ್ಯಕೀಯ ಆಸ್ಪತ್ರೆಗಳು ಮತ್ತು ಚಿಕಿತ್ಸಾಲಯಗಳು, ಶ್ವಾನ ತರಬೇತಿ ಕೇಂದ್ರಗಳು, ಮೃಗಾಲಯಗಳು, ವನ್ಯಜೀವಿ ತಾಣ, ಅಭಯಾರಣ್ಯಗಳು, ಸಂಶೋಧನಾ ಕೇಂದ್ರಗಳು, ಪ್ರಾಣಿಗಳ ಸಂತಾನೋತ್ಪತ್ತಿ ಕೇಂದ್ರಗಳು ಇತ್ಯಾದಿ ಕಡೆಗಳಲ್ಲಿ ಉದ್ಯೋಗಾವಕಾಶಗಳಿವೆ.

ಯುಪಿಎಸ್‌ಸಿ/ಕೆಪಿಎಸ್‌ಸಿ ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ಸರ್ಕಾರಿ ಉದ್ಯೋಗ ಗಳನ್ನು ಪಡೆದುಕೊಳ್ಳಬಹುದು. ಕರ್ನಾಟಕ ಸರ್ಕಾರದ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶು ವೈದ್ಯಾಧಿಕಾರಿ ಹುದ್ದೆಗಳಿಗೂ ಪ್ರಯತ್ನಿಸಬಹುದು. ಶೈಕ್ಷಣಿಕ ಸಾಲವೂ ದೊರಕುತ್ತದೆ.

ಇನ್ನಷ್ಟು ಪ್ರಶ್ನೋತ್ತರಗಳಿಗೆ www.prajavani.net/education-career **ಸಂಪರ್ಕಿಸಿ**

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ಭಾಷಾ ಪರೀಕ್ಷೆಗೆ ಹೀಗಿರಲಿ ಸಿದ್ಧತೆ

ನವೋದಯ ಪ್ರವೇಶ ಪರೀಕ್ಷೆ ಸರಣಿ 8

ವೆಂಕಟಸುಬ್ಬರಾವ್ .ವಿ

ಹಿಂದಿನ ಸಂಚಿಕೆಯಲ್ಲಿ ಜವಾಹರ ನವೋದಯ ವಿದ್ಯಾಲಯದ 6ನೆಯ ತರಗತಿಯ ಪ್ರವೇಶ ಪರೀಕ್ಷೆಯ ಅಂಕಗಣಿತ ವಿಭಾಗದ ಪ್ರಶ್ನೆಗಳಿಗೆ ಸುಲಭವಾಗಿ ಉತ್ತರಿಸಲು ಸಹಾಯಕವಾಗುವ ಮತ್ತು ಗುಣಾಕಾರದಲ್ಲಿ ಸುಲಭವಾಗಿ ತಾಳೆ ನೋಡುವ ಒಂದು ವಿಧಾನದ ಬಗ್ಗೆ ತಿಳಿದೆವು.

ಈ ತಾಳೆ ನೋಡುವ ವಿಧಾನದಿಂದ, ಗುಣಕಾರದ ಪ್ರಶ್ನೆಗಳನ್ನಷ್ಟೇ ಅಲ್ಲದೇ, ಸಂಕಲನ, ವ್ಯವಕಲನ ಸೇರಿದಂತೆ ಅಂಕಗಣಿತದ ಉಳಿದ ಪ್ರಾಕಾರಗಳ ಲೆಕ್ಕಗಳನ್ನೂ ಪರಿಶೀಲಿಸಬಹುದು. ಅಷ್ಟೇ ಅಲ್ಲ, ಕೆಲವು ಬೀಜಗಣಿತದ ಸಮಸ್ಯೆಗಳನ್ನು ತಾಳೆನೋಡಲೂ ಈ ವಿಧಾನವು ಬಹಳ ಉಪಯುಕ್ತ. ಅದನ್ನು ನೀವೇ ಮನೆಯಲ್ಲಿ ಪ್ರಯತ್ನ ಮಾಡಿ ನೋಡಬಹುದು. ಅಂಕಗಣಿತದ ತಾಳೆ ನೋಡುವ ಈ ವಿಧಾನವು ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆಗೆ ಮಾತ್ರವಲ್ಲದೇ, ಬೇರೆ ಬೇರೆ ರೀತಿಯ ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಹಾಯಕವಾಗುತ್ತದೆ.

ಸಾಂದರ್ಭಿಕ ಚಿತ್ರ

ಐದನೇ ತರಗತಿ ಪಠ್ಯ ಓದಿ

6ನೆಯ ತರಗತಿಯ ನವೋದಯ ಪ್ರವೇಶ ಪರೀಕ್ಷೆಯ ಅಂಕಗಣಿತದ ಪ್ರಶ್ನೆ ಪತ್ರಿಕೆಯು ಮುಖ್ಯವಾಗಿ 5ನೆಯ ತರಗತಿಯ ಪಠ್ಯಕ್ರಮವನ್ನು ಆಧರಿಸಿದೆ. ಹಾಗಾಗಿ, ಐದನೇ ತರಗತಿಯಲ್ಲಿರುವ ಗಣಿತದ ಪಾಠಗಳನ್ನು ಸರಿಯಾಗಿ ತಿಳಿದುಕೊಳ್ಳಿ. ಆ ಪಠ್ಯದಲ್ಲಿರುವ ಲೆಕ್ಕಗಳನ್ನು ಈ ಹಿಂದಿನ ಸಂಚಿಕೆಯಲ್ಲಿ ತಿಳಿಸಿದಂತೆ, ಬಿಡಿಸುವುದನ್ನು ಅಭ್ಯಾಸ ಮಾಡಿ. ತಾಳೆ ನೋಡುವ ಕ್ರಮವನ್ನೂ ಅಭ್ಯಾಸ ಮಾಡಿ.

ಭಾಷಾ ಪರೀಕ್ಷೆ ವಿವರ

ನವೋದಯ ಪ್ರವೇಶ ಪರೀಕ್ಷೆಯಲ್ಲಿ, ಮೊದಲ ಭಾಗ ಮಾನಸಿಕ ಸಾಮರ್ಥ್ಯ ಪರೀಕ್ಷೆ, ಎರಡನೇ ಭಾಗ ಅಂಕಗಣಿತ. ಮೂರನೇ ಭಾಗವೇ ಭಾಷಾ ಪರೀಕ್ಷೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಒಟ್ಟು 20 ಪ್ರಶ್ನೆಗಳಿರುತ್ತವೆ ಹಾಗೂ ಗರಿಷ್ಠ ಅಂಕಗಳು 25. ಇಲ್ಲಿ ನಾಲ್ಕು ಪ್ಯಾಸೇಜ್ (Passage) ಗಳಿರುತ್ತವೆ. ಪ್ರತಿ ಪ್ಯಾಸೇಜ್ ನಂತರ ಐದು ಪ್ರಶ್ನೆಗಳಿರುತ್ತವೆ. ಪ್ರತಿ ಪ್ರಶ್ನೆಗೂ ನಾಲ್ಕು ಆಯ್ಕೆಗಳಿರುತ್ತವೆ. ಪ್ಯಾಸೇಜ್ ಓದಿ, ಸರಿಯಾಗಿ ಅರ್ಥೈಸಿಕೊಂಡು ಉತ್ತರಿಸಬೇಕು.

ಭಾಷಾ ಪರೀಕ್ಷೆಗೆ ಸಿದ್ಧರಾಗುವವರು, ಹೆಚ್ಚು ಹೆಚ್ಚು ಓದಬೇಕು. ಕಾಗುಣಿತ ದೋಷವಿಲ್ಲದೇ ಬರೆಯುವುದನ್ನು ಕಲಿತುಕೊಳ್ಳಬೇಕು.

ಓದುವ ಅಭ್ಯಾಸ ಇರಲಿ

ಓದುವಾಗ ಗಮನಕ್ಕೆ ಬಂದ ಕಠಿಣ ಪದಗಳ ಅರ್ಥವನ್ನು ಬರೆದಿಟ್ಟುಕೊಂಡು ಆಗಾಗ ಮನನ ಮಾಡಿಕೊಳ್ಳಿ. ಬೇರೆ ಬೇರೆ ಪ್ಯಾಸೇಜ್‌ಗಳನ್ನು ಸಂಗ್ರಹಿಸಿಟ್ಟುಕೊಂಡು ಓದಿ ಅರ್ಥೈಸಿಕೊಳ್ಳಿ.

ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸಿ

ಕಳೆದ ಏಳು ಸರಣಿಯಲ್ಲಿ ತಿಳಿಸಿರುವ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಂಡು, ಹಿಂದಿನ ವರ್ಷಗಳ ಪ್ರವೇಶ ಪರೀಕ್ಷೆಯ ಪ್ರಶ್ನೆಗಳಿಗೆ ಉತ್ತರಿಸುವು ದನ್ನು ಅಭ್ಯಾಸ ಮಾಡಿಕೊಳ್ಳಿ. ನವೋದಯ ಸರಣಿಯ ಹಿಂದಿನ ಲೇಖನಗಳನ್ನು ಓದಲು www.prajavani.net/education-career ಜಾಲತಾಣಕ್ಕೆ ಭೇಟಿ ನೀಡಬಹುದು.

ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆ ಮತ್ತಿತರ ವಿವರಗಳಿಗಾಗಿ ಈ ಜಾಲತಾಣ ನೋಡಿರಿ https://navodaya.gov.in/nvs/en/Home1

(ಲೇಖಕರು : ನಿರ್ದೇಶಕರು ಸ್ಮಾರ್ಟ್ ಸೆರೆಬ್ರಮ್ ಪ್ರೈವೇಟ್ ಲಿಮಿಟೆಡ್)

(ನವೋದಯ ಪ್ರವೇಶ ಪರೀಕ್ಷೆ ಸರಣಿ ಮುಗಿಯಿತು)

ವಿದ್ಯಾರ್ಥಿ ವೇತನ ಕೈಪಿಡಿ

ಸಾಂದರ್ಭಿಕ ಚಿತ್ರ

ಲೋರೆಯಾಲ್ ಎಲ್‌ಇಎಡಿ 2022 (L’Oréal LEAD 2022)

ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಯ ಅಂತಿಮ ವರ್ಷದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡುವುದಕ್ಕಾಗಿ ಲೊರೆಯಾಲ್ ಇಂಡಿಯಾ ಸಂಸ್ಥೆ (L’Oréal India) ಲೊರೆಯಾಲ್ ಎಲ್‌ಇಎಡಿ 2022 ಸ್ಕಾಲರ್‌ಷಿಪ್ ಕಾರ್ಯಕ್ರಮವನ್ನು ರೂಪಿಸಿದೆ.

ಅರ್ಹತೆ

- ಭಾರತದಲ್ಲಿರುವ ಯಾವುದೇ ಕಾಲೇಜು ಅಥವಾ ವಿಶ್ವವಿದ್ಯಾಲಯದಲ್ಲಿ ಡಿಪ್ಲೊಮಾ, ಪದವಿ ಅಥವಾ ಸ್ನಾತಕೋತ್ತರ ಪದವಿಯ ಅಂತಿಮ ಅಥವಾ ಪೂರ್ವ ಅಂತಿಮ ವರ್ಷದ ತರಗತಿಯಲ್ಲಿ ಓದುತ್ತಿರಬೇಕು
- 18 ರಿಂದ 30 ವರ್ಷ ವಯಸ್ಸಿನೊಳಗಿರಬೇಕು
- ಹೆಚ್ಚಿನ ವಿವರಗಳಿಗೆ ಕೆಳಗೆ ನೀಡಿರುವ ವೆಬ್‌ಲಿಂಕ್‌ಗೆ ಭೇಟಿ ಕೊಡಿ.

ಆರ್ಥಿಕ ನೆರವು

- ಲೋರೆಯಾಲ್ ಇಂಡಿಯಾದ ಉನ್ನತ ನಿರ್ವಹಣಾ ವೃತ್ತಿಪರರು ನಡೆಸಲಿರುವ ಆನ್‌ಲೈನ್ ಕೋರ್ಸ್ ಹಾಗೂ ವೆಬ್‌ನಾರ್‌ನಲ್ಲಿ ಭಾಗವಹಿಸುವ ಅವಕಾಶ

ಲೊರೆಯಾಲ್ ಇಂಡಿಯಾ ಸಂಸ್ಥೆಯ ಉನ್ನತಮಟ್ಟದ ಮ್ಯಾನೇಜ್‌ಮೆಂಟ್ ವೃತ್ತಿಪರರು ಆಯೋಜಿಸುವ ಕೌಶಲ ಅಭಿವೃದ್ಧಿ ಕುರಿತ ಆನ್‌ಲೈನ್ ವೆಬಿನಾರ್‌ಗಳಲ್ಲಿ ಭಾಗವಹಿಸುವ ಅವಕಾಶ. ವಿಶ್ವದಾದ್ಯಂತವಿರುವ ವಿಶ್ವವಿದ್ಯಾಲಯಗಳಲ್ಲಿನ ವೃತ್ತಿಪರ ಶಿಕ್ಷಣ, ಪದವಿ ಶಿಕ್ಷಣಕ್ಕೆ ಸಂಬಂಧಿಸಿದ ಐದು ಸಾವಿರ ಕೋರ್ಸ್‌ಗಳನ್ನು ಹೊಂದಿರುವ ‘ಕೋರ್ಸಿಯಾರಾ’ ಕಲಿಕಾ ವೇದಿಕೆಯಿಂದ ಎರಡು ತಿಂಗಳು ಉಚಿತವಾಗಿ ಆನ್‌ಲೈನ್ ಮೂಲಕ 33 ಕೋರ್ಸ್‌ಗಳನ್ನು ಕಲಿಯುವ ಅವಕಾಶ.

- ಲೊಯೆರಾಲ್ ಇಂಡಿಯಾ ಕಂಪನಿಯಲ್ಲಿ ತಜ್ಞ ಕೈಗಾರಿಕೋದ್ಯಮಗಳಿಂದ ‘ಒನ್ ಟು ಒನ್’ ಮೆಂಟರ್‌ಷಿಪ್ ಸೆಷನ್‌ಗಳಲ್ಲಿ ಭಾಗವಹಿಸುವ ಅವಕಾಶ.
- **ಅರ್ಜಿ ಸಲ್ಲಿಸಲು ಕೊನೆ ದಿನಾಂಕ:** 05-11-2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ:** www.b4s.in/praja/LEAD1

ಕೀಪ್ ಇಂಡಿಯಾ ಸ್ಮೈಲಿಂಗ್ ಫೌಂಡೇಶನಲ್ ಸ್ಕಾಲರ್‌ಷಿಪ್ ಆ್ಯಂಡ್ ಮೆಂಟರ್‌ಷಿಪ್ ಪ್ರೋಗ್ರಾಂ 2022-23

ಕೋಲ್ಗೆಟ್-ಪಾಮೋಲಿವ್ (ಇಂಡಿಯಾ) ಲಿಮಿಟೆಡ್ ಯುವ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವಾಗುವುದಕ್ಕಾಗಿ ‘ಸ್ಕಾಲರ್‌ಷಿಪ್ ಆ್ಯಂಡ್ ಮೆಂಟರ್‌ಷಿಪ್-2022-23’ ಕಾರ್ಯಕ್ರಮವನ್ನು ರೂಪಿಸಿದೆ. ಈ ಕಾರ್ಯಕ್ರಮದ ಮೂಲಕ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು(ವಿದ್ಯಾರ್ಥಿವೇತನ) ನೀಡುವ ಮೂಲಕ ಅವರ ಶೈಕ್ಷಣಿಕ/ವೃತ್ತಿಯನ್ನು ಮುಂದುವರಿಸಲು ಅವಕಾಶ ನೀಡುತ್ತಿದೆ. ದುರ್ಬಲ ವರ್ಗದ ಕುಟುಂಬದವರ ಮಕ್ಕಳಿಗೆ ಆರ್ಥಿಕ ನೆರವು ನೀಡುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

ಅರ್ಹತೆ:

- 2022 ರ ಬೋರ್ಡ್ ಪರೀಕ್ಷೆಗಳಾದ 10 ನೇ ತರಗತಿಯಲ್ಲಿ ಕನಿಷ್ಠ ಶೇ 75 ಅಥವಾ 12 ನೇ ತರಗತಿ(ದ್ವಿತೀಯ ಪಿಯುಸಿ) ಕನಿಷ್ಠ ಶೇ 60ಅಂಕಗಳೊಂದಿಗೆ ಉತ್ತೀರ್ಣರಾದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.
- 3 ವರ್ಷದ ಪದವಿ ಮತ್ತು 4 ವರ್ಷದ ವೃತ್ತಿಪರ ಕೋರ್ಸ್‌ಗಳನ್ನು (ಎಂಜಿನಿಯರಿಂಗ್/ಎಂಬಿಬಿಎಸ್/ಬಿಡಿಎಸ್ ಡೆಂಟಲ್) ಮುಂದುವರಿಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ವಾರ್ಷಿಕ ₹ 5 ಲಕ್ಷಗಳನ್ನು ಮೀರಬಾರದು.

ಅರ್ಹತೆ: ಆಯ್ದ ವಿದ್ಯಾರ್ಥಿಗಳು ತಮ್ಮ ಪ್ರಸ್ತುತ ಶಿಕ್ಷಣದ ಮಟ್ಟವನ್ನು ಅವಲಂಬಿಸಿ 4 ವರ್ಷಗಳವರೆಗೆ ಅಧ್ಯಯನಕ್ಕಾಗಿ ವರ್ಷಕ್ಕೆ ರೂ.50,000ದ ವರೆಗಿನ ವಿದ್ಯಾರ್ಥಿವೇತನ ಪ್ರಶಸ್ತಿಗಳನ್ನು ಪಡೆಯಬಹುದು.

- **ಅರ್ಜಿ ಸಲ್ಲಿಸಲು ಕೊನೆ ದಿನಾಂಕ:** 11-11-2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ :** www.b4s.in/praja/KISF6

ರತ್ತಿ ಚಾತ್ರ್ ಸ್ಕಾಲರ್‌ಷಿಪ್ 2022-23

ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಐಐಟಿ) ಪದವಿ ಕಾರ್ಯಕ್ರಮಕ್ಕೆ (ಬಿ.ಇ. / ಬಿ.ಟೆಕ್.) ಪ್ರವೇಶ ಬಯಸುವ ವಿದ್ಯಾರ್ಥಿಗಳಿಗೆ ನೆರವು ನೀಡುವ ಉದ್ದೇಶದೊಂದಿಗೆ ಪ್ಯಾನಸೋನಿಕ್ ಕಂಪನಿ ರತ್ತಿ ಚಾತ್ರ್ ಸ್ಕಾಲರ್‌ಷಿಪ್ ಯೋಜನೆ ರೂಪಿಸಿದೆ.

ಅರ್ಹತೆ:

- 2022-23ರಲ್ಲಿ ಐಐಟಿಗಳಲ್ಲಿ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ) ಬಿ.ಇ. / ಬಿ.ಟೆಕ್ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಭಾರತದ ವಿದ್ಯಾರ್ಥಿಗಳು ಈ ಸ್ಕಾಲರ್‌ಷಿಪ್‌ಗೆ ಅರ್ಜಿ ಸಲ್ಲಿಸಬಹುದು.
- ಅರ್ಜಿದಾರರು ತಮ್ಮ 12 ನೇ ತರಗತಿ ಪರೀಕ್ಷೆಯನ್ನು ಶೇ 75 ಅಂಕಗಳೊಂದಿಗೆ ತೇರ್ಗಡೆ ಹೊಂದಿರಬೇಕು.
- ಅಂತಿಮ ಫಲಿತಾಂಶದ ನಿರೀಕ್ಷೆಯಲ್ಲಿರುವವರು ಅರ್ಜಿ ಸಲ್ಲಿಸಲು ಅರ್ಹರು.
- ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯವು ಎಲ್ಲಾ ಮೂಲಗಳಿಂದ ₹ 8 ಲಕ್ಷಕ್ಕಿಂತ ಹೆಚ್ಚಿರಬಾರದು.
- 2022-2023 ವರ್ಷದ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಅರ್ಹರು.
- **ಆರ್ಥಿಕ ನೆರವು :** 4 ವರ್ಷಗಳವರೆಗೆ ಪ್ರತಿ ವರ್ಷ ₹ 42,500.
- **ಅರ್ಜಿ ಸಲ್ಲಿಸಲು ಕೊನೆ ದಿನಾಂಕ:** 11-11-2022
- **ಅರ್ಜಿ ಸಲ್ಲಿಸುವ ವಿಧಾನ:** ಆನ್‌ಲೈನ್ ಮೂಲಕ
- **ಹೆಚ್ಚಿನ ಮಾಹಿತಿಗೆ :** www.b4s.in/praja/RCSP5

ಕೃಪೆ: www.Buddy4Study.com

❦ ಸುಭಾಷಿತ ❦

ನಮ್ಮ ಬೌದ್ಧಿಕ ಸೌಂದರ್ಯವೇ ನಿಜಕ್ಕೂ ಎಲ್ಲ ಬಗೆಯ ಸೌಂದರ್ಯಗಳನ್ನೂ ಮೀರಿಸುವಂತೆ ಕಂಗೊಳಿಸುವುದು.

–ಸರ್ ಸಿ.ವಿ.ರಾಮನ್

ಹೂಡಿಕೆದಾರರ ಸಮಾವೇಶದ ಯಶಸ್ಸು ಮೂಲಸೌಕರ್ಯ ಹೆಚ್ಚಿಸಲು ಕ್ರಮ ಬೇಕು

ಬೆಂಗಳೂರಿನಲ್ಲಿ ನಡೆದ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ₹ 9.8 ಲಕ್ಷ ಕೋಟಿ ಮೊತ್ತದ ಹೂಡಿಕೆಗಳಿಗೆ ಒಪ್ಪಂದಗಳು ಅಂತಿಮವಾಗಿವೆ. ಸಮಾವೇಶದ ಆರಂಭಕ್ಕೂ ಮೊದಲು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಅವರು, ಒಟ್ಟು ₹ 5 ಲಕ್ಷ ಕೋಟಿ ಮೊತ್ತದ ಹೂಡಿಕೆಗಳಿಗೆ ಒಪ್ಪಂದ ಅಂತಿಮವಾಗುವ ನಿರೀಕ್ಷೆ ಇದೆ ಎಂದು ಹೇಳಿದ್ದರು. ಆದರೆ ಈಗ ಆಗಿರುವ ಮೊತ್ತವು ಆರಂಭದ ನಿರೀಕ್ಷೆಗಿಂತ ಎರಡು ಪಟ್ಟು ಹೆಚ್ಚು. ನಿರೀಕ್ಷಿಸಿದ್ದ ಹೂಡಿಕೆ ಹಾಗೂ ಒಪ್ಪಂದ ಅಂತಿಮವಾಗಿರುವ ಹೂಡಿಕೆ ಮೊತ್ತವನ್ನು ಪರಿಗಣಿಸಿದರೆ ಸಮಾವೇಶವು ಭಾರಿ ಯಶಸ್ಸು ಕಂಡಿದೆ ಎಂಬುದರಲ್ಲಿ ಎರಡು ಮಾತಿಲ್ಲ. ಹೂಡಿಕೆಯು ಹೆಚ್ಚು ಬರಲಿರುವ ವಲಯಗಳ ಪಟ್ಟಿಯಲ್ಲಿ ನವೀಕರಿಸಬಹುದಾದ ಇಂಧನ ಮೂಲ, ಹಸಿರು ಜಲಜನಕ ವಲಯಗಳು ಮುಂಚೂಣಿಯಲ್ಲಿ ಇವೆ. ಜಗತ್ತು ಪಳೆಯುಳಿಕೆ ಇಂಧನವನ್ನು ತ್ಯಜಿಸಿ, ಹಸಿರು ಇಂಧನವನ್ನು ವ್ಯಾಪಕವಾಗಿ ಬಳಸಿಕೊಳ್ಳಲು ಹೆಜ್ಜೆ ಇರಿಸುತ್ತಿರುವ ಈ ಹೊತ್ತಿನಲ್ಲಿ ಈ ಎರಡು ವಲಯಗಳಲ್ಲಿ ರಾಜ್ಯದಲ್ಲಿ ಹೂಡಿಕೆ ದೊಡ್ಡ ಪ್ರಮಾಣದಲ್ಲಿ ಆಗಲಿದೆ ಎಂಬುದು ಸ್ವಾಗತಾರ್ಹ. ಆದರೆ ತಯಾರಿಕಾ ವಲಯಕ್ಕೆ ದೊಡ್ಡ ಪ್ರಮಾಣದ ಹೂಡಿಕೆ ಪ್ರಸ್ತಾವಗಳು ಬಂದಿಲ್ಲ ಎಂಬುದು ಗಮನಾರ್ಹ ಅಂಶ. ದೇಶದಲ್ಲಿ ಈಗ ನವೀಕರಿಸಬಹುದಾದ ಇಂಧನ ಮೂಲಗಳಿಂದ ಆಗುತ್ತಿರುವ ಇಂಧನ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇ 45ರಷ್ಟು ಇದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಅಪಾರ ಸಾಮರ್ಥ್ಯ ಇರುವ ಈ ವಲಯದಲ್ಲಿ ಹೊಸ ಹೂಡಿಕೆಗಳನ್ನು ರಾಜ್ಯ ಆಕರ್ಷಿಸಿರುವುದು ದೀರ್ಘಾವಧಿಯಲ್ಲಿ ಉತ್ತಮ ಪರಿಣಾಮವನ್ನು ತಂದುಕೊಡಲಿದೆ. ತಯಾರಿಕಾ ವಲಯದಲ್ಲಿ ರಾಜ್ಯವು ದೊಡ್ಡ ಪ್ರಮಾಣದಲ್ಲಿ ಹೂಡಿಕೆ ಆಕರ್ಷಿಸದೇ ಇರುವುದಕ್ಕೆ ಕಾರಣ ಏನು ಎಂಬುದನ್ನು ಸರ್ಕಾರ ಈ ಸಂದರ್ಭದಲ್ಲಿ ಕೂಲಂಕಷವಾಗಿ ಪರಿಶೀಲಿಸಬೇಕು. ಲೋಪಗಳು ಕಂಡುಬಂದರೆ ಅವುಗಳನ್ನು ಸರಿಪಡಿಸಿಕೊಳ್ಳಬೇಕು.

ಒಪ್ಪಂದಗಳ ಅನುಷ್ಠಾನದಲ್ಲಿ ಅಧಿಕಾರಶಾಹಿ ವ್ಯವಸ್ಥೆಯು ವಿಳಂಬ ಧೋರಣೆ ಅನುಸರಿಸಬಾರದು

ಈ ಬಾರಿಯ ಸಮಾವೇಶಕ್ಕೆ ಸಂಬಂಧಿಸಿದ ಹಲವು ಅಂಕಿ–ಅಂಶಗಳು ಬಹಳ ಸುಂದರವಾದ ಚಿತ್ರಣವನ್ನು ಕಟ್ಟಿಕೊಡುವಂತಿವೆ. ಆದರೆ, ಹೂಡಿಕೆದಾರರ ಸಮಾವೇಶಗಳ ಈ ಹಿಂದಿನ ಅನುಭವವು ತುಸು ಬೇರೆಯದೇ ಆದ ಚಿತ್ರಣವನ್ನು ನೀಡುತ್ತದೆ. ಹಿಂದಿನ ಸಮಾವೇಶಗಳ ಸಂದರ್ಭದಲ್ಲಿ ಆಗಿದ್ದ ಹಲವು ಒಪ್ಪಂದಗಳು ಕಾರ್ಯರೂಪಕ್ಕೆ ಬಂದೇ ಇಲ್ಲ. ಆದರೆ ಈ ಬಾರಿ ಆ ರೀತಿ ಆಗುವುದಿಲ್ಲ ಎಂಬ ಭರವಸೆಯನ್ನು ಮುಖ್ಯಮಂತ್ರಿ ನೀಡಿದ್ದಾರೆ. ಒಪ್ಪಂದಗಳು ಕಾರ್ಯರೂಪಕ್ಕೆ ಬರಬೇಕು, ಇಲ್ಲದೇ ಇದ್ದರೆ ಅವುಗಳಿಗೆ ಹೆಚ್ಚಿನ ಅರ್ಥ ಇರುವುದಿಲ್ಲ ಎಂಬರ್ಥದ ಮಾತನ್ನು ಮುಖ್ಯಮಂತ್ರಿ ಅವರು ಸಮಾವೇಶದ ಸಮಾರೋಪದಲ್ಲಿ ಆಡಿದ್ದಾರೆ. ಸಮಾವೇಶದ ಉದ್ಘಾಟನಾ ಸಮಾರಂಭದಲ್ಲಿ ವರ್ಚುವಲ್ ಆಗಿ ಭಾಷಣ ಮಾಡಿದ್ದ ಪ್ರಧಾನಿ ನರೇಂದ್ರ ಮೋದಿ, ಹೂಡಿಕೆಗಳ ವಿಚಾರದಲ್ಲಿ ವಿಳಂಬ ಧೋರಣೆ ಅನುಸರಿಸದೆ, ಹೂಡಿಕೆದಾರರಿಗೆ ಕೆಂಪುಹಾಸಿನ ಸ್ವಾಗತ ನೀಡಬೇಕು ಎಂದು ಕಿವಿಮಾತು ಹೇಳಿದ್ದಾರೆ. ಪ್ರಧಾನಿ ಹಾಗೂ ಮುಖ್ಯಮಂತ್ರಿ ಆಡಿರುವ ಮಾತುಗಳು ಸಂಬಂಧಪಟ್ಟ ಎಲ್ಲರಿಗೂ ಸ್ಪಷ್ಟ ಸೂಚನೆಯ ರೀತಿಯಲ್ಲಿ ತಾಕಬೇಕು. ಒಪ್ಪಂದಗಳು ಅನುಷ್ಠಾನಕ್ಕೆ ಬರಬೇಕು. ಇಲ್ಲಿ ಅಧಿಕಾರಶಾಹಿ ವ್ಯವಸ್ಥೆಯು ವಿಳಂಬ ಧೋರಣೆ ಅನುಸರಿಸಬಾರದು. ಅನುಷ್ಠಾನದ ಸಂದರ್ಭದಲ್ಲಿ ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ನಿಯಮಗಳು ಸೇರಿದಂತೆ ಯಾವುದೇ ಕಾನೂನು ಉಲ್ಲಂಘನೆ ಆಗದಂತೆಯೂ ಸರ್ಕಾರ ಕಾಳಜಿ ವಹಿಸಬೇಕು.

ಹೂಡಿಕೆದಾರರ ಪೈಕಿ ಹೆಚ್ಚಿನವರಿಗೆ ಬೆಂಗಳೂರು ಬೇಕು. ಆದರೆ, ಬೆಂಗಳೂರಿನಲ್ಲಿ ಇರುವ ಸಂಪನ್ಮೂಲಗಳ ಲಭ್ಯತೆ ಸೀಮಿತ. ಹೀಗಾಗಿ, ರಾಜ್ಯದ ಎರಡನೆಯ ಹಂತದ ನಗರಗಳಲ್ಲಿ ಅಗತ್ಯ ಮೂಲ ಸೌಕರ್ಯ ಕಲ್ಪಿಸಿ, ಅಲ್ಲಿಗೆ ಹೆಚ್ಚಿನ ಹೂಡಿಕೆಗಳು ಬರುವಂತೆ ಮಾಡಲಾಗುವುದು ಎಂಬ ಮಾತನ್ನು ಆಡಳಿತಾರೂಢರು ಹಲವು ವರ್ಷಗಳಿಂದ ಹೇಳಿಕೊಂಡು ಬಂದಿದ್ದಾರೆ. ಈ ಬಾರಿಯ ಸಮಾವೇಶದಲ್ಲಿ ಆಗಿರುವ ಒಪ್ಪಂದಗಳ ಪ್ರಕಾರ, ಒಟ್ಟು ಹೂಡಿಕೆಯಲ್ಲಿ ಶೇ 70ರಷ್ಟು ಹೂಡಿಕೆಗಳು ರಾಜ್ಯದ ಇತರ ನಗರಗಳಲ್ಲಿ ಆಗಲಿವೆ ಎಂಬ ಮಾತನ್ನು ಸಚಿವ ನಿರಾಣಿ ಹೇಳಿದ್ದಾರೆ. ಇದು ಕಾರ್ಯರೂಪಕ್ಕೆ ಬರಬೇಕು. ಸಮಾವೇಶದಲ್ಲಿ ಆಗಿರುವ ಒಪ್ಪಂದವನ್ನು ಕಡ್ಡಾಯವಾಗಿ ಅನುಷ್ಠಾನಕ್ಕೆ ತರುವ ನಿಬಂಧನೆ ಹೂಡಿಕೆದಾರರ ಮೇಲೆ ಇರುವುದಿಲ್ಲ. ಔದ್ಯಮಿಕ ವಾತಾವರಣದಲ್ಲಿ ಅನಿರೀಕ್ಷಿತ ಬದಲಾವಣೆಗಳು ಆದಲ್ಲಿ, ಹೂಡಿಕೆದಾರರು ಹಿಂದೆ ಸರಿಯುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಮೂಲಸೌಕರ್ಯ ಕಲ್ಪಿಸುವ ವಿಚಾರದಲ್ಲಿ ಬೆಂಗಳೂರು ಕೂಡ ಈಗ ಲಯ ತಪ್ಪಿದೆ. ಇಲ್ಲಿ ಮಳೆ ಜೋರಾಗಿ ಬಂದಾಗ ಕೆಲವು ಪ್ರದೇಶಗಳಲ್ಲಿ ಪ್ರವಾಹದ ಪರಿಸ್ಥಿತಿ ಸೃಷ್ಟಿಯಾಗುತ್ತದೆ, ರಸ್ತೆಗಳು ಹದಗೆಟ್ಟಿವೆ. ಬೆಂಗಳೂರಿನ ಆಚೆಗೆ ಹೂಡಿಕೆ ಆಕರ್ಷಿಸಿರುವುದಾಗಿ ಹೇಳುವ ಸರ್ಕಾರ, ಅಲ್ಲಿನ ಮೂಲಸೌಕರ್ಯದ ಕಡೆಗೆ ತಕ್ಷಣ ಗಮನಹರಿಸಬೇಕು. ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು, ಅನುಮೋದನೆಗಳು ತ್ವರಿತವಾಗಿ ಸಿಗುವಂತೆ ಮಾಡುವುದು ಹಾಗೂ ಭ್ರಷ್ಟಾಚಾರ ನಿಗ್ರಹಿಸುವ ಕೆಲಸ ಆಗದ ವಿನಾ ಇಂತಹ ಸಮಾವೇಶಗಳು ಪೂರ್ಣ ಪ್ರಮಾಣದ ಯಶಸ್ಸು ಪಡೆಯುವುದಿಲ್ಲ.

ದಿನದ ಟ್ವೀಟ್

ಸಾಧನೆಗೆ ಮನ್ನಣೆ ಇರಲಿ

ನನ್ನ ಪ್ರಕಾರ, ಸರ್ಕಾರದಲ್ಲಿ ನಿಯಮಿತ ಬಡ್ತಿ ನೀತಿಯನ್ನು ತಕ್ಷಣ ತೆಗೆದುಹಾಕಬೇಕು. ಇದರ ಬದಲು ಸಾಧನೆಯನ್ನು ಆಧರಿಸಿದ ಬಡ್ತಿ ನೀತಿಯನ್ನು ಜಾರಿಗೆ ತರಬೇಕು. ಇಲ್ಲವಾದಲ್ಲಿ ಹತ್ತಾರು ಮೊರ್ಬಿ ದುರಂತ, ರಸ್ತೆಗುಂಡಿಗಳು, ಮೇಲ್ಸೇತುವೆ ಕುಸಿತ, ನಾಲೆಗಳ ತಡೆಗೋಡೆ ಕುಸಿತ, ಡ್ಯಾಂಗಳು ಒಡೆಯುವುದು ಸಾಮಾನ್ಯವಾಗಿಬಿಡುತ್ತವೆ. ಉತ್ತರದಾಯಿತ್ವ ಇಲ್ಲದ ಕೆಲಸ/ಸ್ಥಾನ ಕೂಡದು.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ

ಕಾಂಗ್ರೆಸ್‌ನಲ್ಲಿ ವಂಶಪಾರಂಪರ್ಯ ಆಡಳಿತ ಇದೆ, ನೆಹರೂ ಕುಟುಂಬ ಬಿಟ್ಟು ಬೇರೆಯವರಿಗೆ ಅವಕಾಶ ಇಲ್ಲ ಎಂದು ಬಿಜೆಪಿ ಟೀಕಿಸುತ್ತಿತ್ತು. ಮಲ್ಲಿಕಾರ್ಜುನ ಖರ್ಗೆಯವರು ಅಧ್ಯಕ್ಷರಾಗಿ ಆ ಟೀಕೆಗಳಿಗೆ ಸರಿಯಾದ ಉತ್ತರ ನೀಡಿದ್ದಾರೆ. ಕಾಂಗ್ರೆಸ್‌ನಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ ಎಂಬುದು ಸಾಬೀತಾಗಿದೆ.

ಸಿದ್ದರಾಮಯ್ಯ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶುಕ್ರವಾರ, 7-11-1997

● ಟಾಡಾ ಆರೋಪ: ಮಾಜಿ ಸಚಿವ ಕಲ್ಪನಾಥ್ ಆರೋಪಮುಕ್ತ

ನವದೆಹಲಿ, ನ. 6 (ಯುಎನ್‌ಐ, ಪಿಟಿಐ)– ಭಯೋತ್ಪಾದನೆ ಹಾಗೂ ವಿಧ್ವಂಸಕ ಕೃತ್ಯಗಳ ನಿಯಂತ್ರಣ ಕಾಯಿದೆ (ಟಾಡಾ) ಅನ್ವಯ ಬಂಧಿತರಾಗಿದ್ದ ಕೇಂದ್ರದ ಮಾಜಿ ಸಚಿವ ಕಲ್ಪನಾಥ್ ರಾಯ್ ಅವರನ್ನು ಸುಪ್ರೀಂ ಕೋರ್ಟ್ ಇಂದು ಆರೋಪಮುಕ್ತಗೊಳಿಸಿದೆ.

ಮುಂಬೈನ ಜೆ.ಜೆ. ಆಸ್ಪತ್ರೆಯಲ್ಲಿ 1992ರ ಸೆಪ್ಟೆಂಬರ್‌ನಲ್ಲಿ ಸಂಭವಿಸಿದ ಗುಂಡಿನ ಚಕಮಕಿಯ ಪ್ರಕರಣಕ್ಕೆ ಸಂಬಂಧಿಸಿದಂತೆ ಅವರನ್ನು ಬಂಧಿಸಲಾಗಿತ್ತು. ಇದೇ ಪ್ರಕರಣದಲ್ಲಿ ಆರೋಪಿಗಳಾಗಿದ್ದ ಇತರ ಐವರನ್ನೂ ನ್ಯಾಯಾಲಯ ಬಂಧಮುಕ್ತಗೊಳಿಸಿದೆ.

‘ಭಯೋತ್ಪಾದಕರಿಗೆ ಆರೋಪಿಗಳು ಆಶ್ರಯ ನೀಡಿದ್ದಾರೆಂಬ ಬಗ್ಗೆ ಸೂಕ್ತ ಸಾಕ್ಷ್ಯ ಒದಗಿಸಲು ಸರ್ಕಾರಿ ವಕೀಲರು ವಿಫಲರಾಗಿರುವುದರಿಂದ ಆರೋಪಿಗಳನ್ನು ಮುಕ್ತಗೊಳಿಸಲಾಗುತ್ತಿದೆ’ ಎಂದು ನ್ಯಾಯಾಧೀಶರಾದ ಎಂ.ಕೆ. ಮುಖರ್ಜಿ ಹಾಗೂ ಕೆ.ಟಿ. ಥಾಮಸ್ ಅವರನ್ನು ಒಳಗೊಂಡ ವಿಭಾಗೀಯ ಪೀಠವು ಹೇಳಿತು.

● ಪಕ್ಷಾಂತರ: ಬಿಜೆಪಿಗೆ ಕೇಸರಿ ಸವಾಲು

ಬೆಂಗಳೂರು, ನ. 6– ‘ನಾನು ಅಡ್ವಾಣಿ ಅವರಿಗೆ ಸವಾಲು ಹಾಕುತ್ತೇನೆ. ಕಾಂಗ್ರೆಸ್ ಪಕ್ಷದ ಕೇವಲ ಒಬ್ಬ ಲೋಕಸಭಾ ಸದಸ್ಯರಿಂದ ರಾಜೀನಾಮೆ ಕೊಡಿಸಿ ಬಿಜೆಪಿಗೆ ಸೇರಿಸಿಕೊಳ್ಳಲಿ ನೋಡೋಣ’ ಎಂದು ಎಐಸಿಸಿ ಅಧ್ಯಕ್ಷ ಸೀತಾರಾಂ ಕೇಸರಿ ಅವರು ಇಂದು ಇಲ್ಲಿ ಸವಾಲು ಹಾಕಿದರು.

ಎರಡು ದಿನಗಳ ಭೇಟಿಗೆ ನಗರಕ್ಕೆ ಬಂದಿದ್ದ ಕೇಸರಿ ಅವರನ್ನು ಪತ್ರಕರ್ತರು ಕೇಳಿದ ಪ್ರಶ್ನೆಗೆ ಅವರು ಈ ಸವಾಲಿನ ಉತ್ತರ ಕೊಟ್ಟರು.

50 ವರ್ಷಗಳ ಹಿಂದೆ

ಮಂಗಳವಾರ, 7-11-1972

● ಆದಾಯಗಳ ಸಮರ್ಪಕ ಹಂಚಿಕೆ, ಸ್ವಾವಲಂಬನೆಗೆ ಪ್ರಧಾನಿ ಇಂದಿರಾ ಕರೆ

ನವದೆಹಲಿ, ನ. 6– ಆರ್ಥಿಕ ಬೆಳವಣಿಗೆಯೊಡನೆ ‘ದೃಢ ಮತ್ತು ಚೈತನ್ಯಶೀಲ ಸಮಾಜಗಳ’ ನಿರ್ಮಾಣಕ್ಕಾಗಿ ಆದಾಯಗಳ ಸಮರ್ಪಕ ವಿತರಣೆಯಾಗುವಂತೆ ಅಭಿವೃದ್ಧಿಶೀಲ ರಾಷ್ಟ್ರಗಳು ನೋಡಿಕೊಳ್ಳಬೇಕೆಂದು ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಂದು ಹೇಳಿದರು.

ಕೊಲಂಬೊ ಯೋಜನೆ ಸಮಾಲೋಚಕ ಸಮಿತಿಯ ಎರಡನೇ ಸಭೆಯನ್ನು ಇಂದು ಇಲ್ಲಿ ಉದ್ಘಾಟಿಸಿದ ಶ್ರೀಮತಿ ಗಾಂಧಿ ಅವರು, ಸುಭದ್ರ ಬೆಳವಣಿಗೆಗಾಗಿ ಸ್ವಾವಲಂಬನೆ ಮುಖ್ಯ ಅವಶ್ಯಕತೆಯೆಂದು ಹೇಳಿದರಾದರೂ, ಸ್ವಾವಲಂಬನೆ ಎಂದರೆ ಅಂತರರಾಷ್ಟ್ರೀಯ ಸಹಕಾರ ಕಡಿಮೆಯಾಗಬೇಕೆಂದು ಅರ್ಥವಲ್ಲ ಎಂದರು.

● ಡಿಎಂಕೆ ಸಚಿವ ಸಂಪುಟದ ವಿರುದ್ಧ ಆರೋಪ: ಶೀಘ್ರ ತನಿಖಾ ಆಯೋಗ ನೇಮಕಕ್ಕೆ ಒತ್ತಾಯ

ನವದೆಹಲಿ, ನ. 6– ತಮಿಳುನಾಡು ಸಚಿವ ಸಂಪುಟ ವಿರುದ್ಧದ ಭ್ರಷ್ಟಾಚಾರ ಆರೋಪಗಳ ತನಿಖೆಗೆ ಕೂಡಲೇ ಆಯೋಗವೊಂದನ್ನು ನೇಮಿಸಬೇಕೆಂದು ಅಣ್ಣಾ ಡಿಎಂಕೆ ಮತ್ತು ಕಮ್ಯುನಿಸ್ಟ್ ಪಕ್ಷದ ತಮಿಳುನಾಡು ಸಮಿತಿ ಇಂದು ರಾಷ್ಟ್ರಪತಿಯವರನ್ನು ಒತ್ತಾಯ ಮಾಡಿದವು.

ಎಂ.ಜಿ. ರಾಮಚಂದ್ರನ್ ಮತ್ತು ಕಮ್ಯುನಿಸ್ಟ್ ಪಕ್ಷದ ಎಂ. ಕಲ್ಯಾಣಸುಂದರಂ ಪ್ರತ್ಯೇಕವಾಗಿ ರಾಷ್ಟ್ರಪತಿಗೆ ಮನವಿ ಸಲ್ಲಿಸಿದರು.

ಅಪಾರ ಒಳನೋಟಗಳಿದ್ದ ಈ ಗಾಂಧಿವಾದಿ, ಸರಳವಾದ ನಿಲುವಿನಿಂದಲೇ ವ್ಯಾಪಕ ಪ್ರಭಾವ ಬೀರಿದವರು

ಇಳಾ ಭಟ್: ಮುಂದುವರಿದ ಯಾನ

ವಿಶ್ಲೇಷಣೆ

ಎಂ.ಎಸ್.ಶ್ರೀರಾಮ್

ಇಳಾ ಭಟ್ ಅವರು ಇತ್ತೀಚೆಗೆ ತೀರಿಕೊಂಡ ಸುದ್ದಿ ತಿಳಿದಾಗ ಒಂದು ಕ್ಷಣದ ಮಟ್ಟಿಗೆ ನನಗೆ ಏನೂ ತೋಚಲಿಲ್ಲ. ನಮ್ಮ ನಡುವೆ ನೈತಿಕತೆಯನ್ನು ಬಿಂಬಿಸುತ್ತಾ ನಿಂತ ಒಂದು ತಲೆಮಾರು ಕ್ರಮೇಣ ನಮ್ಮನ್ನಗಲಿ ಹೋಗುತ್ತಿದೆ. ಒಟ್ಟಾರೆ, ಕರ್ಕಶವಾಗುತ್ತಿರುವ ಭಾಷೆ, ಘನತೆರಹಿತ ವರ್ತನೆಯು ಮೇಲುಗೈ ಸಾಧಿಸುತ್ತಿರುವ ಈ ಸಂದರ್ಭದಲ್ಲಿ, ವಿನಾಕಾರಣ ಒಪ್ಪಂದಕ್ಕೆ, ರಾಜಿಗೆ ಒಪ್ಪದ ಗಾಂಧಿವಾದಿಗಳ ಸೈದ್ಧಾಂತಿಕ ನಿಲುವು, ಪ್ರಾಮಾಣಿಕತೆ, ಹಟ, ಶಾಂತಿ, ಸದ್ಭಾವನೆ ಮತ್ತು ಘನತೆಯ ಪ್ರತೀಕವಾಗಿ ನಮ್ಮ ಸಾಕ್ಷಿಪ್ರಜ್ಞೆಯಂತಿದ್ದವರು ನಮ್ಮನ್ನು ಅಗಲಿ ಹೋಗುತ್ತಿರುವುದು ಅತೀವ ದುಃಖದ ಸಂಗತಿ.

ಮೃದುಭಾಷಿಯಾಗಿದ್ದ ಇಳಾ ತಮ್ಮ ಜೀವನವನ್ನು ಬಡ ಮಹಿಳೆಯರ ಸಬಲೀಕರಣಕ್ಕೆ ಮುಡಿಪಾಗಿಟ್ಟಿದ್ದರು. 70ರ ದಶಕದಲ್ಲಿ ಅವರು ಸ್ಥಾಪಿಸಿದ ಸ್ವ-ಉದ್ಯೋಗಿ ಮಹಿಳಾ ಸಂಘ (ಸೆಲ್ಫ್ ಎಂಪ್ಲಾಯ್ಡ್ ವಿಮೆನ್ಸ್ ಅಸೋಸಿಯೇಷನ್– ಸೇವಾ) ಆಗಿನ ಕಾಲಕ್ಕೆ ಒಂದು ಕ್ರಾಂತಿಕಾರಿ ಸಂಘಟನೆಯಾಗಿತ್ತು. ಕ್ರಾಂತಿಕಾರಿ ಎನ್ನುವ ಪದವನ್ನು ಭಿನ್ನ ರೀತಿಯಲ್ಲಿ ಅರ್ಥೈಸಬೇಕು. ಬಡವರ ಸಂಘಟನೆಗೆ ಕ್ರಾಂತಿಕಾರಿ ಪದ ಅಂಟಿದಾಗ ಅದು ಧರಣಿ, ಸತ್ಯಾಗ್ರಹ, ಪ್ರತಿಭಟನೆಯ ಚಿತ್ರಣವನ್ನು ಕೊಡುತ್ತದೆ. ಆದರೆ ಗಾಂಧಿವಾದವನ್ನು ಮೈಗೂಡಿಸಿಕೊಂಡವರ ಕ್ರಾಂತಿ ಬಾಹ್ಯವಾಗಿ ಕಾಣುವುದಿಲ್ಲ. ಅದು ಅಂತರಂಗದಲ್ಲಿಯೇ ಕೆಲಸ ಮಾಡಿ ಸಾಫಲ್ಯವನ್ನು ಪಡೆಯುತ್ತದೆ. ಸತ್ಯದ ಶೋಧನೆಯನ್ನು ಅಂತರಂಗದಲ್ಲಿಯೇ ನಡೆಸಿದ ಮಹಾತ್ಮ ಗಾಂಧಿಯವರ ವಿಚಾರವಾದ ಇದ್ದದ್ದು ಶಾಂತಿ, ಸೌಜನ್ಯ, ಆತ್ಮಗೌರವ, ಸ್ವಾವಲಂಬನೆ, ಸತ್ಯ ಮತ್ತು ನ್ಯಾಯದ ಪರವಾಗಿ ರಾಜಿಯಿಲ್ಲದೇ ನಿಲ್ಲುವುದರಲ್ಲಿತ್ತು. ಇಳಾ ಅವರು ಗಾಂಧಿಯ ಆತ್ಮವನ್ನು ಮೈಗೂಡಿಸಿಕೊಂಡಂತೆ ಇದ್ದರು.

‘ಸೇವಾ’ ಸಂಸ್ಥೆಯನ್ನು ಅವರು ಒಂದು ಕಾರ್ಮಿಕ ಸಂಘವಾಗಿ ನೋಂದಾಯಿಸಿದ್ದು ಕ್ರಾಂತಿಕಾರಿ ನಡೆಯಾಗಿತ್ತು. ಸಾಮಾನ್ಯವಾಗಿ ಸಂಘಟಿತ ಕ್ಷೇತ್ರದ ಉದ್ಯಮಗಳಲ್ಲಿ ತಮ್ಮ ಹಕ್ಕು, ಸವಲತ್ತುಗಳನ್ನು ಪಡೆಯಲು ಕಾರ್ಮಿಕರು ಒಟ್ಟಾಗಿ ಕಾರ್ಮಿಕ ಸಂಘವನ್ನು ರಚಿಸಿಕೊಂಡಿರುತ್ತಾರೆ. ಆದರೆ ‘ಸೇವಾ’ ಸಂಸ್ಥೆಯು ಸ್ವ-ಉದ್ಯೋಗಿಗಳನ್ನು ಒಳಗೊಂಡಿದ್ದರಿಂದ ಅಲ್ಲಿ ತಮ್ಮ ಹಕ್ಕುಗಳನ್ನು ಒತ್ತಾಯಿಸಿ ಕೇಳಲು ಅವಕಾಶವಿರಲಿಲ್ಲ. ಹೀಗಾಗಿ ಈ ಸಂಘವನ್ನು ನೋಂದಾಯಿಸಲು ಹೋದಾಗ, ‘ಇದರಿಂದ ಪ್ರಯೋಜನವೇನು? ನಿಮ್ಮ ಹಕ್ಕುಗಳಿಗಾಗಿ ಯಾರೊಂದಿಗೆ ಹೋರಾಡುವಿರಿ?’ ಎಂದು ನೋಂದಣಾಧಿಕಾರಿ ಕೇಳಿದ್ದು ಸಹಜವಾಗಿಯೇ ಇತ್ತು. ಆದರೆ ಇಳಾ ಅವರ ಮನಸ್ಸಿನಲ್ಲಿ ಇದ್ದದ್ದೇ ಬೇರೆ. ಸ್ವ-ಉದ್ಯೋಗಿ ಮಹಿಳೆಯರು ರಸ್ತೆಬದಿಯಲ್ಲಿ ವ್ಯಾಪಾರ ಮಾಡುತ್ತಾರೆ. ಹಳೇ ಪೇಪರ್, ತ್ಯಾಜ್ಯದ ಮರುಬಳಕೆ ಕಾರ್ಯದಲ್ಲಿ ತೊಡಗುತ್ತಾರೆ. ತರಕಾರಿ ಮಾರುತ್ತಾರೆ. ಬಟ್ಟೆ ಹೊಲೆಯುತ್ತಾರೆ. ಈ ಎಲ್ಲವನ್ನೂ ಮಾಡಲು ಸ್ಥಳಾವಕಾಶ ಬೇಕು. ಅಧಿಕಾರಾರೂಢರಿಂದ ಅಥವಾ ಇತರ ಶಕ್ತಿಗಳಿಂದ ಅವರ ಕೆಲಸಕ್ಕೆ ತೊಂದರೆ ಉಂಟಾಗಬಾರದು. ಅವರಿಗೆ ಒಂದು ಗುರುತು ಪತ್ರ, ಒಂದು ಅಸ್ತಿತ್ವ, ಒಂದು ಸಂಘಟನೆ ಬೇಕು. ಹೀಗಾಗಿ, ಇಂತಹದ್ದೊಂದು ಸಂಘದ ಅವಶ್ಯಕತೆ ಇತ್ತು.

ಒಂದು ಮಟ್ಟದಲ್ಲಿ ದೈನಂದಿನ ಉದ್ಯೋಗವನ್ನು ಸುಗಮಗೊಳಿಸುವ ಕೆಲಸ ಮಾಡಿದ್ದಾಯಿತು. ಮುಂದೆ? ಸಂಘಟಿತ ಕ್ಷೇತ್ರದ ಉದ್ಯೋಗಿಗಳಿಗೆ ಏನೇನೆಲ್ಲಾ ಸಿಗಬಹುದೋ ಅವೆಲ್ಲವೂ ಅಸಂಘಟಿತ ಕ್ಷೇತ್ರದ ಹೆಣ್ಣುಮಕ್ಕಳಿಗೂ ಸಿಗುವಂತಾಗಬೇಕು. ಉಳಿತಾಯದ ಹಣವನ್ನು ಭವಿಷ್ಯಕ್ಕಾಗಿ ಭದ್ರವಾಗಿ ಕಾಪಿಡಲು, ಉದ್ಯೋಗಕ್ಕೆ ಪೂರಕವಾದ ಆರ್ಥಿಕ ಸಂಪನ್ಮೂಲಗಳನ್ನು ಕಲೆಹಾಕಲು ಮತ್ತು ಸಾಲ ಪಡೆಯಲು ತಮ್ಮದೇ ಒಂದು ಸಹಕಾರಿ ಬ್ಯಾಂಕನ್ನು ಸ್ಥಾಪಿಸಿದರು. ಮೈಕ್ರೊಫೈನಾನ್ಸ್ ಎನ್ನುವ ಪದವು ಬಳಕೆಗೆ ಬರುವುದಕ್ಕೆ ಮುನ್ನವೇ, ಸ್ವಸಹಾಯ ಗುಂಪುಗಳು ಅಸ್ತಿತ್ವಕ್ಕೆ ಬರುವ ಮೊದಲೇ ಆಕೆ ಮಹಿಳೆಯರ ಸಂಘಟನೆಯ ಬಲದ ಮೇಲೆ ಇಂತಹದ್ದೊಂದು ಸಾಧನೆ ಮಾಡಿದ್ದರು. ಮಹಿಳೆಯರು ಮತ್ತು ಅವರ ಕುಟುಂಬದವರ ಆರೋಗ್ಯ ವಿಮೆಗಾಗಿ ‘ವಿಮೋ ಸೇವಾ’ ಸಂಸ್ಥೆಯನ್ನು ಅಸ್ತಿತ್ವಕ್ಕೆ ತಂದರು.

ಇಳಾ ಅವರು ಹುಟ್ಟುಹಾಕಿದ ಅನೇಕ ಸಂಸ್ಥೆಗಳಿಗೆ ‘ಸೇವಾ’ದ ಹೆಸರಿದ್ದರೂ ಕಾರ್ಮಿಕರ ಸಂಘ ಮೂಲ ಬೇರಾಗಿತ್ತು. ಅಲ್ಲಿಂದ ಹೊಮ್ಮಿದ ಅನೇಕ ಬಿಳಲುಗಳು ಮಹಿಳೆಯರ ಸಶಕ್ತೀಕರಣಕ್ಕಾಗಿ ಕೆಲಸ ಮಾಡುತ್ತ ಹೊಸ ಬೇರುಗಳನ್ನು ಬೆಳೆಸಿಕೊಂಡವು. ಒಂದೊಂದು ಸಂಸ್ಥೆಗೂ ಒಬ್ಬ ವಿದ್ಯಾವಂತ ಮಹಿಳಾ ಪ್ರಮುಖರನ್ನು ನೇಮಿಸಲಾಯಿತು. ಆ ಸಂಸ್ಥೆಯು ಸಕ್ರಿಯವಾಗಿ ನಡೆಯತೊಡಗಿದ ಕಾಲಕ್ಕೆ ಅದರ ದೈನಂದಿನ ನಿರ್ವಹಣೆಯಿಂದ ಇಳಾ ದೂರವಾಗುತ್ತಿದ್ದರು. ಹೀಗಾಗಿಯೇ ಈ ಎಲ್ಲ ಸಂಸ್ಥೆಗಳಲ್ಲಿ ಆಕೆ ಮಾರ್ಗದರ್ಶಕರಾಗಿದ್ದರೂ ಅವುಗಳ ಕಾರ್ಯಚಟುವಟಿಕೆಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರಲಿಲ್ಲ. ಬೆಳೆಸಿದ ಸಂಸ್ಥೆಯನ್ನು ಬಿಟ್ಟುಕೊಡುವುದು ಯಾವುದೇ ನಾಯಕರಿಗೆ ಸುಲಭವಾದ ಸಂಗತಿಯಲ್ಲ. ಆದರೆ ಇಳಾ ಅವರಿಗೆ ಒಂದು ರೀತಿಯ ನಿರ್ಲಿಪ್ತತೆಯಿತ್ತು. ಹೀಗಾಗಿ ತಾವು ಕಟ್ಟಿದ ಒಂದೊಂದು ಸಂಸ್ಥೆಗೂ ನಾಯಕರನ್ನು ಹುಡುಕಿ, ಅವರಿಗೆ ಸಂಸ್ಥೆಯ ಜವಾಬ್ದಾರಿಯನ್ನು ಹಸ್ತಾಂತರಿಸಿದ್ದರು.

ಇಳಾ ಅವರ ಕೆಲಸದಲ್ಲಿ ನಮಗೆ ಎರಡು ಪ್ರಮುಖ ಲಕ್ಷಣಗಳು ಕಾಣುತ್ತಿದ್ದವು. ಮೊದಲನೆಯದು, ಬಡ ಮಹಿಳೆಯರನ್ನು ಕೇಂದ್ರವಾಗುಳ್ಳ ಕೆಲಸ. ಹಣಕ್ಕಿಂತ ಜನ ಮುಖ್ಯ ಎನ್ನುವುದನ್ನು ಅರಿತ ಅವರು ಈ ಕೆಲಸವನ್ನು ಸಹಕಾರಿ ಸಂಸ್ಥೆಗಳ ಮೂಲಕ ಮಾಡಿದರು.

ಎರಡನೆಯದು, ಮಹಿಳಾ ಸಶಕ್ತೀಕರಣದ ಬಗ್ಗೆ ಅವರು ಸೆಮಿನಾರುಗಳಲ್ಲಿ ಪಾಲ್ಗೊಂಡು ಭಾಷಣ ಮಾಡುತ್ತಿರಲಿಲ್ಲ. ಬದಲಿಗೆ, ಬಡ ಮಹಿಳೆಯರ ಸಬಲೀಕರಣಕ್ಕಾಗಿ ತಮ್ಮ ಅಷ್ಟೂ ಚೈತನ್ಯವನ್ನು ಧಾರೆಯೆರೆದಿದ್ದರು. ಹೀಗಾಗಿ ಅವರ ಕೆಲಸದಲ್ಲಿ ಸ್ಪಷ್ಟತೆಯಿತ್ತು.

ಇಳಾ ಅವರ ಬಗ್ಗೆ ನನಗಿರುವ ನೆನಪುಗಳಲ್ಲಿ ಅತ್ಯಂತ ಪ್ರಿಯವಾದದ್ದೆಂದರೆ, ನಮ್ಮ ವಿದ್ಯಾರ್ಥಿಗಳೊಂದಿಗೆ ನಡೆದ ಪ್ರಶ್ನೋತ್ತರದಲ್ಲಿ ಆಕೆ ಕೊಟ್ಟ ಒಂದು ಜವಾಬು. ಯುವ ವಿದ್ಯಾರ್ಥಿನಿಯೊಬ್ಬಳು ‘ನಿಮ್ಮ ಜೀವನದ ಗುರಿ ಏನಿತ್ತು? ಅದರಲ್ಲಿ ಎಷ್ಟನ್ನು ಸಾಧಿಸಿದ್ದೀರಿ?’ ಎಂದು ಕೇಳಿದ ಪ್ರಶ್ನೆಗೆ ಇಳಾ ‘ಯಾವ ಗುರಿಯೂ ಇರಲಿಲ್ಲ. ಸಮಸ್ಯೆಗಳು ಕಂಡವು, ಅವನ್ನು ಪರಿಹರಿಸಲು ಕೆಲಸ ಮಾಡಿದೆವು. ಅವು ಪರಿಹಾರವಾಗುವ ವೇಳೆಗೆ ಹೊಸ ಸಮಸ್ಯೆಗಳು ಕಂಡವು. ಹೀಗಾಗಿ, ಗುರಿ ಎನ್ನುವುದಿಲ್ಲ. ಅದೊಂದು ಪ್ರಯಾಣವಷ್ಟೇ’ ಅಂದಿದ್ದರು. ಆ ಪಯಣವನ್ನು ಆಕೆ ನಿರಂತರವಾಗಿ ಮುಂದುವರಿಸಿದ್ದರು.

ಅವರ ಕೆಲಸವು ಒಂದು ನೆಲೆಯಲ್ಲಿ, ಮಹಿಳೆಯರು ತಮ್ಮ ಸಮಸ್ಯೆಗಳಿಗೆ ಸ್ವಯಂ ಪರಿಹಾರ ಕಂಡುಕೊಳ್ಳಬೇಕೆನ್ನುವ ಗುರಿಯೊಂದಿಗೆ ಸ್ವಾಯತ್ತ ಸಂಸ್ಥೆಗಳನ್ನು ಕಟ್ಟುವತ್ತ ಗಮನ ಕೇಂದ್ರೀಕರಿಸಿದಂತೆ ಕಾಣುತ್ತದೆ. ಆದರೆ ಮತ್ತೊಂದು ನೆಲೆಯಲ್ಲಿ, ಈ ಸಮಸ್ಯೆಗಳೆಲ್ಲಕ್ಕೂ ಸಾಂಸ್ಥಿಕ ಚೌಕಟ್ಟಿನಲ್ಲಿ ಪರಿಹಾರ ಕಂಡುಕೊಳ್ಳಬೇಕಾದರೆ ಅದು ಸರ್ಕಾರದಿಂದಲೇ ಸಾಧ್ಯ ಎನ್ನುವ ನಂಬಿಕೆಯೂ ಅವರಲ್ಲಿ ಇದ್ದಂತಿತ್ತು. ಹೀಗಾಗಿಯೇ ಯೋಜನಾ ಆಯೋಗ, ರಾಜ್ಯಸಭೆ, ರಿಸರ್ವ್ ಬ್ಯಾಂಕಿನ ಕೇಂದ್ರೀಯ ಆಡಳಿತ ಮಂಡಳಿಯಲ್ಲಿ ತಮಗಿದ್ದ ಸ್ಥಾನಗಳನ್ನು ಬಳಸಿಕೊಂಡು ತಮ್ಮ ಕ್ಷೇತ್ರದ ಮಹಿಳೆಯರ ಪರವಾಗಿ ಉತ್ತಮ ನೀತಿಗಳನ್ನು ರೂಪಿಸುವಲ್ಲಿಯೂ ಅವರು ಶ್ರಮಿಸಿದರು.

ಯಾವ ಕೆಲಸ ಮಾಡಬೇಕು, ಯಾವುದನ್ನು ಬಿಟ್ಟುಕೊಡಬೇಕು, ಎಲ್ಲಿ ಸರ್ಕಾರದೊಂದಿಗೆ ಸೇರಿ ಕೆಲಸ ಮಾಡಬೇಕು, ಯಾವಾಗ ವಿರೋಧಿಸಿ ಪ್ರತಿಭಟಿಸಬೇಕು ಎಂಬುದೆಲ್ಲವನ್ನೂ ಸೂಕ್ಷ್ಮವಾಗಿ ಅರಿತಿದ್ದ ಇಳಾ ಅಪಾರ ಒಳನೋಟಗಳಿದ್ದವರು. ತಮ್ಮ ನಂಬಿಕೆಗೆ ಅನುಸಾರವಾಗಿ ತಮ್ಮ ಪಾಡಿಗೆ ಕೆಲಸ ಮಾಡಿದವರು. ಅಂತಹ ಸರಳವಾದ ನಿಲುವಿನಿಂದಲೇ ಎಷ್ಟು ವ್ಯಾಪಕವಾದ ಪ್ರಭಾವವನ್ನು ಬೀರಿದ್ದರು ಎನ್ನುವುದು ಅವರು ಹುಟ್ಟುಹಾಕಿದ ಸಂಸ್ಥೆಗಳನ್ನು ಕಂಡಾಗ ಅರ್ಥವಾಗುತ್ತದೆ. ಆ ಸಂಸ್ಥೆಗಳ ಮುಖ್ಯಸ್ಥರನ್ನು ಕಂಡಾಗ, ತಮ್ಮ ಜೀವಿತಾವಧಿಯಲ್ಲಿಯೇ ತಮ್ಮಂತಹ ಹತ್ತಾರು ಮಹಿಳೆಯರನ್ನು ಆಕೆ ಬೆಳೆಸಿದರು ಎನ್ನುವುದೂ ಕಾಣುತ್ತದೆ. ಅದೊಂದು ದೊಡ್ಡ ವಿಷಯ.

ಇಳಾ ಅವರ ಅನುಭವಕಥನ ಕನ್ನಡಕ್ಕೆ ಬರಬೇಕು ಎನ್ನುವುದು ನನ್ನ ಬಹುಕಾಲದ ಆಸೆ. ಅದು ಸಾಧ್ಯವಾದರೆ ನಮ್ಮ ಪ್ರಪಂಚವೂ ಸಮೃದ್ಧಗೊಳ್ಳುತ್ತದೆ ಎನ್ನುವ ನಂಬಿಕೆ ಇದೆ.

ಇಳಾ ಅವರ ಭೌತಿಕ ಪಯಣ ಮುಗಿದಿದೆ, ಆದರೆ ಆಕೆಯ ಬದುಕಿನ ಮೌಲ್ಯಗಳನ್ನು ನಮ್ಮ ಪಯಣದಲ್ಲಿ ಅಳವಡಿಸಿಕೊಳ್ಳುವ ಮೂಲಕ ಅದನ್ನು ಮುಂದುವರಿಸುವ ಜವಾಬ್ದಾರಿ ನಮ್ಮ ಮೇಲಿದೆ. ಇಳಾ ಅವರಲ್ಲಿ ಗಾಂಧಿ ಇದ್ದರು. ನಮ್ಮಲ್ಲಿ ತುಸು ಮಟ್ಟಿಗಾದರೂ ಇಳಾ ಇದ್ದರೆ ಸೌಜನ್ಯ ಮತ್ತು ಮೌಲ್ಯಾಧಾರಿತ ಪ್ರಪಂಚದಲ್ಲಿ ನಾವು ಬದುಕುತ್ತೇವೆ. ಹೀಗೆ ಅವರ ಆತ್ಮ ಜೀವಂತವಾಗಿರುವುದು ಮುಂದಿನ ತಲೆಮಾರುಗಳು ಅವರ ಮೌಲ್ಯಗಳನ್ನು ಅಂತರ್ಗತ ಮಾಡಿಕೊಳ್ಳುವ ಮೂಲಕ. ಅವರ ಆತ್ಮ ನಮ್ಮ ನಡುವೆ ಇರಬೇಕೆನ್ನುವ ಬಯಕೆ ಮತ್ತು ನಂಬಿಕೆ ಎರಡೂ ನನ್ನಲ್ಲಿವೆ.

ಚುರುಮುರಿ

ಹೂಡಿಕೆ ರಾಜ್ಯ

• ಸುಮಂಗಲಾ

‘ಮೊರ್ಬಿ ಸೇತುವೆ ದುರಸ್ತಿಗೆ ಎರಡು ಕೋಟಿ ರೂಪಾಯಿ ಮಂಜೂರು ಆಗಿದ್ರಾಗೆ ರಿಪೇರಿಗೆ ಬರೀ ಹನ್ನೆರಡು ಲಕ್ಷ ಖರ್ಚು ಮಾಡ್ಯಾರಂತ. ನೋಡು, ಮಿತವ್ಯಯದಾಗೆ ಕೆಲಸ ಮಾಡೂದು ಹೆಂಗಂತ ಕಂಡ್ ಹಿಡಿದಾರೆ!’ ಬೆಕ್ಕಣ್ಣ ಉದ್ಗರಿಸಿತು.

‘ಮಿತವ್ಯಯ ಅಲ್ಲಲೇ, ರೊಕ್ಕ ಗುಳುಂ ಮಾಡೂ ಹೊಸ ವಿಧಾನ ಕಂಡ್ ಹಿಡದು, ನೂರಾರು ಜನ ಸಾಯೂ ಹಂಗೆ ಮಾಡ್ಯಾರಲೇ’ ನಾನು ಬೈದೆ.

‘ದುರಸ್ತಿ ಮಾಡೂದು ನಮ್ಮ ಇಚ್ಛೆ, ಮಂದಿ ಸಾಯೂದು ದೇವರ ಇಚ್ಛೆ ಅಂತ ಆ ಕಂಪನಿಯವರು ಬರೋಬ್ಬರಿ ಹೇಳ್ಯಾರ. ಅದ್ಸರಿ, ನೀ ಯಾವಾಗ ನೋಡಿದ್ರೂ ಕೈಯಾಗೆ ಕಾಸಿಲ್ಲ ಅಂತ ಬಿಕ್ಕುತಾ ಇರತೀ. ಈ ಥರಾ ಏನಾರ ದುರಸ್ತಿ ಕಂಪನಿ ಶುರು ಮಾಡೂಣು. ಮಂಜೂರಾದ ರೊಕ್ಕದಾಗೆ ಬರೇ 6 ಪರ್ಸೆಂಟ್ ದುರಸ್ತಿಗೆ ಖರ್ಚು ಮಾಡಿ, 94 ಪರ್ಸೆಂಟ್ ಉಳಿಸಿದ್ರಾತು’ ಬೆಕ್ಕಣ್ಣ ಹೊಸ ಯೋಜನೆ ಮುಂದಿಟ್ಟಿತು.

‘ತೆಲಿ ಕೆಟ್ಟೈತಿ ನಿನಗ. ಹಂಗೆಲ್ಲ ಕಂಪನಿ ಶುರುಮಾಡಾಕೆ ಅದ್ರಾಗೆ ಪರಿಣತಿ ಇರಬೇಕಲೇ...’

‘ಪರಿಣತಿ ಗಿರಿಣತಿ ಏನೂ ಬ್ಯಾಡ, ಇದು ಹೊಸಾ ಗುಜರಾತ್ ಮಾದರಿ. ಡಬಲ್ ಎಂಜಿನ್ ಸರ್ಕಾರ ಇದ್ದಾಗ ನಿನಗ್ಯಾತರ ಅಂಜಿಕಿ?’ ಬೆಕ್ಕಣ್ಣ ವಾದಿಸಿತು.

‘ನಮಗ ಗುಜರಾತ್ ಮಾದರಿ ಎದಕ್ಕ ಬೇಕು? ಕರುನಾಡಿನ ಮಾದರಿಯೇ ಸಾಕು ಬಿಡಲೇ. ನೋಡು, ಮೊನ್ನೆ ಬಂಡವಾಳ ಹೂಡಿಕೆ ಸಮಾವೇಶದಾಗೆ ಹತ್ತು ಲಕ್ಷ ಕೋಟಿ ರೂಪಾಯಿ ಹೂಡಿಕೆ ಹರಿದುಬಂದೈತಿ. ನಮ್ಮದೀಗ ಹೂಡಿಕೆ ರಾಜ್ಯ. ಬ್ಯಾರೆಬ್ಯಾರೆ ಕ್ಷೇತ್ರದಾಗೆ ಹೂಡಿಕೆಗೆ ಮುಂದ್ ಬಂದಾರೆ’ ಸುದ್ದಿ ತೋರಿಸಿದೆ.

‘ಹೌದೇನು... ನಮ್ಮ ಸರ್ಕಾರಿ ಆಸ್ಪತ್ರೆ ಸುಧಾರಣೆ, ಬೆಂಗಳೂರಿನ ರಸ್ತೆ ಗುಂಡಿ ಮುಚ್ಚೂದು, ಕೆರೆ, ನದಿಗೆ ಬಿಡೋ ತ್ಯಾಜ್ಯ ನೀರು ಸ್ವಚ್ಛ ಮಾಡೂದು, ಮಲದ ಗುಂಡಿಗೆ ಮನುಷ್ಯರ ಬದಲಿಗೆ ಯಂತ್ರಗಳನ್ನ ಇಳಿಸೋದು, ಇಂಥಾ ಸುಧಾರಣೆ ಕ್ಷೇತ್ರದಾಗೂ ಏನರ ಹೂಡಿಕೆ ಮಾಡತಾರೇನು?’ ಬೆಕ್ಕಣ್ಣ ಅಮಾಯಕನಂತೆ ಕೇಳಿತು!

ಸಂಗತ

ಗ್ರಂಥಾಲಯ: ಓದುಗರ ಕೊರತೆಯೇಕೆ?

ಸಾರ್ವಜನಿಕ ಗ್ರಂಥಾಲಯಗಳಲ್ಲಿ ಓದುಗರಿಗೆ ಗುಣಮಟ್ಟದ ಪುಸ್ತಕಗಳು ಸಿಗುತ್ತಿಲ್ಲ ಎನ್ನುವ ಆರೋಪ ಸತ್ಯಕ್ಕೆ ಹತ್ತಿರವಾದುದು

• ರಾಜಕುಮಾರ ಕುಲಕರ್ಣಿ

ಪ್ರತಿವರ್ಷ ನವೆಂಬರ್ ತಿಂಗಳಲ್ಲಿ ಗ್ರಂಥಾಲಯ ಸಪ್ತಾಹವನ್ನು ಆಚರಿಸಲಾಗುತ್ತದೆ. ವಾರಪೂರ್ತಿ ಪುಸ್ತಕ ಪ್ರದರ್ಶನ, ಪರಿಣತರಿಂದ ವಿಶೇಷ ಉಪನ್ಯಾಸಗಳನ್ನು ಆಯೋಜಿಸಲಾಗುತ್ತದೆ. ಈ ಮೂಲಕ ಓದುಗರನ್ನು ಗ್ರಂಥಾಲಯದತ್ತ ಆಕರ್ಷಿಸುವ ಪ್ರಯತ್ನ ಸಾರ್ವಜನಿಕ ಗ್ರಂಥಾಲಯ ಇಲಾಖೆಯದ್ದು.

ಇದೇ ಸಂದರ್ಭ ಸಾರ್ವಜನಿಕ ಗ್ರಂಥಾಲಯಗಳಿಗೆ ಬರುವ ಓದುಗರ ಸಂಖ್ಯೆ ಏಕೆ ಇಳಿಮುಖವಾಗುತ್ತಿದೆ ಎಂದು ಯೋಚಿಸಬೇಕಿದೆ. ಜನರಲ್ಲಿ ಓದುವ ಅಭಿರುಚಿ ಕಡಿಮೆಯಾಗುತ್ತಿದೆ ಎಂದು ಆರೋಪಿಸುವುದರಲ್ಲಿ ಯಾವುದೇ ಹುರುಳಿಲ್ಲ. ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಸರತಿಸಾಲಿನಲ್ಲಿ ನಿಂತು ಪುಸ್ತಕಗಳನ್ನು ಖರೀದಿಸುವ ಚಿತ್ರಣ ನಮ್ಮ ಕಣ್ಣೆದುರಿಗಿದೆ. ಅದೆಷ್ಟೋ ಪ್ರಕಾಶನ ಸಂಸ್ಥೆಗಳು ತಮ್ಮ ಪುಸ್ತಕಗಳ ಮಾರಾಟಕ್ಕಾಗಿ ಪ್ರಜ್ಞಾವಂತ ಓದುಗರನ್ನು ನೆಚ್ಚಿಕೊಂಡಿವೆಯೇ ವಿನಾ ಸಾರ್ವಜನಿಕ ಗ್ರಂಥಾಲಯಗಳನ್ನಲ್ಲ.

ಸನ್ನಿವೇಶ ಹೀಗಿರುವಾಗ, ಸಾರ್ವಜನಿಕ ಗ್ರಂಥಾಲಯಗಳಲ್ಲೇಕೆ ಓದುಗರ ಸಂಖ್ಯೆ ಕ್ಷೀಣಿಸುತ್ತಿದೆ ಎನ್ನುವ ಪ್ರಶ್ನೆ ಎದುರಾಗುತ್ತದೆ. ಇದಕ್ಕೆ ಉತ್ತರವಾಗಿ, ಓದುಗರಿಗೆ ಗುಣಮಟ್ಟದ ಪುಸ್ತಕಗಳು ಗ್ರಂಥಾಲಯಗಳಲ್ಲಿ ಸಿಗುತ್ತಿಲ್ಲ ಎನ್ನುವ ಆರೋಪ ಕೇಳಿಬರುತ್ತಿದೆ. ಈ ಆರೋಪ ಸತ್ಯಕ್ಕೆ ಹತ್ತಿರವಾಗಿದೆ. ಏಕೆಂದರೆ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಪುಸ್ತಕಗಳ ಖರೀದಿಯ ಒಟ್ಟು ವಿಧಾನವೇ ಅವೈಜ್ಞಾನಿಕವಾಗಿದೆ. ಪ್ರಕಾಶಕರಿಂದ ಇಂತಿಷ್ಟು ಪ್ರಮಾಣದಲ್ಲಿ ಪುಸ್ತಕಗಳ ಪ್ರತಿಗಳನ್ನು ಖರೀದಿಸಬೇಕೆಂಬ ನಿಯಮ ಚಾಲ್ತಿಯಲ್ಲಿದೆ. ಪ್ರಕಾಶಕರಿಗೆ ಉತ್ತೇಜನ ಕೊಡಲು ಜಾರಿಯಲ್ಲಿರುವ ಈ ವಿಧಾನದಿಂದಾಗಿ ಗುಣಮಟ್ಟದ ಪುಸ್ತಕಗಳ ಕೊರತೆ ಗ್ರಂಥಾಲಯಗಳಲ್ಲಿ ಎದ್ದುಕಾಣುತ್ತಿದೆ.

ಅದೆಷ್ಟೋ ಪ್ರಕಾಶಕರು ಸಾರ್ವಜನಿಕ ಗ್ರಂಥಾಲಯಗಳಿಗೆಂದೇ ಪುಸ್ತಕಗಳನ್ನು ಪ್ರಕಟಿಸುತ್ತಿದ್ದಾರೆ. ಒಬ್ಬರೇ ಪ್ರಕಾಶಕರು ಬೇರೆ ಬೇರೆ ಹೆಸರುಗಳಲ್ಲಿ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಾಶನ ಸಂಸ್ಥೆಗಳನ್ನು ಹುಟ್ಟುಹಾಕಿ ಪುಸ್ತಕಗಳನ್ನು ಪ್ರಕಟಿಸುತ್ತಿರುವುದೂ ಇದೆ. ಕೆಲವು ವರ್ಷಗಳ ಹಿಂದೆ, ಹಿಂದುಳಿದ ಭಾಗವೆಂಬ ಕಾರಣದಿಂದ ಹೈದರಾಬಾದ್ ಕರ್ನಾಟಕ ಭಾಗದ (ಈಗಿನ ಕಲ್ಯಾಣ ಕರ್ನಾಟಕ) ಪ್ರಕಾಶಕರಿಂದ ಪ್ರತೀ ಪುಸ್ತಕದ 1,500 ಪ್ರತಿಗಳನ್ನು ಖರೀದಿಸಬೇಕೆನ್ನುವ ಆದೇಶವನ್ನು ಸರ್ಕಾರ ಹೊರಡಿಸಿತ್ತು. ಇದಕ್ಕಾಗಿ ಪ್ರಕಟಣಾ ವರ್ಷದ ನಿರ್ಬಂಧವನ್ನು ಕೂಡ ತೆಗೆದುಹಾಕಲಾಗಿತ್ತು. ಪರಿಣಾಮವಾಗಿ, ಆ ಭಾಗದ ಪ್ರಕಾಶಕರು ತಮ್ಮ ಪ್ರಕಟಣೆಯ ಅಳಿದುಳಿದ ಸರಕನ್ನೆಲ್ಲ ಮಾರಾಟ ಮಾಡಿ ಧನ್ಯರಾದರು. ಪುಸ್ತಕದಂತಹ ಸಂಸ್ಕೃತಿಗೆ ಈ ರೀತಿಯ ವಿನಾಯಿತಿ ಮತ್ತು ಔದಾರ್ಯವನ್ನು ತೋರಿಸುವ ಅಗತ್ಯವಿತ್ತೇ ಎನ್ನುವ ಸಂದೇಹ ಕಾಡದೇ ಇರದು.

ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲೇ ಗ್ರಂಥಾಲಯಗಳು ಅವ್ಯವಸ್ಥೆಯ ಆಗರವಾಗಿರುವಾಗ ಇನ್ನು ಗ್ರಾಮೀಣ ಭಾಗದಲ್ಲಿನ ಗ್ರಂಥಾಲಯಗಳು ಚಿಂತಾಜನಕ ಸ್ಥಿತಿಯಲ್ಲಿವೆ. ಸ್ಥಳೀಯರನ್ನೇ ಮೇಲ್ವಿಚಾರಕರೆಂದು ನೇಮಕ ಮಾಡಿಕೊಳ್ಳುತ್ತಿರುವುದರಿಂದ ಅಲ್ಲಿನ ಗ್ರಂಥಾಲಯಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಸ್ಥಳೀಯರ ಬೆಂಬಲವಿರುವುದರಿಂದ ಮೇಲ್ವಿಚಾರಕರು ಗ್ರಂಥಾಲಯಗಳಿಗೆ ಬೀಗಹಾಕಿ ಖಾಸಗಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಈ ಮೊದಲು ಗ್ರಾಮೀಣ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುವ ಮೇಲ್ವಿಚಾರಕರಿಗಾಗಿ ಪುನಶ್ಚೇತನ ಶಿಬಿರಗಳನ್ನು ಆಯೋಜಿಸಲಾಗುತ್ತಿತ್ತು. ಮೇಲ್ವಿಚಾರಕರಲ್ಲಿ ವಿಷಯಜ್ಞಾನ ಮತ್ತು ತರಬೇತಿಯ ಕೊರತೆ ಎದ್ದು ಕಾಣುತ್ತಿದ್ದುದನ್ನು ಇಂತಹ ಶಿಬಿರಗಳ ಸಂಪನ್ಮೂಲ ವ್ಯಕ್ತಿಯಾಗಿ ನಾನು ಕಂಡಿದ್ದೇನೆ. ಈಗ ಶಿಬಿರ ಆಯೋಜಿಸುತ್ತಿಲ್ಲವೋ ಅಥವಾ ಸರ್ಕಾರದ ದಸ್ತಾವೇಜುಗಳ ಮಟ್ಟದಲ್ಲಿ ಮಾತ್ರ ದಾಖಲಾಗುತ್ತಿದೆಯೋ ತಿಳಿಯುತ್ತಿಲ್ಲ.



ಈ ನಡುವೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಪುಸ್ತಕಗಳ ಡಿಜಿಟಲೀಕರಣಕ್ಕೆ ಮುಂದಾಗಿದೆ. ಇದರಿಂದ ಪುಸ್ತಕಗಳನ್ನು ಅಸಂಖ್ಯಾತ ಓದುಗರಿಗೆ ತಲುಪಿಸಬಹುದು ಎನ್ನುವುದು ತಪ್ಪು ನಿರ್ಣಯವಾಗುತ್ತದೆ. ಜೊತೆಗೆ ಡಿಜಿಟಲೀಕರಣಗೊಳ್ಳುತ್ತಿರುವ ಪುಸ್ತಕಗಳು ಯಾವುವು ಮತ್ತು ಯಾವ ವಯೋಮಾನದ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಯೋಚನೆ ಮಾಡಬೇಕಾಗಿದೆ. ಡಿಜಿಟಲೀಕರಣಕ್ಕೆ ಖರ್ಚಾಗುವ ಹಣವನ್ನೇ ಯೋಗ್ಯ ಗುಣಮಟ್ಟದ ಪುಸ್ತಕಗಳ ಖರೀದಿಗಾಗಿ ವಿನಿಯೋಗಿಸಿದ್ದರೆ ಗ್ರಂಥಾಲಯಗಳನ್ನು ಪುನಶ್ಚೇತನಗೊಳಿಸಿದಂತೆ ಆಗುತ್ತಿತ್ತು.

ಒಂದುಕಡೆ ಅತಿಯಾದ ಮೊಬೈಲ್ ಬಳಕೆಯಿಂದ ಪುಸ್ತಕಗಳ ಓದಿನಿಂದ ವಿಮುಖವಾಗುತ್ತಿರುವ ಯುವಪೀಳಿಗೆ. ಇನ್ನೊಂದು ಕಡೆ, ಗ್ರಂಥಾಲಯಗಳನ್ನು ತಮ್ಮ ಹೊತ್ತುಗಳೆಯುವ ತಾಣಗಳೆಂದು ಭಾವಿಸಿರುವ ಕೆಲವು ವಯೋವೃದ್ಧರು. ಮತ್ತೊಂದು ಕಡೆ ಸಂಚಾರಿ ಗ್ರಂಥಾಲಯ ಸೇವೆ ಸ್ಥಗಿತಗೊಂಡು, ಧಾರಾವಾಹಿಗಳ ವೀಕ್ಷಕರಾಗಿ ಬದಲಾಗಿರುವ ಮನೆಯ ಗೃಹಿಣಿಯರು. ಈ ಎಲ್ಲರ ನಡುವೆ ಪುಸ್ತಕ ಮಳಿಗೆಗಳೇ ತಮ್ಮ ಓದಿನ ಶಮನಕ್ಕಿರುವ ಏಕೈಕ ಪರ್ಯಾಯ ಮಾರ್ಗವೆಂದು ಪುಸ್ತಕಗಳನ್ನು ಖರೀದಿಸಿ ಓದುತ್ತಿರುವ ಓದುಗರು. ಹೀಗೆ ಸಾರ್ವಜನಿಕ ಗ್ರಂಥಾಲಯಗಳ ಓದುಗ ವರ್ಗ ವಿಭಿನ್ನ ಕವಲುಗಳಾಗಿ ಒಡೆದುಹೋಗಿದೆ.

ಇಂಥ ಸನ್ನಿವೇಶದಲ್ಲಿ ಪುಸ್ತಕಗಳ ಓದಿನ ಸಂಸ್ಕೃತಿಯನ್ನು ಬಿತ್ತಿ ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಗ್ರಂಥಾಲಯ ಇಲಾಖೆ ಮಹತ್ವದ ಪಾತ್ರ ನಿರ್ವಹಿಸಬೇಕಿದೆ. ಕೊನೆಗೂ ಇಲಾಖೆ ಉತ್ತರದಾಯಿಯಾಗಿ ಇರಬೇಕಾದದ್ದು ತೆರಿಗೆ ಕಟ್ಟುತ್ತಿರುವ ಸಾರ್ವಜನಿಕರಿಗೆ ಎನ್ನುವ ಸತ್ಯ ಅರಿವಾಗಬೇಕು.

ಲೇಖಕ: ಮುಖ್ಯ ಗ್ರಂಥಪಾಲಕ, ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ, ಬಾಗಲಕೋಟೆ

ವಾಚಕರ ವಾಣಿ

ಕಬ್ಬು: ವೈಜ್ಞಾನಿಕ ದರ ನಿಗದಿಯಾಗಲಿ

ಕರ್ನಾಟಕದಲ್ಲಿ ಕಬ್ಬಿನ ದರವು ಗುಜರಾತ್, ಉತ್ತರಪ್ರದೇಶ, ಮಹಾರಾಷ್ಟ್ರದಂತಹ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆ ಪ್ರಮಾಣದಲ್ಲಿದೆ. ಅಷ್ಟೇ ಅಲ್ಲ, ಕಾರ್ಖಾನೆಗಳು ರೈತರಿಗೆ ನೀಡುವ ದರದಲ್ಲಿಯೂ ವ್ಯತ್ಯಾಸವಿದೆ. ಸರ್ಕಾರವು ವೈಜ್ಞಾನಿಕವಾಗಿ ಏಕರೂಪದ ದರ ನಿಗದಿಪಡಿಸದೇ ಇರುವುದರಿಂದ ರೈತರಿಗೆ ಅನ್ಯಾಯವಾಗುತ್ತಿದೆ.

ದೇಶದಾದ್ಯಂತ ರೈತರು ಕಬ್ಬು ಬೆಳೆಯಲು ಖರ್ಚು ಮಾಡುತ್ತಿರುವ ಹಣ ಹೆಚ್ಚುಕಡಿಮೆ ಒಂದೇ ಪ್ರಮಾಣದಲ್ಲಿ ಇದೆ. ಕಬ್ಬಿನಲ್ಲಿನ ಸಿಹಿಯ ಪ್ರಮಾಣ ಆಧರಿಸಿ ದರ ನಿಗದಿಪಡಿಸುವುದು ವೈಜ್ಞಾನಿಕ ಪದ್ಧತಿಯಾಗುತ್ತದೆ. ಆದರೆ ಹಾಗೆ ಮಾಡದೇ ಇರುವುದು, ಫಲವತ್ತಾದ ಕಬ್ಬು ಬೆಳೆಯುವ ರಾಜ್ಯದ ರೈತರ ಬದುಕನ್ನೇ ಅಸ್ತವ್ಯಸ್ತಗೊಳಿಸುತ್ತಿದೆ. ಕರ್ನಾಟಕದವರೇ ಆದ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ರಾಜ್ಯದ ರೈತರಿಗೆ ಆಗುತ್ತಿರುವ ಈ ಅನ್ಯಾಯವನ್ನು ಸರಿಪಡಿಸಬೇಕಿದೆ. ಈಗಾಗಲೇ ಕಬ್ಬು ಕಟಾವು ಆರಂಭವಾಗಿದೆ. ಈ ವರ್ಷವಾದರೂ ರೈತರಿಗೆ ನ್ಯಾಯ ದೊರೆಯುವಂತಾಗಲಿ.

ಶರಣಬಸವ ಆರ್. ಪತ್ತಾರ, ಕಲಬುರಗಿ

ದೆಹಲಿ ವಾಯುಮಾಲಿನ್ಯ: ಇತರರಿಗೆ ಪಾಠ

ದೆಹಲಿಯಲ್ಲಿ ಪ್ರಾಣವಾಯು ವಿಷವಾಯುವಾಗಿ ಬದಲಾಗುತ್ತಿರುವ ವಿದ್ಯಮಾನವು ಆತಂಕಕಾರಿಯಾಗಿದೆ. ದೆಹಲಿಯ ವಾಯುಮಾಲಿನ್ಯ ಮಿತಿಮೀರಿರುವುದಕ್ಕೆ ಸುತ್ತಮುತ್ತಲಿನ ಪ್ರದೇಶಗಳ ರೈತರು ಕೃಷಿ ಕೂಳೆಯನ್ನು ಸುಡುತ್ತಿರುವುದು ಹಾಗೂ ರಾಜಧಾನಿಯ ಸುತ್ತಲಿನ ಕಾರ್ಖಾನೆಗಳು ಹೊರಸೂಸುತ್ತಿರುವ ರಾಸಾಯನಿಕಯುಕ್ತ ಹೊಗೆಯೇ ಮುಖ್ಯ ಕಾರಣ ಎನ್ನಲಾಗುತ್ತಿದೆ. ಇದರ ಜೊತೆಗೆ ದೆಹಲಿಯಲ್ಲಿ ವಾಹನಗಳ ದಟ್ಟಣೆಯೂ ಹೆಚ್ಚುತ್ತಿದೆ. ಹಾಗಾಗಿ, ವಾಯುಮಾಲಿನ್ಯ ನಿಯಂತ್ರಣಕ್ಕೆ ಹೈಡ್ರೋಜನ್ ಆಧಾರಿತ ಇಂಧನ ತಂತ್ರಜ್ಞಾನದ ಪರಿಹಾರ ಸೂತ್ರ ಕಂಡುಕೊಳ್ಳುವುದು ಅವಶ್ಯಕವಾಗಿದೆ. ಅಲ್ಲದೆ ರಾಷ್ಟ್ರ ರಾಜಧಾನಿಯ ಇಂದಿನ ಪರಿಸ್ಥಿತಿಯ ವಿಕೋಪವನ್ನು ದೇಶದ ಉಳಿದ ನಗರಗಳೂ ಅರಿತು, ತುರ್ತಾಗಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದು ಉತ್ತಮ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ವಿದೇಶ ಪ್ರವಾಸದ ಕೊಡುಗೆ ಸಲ್ಲ

ಬಿಬಿಎಂಪಿ ಶಾಲೆಗಳಲ್ಲಿ ಶೇ 100ರಷ್ಟು ಫಲಿತಾಂಶ ಬಂದರೆ, ಆಯಾ ಶಾಲೆಯ ಮುಖ್ಯ ಶಿಕ್ಷಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲಾಗುವುದು ಎಂದು ಶಿಕ್ಷಣ ವಿಭಾಗದ ವಿಶೇಷ ಆಯುಕ್ತರು ಹೇಳಿರುವುದಾಗಿ ವರದಿಯಾಗಿದೆ (ಪ್ರ.ವಾ., ನ. 4). ಬಿಬಿಎಂಪಿ ಶಾಲೆಗಳ ಶಿಕ್ಷಕರಿಗೆ ಉತ್ತಮ ಸಂಬಳ ಕೊಡಲಾಗುತ್ತದೆ. ಪದೋನ್ನತಿ ದೊರೆಯುತ್ತದೆ. ವಿವಿಧ ರೀತಿಯ ರಜಾ ಸೌಲಭ್ಯಗಳಿವೆ. ವೈದ್ಯಕೀಯ ವೆಚ್ಚ ಮರುಪಾವತಿಗೂ ಅವಕಾಶವಿದೆ. ನಿವೃತ್ತಿಯ ನಂತರ ಪಿಂಚಣಿ ಸೌಲಭ್ಯವಿದೆ.

ಇಷ್ಟೆಲ್ಲಾ ಸೌಲಭ್ಯಗಳನ್ನು ಪಡೆಯುವ ಶಿಕ್ಷಕರ ಆದ್ಯ ಕರ್ತವ್ಯ ಉತ್ತಮ ಫಲಿತಾಂಶ ಕೊಡುವುದೇ ಆಗಿರುತ್ತದೆ. ಹೀಗಾಗಿ, ಅಂತಹ ಮುಖ್ಯ ಶಿಕ್ಷಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸುವ ಆಲೋಚನೆಯನ್ನು ಕೈಬಿಡಬೇಕು. ಉತ್ತಮ ಫಲಿತಾಂಶ ಕೊಡುವವರನ್ನು ಸೇವೆಯಲ್ಲಿ ಮುಂದುವರಿಸುವ ಭರವಸೆಯನ್ನೂ, ಕೊಡದವರನ್ನು ಮನೆಗೆ ಕಳುಹಿಸುವ ಶಿಕ್ಷೆಯನ್ನೂ ಜಾರಿಗೊಳಿಸಬೇಕು. ಆಗ ಶಾಲೆಯ ಫಲಿತಾಂಶ ತನ್ನಿಂತಾನೇ ಸುಧಾರಿಸುತ್ತದೆ. ಜೊತೆಗೆ, ಸರ್ಕಾರವು ಶಾಲೆಗಳಿಂದ ಉತ್ತಮ ಫಲಿತಾಂಶವನ್ನು ನಿರೀಕ್ಷಿಸಬೇಕೇ ವಿನಾ ಶೇ 100ರಷ್ಟು ಗುರಿ ಸಾಧಿಸಬೇಕೆಂದು ಒತ್ತಡ ಹಾಕುವುದು ಕಾರ್ಯಸಾಧುವಲ್ಲ.

ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ರಾಜ್ಯ ಉಗಮದ ನೆನಪಿನ ಹಬ್ಬ

‘ಕನ್ನಡ ರಾಜ್ಯೋತ್ಸವವೇ ಇರಲಿ’ ಎಂಬ ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ ಅವರ ವಾದಕ್ಕೆ (ವಾ.ವಾ., ನ. 4) ನನ್ನ ಅಭ್ಯಂತರವಿದೆ. ಕನ್ನಡ ಭಾಷಿಕರೇ ಬಹುವಾಗಿರುವ ಪ್ರಾಂತ್ಯವನ್ನು ವಿಂಗಡಿಸಿ ಭಾಷಾವಾರು ಕರ್ನಾಟಕ ರಾಜ್ಯವನ್ನಾಗಿ ನಮ್ಮ ಹಿರಿಯ ನೇತಾರರು ರೂಪಿಸಿದ್ದಾರೆ. ಹಾಗಾಗಿ ‘ಕರ್ನಾಟಕ ರಾಜ್ಯೋತ್ಸವ’ವೇ ಸೂಕ್ತ. ಕನ್ನಡ ಭಾಷಿಕರ ರಾಜ್ಯದ ಉಗಮದ ನೆನಪಿನ ಹಬ್ಬ ಇದು. ಆಡಳಿತಾತ್ಮಕವಾಗಿಯೂ ಪ್ರದೇಶವನ್ನು ‘ಕರ್ನಾಟಕ’ ಎಂಬ ಪದ ಬಿಂಬಿಸುವುದರಿಂದ ‘ಕರ್ನಾಟಕ ರಾಜ್ಯೋತ್ಸವ’ವೇ ಭಾರತದಂತಹ ಒಕ್ಕೂಟ ವ್ಯವಸ್ಥೆಯ ದೇಶಕ್ಕೆ ಸರಿಹೊಂದುತ್ತದೆ. ಆದರೆ ಬ್ಯಾರಿ, ಕೊಂಕಣಿ, ತುಳು, ಕೊಡವದಂತಹ ಭಾಷೆಗಳನ್ನಾಡುವ ಜನರೂ ಇಲ್ಲಿ ಇರುವುದರಿಂದ ‘ಕರ್ನಾಟಕ ರಾಜ್ಯೋತ್ಸವ’ ಎಂದಾಗಬೇಕು ಎನ್ನುವುದು ಸರಿಯಲ್ಲ. ಇದು ಈ ಭಾಷೆಗಳನ್ನಾಡುವ ಜನರ ರಾಜ್ಯವೂ ಹೌದಲ್ಲವೇ? ಅವರೆಲ್ಲ ನಮ್ಮ ರಾಜ್ಯದ ಸಹೋದರರು. ಆದರೂ ಅವರು ಅಲ್ಪಸಂಖ್ಯೆಯಲ್ಲಿ ಇರುವುದರಿಂದ, ಅವರ ಬಗ್ಗೆ, ಆ ಭಾಷೆಗಳ ಬಗ್ಗೆ ಅಭಿಮಾನ, ಗೌರವ ನಮ್ಮೆಲ್ಲರಿಗೂ ಇದ್ದರೂ ‘ಕರ್ನಾಟಕ ರಾಜ್ಯೋತ್ಸವ’ಕ್ಕೆ ಅದು ಸರಿಯಾದ ಕಾರಣ ಅಲ್ಲ ಮತ್ತು ಕನ್ನಡದೊಂದಿಗೆ ಹೋಲಿಕೆಯೂ ಸಲ್ಲದು. ಇದು ಭಾಷೆಯ ಹುಟ್ಟಿನ ಆಚರಣೆಯಲ್ಲ ಅಲ್ಲವೇ?

ಅನುಪಮಾ ಆರ್., ಶಹಾಪುರ

ಸ್ವಉದ್ಯೋಗ: ನಡೆಯಲಿ ಜಿಲ್ಲಾವಾರು ಸಭೆ

ಬೃಹತ್ ಉದ್ದಿಮೆಗಳು ತಮ್ಮ ರಾಜ್ಯಕ್ಕೇ ಬರಬೇಕೆಂದು ರಾಜ್ಯ ಸರ್ಕಾರಗಳು ಪೈಪೋಟಿಯ ಮೇಲೆ ಜಾಗತಿಕ ಹೂಡಿಕೆದಾರರ ಸಮಾವೇಶಗಳನ್ನು ಏರ್ಪಡಿಸಿ, ಲಕ್ಷಾಂತರ ಕೋಟಿ ರೂಪಾಯಿಗಳ ಹೂಡಿಕೆ ಬಂತೆಂದು ಬೀಗುತ್ತಿರುತ್ತವೆ. ಆದರೆ ಇಂತಹ ಯೋಜನೆಗಳು ಕಾರ್ಯರೂಪಕ್ಕೆ ಬರಲು ಹಲವು ವರ್ಷಗಳೇ ಹಿಡಿಯುತ್ತವೆ. ಇವುಗಳಲ್ಲಿ ಸೃಷ್ಟಿಯಾಗುವ ಉದ್ಯೋಗಗಳು ಕೆಲವು ಸಾವಿರ ಮಾತ್ರ. ಅಷ್ಟೇ ಅಲ್ಲ ಅಂತಹ ಉದ್ದಿಮೆಗಳವರು ತಮ್ಮ ವ್ಯವಹಾರಗಳನ್ನು ವಿಸ್ತರಿಸಲು ಹೇಗೂ ತುದಿಗಾಲಲ್ಲಿ ನಿಂತೇ ಇರುತ್ತಾರೆ. ಸಮ್ಮೇಳನ ಇಲ್ಲದಿದ್ದರೂ ಅವರು ಹೂಡಿಕೆ ಮಾಡಿಯೇ ಮಾಡುತ್ತಾರೆ. ಅದರ ಬದಲಾಗಿ, ಪ್ರತೀ ಜಿಲ್ಲೆಯಲ್ಲೂ ಆಯಾ ಜಿಲ್ಲಾ ಉಸ್ತುವಾರಿ ಸಚಿವರು, ಕೈಗಾರಿಕಾ ಸಚಿವರು, ಜಿಲ್ಲಾ ಕೈಗಾರಿಕಾ ಕೇಂದ್ರ ಹಾಗೂ ಬ್ಯಾಂಕ್ ಅಧಿಕಾರಿಗಳು ಆಗಾಗ್ಗೆ ಸಭೆಗಳನ್ನು ನಡೆಸಿ, ಯಾವ ಸಣ್ಣ ಉದ್ದಿಮೆ ಪ್ರಾರಂಭಿಸಬಹುದು, ಉತ್ಪನ್ನಗಳ ಮಾರಾಟ, ಬ್ಯಾಂಕ್ ಸಾಲ ಪಡೆದುಕೊಳ್ಳುವುದು ಹೇಗೆ ಎಂಬಂತಹ ವಿಷಯಗಳ ಬಗ್ಗೆ ಮಾಹಿತಿ ನೀಡಬೇಕು. ಆಗ ಆರ್ಥಿಕ ಚಟುವಟಿಕೆ ನಡೆಯುತ್ತಾ ಲಕ್ಷಾಂತರ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ. ಅಷ್ಟೇ ಅಲ್ಲ, ರಾಜ್ಯಗಳ ಬೊಕ್ಕಸಕ್ಕೂ ತೆರಿಗೆಗಳ ರೂಪದಲ್ಲಿ ಕೋಟ್ಯಂತರ ರೂಪಾಯಿ ಸಂಗ್ರಹವಾದೀತು.

ಬಿ.ಎನ್.ಭರತ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ —ಎಎಫ್‌ಪಿ ಚಿತ್ರ

ದೊಡ್ಡವರೆಲ್ಲಾ ಜಾಣರಲ್ಲ...

• ಗಿರೀಶ್ ದೊಡ್ಡಮನಿ

ಚುಟುಕು ಕ್ರಿಕೆಟ್ ಮಾದರಿಯಲ್ಲಿ 'ದೊಡ್ಡವರೆಲ್ಲಾ ಜಾಣರಲ್ಲ, ಚಿಕ್ಕವರು ಯಾರೂ ಇಲ್ಲ' ಎಂಬುದು ಮತ್ತೊಮ್ಮೆ ಸಾಬೀತಾಗಿದೆ.

ಭಾನುವಾರ ಬೆಳ್ಳಂಬೆಳಿಗ್ಗೆ (ಭಾರತೀಯ ಕಾಲಮಾನ) ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಬಲಾಢ್ಯ ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿದ ಡಚ್ಚರ ಪಡೆ ಈ ಮಾತನ್ನು ಮತ್ತೊಮ್ಮೆ ನಿಜಮಾಡಿತು. ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12ರ ಹಂತದಿಂದ ನಾಲ್ಕರ ಹಂತಕ್ಕೆ ಪ್ರವೇಶಿಸುವ ಎರಡು ತಂಡಗಳ ನಿರ್ಣಯ ಇದೇ ದಿನ ಆಗಬೇಕಿತ್ತು. ಕ್ರಿಕೆಟ್ ಲೋಕದಲ್ಲಿ ಇನ್ನೂ ಅಂಬೆಗಾಲಿಡುತ್ತಿರುವ ನೆದರ್ಲೆಂಡ್ಸ್ ವಿರುದ್ಧ ದಕ್ಷಿಣ ಆಫ್ರಿಕಾ ಸುಲಭವಾಗಿ ಜಯಿಸುವ ನಿರೀಕ್ಷೆ ಸಹಜವಾಗಿತ್ತು.

ಅನುಭವಿ ಬೌಲರ್‌ಗಳಾದ ಕಗಿಸೊ ರಬಾಡ, ಲುಂಗಿ ಗಿಡಿ, ಎನ್ರಿಚ್ ನಾಕಿಯಾ, ಸ್ಫೋಟಕ ಶೈಲಿಯ ಬ್ಯಾಟರ್‌ಗಳಾದ ರಿಲೀ ರೊಸೊ, ಡೇವಿಡ್ ಮಿಲ್ಲರ್, ಕ್ವಿಂಟನ್ ಡಿಕಾಕ್ ಹಾಗೂ ಏಡನ್ ಮರ್ಕರಂ ಅವರ ಮುಂದೆ ಇದೇ ಮೊದಲ ಬಾರಿ ಕಣಕ್ಕಿಳಿದಿದ್ದ ನೆದರ್ಲೆಂಡ್ಸ್ ಅಚ್ಚರಿಯ ಜಯ ಸಾಧಿಸಿತು. ಅರ್ಹತಾ ಸುತ್ತಿನಲ್ಲಿ ಕಷ್ಟಪಟ್ಟು ಸೂಪರ್ 12ಕ್ಕೆ ಅರ್ಹತೆ ಗಿಟ್ಟಿಸಿದ್ದ ತಂಡಕ್ಕೆ ಈ ಜಯವು ವರದಾನವಾಗಿದೆ. ಗುಂಪಿನಲ್ಲಿ ಎರಡು ಜಯ ಸಾಧಿಸಿದ ನೆದರ್ಲೆಂಡ್ಸ್ ಮುಂದಿನ ಬಾರಿ ಟಿ20 ವಿಶ್ವಕಪ್ ಮುಖ್ಯಸುತ್ತಿಗೆ ನೇರ ಅರ್ಹತೆ ಗಿಟ್ಟಿಸಿದೆ. ಇದೇನು ಸಣ್ಣ ಸಾಧನೆಯಲ್ಲ.

ಇಂತಹ ಅಚ್ಚರಿಯ ಫಲಿತಾಂಶಗಳೇ ವಿಶ್ವಕಪ್ ಟೂರ್ನಿಗಳನ್ನು ರೋಚಕಗೊಳಿಸುತ್ತವೆ. ಅಲ್ಲದೇ ಕ್ರಿಕೆಟ್ ಆಟದ ಮೌಲ್ಯವನ್ನೂ ವರ್ಧಿಸುತ್ತವೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಅತಿ ಆತ್ಮವಿಶ್ವಾಸ ಹಾಗೂ ಎದುರಾಳಿಯನ್ನು ಹಗುರವಾಗಿ ಪರಿಗಣಿಸುವುದು ಬಹಳ ದುಬಾರಿಯಾಗುವುದರಲ್ಲಿ ಎರಡು ಮಾತಿಲ್ಲ. ಈಗ ನಡೆದಿರುವ ಟೂರ್ನಿಯ ಇಲ್ಲಿಯವರೆಗಿನ ಫಲಿತಾಂಶಗಳನ್ನು ನೋಡಿದರೆ ಇಂತಹ ಅಚ್ಚರಿಗಳು ಗಮನ ಸೆಳೆಯುತ್ತವೆ.

'ಡಬಲ್ ಚಾಂಪಿಯನ್' ವಿಂಡೀಸ್

ಎರಡು ಬಾರಿಯ ಚಾಂಪಿಯನ್ ತಂಡ ವಿಂಡೀಸ್ ಆಟಗಾರರು ಟಿ20 ಪರಿಣತರೆಂದೇ ಜಗದ್ವಿಖ್ಯಾತರು. ವಿಶ್ವದಲ್ಲಿ ನಡೆಯುವ ಪ್ರತಿಯೊಂದು ಟಿ20 ಫ್ರಾಂಚೈಸಿ ಲೀಗ್‌ಗಳಲ್ಲಿ ಕೆರಿಬಿಯನ್ ಆಟಗಾರರ ಅಬ್ಬರ ಇದ್ದೇ ಇರುತ್ತದೆ. ಆದರೆ ಈ ಬಾರಿ ಕ್ವಾಲಿಫೈಯರ್ ಹಂತದಲ್ಲಿಯೇ ವಿಂಡೀಸ್ ಗಂಟುಮೂಟೆ ಕಟ್ಟಬೇಕಾಯಿತು.

ಬಿ ಗುಂಪಿನಲ್ಲಿ ವಿಂಡೀಸ್ ತಂಡವು ಸ್ಕಾಟ್ಲೆಂಡ್ ಹಾಗೂ ಐರ್ಲೆಂಡ್ ವಿರುದ್ಧ ಸೋತಿತ್ತು. ಜಿಂಬಾಬ್ವೆ ವಿರುದ್ಧ ಮಾತ್ರ ಜಯಿಸಿತ್ತು. ವರ್ಷಪೂರ್ತಿ ಉಳಿದೆಲ್ಲ ತಂಡಗಳಿಗಿಂತ ವಿಂಡೀಸ್ ಹೆಚ್ಚು ದ್ವಿಪಕ್ಷೀಯ ಸರಣಿಗಳಲ್ಲಿ ಆಡಿದೆ. ಲೀಗ್‌ಗಳಲ್ಲಿ ಆಡಿದ ಅನುಭವಿಗಳಿದ್ದಾರೆ. ಆದರೂ ಇಲ್ಲಿ ತಂಡವಾಗಿ ಆಡುವಲ್ಲಿ ವಿಫಲವಾಯಿತು.

ನಮೀಬಿಯಾ ಬಿಸಿ

ಅರ್ಹತಾ ಸುತ್ತಿನಲ್ಲಿ ಕಷ್ಟಪಟ್ಟು ಆಡಿದ ಏಷ್ಯಾಕಪ್ ಚಾಂಪಿಯನ್ ಶ್ರೀಲಂಕಾ, ಎ ಗುಂಪಿನಲ್ಲಿ ನಮೀಬಿಯಾದಂತಹ ಹೊಸ ತಂಡದೆದುರು 55 ರನ್‌ಗಳ ಭಾರಿ ಅಂತರದಿಂದ ಸೋತಿತ್ತು. ಆದರೆ ನಂತರದ ಎರಡು ಪಂದ್ಯಗಳಲ್ಲಿ ಗೆದ್ದು ಸೂಪರ್ 12ಕ್ಕೆ ಪ್ರವೇಶಿಸಿತ್ತು.

ಪಾಕ್‌ಗೆ ಜಿಂಬಾಬ್ವೆ ಹೊಡೆತ

ಮೊದಲ ಪಂದ್ಯದಲ್ಲಿ ಭಾರತದ ಎದುರು ಸೋತಿದ್ದ ಪಾಕಿಸ್ತಾನಕ್ಕೆ ಎರಡನೇ ಪಂದ್ಯದಲ್ಲಿ ಜಿಂಬಾಬ್ವೆ ಪೆಟ್ಟುಕೊಟ್ಟಿದ್ದು ಅಚ್ಚರಿಗಳಲ್ಲಿ ಒಂದು.

ಪಾಕ್ ತಂಡದಲ್ಲಿರುವ ಉತ್ತಮ ಬೌಲರ್ ಹಾಗೂ ಅನುಭವಿ ಬ್ಯಾಟರ್‌ಗಳಿಗೆ ಹೋಲಿಸಿದರೆ ಜಿಂಬಾಬ್ವೆಯ ಆಟಗಾರರ ಸಾಮರ್ಥ್ಯ ಬಹಳ ಕಡಿಮೆಯೇ. ಟೆಸ್ಟ್ ಮಾನ್ಯತೆ ಇರುವ ಹಳೆಯ ತಂಡವಾದರೂ ಕೂಡ ತನ್ನ ದೇಶದಲ್ಲಿರುವ ಹಲವು ಸಮಸ್ಯೆಗಳ ನಡುವೆ ಜಿಂಬಾಬ್ವೆ ಕ್ರಿಕೆಟಿಗರು ಪರದಾಡುತ್ತಲೇ ಅಸ್ತಿತ್ವ ಉಳಿಸಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿಯೂ ಪಾಕ್ ವಿರುದ್ಧ ಕೇವಲ ಒಂದು ರನ್‌ನಿಂದ ಗೆದ್ದಾಗ ಕ್ರಿಕೆಟ್ ಪ್ರಿಯರು ಬೆರಗಾಗಿದ್ದರು.

ಆದರೆ ಇವೆಲ್ಲವುಗಳಿಗಿಂತ ದೊಡ್ಡ ಅಚ್ಚರಿ ಮೂಡಿಬಂದಿದ್ದು ಗುಂಪು ಹಂತದ ಕೊನೆಯ ದಿನದಂದು. ಅದು ದಕ್ಷಿಣ ಆಫ್ರಿಕಾದ ಸೋಲು. 'ಚೋಕರ್ಸ್' ಹಣೆಪಟ್ಟಿ ಕಳಚಿಕೊಳ್ಳುವ ಪ್ರಯತ್ನದಲ್ಲಿ ಈ ಬಾರಿಯೂ ದಕ್ಷಿಣ ಆಫ್ರಿಕಾ ಯಶಸ್ವಿಯಾಗಲಿಲ್ಲ. ಪ್ರತಿಯೊಂದು ವಿಶ್ವಕಪ್ ಟೂರ್ನಿಯಲ್ಲಿಯೂ (ಎಲ್ಲ ಮಾದರಿ) ಇಂತಹದೊಂದು ಸೋಲನ್ನು ದಕ್ಷಿಣ ಆಫ್ರಿಕಾ 1996ರಿಂದ ಅನುಭವಿಸುತ್ತಲೇ ಇದೆ. ಆದರೆ, ಈ ಬಾರಿ ನೆದರ್ಲೆಂಡ್ಸ್ ಕೊಟ್ಟ ಪೆಟ್ಟು ಮಾತ್ರ ಆ ತಂಡಕ್ಕೆ ದೊಡ್ಡ ಪಾಠ ಕಲಿಸುವ ಸಾಧ್ಯತೆ ಇದೆ.

ದೊಡ್ಡ ಆಘಾತದ ಸೋಲುಗಳು
(ಏಕದಿನ ವಿಶ್ವಕಪ್)

- **1983:** ಜಿಂಬಾಬ್ವೆ ತಂಡವು ಆಸ್ಟ್ರೇಲಿಯಾ ವಿರುದ್ಧ 13ರನ್‌ಗಳಿಂದ ಜಯಿಸಿತ್ತು.
- **2007:** ಆಗಿನ್ನೂ ಅಂಬೆಗಾಲಿಡುತ್ತಿದ್ದ ಬಾಂಗ್ಲಾದೇಶ ವಿರುದ್ಧ ಸೋತಿದ್ದ ಭಾರತ ತಂಡವು ಟೂರ್ನಿಯ ಲೀಗ್ ಹಂತದಿಂದ ಹೊರಬಿದ್ದಿತ್ತು. ಬಾಂಗ್ಲಾ ತಂಡವು ಇದೇ ಟೂರ್ನಿಯಲ್ಲಿ ದಕ್ಷಿಣ ಆಫ್ರಿಕಾವನ್ನೂ ಮಣಿಸಿತ್ತು.
- **2007:** ಅನನುಭವಿ ತಂಡ ಐರ್ಲೆಂಡ್ ವಿರುದ್ಧ ಸೋತ ಪಾಕಿಸ್ತಾನ ನಿರ್ಗಮಿಸಿತ್ತು.
- **2011:** ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಐರ್ಲೆಂಡ್ ತಂಡವು ಇಂಗ್ಲೆಂಡ್ ಬಳಗವನ್ನು ಹಣಿದಿತ್ತು.

ವೆಸ್ಟ್ ಇಂಡೀಸ್ ತಂಡದ ಆಲ್‌ರೌಂಡರ್ ಜೇಸನ್ ಹೋಲ್ಡರ್ —ಎಎಫ್‌ಪಿ ಚಿತ್ರ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ 268

ಶಿವನ ಸೌಂದರ್ಯದ ಬೆರಗು

ಹರಿಯ ಸೂಚನೆಯಂತೆ ಶಿವನ ಬಳಿಗೆ ಬಂದ ನಾರದ, ಸುಂದರರೂಪ ಧರಿಸಿ ಹಿಮವಂತನ ಅರಮನೆಗೆ ಬರುವಂತೆ ಪ್ರಾರ್ಥಿಸುತ್ತಾನೆ. ಮೇನಾದೇವಿಯನ್ನು ಕಾಡಿದ್ದು ಸಾಕು. ಆಕೆಗೆ ನಿಜ ರೂಪ ತೋರಿಸಿ ವಿವಾಹಕಾರ್ಯ ನಿರ್ವಿಘ್ನವಾಗಿ ನೆರವೇರುವಂತೆ ಮಾಡು ಎಂಬ ನಾರದನ ಕೋರಿಕೆಯನ್ನು ಕೇಳಿ ಮಹದೇವ ಗಹಗಹಿಸಿ ನಗುತ್ತಾನೆ. 'ನಾನು ನಿರ್ಮಲಮನಸ್ಸಿನವರಿಗೆ ನಿರ್ಮಲನಾಗಿ ಕಾಣುತ್ತೇನೆ. ಮಲೀನಮನಸ್ಸಿನವರಿಗೆ ಮಲೀನನಾಗೇ ಕಾಣುತ್ತೇನೆ. ನಾನು ವಿಕಾರ ರೂಪಿಯೂ ಅಲ್ಲ, ವಿಕಾರವಾದಿಯೂ ಅಲ್ಲ. ನಾನು ಸಮಚಿತ್ತದ ಸಮಷ್ಟಿರೂಪಿ. ದುರ್ಬುದ್ಧಿಯ ಮೇನಾದೇವಿಗೆ ಸುಬುದ್ಧಿ ಕಲಿಸಲು ಮಾಯಾ ರೂಪ ಧರಿಸಿ ಕಾಡಿದೆನಷ್ಟೆ. ಈಗ ಆಕೆಯ ಅಜ್ಞಾನ ಅಳಿದು ಸುಜ್ಞಾನ ಮೂಡಿದೆ. ಆದ್ದರಿಂದ ನಾನು ಸುಂದರರೂಪ ತಾಳಿಯೇ ಮದುವೆ ಮಂಟಪಕ್ಕೆ ಬರುತ್ತೇನೆ' ಎಂದ ಶಿವ, ಕ್ಷಣಮಾತ್ರದಲ್ಲಿ ಅತ್ಯಾಶ್ಚರ್ಯಕರವಾದ ಸುಂದರರೂಪ ಧರಿಸಿದ.

ಸಂತೋಷದಿಂದ ಮೇನಾದೇವಿ ಬಳಿ ಬಂದ ನಾರದ 'ಎಲೈ ವಿಶಾಲಾಕ್ಷಿ, ಶಿವನ ಸುಂದರರೂಪವನ್ನು ನೋಡು, ಕರುಣಾಮಯನಾದ ಅವನು ನಮ್ಮಲ್ಲಿ ಕೃಪೆಯನ್ನು ಮಾಡಿರುವನು' ಎಂದು ವಿಶ್ವಸುಂದರನಾದ ಶಿವನನ್ನು ತೋರಿಸುತ್ತಾನೆ. ನಾರದನ ಮಾತನ್ನು ಕೇಳಿ ಮೇನಾದೇವಿ ಅತಿಲೋಕಸುಂದರನಾದ ಶಿವನತ್ತ ನೋಡಿ ಆಶ್ಚರ್ಯ ಮತ್ತು ಆನಂದದಿಂದ ನೋಡುತ್ತಾ ಮೈಮರೆಯುತ್ತಾಳೆ. ಶಿವಸೌಂದರ್ಯವನ್ನು ಕಣ್ಣು ತುಂಬಾ ನೋಡಿದ ಮೇನಾದೇವಿ ತನ್ನ ಮಗಳು ಪಾರ್ವತಿ ಇಂಥ ಗಂಡನನ್ನು ಪಡೆದು ಭಾಗ್ಯವಂತಳಾದರೆ, ಇಂಥ ಅಳಿಯನನ್ನು ಪಡೆದ ತಾನು ಧನ್ಯೆ ಅಂತ ಸಂತೋಷಪಡುತ್ತಾಳೆ.

ಕೋಟಿಸೂರ್ಯರಷ್ಟು ತೇಜಸ್ವಿಯಾಗಿದ್ದ ಶಿವನ ಸರ್ವಾವಯವಗಳು ಸುಂದರವಾಗಿ ಪ್ರಜ್ವಲಿಸುತ್ತಿದ್ದರೆ, ಅವನ ಸುಂದರವಾದ ಅವಯವಗಳು ದಿವ್ಯವಾದ ವಸ್ತ್ರವನ್ನು ಅಲಂಕರಿಸಿ ನೋಡುಗರ ಕಣ್ಣುಗಳನ್ನು ಸೆಳೆಯುತ್ತಿದ್ದವು. ಸರ್ವಾಲಂಕಾರ ಭೂಷಿತನಾಗಿ ಕಂಗೊಳಿಸುತ್ತಿದ್ದ. ಶುಭ್ರವಾದ ಶರೀರಕಾಂತಿ ಯಿಂದ ಮತ್ತು ಶಿರಸ್ಸಿನಲ್ಲಿದ್ದ ಚಂದ್ರಕಲೆಯಿಂದ ಮನೋಹರವಾಗಿ ಕಣ್ಮನ ಸೆಳೆಯುತ್ತಿದ್ದ.

ಇಂಥ ಸರ್ವಾಂಗ ಸುಂದರನಾದ ಶಿವನ ಬಳಿ ಹರಿ, ಬ್ರಹ್ಮ ಮೊದಲಾದ ದೇವತೆಗಳೆಲ್ಲ ಭಕ್ತಿಯಿಂದ ಶಿವನನ್ನು ಸೇವಿಸುತ್ತಿದ್ದ ದೃಶ್ಯ ನೋಡಿ ಮೇನಾದೇವಿ ಬಿಟ್ಟ ಕಣ್ಣು ಮುಚ್ಚದಂತೆ ನೋಡುತ್ತಾ ನಿಂತುಬಿಟ್ಟಳು. ಶಿವನ ನೆತ್ತಿಯನ್ನು ಸೂರ್ಯ ಛತ್ರಿ ಹಿಡಿದು ಕಾಯುತ್ತಿದ್ದರೆ, ಸಮೀಪದಲ್ಲಿ ನಿಂತಿದ್ದ ಚಂದ್ರ ತಂಪನ್ನೀಯುತ್ತಿದ್ದ. ಗಂಗಾ–ಯಮುನೆಯರು ಶಿವನಿಗೆ ಚಾಮರ ಬೀಸುತ್ತಿದ್ದರೆ, ಅಷ್ಟಸಿದ್ಧಿಗಳು ಶಿವನೆದುರು ನರ್ತನ ಮಾಡಿ ರಂಜಿಸುತ್ತಿದ್ದರು. ಶಿವಗಣಗಳು ಸುಂದರವಾಗಿ ಅಲಂಕರಿಸಿಕೊಂಡು ಜಯಧ್ವನಿಯನ್ನು ಮಾಡುತ್ತಾ ಶಿವನ ಮುಂದೆ ನಿಂತಿದ್ದರು. ದೇವತೆಗಳು ಪರಬ್ರಹ್ಮನಾದ ಶಿವನನ್ನು ಸ್ತುತಿಸುತ್ತಿದ್ದರು. ಶಿವನಿರುವಲ್ಲಿಗೆ ವಿಶ್ವಾವಸು ಮೊದಲಾದ ಗಂಧರ್ವರು ಅಪ್ಸರೆಯರೊಡನೆ ಬಂದು ಶಿವನ ಮಹಿಮೆಯನ್ನು ಗಾನಮಾಡುತ್ತಿದ್ದರು.

ಹೀಗೆ ಶಿವ ಸುಂದರನಾಗಿ ಮಹಾವೈಭವದಿಂದ ಹಿಮವಂತನ ಅರಮನೆಗೆ ಬಂದಾಗ, ಅಲ್ಲಿ ಮಹತ್ತಾದ ಉತ್ಸವದ ಸಂಭ್ರಮವೇ ನಡೆಯಿತು. ಜಗನ್ಮಾತೆ ಪಾರ್ವತಿ ವರಿಸಲು ಬಂದ ಪರಮಾತ್ಮನಾದ ಶಿವನ ಅಪೂರ್ವ ತೇಜಸ್ಸನ್ನು ವರ್ಣಿಸಲು ಯಾರಿಗೂ ಸಾಧ್ಯವಿರಲಿಲ್ಲ. ಮಹಾಸುಂದರನಾಗಿ ಕಾಣಿಸುತ್ತಿದ್ದ ಶಿವನನ್ನು ನೋಡಿದ ಮೇನಾದೇವಿ ಅತ್ಯಾಶ್ಚರ್ಯದಿಂದ ಬೊಂಬೆಯಂತೆ ಸ್ತಂಭಿತಳಾಗಿ ಬಹಳ ಹೊತ್ತು ನಿಂತೇ ಇದ್ದಳು.

ಯಶಸ್ಸಿನ ಹಾದಿಯಲ್ಲಿ ದಿಟ್ಟ ಹೆಜ್ಜೆ

ಅಫ್ಗಾನಿಸ್ತಾನ ತಂಡದ ರಶೀದ್ ಖಾನ್ ಎಎಫ್‌ಪಿ ಚಿತ್ರ

ಇತ್ತೀಚಿನವರೆಗೂ 'ಕ್ರಿಕೆಟ್ ಶಿಶು'ಗಳು ಎನಿಸಿಕೊಂಡಿದ್ದ ನೆದರ್ಲೆಂಡ್ಸ್, ಐರ್ಲೆಂಡ್, ಅಫ್ಗಾನಿಸ್ತಾನ ತಂಡಗಳು ಬಲಿಷ್ಠ ತಂಡಗಳಿಗೆ ಪೈಪೋಟಿ ನೀಡುವ ಹಂತಕ್ಕೆ ಬೆಳೆದಿವೆ. ಏಳುಬೀಳುಗಳ ನಡುವೆಯೂ ಕಳೆದ ಒಂದೂವರೆ ದಶಕದಲ್ಲಿ ಈ ತಂಡಗಳು ಸಾಧಿಸಿರುವ ಬೆಳವಣಿಗೆ ಗಮನಾರ್ಹ

• ಮಹಮ್ಮದ್ ನೂಮಾನ್

ಅಫ್ಗಾನಿಸ್ತಾನ

ಹದಿಮೂರು ವರ್ಷಗಳ ಹಿಂದೆ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಅಫ್ಗಾನಿಸ್ತಾನ, ಜಾಗತಿಕ ಕ್ರಿಕೆಟ್‌ನಲ್ಲಿ ಬಹಳ ಬೇಗನೇ ತನ್ನ ಛಾಪು ಮೂಡಿಸಿದ ತಂಡಗಳಲ್ಲಿ ಒಂದು.

ಹಲವು ವರ್ಷಗಳ ಯುದ್ಧ, ಭಯೋತ್ಪಾದನೆಯ ಕರಿನೆರಳು, ತಾಲಿಬಾನ್ ಆಡಳಿತ ಒಳಗೊಂಡಂತೆ ಹಲವು ಸವಾಲುಗಳ ನಡುವೆಯೂ ಅಲ್ಲಿ ಕ್ರಿಕೆಟ್ ತನ್ನ ಜೀವ ಉಳಿಸಿಕೊಂಡಿದೆ.

ಬ್ಯಾಟಿಂಗ್ ಕೋಚ್ ಇಂಗ್ಲೆಂಡ್‌ನ ಜೊನಾಥನ್ ಟ್ರಾಟ್ ಮತ್ತು ಬೌಲಿಂಗ್ ಕೋಚ್ ಪಾಕಿಸ್ತಾದ ಉಮರ್ ಗುಲ್ ಅವರ ಮಾರ್ಗದರ್ಶನದಲ್ಲಿ ತಂಡ ಇತ್ತೀಚಿನ ದಿನಗಳಲ್ಲಿ ಬಲ ಹೆಚ್ಚಿಸಿಕೊಂಡಿದೆ.

ಮೊಹಮ್ಮದ್ ನಬಿ ಮತ್ತು ರಶೀದ್ ಖಾನ್ ಅವರಂತಹ ವಿಶ್ವದರ್ಜೆಯ ಆಟಗಾರರು ತಂಡದ ಶಕ್ತಿ. ಸ್ಪಿನ್ನರ್ ರಶೀದ್ ಹಾಗೂ ಯುವ ವೇಗಿಗಳು ಯಾವುದೇ ಬಲಿಷ್ಠ ತಂಡಕ್ಕೂ ಬೆದರಿಕೆ ಹುಟ್ಟಿಸಬಲ್ಲರು. ಗುಲ್ ಅವರ ಗರಡಿಯಲ್ಲಿ ಪಳಗಿರುವ ಫಜಲ್‌ಹಕ್ ಫರೂಕಿ ಮತ್ತು ನವೀನ್ ಉಲ್ ಹಕ್ ಪ್ರಮುಖ ವೇಗಿಗಳಾಗಿ ಹೊರಹೊಮ್ಮುತ್ತಿದ್ದಾರೆ.

ಒಂದಿಬ್ಬರು ವಿಶ್ವದರ್ಜೆಯ ಬ್ಯಾಟರ್‌ಗಳನ್ನು ಹೊಂದಿದ್ದೇ ಆದಲ್ಲಿ ಮುಂದಿನ ದಿನಗಳಲ್ಲಿ ಅಫ್ಗನ್ ಕೂಡಾ ಬಲಿಷ್ಠ ತಂಡಗಳ ಸಾಲಿಗೆ ಸೇರುವುದರಲ್ಲಿ ಸಂದೇಹವಿಲ್ಲ.

ನೆದರ್ಲೆಂಡ್ಸ್

ಇಂಗ್ಲೆಂಡ್ ಬಳಿಕ ಕ್ರಿಕೆಟ್‌ನಲ್ಲಿ ಸದ್ದು ಮಾಡುತ್ತಿರುವ ಯೂರೋಪ್‌ನ ಪ್ರಮುಖ ತಂಡಗಳಲ್ಲಿ ನೆದರ್ಲೆಂಡ್ಸ್ ಕೂಡ ಒಂದು.

2009ರಲ್ಲಿ ಮೊದಲ ಬಾರಿ ಟಿ20 ವಿಶ್ವಕಪ್‌ನಲ್ಲಿ ಆಡಿದ್ದ ನೆದರ್ಲೆಂಡ್ಸ್, 2014ರಲ್ಲಿ 'ಸೂಪರ್ 10' ಹಂತದಲ್ಲಿ ಆಡಿತ್ತು. ಏಕದಿನ ವಿಶ್ವಕಪ್ ಟೂರ್ನಿಯನ್ನು 1996ರಲ್ಲೇ ಆಡಿತ್ತು. ಈ ಬಾರಿಯ ಟೂರ್ನಿಯಲ್ಲಿ ಡಚ್ಚರ ತಂಡ ಸೂಪರ್ 12ರ ಹಂತದಲ್ಲಿ ಎರಡು ಗೆಲುವು ಸಾಧಿಸಿ ಸ್ಮರಣೀಯ ಸಾಧನೆ ಮಾಡಿದೆ.

ದಕ್ಷಿಣ ಆಫ್ರಿಕಾದಂತಹ ತಂಡವನ್ನು ಮಣಿಸಲು ಸಾಧ್ಯವಾಗಿರುವುದು ನೆದರ್ಲೆಂಡ್ಸ್ ತಂಡ ಸಾಧಿಸಿದ ಬೆಳವಣಿಗೆಯನ್ನು ತೋರಿಸುತ್ತದೆ.

ಐರ್ಲೆಂಡ್

ಐರ್ಲೆಂಡ್ ತಂಡ ಕಳೆದ 14 ವರ್ಷಗಳಿಂದ ಅಂತರರಾಷ್ಟ್ರೀಯ ಟಿ20 ಪಂದ್ಯ ಹಾಗೂ 16 ವರ್ಷಗಳಿಂದ ಏಕದಿನ ಪಂದ್ಯಗಳನ್ನು ಆಡುತ್ತಿದೆ.

2007ರಲ್ಲಿ ತಾನಾಡಿದ್ದ ಚೊಚ್ಚಲ ಟಿ20 ವಿಶ್ವಕಪ್‌ನಲ್ಲೇ 'ಸೂಪರ್ 8' ಹಂತ ಪ್ರವೇಶಿಸಿ ಅಚ್ಚರಿ ಮೂಡಿಸಿತ್ತು. ಆ ಬಳಿಕ ಹಲವು ಏರಿಳಿತ ಕಂಡಿದೆ.

ಪ್ರಬಲ ತಂಡಗಳ ಜತೆ ಆಡಲು ಅವಕಾಶ ಸಿಕ್ಕಾಗಲೆಲ್ಲಾ, ತನ್ನ ಸಾಮರ್ಥ್ಯ ತೋರಿಸಿದೆ. ಈ ವಿಶ್ವಕಪ್‌ನ ಅರ್ಹತಾ ಹಂತದಲ್ಲಿ ವೆಸ್ಟ್ ಇಂಡೀಸ್ ಹಾಗೂ ಸೂಪರ್ 12ರಲ್ಲಿ ಇಂಗ್ಲೆಂಡ್ ಎದುರು ದೊರೆತ ಗೆಲುವು ತಂಡದ ಆತ್ಮವಿಶ್ವಾಸವನ್ನು ಸಹಜವಾಗಿ ಹೆಚ್ಚಿಸಿದೆ.

ವೇಗಿ ಜೋಶ್ ಲಿಟ್ಲ್ ಅವರು ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಹ್ಯಾಟ್ರಿಕ್ ವಿಕೆಟ್ ಸಾಧನೆ ಮಾಡಿದ್ದು ವಿಶೇಷ. ಕೆವಿನ್ ಒಬ್ರಿಯನ್ ಅವರ ನಿವೃತ್ತಿಯ ಬಳಿಕ ಯುವ ಬ್ಯಾಟರ್‌ಗಳ ಮೇಲಿನ ಜವಾಬ್ದಾರಿ ಹೆಚ್ಚಿದೆ. ಅನುಭವಿಗಳಾದ ಪಾಲ್ ಸ್ಟರ್ಲಿಂಗ್, ಆ್ಯಂಡ್ರ್ಯೂ ಬಲ್ಬಿರ್ನಿ ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಂಡಿದ್ದಾರೆ.

ಜಿಂಬಾಬ್ವೆ

ಜಿಂಬಾಬ್ವೆ ತಂಡಕ್ಕೆ 1981ರಲ್ಲೇ ಐಸಿಸಿಯ ಸಹ ಸದಸ್ಯತ್ವ ಲಭಿಸಿತ್ತು. 1992 ರಲ್ಲಿ ಪೂರ್ಣಾವಧಿ ಸದಸ್ಯ ಸ್ಥಾನ ದೊರೆಯಿತು. ಆಫ್ರಿಕಾ ಖಂಡದ ಈ ತಂಡಕ್ಕೆ ಇಂದಿಗೂ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಪ್ರಬಲ ಶಕ್ತಿ ಎನಿಸಲು ಆಗಿಲ್ಲ. ಆದರೆ ಆಗಿಂದಾಗ್ಗೆ ಅಚ್ಚರಿಯ ಫಲಿತಾಂಶ ನೀಡುತ್ತಾ ತನ್ನ ಇರುವಿಕೆ ತೋರುತ್ತಿದೆ.

1983ರಿಂದಲೂ ಏಕದಿನ ಪಂದ್ಯ ಆಡುತ್ತಿರುವ ತಂಡ, ಒಮ್ಮೆಯೂ ಟಿ20 ವಿಶ್ವಕಪ್‌ನ ಆರಂಭಿಕ ಹಂತ ದಾಟಿರಲಿಲ್ಲ. ಐಸಿಸಿ ರ‍್ಯಾಂಕಿಂಗ್‌ನಲ್ಲಿ 11ನೇ ಸ್ಥಾನದಲ್ಲಿರುವ ಜಿಂಬಾಬ್ವೆ, ಈ ಬಾರಿ 'ಸೂಪರ್ 12' ಹಂತ ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡಿತು.

ಇದೇ ಸೆಪ್ಟೆಂಬರ್‌ನಲ್ಲಿ ಆಸ್ಟ್ರೇಲಿಯಾ ಎದುರು ಏಕದಿನ ಪಂದ್ಯ ಗೆದ್ದು, 30 ವರ್ಷಗಳಲ್ಲಿ ಮೊದಲ ಬಾರಿ ಕಾಂಗರೂ ನಾಡಿನಲ್ಲಿ ಏಕದಿನ ಪಂದ್ಯ ಗೆದ್ದ ಹಿರಿಮೆ ತನ್ನದಾಗಿಸಿಕೊಂಡಿತ್ತು.

ಫ್ಲವರ್ ಸಹೋದರರು, ಹೀತ್ ಸ್ಟ್ರೀಕ್ ಅವರ ನಿವೃತ್ತಿಯ ಬಳಿಕ ಹೊಸ ಪೀಳಿಗೆಯ ಆಟಗಾರರಾದ ಸಿಕಂದರ್ ರಝಾ, ರೆಗಿಸ್ ಚಕಾಬ್ವ, ಕ್ರೆಗ್ ಎರ್ವಿನ್, ಸೀನ್ ವಿಲಿಯಮ್ಸ್ ಅವರು ತಂಡಕ್ಕೆ ಬಲ ತುಂಬಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಬುರ್ಖಾಧಾರಿ ಮಹಿಳೆಯೊಬ್ಬರು ಮಾತನಾಡುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಐಎಸ್ ಉಗ್ರವಾದದ ಬಗ್ಗೆ ಚರ್ಚೆ ಮುನ್ನೆಲೆಗೆ ಬಂದಿದೆ. 'ನನ್ನ ಹೆಸರು ಶಾಲಿನಿ ಉನ್ನಿಕೃಷ್ಣನ್. ನಾನು ನರ್ಸ್ ಆಗಿ ಸೇವೆ ಮಾಡಲು ಬಯಸಿದ್ದೆ. ಆದರೆ ನಾನು ಇಂದು ಫಾತಿಮಾ ಆಗಿದ್ದೇನೆ. ಐಸಿಸ್ ಭಯೋತ್ಪಾದಕಿಯಾಗಿ ಅಫ್ಗಾನಿಸ್ತಾನದ ಜೈಲಿನಲ್ಲಿದ್ದೇನೆ. ಇದು ನನ್ನೊಬ್ಬಳ ಪರಿಸ್ಥಿತಿಯಲ್ಲ. 32 ಸಾವಿರ ಮಹಿಳೆಯರು ಮತಾಂತರಗೊಂಡು ಸಿರಿಯಾ ಹಾಗೂ ಯೆಮನ್‌ನ ಮರುಭೂಮಿಯಲ್ಲಿ ಸಿಲುಕಿಕೊಂಡಿದ್ದಾರೆ' ಎಂದು ಮಹಿಳೆ ವಿಡಿಯೊದಲ್ಲಿ ಹೇಳಿದ್ದಾರೆ. ಆದರೆ ಇದು ನೈಜ ವಿಡಿಯೊವಲ್ಲ, ಸಿನಿಮಾವೊಂದರ ಟೀಸರ್ ಮಾತ್ರ.

'ದಿ ಕೇರಳ ಸ್ಟೋರಿ' ಎಂಬ ಚಲನಚಿತ್ರದ ಟೀಸರ್ ಇದಾಗಿದೆ ಎಂದು 'ಇಂಡಿಯಾ ಟುಡೇ' ಹಾಗೂ 'ಲಾಜಿಕಲ್ ಇಂಡಿಯನ್' ವರದಿ ಮಾಡಿವೆ. ಟೀಸರ್‌ನಲ್ಲಿ ಕಾಣಿಸಿಕೊಂಡಿರುವ ಚಿತ್ರನಟಿ ಅದಾ ಶರ್ಮಾ ಟ್ವಿಟರ್ ಖಾತೆಯಲ್ಲಿ ತಮ್ಮ ಮುಂದಿನ ಚಿತ್ರದ ಟೀಸರ್ ಹಂಚಿಕೊಂಡಿದ್ದಾರೆ. ಸನ್‌ಶೈನ್ ಪಿಕ್ಚರ್ಸ್ ಸಂಸ್ಥೆಯು ತನ್ನ ಯೂಟ್ಯೂಬ್ ಖಾತೆಯಲ್ಲಿ ಟೀಸರ್ ಹಂಚಿಕೊಂಡಿದೆ. ಐಎಸ್ ಸಂಘಟನೆಯು ಭಾರತದ ಮಹಿಳೆಯರನ್ನು ಮತಾಂತರ ಮಾಡಿ, ಭಯೋತ್ಪಾದಕರನ್ನಾಗಿ ಮಾಡಿದೆ ಎಂಬ ನೆಲೆಯಲ್ಲಿ ಚರ್ಚೆಯಾಗುತ್ತಿದೆ. ಆದರೆ, ವಿಡಿಯೊದಲ್ಲಿ ಚರ್ಚಿಸಲಾದ ವಿಚಾರಕ್ಕಿಂತ ಹೆಚ್ಚಾಗಿ, ಈ ವಿಡಿಯೊದ ಮೂಲದ ಬಗ್ಗೆ ಮಾತ್ರ ಫ್ಯಾಕ್ಟ್ ಚೆಕ್ ಪ್ರಕಟಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಹಗುರವಾದ ಬದುಕು

ಮುಳುಗದಿರು; ಜೀವನದ ತೆರೆಯ ಮೇಲೀಜುತಿರು |
ಒಳಿತನಾಗಿಸು, ಕೊಡುತ ಕೊಳುತ ಸಂತಸವ ||
ಕಳವಳಂಬಡದೆ ನಡೆ ಕಡೆಯ ಕರೆ ಬಂದಂದು |
ಮಿಳಿತನಿರು ವಿಶ್ವದಲಿ - ಮಂಕುತಿಮ್ಮ || 750 ||

ಪದ-ಅರ್ಥ: ಮೇಲೀಜುತಿರು = ಮೇಲೆ + ಈಜುತಿರು, ಒಳಿತನಾಗಿಸು = ಒಳಿತನು + ಆಗಿಸು, ಕಳವಳಂಬಡದೆ = ಕಳವಳಪಡದೆ, ಬಂದಂದು = ಬಂದ + ಅಂದು, ಮಿಳಿತನಿರು = ಸೇರಿಕೊಂಡಿರು.

ವಾಚ್ಯಾರ್ಥ: ಬದುಕಿನ ಪ್ರವಾಹದಲ್ಲಿ ಮುಳುಗಿ ಹೋಗಬೇಡ, ಅದರ ತೆರೆಯ ಮೇಲೆ ಹಗುರವಾಗಿ ಈಜುತ್ತಿರು. ಕೊಡುತ್ತ, ಪಡೆಯುತ್ತ ಲೋಕಕ್ಕೆ ಒಳ್ಳೆಯದನ್ನು ಮಾಡು. ಕಡೆಯ ಕರೆ ಬಂದಾಗ ಕಳವಳಪಡದೆ ನಡೆದುಬಿಡು. ವಿಶ್ವದ ಆಗುಹೋಗುಗಳಲ್ಲಿ ತನ್ಮಯತೆಯಿಂದ ಸೇರಿಕೊಂಡಿರು.

ವಿವರಣೆ: ಅಮೃತಲಾಲ್ ಠಕ್ಕರ್ ಗುಜರಾತಿನವರು. ಎಂಜಿನಿಯರ್ ಆಗಿ ಸೇವೆ ಸಲ್ಲಿಸಿ ಉಗಾಂಡಾ ದೇಶಕ್ಕೆ ಹೋಗಿ ಅಲ್ಲಿ ರೇಲ್ವೆ ಹಳಿಗಳನ್ನು ಹಾಕಿಸುವ ಕೆಲಸ ಮಾಡಿದರು. ಕೆಲಕಾಲ ಸಾಂಗ್ಲಿ ಸಂಸ್ಥಾನದ ಪ್ರಧಾನ ಎಂಜಿನಿಯರ್ ಆಗಿದ್ದರು. ಒಂದು ದಿನ ಭಂಗೀಜನರ ಕಾಲೊನಿಗೆ ಹೋದಾಗ ಅವರ ಜೀವನದ ದುರ್ಭರತೆಯನ್ನು ಕಂಡು ತಮ್ಮ ಕಾರ್ಯಕ್ಕೆ ರಾಜೀನಾಮೆ ಕೊಟ್ಟು ಸಮಾಜಸೇವೆಗೆ ನಿಂತರು. ಗೋಖಲೆಯವರು ಸ್ಥಾಪಿಸಿದ "ಸರ್ವೆಂಟ್ಸ್ ಆಫ್ ಇಂಡಿಯಾ"ವನ್ನು ಸೇರಿದರು. ಹರಿಜನರ, ಕಾಡುಜನರ (ಭಿಲ್ಲರ) ಅಭಿವೃದ್ಧಿಯೇ ಅವರಿಗೆ ತಪಸ್ಸಾಯಿತು. ಮುಂದೆ ಗಾಂಧೀಜಿಯ ಸೆಳೆತ ಅವರನ್ನು ಸೇವಾಗ್ರಾಮಕ್ಕೆ ಕರೆತಂದಿತು. ಅದು ಎಂತಹ ತನ್ಮಯತೆಯ ಕರ್ಮ! ಸದಾ ದುಡಿತದ ಗಾಂಧೀಜಿಯವರೇ, "ಬಾಪಾ, ಕೆಲವು ದಿನಗಳಾದರೂ ನೀವು ವಿಶ್ರಾಂತಿ ತೆಗೆದುಕೊಳ್ಳಬಾರದೆ?" ಎಂದು ಕೇಳಿದಾಗ, "ಬಾಪೂ, ಇನ್ನೂ ಕೆಲಸ ಬಹಳ ಬಿದ್ದಿದೆ. ಹೇಗೆ ವಿಶ್ರಾಂತಿ ತೆಗೆದುಕೊಳ್ಳಲಿ? ಕೆಲಸದಲ್ಲಿಯೇ ನನಗೆ ವಿಶ್ರಾಂತಿಯ ಸುಖ" ಎಂದರಂತೆ!

ಅವರದೊಂದು ಪರಿವ್ರಾಜಕ ಜೀವನ. ಅವರ ಕರ್ಮ ಜೀವನಕ್ಕೆ ಅನಾಸಕ್ತಿ ಪರಿಮಳ ನೀಡುತ್ತಿತ್ತು. ಅವರು ಅನಾಸಕ್ತಿ ಸಾಧಿಸಿ ಹದ ಮಾಡಿಕೊಂಡದ್ದಲ್ಲ. ಅದು ಸಹಜವಾಗಿಯೇ ಅರಳಿ ಕಂಪು ನೀಡುವ ಹೂವಿನಂತೆ. ಅವರ ಸಮಾಜಸೇವೆಯನ್ನು, ದೀನದಲಿತರ ಬದುಕನ್ನೇ ಅಪ್ಪಿಕೊಂಡ ಅವರ ಬದುಕನ್ನು ಕಂಡು ಮಹಾತ್ಮ ಗಾಂಧೀಜಿ (ಬಾಪೂ) ರವರೇ ಠಕ್ಕರ್‌ರವರನ್ನು 'ಬಾಪಾ' ಎಂದು ಕರೆದರು. ಅಂದಿನಿಂದ ಅವರು ಪ್ರಪಂಚಕ್ಕೆಲ್ಲ 'ಠಕ್ಕರ್ ಬಾಪಾ' ಆಗಿ ಹೋದರು. ಅವರ ಮರಣವೂ (1951) ಹಾಗೆಯೇ ನಿರ್ಮಲವಾದ ಧ್ಯಾನಸ್ಥ ಸ್ಥಿತಿಯಲ್ಲಿ ಆಯಿತಂತೆ. ಈ ಕಗ್ಗ ಠಕ್ಕರ್ ಬಾಪಾರಂಥವರ ಬದುಕಿಗೊಂದು ವ್ಯಾಖ್ಯೆ ಇದ್ದಂತಿದೆ. ಕಗ್ಗ ಹೇಳುತ್ತದೆ, ಜೀವನದ ಮಹಾಪ್ರವಾಹದಲ್ಲಿ ಆಸೆ ಆಮಿಷಗಳೆಂಬ ಅನೇಕ ಮಡುವುಗಳಿವೆ, ಸುಳಿಗಳಿವೆ. ಅವುಗಳಲ್ಲಿ ಮುಳುಗಿ ಹೋಗಬೇಡ. ತೆರೆಗಳ ಮೇಲೆ ಹಗುರಾಗಿ ಈಜುತ್ತಿರು ನಿನ್ನ ಬದುಕನ್ನು ಹಗುರಾಗಿಸಲು ಪ್ರಪಂಚಕ್ಕೆ ಸಾಧ್ಯವಾದಷ್ಟು ಸಂತೋಷವನ್ನು ನೀಡುತ್ತ, ಪಡೆಯುತ್ತ ಬದುಕು. ಸಂತೋಷವೆಂಬುದು ಬೆನ್ನಿಗೆ ಕಟ್ಟಿದ ಸೋರೆಕಾಯಿ, ಮುಳುಗಲು ಬಿಡುವುದಿಲ್ಲ. ಹೀಗಿದ್ದಾಗ, ಸಾವಿನ ಕರೆ ಬಂದಾಗ ಮನದಲ್ಲಿ ಸಂಕಟ, ಕಳವಳ ಬೇಡ. ಬದುಕು ಸಂಭ್ರಮವಾದರೆ, ಸಾವು ಅದರ ಶಿಖರ. ಈ ಸಂಭ್ರಮದ ಶಿಖರ ತಲುಪಲು ಸತತವಾಗಿ ಪ್ರಪಂಚದ ಆಗುಹೋಗುಗಳಲ್ಲಿ ಅನನ್ಯವಾದ ಪ್ರೀತಿಯಿಂದ ಭಾಗವಹಿಸು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ನವೆಂಬರ್ 7, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಚತುರ್ದಶಿ ಗಂ. 16-17 **ನಕ್ಷತ್ರ:** ಅಶ್ವಿನಿ ಗಂ. 24-37 **ಯೋಗ:** ಸಿದ್ಧಿ(ಆಸ್ರಿಕ್) ಗಂ. 22-36, **ಕರಣ:** ವಣಿಜ ಗಂ. 16-17, ತುಲಾ ಮಾಸದ 20 ನೇ ದಿನ. **ರಾಹುಕಾಲ :** ಬೆಳಿಗ್ಗೆ 07-30 – 09-00, **ಸೂರ್ಯೋದಯ :** 06-30 **ಸೂರ್ಯಾಸ್ತ :** 05-58, **ಮುಸ್ಲಿಂ ದಿನಾಂಕ :** 11 ರಬಿಯುಸ್ಸಾನಿ, **ದಿನ ವಿಶೇಷ :** ರಸಯಾತ್ರ (ಸ್ಮಾರ್ತ), ತ್ರಿಪುರೋತ್ಸವ, ಫತೇಹ ಯಜ್ದುಮ್ (ಮುಸ್ಲಿಂ) **ಅದೃಷ್ಟ ಸಂಖ್ಯೆ :** 1, 9

ಮೇಷ: ಇಂದು ನಿಮ್ಮ ನಿಯಮವನ್ನು ಬದಿಗಿಟ್ಟು ಸಮಯಕ್ಕೆ ಸರಿಯಾಗಿ ವರ್ತಿಸುವ ಅನಿವಾರ್ಯತೆ ಎದುರಾಗುವುದು. ಕೈತಪ್ಪಿ ಹೋದ ವಿಚಾರಗಳು ಪುನಃ ಕೈ ಸೇರಿ ಸಂತೋಷ ಇಮ್ಮಡಿಗೊಳ್ಳಲಿದೆ. ಹಣಕಾಸಿನಲ್ಲಿ ಹಿಡಿತವಿರಲಿ.

ವೃಷಭ: ಕೆಲಸದಲ್ಲಿ ಅಥವಾ ಕೆಲಸದ ಜಾಗವನ್ನು ಬದಲಾವಣೆ ಮಾಡುವುದು ಸರಿಯಲ್ಲ. ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದು ಉತ್ತಮ. ಕೃಷಿ ಆಧಾರಿತ ಕುಟುಂಬದಲ್ಲಿ ಮಂಗಳ ಕಾರ್ಯ ನಡೆಯುವ ಮುನ್ಸೂಚನೆ ಸಿಗಲಿದೆ.

ಮಿಥುನ: ಸಹಚರರನ್ನು ಒಮ್ಮನಸ್ಸಿನಿಂದ ಕರೆದೊಯ್ಯುವಲ್ಲಿ ಯಶಸ್ವಿಯಾಗುವಿರಿ. ತಾಂತ್ರಿಕ ಕ್ಷೇತ್ರದಲ್ಲಿರುವವರಿಗೆ ಸಾಧನೆ ಮಾಡುವುದು ಕಷ್ಟವೆನಿಸಲಿದೆ. ವಾಸ್ತವದಿಂದ ದೂರಾಗಿ ಭ್ರಮೆ ಲೋಕದಲ್ಲಿ ಬದುಕುವ ಪ್ರಯತ್ನ ಮಾಡಬೇಡಿ.

ಕರ್ಕಾಟಕ: ಹೆಚ್ಚಿನ ಪ್ರಯತ್ನಗಳಿಂದ ಉತ್ತಮ ಉದ್ಯೋಗ ಗಳಿಸಿಕೊಳ್ಳಬಹುದು ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ಅಧಿಕ ಲಾಭವನ್ನು ಹೊಂದುವಿರಿ. ವಿದ್ಯಾರ್ಥಿಗಳು ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿಶೇಷ ಸಾಧನೆ ತೋರಲಿದ್ದಾರೆ.

ಸಿಂಹ: ಕೆಲಸದ ಕ್ಷೇತ್ರದಲ್ಲಿ ನಿಮ್ಮ ಜವಾಬ್ದಾರಿಯುತ ಕಾರ್ಯವೈಖರಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಲಿದೆ. ನಿಮ್ಮ ಸಹೋದ್ಯೋಗಿಗಳಿಂದ ಉತ್ತಮ ಸಹಕಾರ ಮತ್ತುಮಾರ್ಗದರ್ಶನವನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗುವಿರಿ.

ಕನ್ಯಾ: ಯಾವುದೇ ಅನಿವಾರ್ಯತೆಗಳಿಲ್ಲದೆ ಕೇವಲ ಹಿರಿಮೆಗಾಗಿ ವಿಲಾಸೀ ವಸ್ತು ಖರೀದಿಸುವಿರಿ. ಷೇರು ಮಾರುಕಟ್ಟೆ ಹಾಗೂ ಕಮಿಷನ್ ವ್ಯಾಪಾರಕ್ಕೆ ಸಂಬಂಧಿಸಿದ ವೃತ್ತಿಯಲ್ಲಿರುವವರಿಗೆ ನಷ್ಟದ ಬಿಸಿ ಮುಟ್ಟಲಿದೆ.

ತುಲಾ: ಕಷ್ಟ ಪರಿಸ್ಥಿತಿಯಲ್ಲಿ ಜನಬಲದ ಕೊರತೆಯಾದರೂ, ಸ್ನೇಹಿತರಿಂದ ಹಣದ ಸಹಾಯ ಸಿಗಲಿದೆ. ಇಂಟೀರಿಯರ್ ಡೆಕೋರೇಟರ್ಸ್‌ಗಳಿಗೆ ಬೇಡಿಕೆ ಇರುವುದು. ಹೊಸ ಉದ್ಯೋಗಕ್ಕೆ ಹೊಂದಿಕೊಳ್ಳಲು ಕಷ್ಟವಾಗಬಹುದು.

ವೃಶ್ಚಿಕ: ದುರಾಭ್ಯಾಸಗಳಿಗೆ ಒಳಗಾಗದಂತೆ ಮನಸ್ಸನ್ನು ಸ್ಥಿಮಿತದಲ್ಲಿ ಇಟ್ಟುಕೊಳ್ಳುವ ಪ್ರಯತ್ನವನ್ನು ಮಾಡಿ. ನೀವು ಕೆಲವೊಂದು ಬದಲಾವಣೆಯನ್ನು ರೂಢಿಸಿಕೊಳ್ಳಬೇಕಾಗುವುದು.

ಧನು: ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ಉಳಿತಾಯದ ಹಣದ ಹೊಂದಾಣಿಕೆಯಿಂದ ಸಾಲ ಮಾಡುವ ಪರಿಸ್ಥಿತಿ ದೂರಾಗುವುದು.

ಮಕರ: ಎಲೆಕ್ಟ್ರಾನಿಕ್ ಉಪಕರಣಗಳ ಮೇಲೆ ಹೆಚ್ಚಿನ ಬಂಡವಾಳ ಹೂಡಬಹುದು. ಬಹುದಿನಗಳಿಂದ ಕಾಯುತ್ತಿದ್ದ ಫಲಿತಾಂಶವು ಇಂದು ಬರಲಿದೆ. ಅಜೀರ್ಣ, ಉದರ ಸಂಬಂಧ ಅನಾರೋಗ್ಯ ಎದುರಾಗಬಹುದು.

ಕುಂಭ: ಹೊಸ ಜನರ ಸಂಪರ್ಕವನ್ನು ಮಾಡಿಕೊಳ್ಳುವ ಅಭ್ಯಾಸವನ್ನು ರೂಢಿಸಿಕೊಳ್ಳಿರಿ. ಸೌಜನ್ಯತೆ, ಸರಳತೆ ನಿಮ್ಮ ಹುದ್ದೆಗೆ ಮೆರಗು ತರುವುದು. ವ್ಯವಹಾರದಲ್ಲಿ ಪೈಪೋಟಿ ಹೆಚ್ಚಾಗಲಿದೆ.

ಮೀನ: ಜವಾಬ್ದಾರಿಯನ್ನು ಸ್ವೀಕರಿಸುವ ಮೊದಲು ಅದನ್ನು ನಿಭಾಯಿಸುವ ಬಗ್ಗೆ ಯೋಚಿಸಿಕೊಳ್ಳುವುದು ಉತ್ತಮ. ನಿಮ್ಮ ನಿರ್ಧಾರಗಳಿಗೆ ಬದ್ಧತೆ ತೋರಬೇಕಾಗಬಹುದು. ನಿಮ್ಮ ಪ್ರಯತ್ನಕ್ಕಿಂತ ಮಿಗಿಲಾದ ಧನಾದಾಯವಿರಲಿದೆ.

ಪದಬಂಧ 5131
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಹಸುವಿನಲ್ಲಿ ಕೈಗೂಡದ ಆಸೆ ಕಂಡೀತೆ? (6)
4.ತಮದಲ್ಲಿ ಮೇಲುಕೀಳು (4)
6.ಗಲ್ಲಿಯಲ್ಲಿರುವಾಗ ದಿಕ್ಕು ತೋಚದಿರುವುದು (4)
8.ತುಂಬಿದ ಮೈಕಟ್ಟು (4)
10.ಇನ್ನೂ ಬಲಿಯದಿರುವ ಕಾಯಿ (4)
12.ದಂತಚೂರ್ಣ ಇಲ್ಲಿದೆ (4)
13.ಉಪಾಯದಿಂದ ಹಾಕಿದ ನೆಲೆಗಟ್ಟು (4)
15.ಇದು ಹಣೆ ಬರಹ (6)

ಮೇಲಿಂದ ಕೆಳಕ್ಕೆ

1.ಹಣ್ಣು ತಂದಾಗ ನೆಟ್ಟಿರುವ ತೀಕ್ಷ್ಣದೃಷ್ಟಿ! (4)
2.ಸುನೀತಳ ಮಗನಿವನು (2)
3.ಹೊಗೆ ಇಲ್ಲಿ ಕಾಣುತ್ತಿದೆ (2)
5.ಹಾಗೆ ಆಗಲಿ ಎಂದು ಹೀಗೆ ಹೇಳಬಹುದು (3)
7.ಗಾಡಿಯಲ್ಲಿಟ್ಟಿರುವ ಚಿಲ್ಲರೆ ಹಣವಿದು (4)
8.ಅಗಲವಾದ ದುಂಡನೆಯ ಪಾತ್ರೆ (3)
9.ಒಂದು ಬಗೆಯ ನಯವಾದ ಬಟ್ಟೆ (4)
10.ಕನ್ನಡಿಗ ಹಿಡಿದಿರುವ ದರ್ಪಣ (3)
11.ಸಂಪ್ರದಾಯವನ್ನು ಅನುಸರಿಸುವವನು (4)
13.ಬೆಂದಕ್ಕಿ ಕಾಳು (2)
14.ಸಂಗೀತ ಮತ್ತು ನೃತ್ಯದಲ್ಲಿನ ಗತಿ ತಲೆಕೆಳಗಾಗಿದೆ (2)



5130ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕಸ್ಮಿಕ 3.ಜಲಪಾತ 5.ವಿದಾಯ 7.ರಾಡಿ 8.ದರ 10.ಬವಣೆ 11.ಶಪಥ 13.ರಿಪು 15.ಮಿತ್ರ 16.ಅಂಕುಶ 18.ತೆಗಳಿಕೆ 19.ರವಿಸುತ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಕವಿ 3.ಜಯ 4.ತಕ್ಕಡಿ 6.ದಾನವ 7.ರಾಯಭಾರಿ 9.ರಕ್ಷಾಪತ್ರ 12.ಪರಾಕು 14.ಪುರಸ್ಕೃತ 15.ಮಿಡತೆ 16.ಅಂಕೆ 17.ಶರ

ಸುಡೊಕು 5517

	5			6	8	1		3
9		6					7	
	8		7			2		6
6		1		5		7		9
			8	9	6			
8				7		5		2
3		9		1			2	
			6		7	9		4
7		8		2			1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5516 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ವಿಶ್ವದ ಅತ್ಯುತ್ತಮ ಉದ್ಯೋಗದಾತರ ಪಟ್ಟಿ: ರಿಲಯನ್ಸ್‌ಗೆ 20ನೇ ಸ್ಥಾನ

ನವದೆಹಲಿ (ಪಿಟಿಐ): ದೇಶದ ಅತಿದೊಡ್ಡ ಕಂಪನಿಯಾಗಿರುವ ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್, 'ಭಾರತದ ಅತ್ಯುತ್ತಮ ಉದ್ಯೋಗದಾತ ಮತ್ತು ಕೆಲಸ ಮಾಡಲು ವಿಶ್ವದ 20ನೇ ಅತ್ಯುತ್ತಮ ಸಂಸ್ಥೆ' ಎಂಬ ಹೆಗ್ಗಳಿಕೆ ಪಡೆದುಕೊಂಡಿದೆ.

ಫೋಬ್ಸ್ ನಿಯತಕಾಲಿಕವು '2022ರ ವಿಶ್ವದ ಅತ್ಯುತ್ತಮ ಉದ್ಯೋಗದಾತ'ರ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಈ ಪಟ್ಟಿಯಲ್ಲಿ ದಕ್ಷಿಣ ಕೊರಿಯಾದ ಸ್ಯಾಮ್ಸಂಗ್ ಎಲೆಕ್ಟ್ರಾನಿಕ್ಸ್ ಮೊದಲ ಸ್ಥಾನದಲ್ಲಿದೆ. ಅಮೆರಿಕದ ಮೈಕ್ರೊಸಾಫ್ಟ್, ಐಬಿಎಂ, ಆಲ್ಫಾಬೆಟ್ ಮತ್ತು ಆ್ಯಪಲ್ ಕಂಪನಿಗಳು ನಂತರದ ಸ್ಥಾನ ಪಡೆದಿವೆ.

ಅಮೆರಿಕದ ಕಂಪನಿಗಳು 2ರಿಂದ 12ರವರೆಗಿನ ಸ್ಥಾನಗಳನ್ನು ಪಡೆದುಕೊಂಡಿವೆ. ಜರ್ಮನಿಯ ಬಿಎಂಡಬ್ಲ್ಯು ಸಮೂಹವು 13ನೇ ಸ್ಥಾನದಲ್ಲಿದೆ. ಜಗತ್ತಿನ ಅತಿದೊಡ್ಡ ಆನ್‌ಲೈನ್ ರಿಟೇಲ್ ಮಾರಾಟ ಕಂಪನಿ ಅಮೆಜಾನ್ 14ನೇ ಸ್ಥಾನ ಪಡೆದುಕೊಂಡಿದೆ. ಡೆಕತ್ಲಾನ್ 15ನೇ ಸ್ಥಾನದಲ್ಲಿದೆ.

ರಿಲಯನ್ಸ್ ಕಂಪನಿಯಲ್ಲಿ ಒಟ್ಟು 2.30 ಲಕ್ಷ ಉದ್ಯೋಗಿಗಳಿದ್ದು, ಈ ಕಂಪನಿಯು ಜರ್ಮನಿಯ ಮರ್ಸಿಡಿಸ್ ಬೆಂಜ್, ಅಮೆರಿಕದ ಕೋಕಾ ಕೋಲಾ, ಜಪಾನ್‌ನ ಹೋಂಡಾ ಮತ್ತು ಯಮಹಾ ಹಾಗೂ ಸೌದಿ ಅರೇಬಿಯಾದ ಆರಾಮ್ಕೊ ಕಂಪನಿಗಳಿಗಿಂತಲೂ ಮೇಲಿನ ಸ್ಥಾನವನ್ನು ಹೊಂದಿದೆ.

ಮೊದಲ 100 ಕಂಪನಿಗಳ ಸಾಲಿನಲ್ಲಿ ರಿಲಯನ್ಸ್ ಹೊರತುಪಡಿಸಿದರೆ ಭಾರತದ ಇನ್ನಾವುದೇ ಕಂಪನಿಯೂ ಸ್ಥಾನ ಪಡೆದುಕೊಂಡಿಲ್ಲ.

ಎಚ್‌ಡಿಎಫ್‌ಸಿ ಬ್ಯಾಂಕ್ (137), ಆದಿತ್ಯ ಬಿರ್ಲಾ ಸಮೂಹ (240), ಹೀರೊ ಮೊಟೊಕಾರ್ಪ್ (333), ಲಾರ್ಸನ್ ಆ್ಯಂಡ್ ಟೂಬ್ರೊ (354), ಐಸಿಐಸಿಐ ಬ್ಯಾಂಕ್ (365), ಎಚ್‌ಸಿಎಲ್ ಟೆಕ್ನಾಲಜೀಸ್ (455), ಎಸ್‌ಬಿಐ (499), ಅದಾನಿ ಎಂಟರ್‌ಪ್ರೈಸಸ್ (547) ಮತ್ತು ಇನ್ಫೊಸಿಸ್ (668) ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ಭಾರತದ ಇತರ ಕಂಪನಿಗಳು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹520
ಮೊಟ್ಟೆಗೆ ₹67
ಮೈಸೂರು
100 ಮೊಟ್ಟೆಗೆ ₹520

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹405-666
ದ್ವಿತಳಿ (ಬಿ.ವಿ) ₹501-855

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು & ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000-20000 ಗಳಿಸಿ. ಕರೆಮಾಡಿ: 9611225266/ 9611225388

ಕನ್ನಡ ಮತ್ತು ಇಂಗ್ಲೀಷ್ ಬರುವ ಯುವಕ/ಯುವತಿಯರಿಗೆ, ಗೃಹಿಣಿಯರಿಗೆ, ಬುಕ್ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000 ಗಳಿಸಿ.(ಕೊರಿಯರ್ ಇದೆ). 8884686860, 8884686861.

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರುಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ESI, PF ಸೌಲಭ್ಯವಿರುತ್ತದೆ. ಬೆಂಗಳೂರು ಸಂಪರ್ಕಿಸಿ: 9606523337, 9606385001

ಕಂಪನಿಗಳಿಗೆ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಟಿ.ವಿ.ಎಸ್, ಬ್ರಿಟಾನಿಯಾಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ, ಐಟಿಐನವರುಗಳು 18,100- 56,000 (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟದೊಂದಿಗೆ. 9686220858

ಶ್ರೀ ಶಕ್ತಿ ಹೆಲ್ತ್ ಕೇರ್ ನಲ್ಲಿ ಯುವಕ ಯುವತಿಯರಿಗೆ, ಎಲೆಕ್ಟ್ರೋ ಮ್ಯಾಗ್ನೆಟಿಕ್ ಥೆರಪಿ ಕೆಲಸ ಖಾಲಿ ಇದೆ. ವಿದ್ಯರ್ಹತೆ: PUC Degree ಆದವರಿಗೆ. ತಿಂಗಳಿಗೆ ವೇತನ 20 ರಿಂದ 25 ಸಾವಿರವರೆಗೆ.ಶೇಷಾದ್ರಿಪುರಂ, ಬೆಂಗಳೂರು. 9019626612

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟ ವಸತಿ ಇದೆ. 10,000- 15,000. 8951315839, 9880545002

ವ್ಯಾಪಾರ

Business Offers

General

ಸಂಪರ್ಕಿಸಿ: 150ಕ್ಕೂ ಹೆಚ್ಚಿನ ಉದ್ಯೋಗಾವಕಾಶದ ತರಬೇತಿಗಳ ತಾಲೂಕುವಾರು ಫ್ರಾಂಚಾಯ್ಸಿಗಾಗಿ ಹಾಗೂ ಬ್ಯಾಂಕಿಂಗ್ ಸೇವಾ ಸಂಘಟನೆಯ ಪ್ರತಿನಿಧಿಯಾಗಲು/ಮುನ್ನಡೆಸಲು 9342326501

Machinery & Tools

START YOUR Own Business. Paper Plates, Paper Cups. Fully Automatic Machines Manufactured in Bangalore. 'Guru Enterprises': 9845049816

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ರಿಯಲ್ ಎಸ್ಟೇಟ್ ಸೆಲ್ಲಿಂಗ್

Banashankari

FOR SALE: 4000 Sqft New Independent Flat in Bangaluru Banashankari BDA Layout.(Brokers Excuse) 7892130093

ಪ್ರವಾಸ

Travel

ಸೋಮನಾಥ್ ದ್ವಾರಕಾ ಮಾತ್ರಗಯಾ ಉಜ್ಜಯಿನಿ ಓಂಕಾರೇಶ್ವರ್ ಅಷ್ಟ ಜ್ಯೋತಿರ್ಲಿಂಗಗಳು 03.12.2022 23.01.2023 ರಿಂದ 15/10 ದಿನಗಳು ಮಾಘ ಸ್ನಾನದ ಪ್ರಯುಕ್ತ ಕಾಶಿ,ಪ್ರಯಾಗ ನೈಮೀಶಾರಣ್ಯ,ಚಿತ್ರಕೂಟ,ಗಯಾ 26.01.2023 ರಿಂದ 8 ದಿನಗಳು. ವಿಯವಾಡ,ಭದ್ರಾಚಲಂ ಅನ್ನಾವರಂ ಪಂಚರಾಮ ಮಂದಿರಗಳು 02.02.2023 ರಿಂದ 10 ದಿನಗಳು. ಸಿಕ್ಕಿಂ,ಡಾರ್ಜಲಿಂಗ್ ಗೌಹಾಟಿ ಕೊಲ್ಕತ್ತ,ಪುರಿ ಭುವನೇಶ್ವರ್ 02.02.2023 ರಿಂದ 14 ದಿನಗಳು. ಸಂಪರ್ಕಿಸಿ: 26508925 9980993631 ಶ್ರೀಚೈತನ್ಯ ಟ್ರಾವಲ್ಸ್ ಚಾಮರಾಜಪೇಟೆ ಬೆಂಗಳೂರು-18

Pilgrimage Tours

ರಾಮಕಮಲ್ ಟೂರಿಸಂ 30.11.2022 ಶಿರಡಿ, ನಾಸಿಕ್, ಪಂಢರಾಪುರ, ಕೊಲ್ಲಾಪುರ, ತ್ರ್ಯಂಬಕೇಶ್ವರ. 24.11.2022 ಮಂತ್ರಾಲಯ, ಶ್ರೀಶೈಲ, ಅಹೋಬಲ ಪ್ರವಾಸ. 9481226296, 9945476296

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH DECCAN HERALD ಪ್ರಜಾವಾಣಿ
BOOK YOUR CLASSIFIEDS ONLINE
5 EASY STEP
5 Easy steps to book your ads
LOG INTO WWW.DHCLASSIFIEDS.COM
CHOOSE THE CATEGORY
CHOOSE THE AD DATES
COMPOSE THE MATTER
CONFIRM AND PAY
TO BOOK YOUR CLASSIFIEDS ADS ONLINE
JOB LOST REAL ESTATE NAME CHANGE EDU HEALTH
MATRI AUTO ASTRO NOTICE TRAVEL
*conditions apply
WWW.DHCLASSIFIEDS.COM
For more information Contact: 9731810277 | 9901641752
9845114560 | 9886213331 | 080 - 45557163 / 164
Email: dhclassifieds@deccanherald.co.in

ಹೊಸಬರಿಗೆ ಯಾವ ಫಂಡ್ ಸೂಕ್ತ?

ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

'ಮ್ಯೂಚುವಲ್ ಫಂಡ್ ಹೂಡಿಕೆಗೆ ನಾನು ಹೊಸಬ. ಆದರೆ ಮ್ಯೂಚುವಲ್ ಫಂಡ್‌ನಲ್ಲಿ ಎಸ್‌ಐಪಿ (ವ್ಯವಸ್ಥಿತ ಹೂಡಿಕೆ ಯೋಜನೆ) ಆರಂಭಿಸಬೇಕು ಅಂದುಕೊಂಡಿದ್ದೇನೆ. ಅತ್ಯಂತ ಕಡಿಮೆ ರಿಸ್ಕ್ ಇರುವ ಮ್ಯೂಚುವಲ್ ಫಂಡ್‌ಗಳ ಬಗ್ಗೆ ತಿಳಿಸಬಹುದೇ' ಎಂದು ಅನೇಕರು ಕೇಳುತ್ತಾರೆ. ಅವರೆಲ್ಲರಿಗೂ ನಾನು ಸೂಚಿಸುವುದು ಇಂಡೆಕ್ಸ್ ಫಂಡ್‌ಗಳನ್ನು.

ಮ್ಯೂಚುವಲ್ ಫಂಡ್ ಬಗ್ಗೆ ಹೆಚ್ಚು ಅರಿವಿಲ್ಲ ಎನ್ನುವವರೂ ಇಂಡೆಕ್ಸ್ ಫಂಡ್‌ಗಳಲ್ಲಿ ಹೂಡಿಕೆ ಶುರು ಮಾಡಬಹುದು. ಹಾಗಾದರೆ ಏನಿದು ಇಂಡೆಕ್ಸ್ ಫಂಡ್, ಇದರಲ್ಲಿ ಹೂಡಿಕೆ ಹೇಗೆ ಎನ್ನುವುದನ್ನು ಕಲಿಯೋಣ.

ದೇಶದ ಷೇರು ಮಾರುಕಟ್ಟೆಯ ಎರಡು ಪ್ರಮುಖ ಸೂಚ್ಯಂಕಗಳು (ಇಂಡೆಕ್ಸ್) ಮುಂಬೈ ಷೇರುಪೇಟೆಯನ್ನು ಪ್ರತಿನಿಧಿಸುವ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆಯನ್ನು ಪ್ರತಿನಿಧಿಸುವ ನಿಫ್ಟಿ. ಸೆನ್ಸೆಕ್ಸ್ ಸೂಚ್ಯಂಕವು ಆಯ್ದ ಪ್ರಮುಖ 30 ಕಂಪನಿಗಳ ಷೇರು ಬೆಲೆ ಏರಿಳಿತ ಆಧರಿಸಿ, ಷೇರುಪೇಟೆಯ ಒಟ್ಟು ಏರಿಳಿತವನ್ನು ಹೇಳುತ್ತದೆ. ಹಾಗೆಯೇ ನಿಫ್ಟಿ ಸೂಚ್ಯಂಕವು ರಾಷ್ಟ್ರೀಯ ಷೇರುಪೇಟೆಯ ಪ್ರಮುಖ 50 ಕಂಪನಿಗಳ ಷೇರು ಬೆಲೆ ಏರಿಳಿತವನ್ನು ಗಣನೆಗೆ ತೆಗೆದುಕೊಂಡು ಇಡೀಷೇರುಪೇಟೆಯು ಸಕಾರಾತ್ಮಕವಾಗಿಯೋ ನಕಾರಾತ್ಮಕವಾಗಿದೆಯೋ ಎಂಬುದನ್ನು ತಿಳಿಸುತ್ತದೆ.

ಸೂಚ್ಯಂಕಗಳನ್ನು ಯಥಾವತ್ತಾಗಿ ಅನುಕರಿಸಿ ಕೆಲವು ಮ್ಯೂಚುವಲ್ ಫಂಡ್‌ಗಳನ್ನು ರೂಪಿಸಲಾಗಿದೆ. ಅಂತಹ ಫಂಡ್‌ಗಳನ್ನು ಇಂಡೆಕ್ಸ್ ಮ್ಯೂಚುವಲ್ ಫಂಡ್ ಎಂದು ಕರೆಯುತ್ತಾರೆ.

ಉದಾಹರಣೆಗೆ ನಿಫ್ಟಿ ಸೂಚ್ಯಂಕದಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್, ಇನ್ಫೊಸಿಸ್, ರಿಲಯನ್ಸ್, ಹಿಂದೂಸ್ತಾನ್ ಯುನಿಲಿವರ್, ಐಸಿಐಸಿಐ ಬ್ಯಾಂಕ್ ಸೇರಿದಂತೆ ಹಲವು ವಲಯಗಳ ಒಟ್ಟು 50 ಪ್ರಾತಿನಿಧಿಕ ಕಂಪನಿಗಳಿವೆ. ಈ ಸೂಚ್ಯಂಕದಲ್ಲಿರುವ ಎಲ್ಲ 50 ಕಂಪನಿಗಳನ್ನು ಯಥಾವತ್ತಾಗಿ ಒಳಗೊಂಡು ಒಂದು ಮ್ಯೂಚುವಲ್ ಫಂಡ್ ರೂಪಿಸಿ ಹೂಡಿಕೆ ಮಾಡುವ ವ್ಯವಸ್ಥೆಯೇ ಇಂಡೆಕ್ಸ್ ಮ್ಯೂಚುವಲ್ ಫಂಡ್. ಇಂಡೆಕ್ಸ್ ಫಂಡ್‌ಗಳಲ್ಲಿ ಫಂಡ್ ಮ್ಯಾನೇಜರ್‌ಗೆ ಹೆಚ್ಚಿನ ಕೆಲಸ ಇಲ್ಲದ ಕಾರಣ ಇಲ್ಲಿ ನಿರ್ವಹಣಾ ಶುಲ್ಕ ಕಡಿಮೆ.

ಲಾರ್ಜ್ ಕ್ಯಾಪ್ ಮ್ಯೂಚುವಲ್ ಫಂಡ್‌ಗಳ ವೆಚ್ಚ ಅನುಪಾತ (ಎಕ್ಸ್‌ಪೆನ್ಸ್ ರೇಷ್ಯೊ) ಶೇ 1.5ರಷ್ಟಿದ್ದರೆ ಇಂಡೆಕ್ಸ್ ಫಂಡ್ ವೆಚ್ಚ ಅನುಪಾತ ಶೇ 0.2ರಷ್ಟು ಮಾತ್ರ. ಶುಲ್ಕ ಕಡಿಮೆ ಇರುವುದರಿಂದ ಇಲ್ಲಿ ಹೂಡಿಕೆದಾರನಿಗೆ ಹೆಚ್ಚು ಲಾಭ ಸಿಗುತ್ತದೆ. ಷೇರು ಮಾರುಕಟ್ಟೆ ಎಷ್ಟು ಪ್ರಮಾಣದಲ್ಲಿ ಏರಿಕೆ ಕಾಣುವುದೋ ಅಷ್ಟೇ ಲಾಭ ಸಿಕ್ಕಿದರೆ ಸಾಕು, ಹೆಚ್ಚು ರಿಸ್ಕ್ ತೆಗೆದುಕೊಳ್ಳುವುದಿಲ್ಲ ಎನ್ನುವವರಿಗೆ ಇಂಡೆಕ್ಸ್ ಫಂಡ್ ಒಳ್ಳೆಯ ಆಯ್ಕೆ.

ಇಂಡೆಕ್ಸ್ ಫಂಡ್‌ಗಳು ಹತ್ತಾರು ವಲಯಗಳನ್ನು ಪ್ರತಿನಿಧಿಸುವ ಕಂಪನಿಗಳಲ್ಲಿ ಹಣ ತೊಡಗಿಸುವುದರಿಂದ ಹೂಡಿಕೆಯಲ್ಲಿ ವೈವಿಧ್ಯ ಕಾಯ್ದುಕೊಳ್ಳಬಹುದು.

ಇವು ಪ್ಯಾಸಿವ್ ಫಂಡ್‌ಗಳು: ಪ್ಯಾಸಿವ್ ಫಂಡ್‌ಗಳಲ್ಲಿ ಹೂಡಿಕೆ ನಿರ್ಧಾರವನ್ನು ಫಂಡ್ ನಿರ್ವಾಹಕ ತೆಗೆದುಕೊಳ್ಳುವುದಿಲ್ಲ. ಸೂಚ್ಯಂಕದ ಭಾಗವಾಗಿರುವ ಕಂಪನಿಗಳ ಷೇರುಗಳೇ ಇಂಡೆಕ್ಸ್ ಫಂಡ್‌ನ ಭಾಗವೂ ಆಗಿರುತ್ತವೆ. ಹೀಗಾಗಿ ಇಂಡೆಕ್ಸ್ ಫಂಡ್, ಪ್ಯಾಸಿವ್ ಫಂಡ್ ಎನಿಸಿಕೊಳ್ಳುತ್ತದೆ.

ಲಾಭ ಜಾಸ್ತಿ ಎಲ್ಲಿ?: ಆ್ಯಕ್ಟಿವ್ ಫಂಡ್‌ಗಳು ಇಂಡೆಕ್ಸ್ ಫಂಡ್‌ಗಳಿಗಿಂತ ಹೆಚ್ಚು ಲಾಭ ನೀಡುತ್ತವೆ. ಆದರೆ ಆ್ಯಕ್ಟಿವ್ ಫಂಡ್‌ಗಳ ಪೈಕಿ ಯಾವ ಫಂಡ್ ಉತ್ತಮವಾಗಿ ಲಾಭ ನೀಡುತ್ತಿದೆ ಎನ್ನುವುದನ್ನು ನೀವು ನಿರಂತರವಾಗಿ ಗಮನಿಸುತ್ತಿರಬೇಕು. ಕೆಲವು ವರ್ಷಗಳ ಹಿಂದೆ ಹೆಚ್ಚು ಲಾಭ ಕೊಡುತ್ತಿದ್ದ ಫಂಡ್‌ಗಳು ಈಗ ಉತ್ತಮ ಪ್ರಮಾಣದಲ್ಲಿ ಲಾಭ ತಂದುಕೊಡುತ್ತಿಲ್ಲದಿರಬಹುದು. ಇನ್ನು ಕೆಲವು ಆ್ಯಕ್ಟಿವ್ ಫಂಡ್‌ಗಳು ಹಿಂದೆ ಚೆನ್ನಾಗಿ ಲಾಭ ತಂದುಕೊಡದಿದ್ದರೂ, ಈಗ ಲಾಭದ ಓಟದಲ್ಲಿ ಇದ್ದಿರಬಹುದು. ಈ ರೀತಿಯ ತಲೆನೋವು ಬೇಡ, ಹೂಡಿಕೆ ರಿಸ್ಕ್ ಕಡಿಮೆಯಿದ್ದರೆ ಒಳ್ಳೆಯದು ಎನ್ನುವವರು ಇಂಡೆಕ್ಸ್ ಫಂಡ್ ಹೂಡಿಕೆ ಪರಿಗಣಿಸಬಹುದು.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ)

ಸತತ ಗಳಿಕೆ ದಾಖಲಿಸಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಮೂರನೇ ವಾರ ಗಳಿಕೆ ದಾಖಲಿಸಿವೆ. 60,950 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 1.65ರಷ್ಟು ಗಳಿಸಿದೆ. 18,117 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 1.86ರಷ್ಟು ಜಿಗಿದಿದೆ. ತ್ರೈಮಾಸಿಕ ಫಲಿತಾಂಶಗಳಲ್ಲಿ ಕಂಪನಿಗಳ ಉತ್ತಮ ಸಾಧನೆ, ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಭರಾಟೆ, ರೂಪಾಯಿ ಮೌಲ್ಯದಲ್ಲಿ ಅಲ್ಪಾವಧಿಯಲ್ಲಿ ಕಂಡುಬಂದ ಸ್ಥಿರತೆ ಸೇರಿ ಹಲವು ಅಂಶಗಳು ಮಾರುಕಟ್ಟೆ ಜಿಗಿತಕ್ಕೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಲೋಹ ಸೂಚ್ಯಂಕ ಶೇ 7.5ರಷ್ಟು ಜಿಗಿದಿದೆ. ಫಾರ್ಮಾ ವಲಯ, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ವಲಯ, ತೈಲ ಮತ್ತು ಅನಿಲ ವಲಯಗಳು ತಲಾ ಶೇ 3ರಷ್ಟು ಹೆಚ್ಚಳ ದಾಖಲಿಸಿವೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಕಳೆದ ವಾರ ₹ 10,388.72 ಕೋಟಿ ಮೌಲ್ಯದ ಷೇರು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 4,496.06 ಕೋಟಿ ಮೌಲ್ಯದ ಷೇರು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್‌ನಲ್ಲಿ ಅದಾನಿ ಎಂಟರ್‌ಪ್ರೈಸಸ್, ವೇದಾಂತ, ಬಜಾಜ್ ಫಿನ್‌ಸರ್ವ್, ಅದಾನಿ ಟೋಟಲ್ ಗ್ಯಾಸ್, ಅಂಬುಜಾ ಸಿಮೆಂಟ್ಸ್, ಅಲ್ಟ್ರಾ ಟೆಕ್ ಸಿಮೆಂಟ್ ಮತ್ತು ಹಿಂಡಾಲ್ಕೊ ಇಂಡಸ್ಟ್ರೀಸ್ ಗಳಿಕೆ ದಾಖಲಿಸಿವೆ.

ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 2.4ರಷ್ಟು ಗಳಿಕೆ ಕಂಡಿದ್ದು ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಬ್ಯಾಂಕ್ ಆಫ್ ಇಂಡಿಯಾ, ದಾಲ್ಮಿಯಾ ಭಾರತ್, ರಾಜೇಶ್ ಎಕ್ಸ್‌ಪೋರ್ಟ್ಸ್, ಡೆಲಿವರಿ, ಸುಪ್ರೀಂ ಇಂಡಸ್ಟ್ರೀಸ್, ಎಬಿಬಿ ಇಂಡಿಯಾ ಮತ್ತು ಟ್ಯೂಬ್ ಇನ್ವೆಸ್ಟ್‌ಮೆಂಟ್ಸ್ ಗಳಿಕೆ ಕಂಡಿವೆ. ಎಲ್‌ಐಸಿ ಹೌಸಿಂಗ್ ಫೈನಾನ್ಸ್, ನೆರೋಲ್ಯಾಕ್ ಪೇಂಟ್ಸ್, ಅಪೋಲೊ ಹಾಸ್ಪಿಟಲ್ಸ್ ಎಂಟರ್‌ಪ್ರೈಸಸ್, ಅಜಂತಾ ಫಾರ್ಮಾ, ಪಿಬಿ ಫಿನ್‌ಟೆಕ್ ಮತ್ತು ಆದಿತ್ಯ ಬಿರ್ಲಾ ಫ್ಯಾಷನ್ ಆ್ಯಂಡ್ ರಿಟೇಲ್ ಶೇ 4ರಿಂದ ಶೇ 11ರಷ್ಟು ಕುಸಿದಿವೆ.

ಬಿಎಸ್‌ಇ ಸ್ಮಾಲ್ ಕ್ಯಾಪ್ ಸೂಚ್ಯಂಕ ಶೇ 1.4ರಷ್ಟು ಸುಧಾರಿಸಿದೆ. ಕರ್ಣಾಟಕ ಬ್ಯಾಂಕ್, ಲ್ಯಾನ್ಸರ್ ಕಂಟೇನರ್ ಲೈನ್ಸ್, ಪಿಡಿಎಸ್, ರಿಲಯನ್ಸ್ ಕಮ್ಯೂನಿಕೇಷನ್ಸ್, ಮಜಗಾನ್ ಡಾಕ್ ಶಿಪ್ ಬಿಲ್ಡರ್ಸ್, ಸಿಯಾರಾಮ್ ಸಿಲ್ಕ್ ಮಿಲ್ಸ್ ಶೇ 20ರಿಂದ ಶೇ 45ರಷ್ಟು ಗಳಿಕೆ ಕಂಡಿವೆ. ಮತ್ತೊಂದೆಡೆ ಮಂಗಳೂರು ಕೆಮಿಕಲ್ಸ್, ಕ್ರೆಸಂಡಾ ಸಲ್ಯೂಷನ್, ಇಂಟಲೆಕ್ಟ್ ಡಿಸೈನ್ ಅರೀನಾ, ಸ್ಪೋರ್ಟ್ ಕಿಂಗ್ ಇಂಡಿಯಾ, ಅಪೆಕ್ಸ್ ಫ್ರೋಜನ್ ಫುಡ್ಸ್, ವಿಷ್ಣು ಕೆಮಿಕಲ್ಸ್, ಟಾರ್ಸ್ ಪೋರ್ಟ್ ಕಾರ್ಪೊರೇಷನ್ ಅಪ್ ಇಂಡಿಯಾ, ಫಿನೋಟೆಕ್ಸ್ ಕೆಮಿಕಲ್ ಶೇ 10ರಿಂದ ಶೇ 28ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಈ ವಾರ ಆರ್ಕಿಡ್ ಪ್ಲೈ, ಅಫೆಲ್, ಎಬಿ ಕ್ಯಾಪಿಟಲ್, ಬಿಪಿಸಿಎಲ್, ಸಿಸಿಎಲ್, ಸಿಯೆಟ್ ಲಿ., ಕೋಲ್ ಇಂಡಿಯಾ, ಡಿವೀಸ್ ಲ್ಯಾಬ್ಸ್, ಗ್ರೀನ್ ಪ್ಲೈ, ಪೇಟಿಎಂ, ಪಾಲಿಸಿ ಬಜಾರ್, ಪ್ರಿಸಿಷನ್, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಕಾರ್ಪೊರೇಷನ್, ಎನ್‌ಸಿಸಿ, ಸ್ಟವ್ ಕ್ರಾಫ್ಟ್, ಬಿಇಎಂಎಲ್, ಗೋದ್ರೇಜ್ ಪ್ರಾಪರ್ಟೀಸ್, ಎನ್‌ಡಿಟಿವಿ, ಟಾಟಾ ಮೋಟರ್ಸ್, ಅದಾನಿ ಗ್ರೀನ್, ನೀಲ್ ಕಮಲ್, ಅಶೋಕ್ ಲೇಲೆಂಡ್, ಐಟಿಡಿಸಿ, ಕಾಫಿ ಡೇ, ಎಚ್‌ಸಿಜಿ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ.

ಬ್ಲ್ಯೂ ಟಿಕ್ ಖಾತೆಗೆ ಅಮೆರಿಕದಲ್ಲಿ ಶುಲ್ಕ ಶುರು: ತಿಂಗಳಿಗೆ 8 ಡಾಲರ್

ಟ್ವಿಟರ್‌ಗೆ ಶುಲ್ಕ: ಭಾರತದಲ್ಲೂ ಶೀಘ್ರ

ನವದೆಹಲಿ (ಪಿಟಿಐ): ನೀಲಿ ಬಣ್ಣದ ಟಿಕ್ (ಬ್ಲ್ಯೂ ಟಿಕ್) ಇರುವ ಟ್ವಿಟರ್ ಖಾತೆ ಸೇವೆಗೆ ಶುಲ್ಕ ವಿಧಿಸುವ ಕ್ರಮವು ಭಾರತದಲ್ಲಿ 'ಇನ್ನು ಒಂದು ತಿಂಗಳಿಗೂ ಮೊದಲೇ ಶುರುವಾಗಲಿದೆ' ಎಂದು ಟ್ವಿಟರ್ ಕಂಪನಿಯ ಮಾಲೀಕ ಎಲಾನ್ ಮಸ್ಕ್ ಹೇಳಿದ್ದಾರೆ.

ಟ್ವಿಟರ್ ಖಾತೆಯ ಹೆಸರಿನ ಮುಂದೆ ಬ್ಲ್ಯೂ ಟಿಕ್ ಇದ್ದರೆ ಆ ಖಾತೆ ನಕಲಿ ಅಲ್ಲ ಎಂದು ಅರ್ಥ. ಈ ಸೇವೆಯನ್ನು ಪಡೆಯಲು ಬಳಕೆದಾರರು ಇನ್ನು ಮುಂದೆ ತಿಂಗಳಿಗೆ 8 ಡಾಲರ್ (₹ 655.86) ಪಾವತಿಸಬೇಕು ಎಂದು ಮಸ್ಕ್ ಈಚೆಗೆ ಹೇಳಿದ್ದರು. ಆದರೆ, ತಿಂಗಳ ಶುಲ್ಕ ಪಾವತಿಸಬೇಕು ಎಂಬ ಮಾತಿಗೆ ವ್ಯಾಪಕ ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗಿದೆ.

ಈಗ ಮಸ್ಕ್ ನೀಡಿರುವ ಈ ಹೇಳಿಕೆಯು, ಭಾರತದಲ್ಲಿ ಈ ಸೇವೆಗಳಿಗೆ ಶುಲ್ಕ ಪಾವತಿಸುವುದು ಯಾವಾಗಿನಿಂದ ಶುರುವಾಗಬಹುದು ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡಿದೆ.

ಭಾರತದಲ್ಲಿ ಈ ಸೇವೆಗೆ ಎಷ್ಟು ಶುಲ್ಕ ನಿಗದಿ ಮಾಡಲಾಗುತ್ತದೆ ಎಂಬ ಬಗ್ಗೆ ಕಂಪನಿಯ ಕಡೆಯಿಂದ ಅಧಿಕೃತ ಹೇಳಿಕೆ ಬಂದಿಲ್ಲ. ಸರ್ಕಾರದಲ್ಲಿ ಹುದ್ದೆ ಹೊಂದಿರುವವರು, ಹೆಸರಾಂತ ಪತ್ರಕರ್ತರು, ಸೆಲೆಬ್ರಿಟಿಗಳು, ರಾಜಕೀಯ ಮುಖಂಡರು, ಲೇಖಕರು, ಸಂಘಟನೆಗಳ ಪ್ರಮುಖರು ಟ್ವಿಟರ್‌ನಲ್ಲಿ ಬ್ಲ್ಯೂ ಟಿಕ್ ಸೇವೆಯನ್ನು ಬಳಸಿಕೊಳ್ಳುತ್ತಿದ್ದಾರೆ.

ಬ್ಲ್ಯೂ ಟಿಕ್ ಸೇವೆಗೆ ತಿಂಗಳಿಗೆ 8 ಡಾಲರ್ ಪಾವತಿಸಬೇಕು ಎಂಬ ಮಾಹಿತಿ ನೀಡುವ ಸಂದರ್ಭದಲ್ಲಿ ಮಸ್ಕ್ ಅವರು, ಶುಲ್ಕವು ದೇಶದಿಂದ ದೇಶಕ್ಕೆ ಬದಲಾಗಲಿದೆ ಎಂಬ ಸೂಚನೆ ನೀಡಿದ್ದರು.

ಬಳಕೆದಾರರಿಂದ ಮಾಸಿಕ ಶುಲ್ಕ ಪಡೆಯುವ ಮೂಲಕ ಟ್ವಿಟರ್‌ಗೆ ಹೊಸ ಆದಾಯ ಮೂಲವೊಂದು ಸೃಷ್ಟಿಯಾಗಲಿದೆ ಎಂದು ಮಸ್ಕ್ ತಿಳಿಸಿದ್ದರು. ಟ್ವಿಟರ್ ಕಂಪನಿಯು ಬ್ಲ್ಯೂ ಟಿಕ್ ಇರುವ ಖಾತೆಗಳಿಗೆ ಶುಲ್ಕ ವಿಧಿಸುವುದನ್ನು ಶನಿವಾರದಿಂದ ಆರಂಭಿಸಿದೆ ಎಂದು ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೊದಿಂದ ಸುದ್ದಿಸಂಸ್ಥೆ ಎಎಫ್‌ಪಿ ವರದಿ ಮಾಡಿದೆ.

ಪಿಂಚಣಿ: ವಿಶೇಷ ಸಭೆಗೆ ಕಾರ್ಮಿಕ ಸಂಘಗಳ ಒತ್ತಾಯ

ನವದೆಹಲಿ (ಪಿಟಿಐ): ಪಿಂಚಣಿ ಯೋಜನೆಗೆ (ಇಪಿಎಸ್) ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ಶೀಘ್ರವೇ ಅನುಷ್ಠಾನಕ್ಕೆ ತರುವ ಕುರಿತು ಚರ್ಚಿಸಲು ಇಪಿಎಫ್‌ಒ ಧರ್ಮದರ್ಶಿಗಳ ಮಂಡಳಿಯ ವಿಶೇಷ ಸಭೆ ಕರೆಯುವಂತೆ ಕಾರ್ಮಿಕ ಸಂಘಟನೆಗಳು ಸರ್ಕಾರವನ್ನು ಒತ್ತಾಯಿಸಿವೆ.

'ತಿಂಗಳ ಪಿಂಚಣಿ ಮೊತ್ತವು ಕನಿಷ್ಠ ₹ 5 ಸಾವಿರ ಇರಬೇಕು ಎನ್ನುವುದು ನನ್ನ ಬೇಡಿಕೆ' ಎಂದು ಭಾರತೀಯ ಮಜ್ದೂರ್ ಸಂಘದ (ಬಿಎಂಎಸ್) ಕಾರ್ಯಕರ್ತ ಮತ್ತು ಇಪಿಎಫ್‌ಒ ಟ್ರಸ್ಟಿ ಪ್ರಭಾಕರ್ ಭಾಣಾಸುರೆ ಹೇಳಿದ್ದಾರೆ.

ಇಪಿಎಸ್‌ಗೆ 2014ರಲ್ಲಿ ತಂದ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ಸರೋವರಕ್ಕೆ ಬಿದ್ದ ವಿಮಾನ: 19 ಸಾವು

ತಾಂಜಾನಿಯಾದ ಬುಕೋಬ ನಗರದ ಬಳಿ ಘಟನೆ: 24 ಜನರ ರಕ್ಷಣೆ

ದಾರ್ ಎಸ್ ಸಲಾಮ್ (ತಾಂಜಾನಿಯಾ): ತಾಂಜಾನಿಯಾದಲ್ಲಿ 43 ಪ್ರಯಾಣಿಕರನ್ನು ಹೊತ್ತಿದ್ದ ಸಣ್ಣ ಪ್ರಯಾಣಿಕ ವಿಮಾನವೊಂದು ಲ್ಯಾಂಡಿಂಗ್ ವೇಳೆ ತಾಂತ್ರಿಕ ದೋಷ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ಬುಕೋಬ ನಗರದ ವಿಕ್ಟೋರಿಯಾ ಸರೋವರದಲ್ಲಿ ಭಾನುವಾರ ಬಿದ್ದಿದ್ದು, 19 ಮಂದಿ ಮೃತಪಟ್ಟಿದ್ದಾರೆ.

ದಾರ್ ಎಸ್ ಸಲಾಮ್‌ನಿಂದ ಬುಕೋಬ ನಗರಕ್ಕೆ ಹೊರಟಿದ್ದ ವಿಮಾನವು 'ಪ್ರೆಸಿಷನ್ ಏರ್‌ಲೈನ್ಸ್' ಕಂಪನಿಗೆ ಸೇರಿದ್ದಾಗಿದ್ದು, ಬುಕೋಬ ವಿಮಾನ ನಿಲ್ದಾಣದಿಂದ ಕೇವಲ 100 ಮೀಟರ್ ದೂರದಲ್ಲಿರುವ ವಿಕ್ಟೋರಿಯಾ ಸರೋವರದಲ್ಲಿ ಬಿದ್ದಿದೆ.

39 ಪ್ರಯಾಣಿಕರು, ಇಬ್ಬರು ಪೈಲಟ್‌ಗಳು ಹಾಗೂ ಇಬ್ಬರು ಸಿಬ್ಬಂದಿ ವಿಮಾನದಲ್ಲಿದ್ದರು. ಈ ವರೆಗೆ 24 ಜನರನ್ನು ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಪರಿಹಾರ ಕಾರ್ಯಾಚರಣೆ ಭರದಿಂದ ಸಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ತಾಂಜಾನಿಯಾದ ಬುಕೋಬ ನಗರದ ವಿಕ್ಟೋರಿಯಾ ಸರೋವರದಲ್ಲಿ ಭಾನುವಾರ ಪ್ರಯಾಣಿಕ ವಿಮಾನವೊಂದು ಪತನಗೊಂಡಿದ್ದು, ರಕ್ಷಣಾ ಕಾರ್ಯಾಚರಣೆ ನಡೆಯಿತು –ಎಎಫ್‌ಪಿ ಚಿತ್ರ

ಹರಿದಾಡಿದ ರಕ್ಷಣಾ ಕಾರ್ಯಾಚರಣೆಯ ವಿಡಿಯೊ: ವಿಮಾನ ನಿಲ್ದಾಣಕ್ಕೆ ಸಮೀಪದಲ್ಲೇ ಇರುವ ಸರೋವರಕ್ಕೆ ವಿಮಾನ ಪತನವಾಗಿದ್ದರಿಂದ ವಿಮಾನ ಬಹುತೇಕ ಮುಳುಗಿದ ಸ್ಥಿತಿಯಲ್ಲಿತ್ತು. ತಕ್ಷಣ ಸ್ಥಳಕ್ಕೆ ಧಾವಿಸಿದ ಮೀನುಗಾರರು ಹಾಗೂ ಪರಿಹಾರ ಕಾರ್ಯಕರ್ತರು ವಿಮಾನದೊಳಗೆ ಸಿಲುಕಿದ್ದ ಪ್ರಯಾಣಿಕರನ್ನು ಸುರಕ್ಷಿತವಾಗಿ ಹೊರಗೆ ತರುವುದಕ್ಕೆ ನೆರವಾದರು. ಈ ಕಾರ್ಯಾಚರಣೆಯ ವಿಡಿಯೊ ವ್ಯಾಪಕವಾಗಿ ಹರಿದಾಡಿತು.

ಅಮೆರಿಕದ ಪಾಪ್ ತಾರೆ ಆರನ್ ಶವವಾಗಿ ಪತ್ತೆ



ಲ್ಯಾಂಕಾಸ್ಟರ್ (ಎಪಿ): ಅಮೆರಿಕದ ಪಾಪ್ ತಾರೆ ಆರನ್ ಕಾರ್ಟರ್ (34) ಶನಿವಾರ ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿನ ತಮ್ಮ ಮನೆಯಲ್ಲಿ ಶವವಾಗಿ ಪತ್ತೆಯಾಗಿದ್ದಾರೆ.

ಅವರು ಬ್ಯಾಕ್ ಸ್ಟ್ರೀಟ್ ಬಾಯ್ಸ್ ಬ್ಯಾಂಡ್‌ನ ಸದಸ್ಯ ನಿಕ್ ಕಾರ್ಟರ್ ಅವರ ತಮ್ಮ. ಆರಂಭದಲ್ಲಿ ಬ್ರಿಟ್ನಿ ಸ್ಪಿಯರ್ಸ್ ಮತ್ತು ತಮ್ಮ ಸಹೋದರನ ಬಾಯ್ಸ್ ಬ್ಯಾಂಡ್‌ನಲ್ಲಿ ಪ್ರದರ್ಶನ ನೀಡಿದರು. ನಂತರ 'ಈ! ಚಾನೆಲ್'ನಲ್ಲಿ ಪ್ರಸಾರವಾದ 'ಹೌಸ್ ಆಫ್ ಕಾರ್ಟರ್ಸ್' ಎಂಬ ಕೌಟುಂಬಿಕ ರಿಯಾಲಿಟಿ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿದ್ದರು.

ದಾಳಿ ನಡೆದ ಸ್ಥಳದಿಂದಲೇ ನಾಳೆಯಿಂದ ಇಮ್ರಾನ್ ರ್‍ಯಾಲಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನ ಸರ್ಕಾರದ ವಿರುದ್ಧದ ಪ್ರತಿಭಟನೆ ರ್‍ಯಾಲಿಯನ್ನು ನನ್ನ ಮೇಲೆ ಗುಂಡಿನದಾಳಿ ನಡೆದ ಸ್ಥಳದಿಂದಲೇ ಮಂಗಳವಾರ ಮತ್ತೆ ಆರಂಭಿಸುವುದಾಗಿ ಮಾಜಿ ಪ್ರಧಾನಿ ಹಾಗೂ ತೆಹ್ರೀಕ್ ಎ ಇನ್ಸಾಫ್ (ಪಿಟಿಐ) ಪಕ್ಷದ ನಾಯಕ ಇಮ್ರಾನ್ ಖಾನ್ ತಿಳಿಸಿದ್ದಾರೆ.

'ಮುಂದಿನ 10–14 ದಿನಗಳ ಕಾಲ ನನ್ನ ಅನುಪಸ್ಥಿತಿಯಲ್ಲಿ ರ್‍ಯಾಲಿ ನಡೆಯಲಿದೆ. ರ್‍ಯಾಲಿ ರಾವಲ್ಪಿಂಡಿ ತಲುಪಿದ ಬಳಿಕ ಅದರ ನೇತೃತ್ವವನ್ನು ನಾನೇ ವಹಿಸಿಕೊಳ್ಳಲಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಮ್ರಾನ್ ಖಾನ್ ಇನ್ನು 2–3 ದಿನಗಳಲ್ಲಿ ಪಕ್ಷದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಿದ್ದಾರೆ.

ಹತ್ಯೆ ಯತ್ನ ಖಂಡಿಸಿ ಪಕ್ಷವು ಶಾಂತಿಯುತವಾಗಿ ಪ್ರತಿಭಟನೆ ಮುಂದುವರಿಸಲಿದೆ ಎಂದು ಪಿಟಿಐ ಪಕ್ಷದ ನಾಯಕ ಹಮ್ಮದ್ ಅಜರ್ ಭಾನುವಾರ ತಿಳಿಸಿದ್ದಾರೆ.

ಕಳೆದ ಗುರುವಾರ ಪಂಜಾಬ್ ಪ್ರಾಂತ್ಯದ ವಜೀರಾಬಾದ್ ಪ್ರದೇಶದಲ್ಲಿ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದ ವೇಳೆ ದಾಳಿಕೋರನೊಬ್ಬ ನಡೆಸಿದ ಗುಂಡಿನ ದಾಳಿಯಲ್ಲಿ ಇಮ್ರಾನ್ ಅವರ ಬಲಗಾಲಿಗೆ ಗುಂಡು ತಗುಲಿತ್ತು.

ತನಿಖೆಗೆ ಒತ್ತಾಯ: '2011ರಲ್ಲಿ ಪಂಜಾಬ್ ಮಾಜಿ ಗವರ್ನರ್ ಸಲ್ಮಾನ್ ತಸೀರ್ ಅವರನ್ನು ಹತ್ಯೆ ಮಾಡಿದ ಮಾದರಿಯಲ್ಲೇ ನನ್ನ ಹತ್ಯೆಯನ್ನೂ ನಡೆಸಲು ಪ್ರಧಾನಿ ಶಹಬಾಝ್ ಷರೀಫ್, ಆಂತರಿಕ ಸಚಿವ ರಾಣಾ ಸನಾವುಲ್ಲಾ ಮತ್ತು ಮೇಜರ್ ಜನರಲ್ ಫೈಸಲ್ ನಸೀರ್ ಅವರು ಯೋಜನೆ ರೂಪಿಸಿದ್ದಾರೆ ಎಂದು ಇಮ್ರಾನ್ ಆರೋಪಿಸಿದ್ದಾರೆ.

ಈ ಆರೋಪವನ್ನು ಅಲ್ಲಗಳೆದಿರುವ ಪ್ರಧಾನಿ ಶಹಬಾಝ್ ಷರೀಫ್, ನ್ಯಾಯಾಂಗ ಆಯೋಗವನ್ನು ರಚಿಸಿ ತನಿಖೆ ನಡೆಸುವಂತೆ ಮುಖ್ಯ ನ್ಯಾಯಮೂರ್ತಿ ಉಮರ್ ಅಟಾ ಬಂಡಿಯಲ್ ಅವರನ್ನು ಒತ್ತಾಯಿಸಿದ್ದಾರೆ.

ಇದೇ 17ಕ್ಕೆ ಬ್ರಿಟನ್ ಬಜೆಟ್: ಕಠಿಣ ನಿರ್ಧಾರ ಸಾಧ್ಯತೆ

ಲಂಡನ್ (ರಾಯಿಟರ್ಸ್): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಹಣಕಾಸು ಸಚಿವ ಜೆರೆಮಿ ಹಂಟ್ ಅವರು ಇದೇ 17ರಂದು ಬಜೆಟ್ ಮಂಡಿಸಲಿದ್ದು, ಕನಿಷ್ಠ 40 ಬಿಲಿಯನ್ ಪೌಂಡ್ (45.50 ಬಿಲಿಯನ್ ಡಾಲರ್) ಕೊರತೆ ಸರಿದೂಗಿಸಲು ಕೆಲವು ಕಠಿಣ ಯೋಜನೆಗಳನ್ನು ರೂಪಿಸಲಿದ್ದಾರೆ.

ಬಜೆಟ್ ಕೊರತೆ ನೀಗಿಸುವ ಪ್ರಯತ್ನವಾಗಿ ಬ್ರಿಟನ್ ಸರ್ಕಾರ ತೆರಿಗೆ ಮತ್ತು ವೆಚ್ಚದ ಬಗ್ಗೆ ಮಹತ್ವದ ಮತ್ತು ಕಠಿಣ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಪರಿಸ್ಥಿತಿಯಲ್ಲಿದೆ ಎಂದು ಕ್ಯಾಬಿನೆಟ್ ಕಚೇರಿ ಸಚಿವ ಆಲಿವರ್ ಡೌಡೆನ್ ಭಾನುವಾರ ಹೇಳಿದ್ದಾರೆ.

ಆದರೆ, ಸಂಭವನೀಯ ಕ್ರಮಗಳ ಬಗ್ಗೆ ಪ್ರತಿಕ್ರಿಯಿಸಲು ಅವರು ನಿರಾಕರಿಸಿದರು.

ಇಂಧನ ಕಂಪನಿಗಳ ಮೇಲಿನ ತೆರಿಗೆ ವಿಸ್ತರಣೆ ಮತ್ತು ಲಾಭಾಂಶದ ಆದಾಯದ ತೆರಿಗೆ ಮುಕ್ತ ಭತ್ಯೆ ಕಡಿತದಂತಹ ಕ್ರಮಗಳನ್ನು ಪರಿಗಣಿಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬಡರಾಷ್ಟ್ರಗಳಿಗೆ ಶ್ರೀಮಂತ ದೇಶಗಳಿಂದ ಪರಿಹಾರ?

ಶರ್ಮ್ ಎಲ್ ಶೇಖ್, ಈಜಿಪ್ಟ್ (ರಾಯಿಟರ್ಸ್/ಎಪಿ): ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ಕುರಿತ 27ನೇ ಶೃಂಗಸಭೆಯಲ್ಲಿ (ಸಿಒಪಿ27) ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಂದ ಹೆಚ್ಚು ದುರ್ಬಲವಾಗಿರುವ ಬಡರಾಷ್ಟ್ರಗಳಿಗೆ ಶ್ರೀಮಂತ ರಾಷ್ಟ್ರಗಳು ಪರಿಹಾರ ನೀಡುವ ಸಂಬಂಧ ಚರ್ಚಿಸಲು ಎಲ್ಲ ಪ್ರತಿನಿಧಿಗಳು ಸಮ್ಮತಿಸಿದ್ದಾರೆ.

ಭಾನುವಾರ ಆರಂಭವಾದ ಶೃಂಗಸಭೆ ಇದೇ 18ರವರೆಗೆ ನಡೆಯಲಿದೆ. ಉಕ್ರೇನ್ ಯುದ್ಧ, ಹಣದುಬ್ಬರ ಏರಿಕೆ, ಆಹಾರ ಕೊರತೆ ಮತ್ತು ಇಂಧನ ಬಿಕ್ಕಟ್ಟು ಸೇರಿ ಹಲವು ಜಾಗತಿಕ ಸವಾಲುಗಳ ನಡುವೆ ಹವಾಮಾನ ಬದಲಾವಣೆ ನಿಭಾಯಿಸುವ ಕುರಿತು ಮಾತುಕತೆ ನಡೆಯಲಿದೆ.

ಹವಾಮಾನ ಬದಲಾವಣೆಯ ದುಷ್ಪರಿಣಾಮಗಳಿಂದಾದ ನಷ್ಟ, ಇದನ್ನು ಸರಿಪಡಿಸುವತ್ತ ಗಮನ ಹರಿಸುವುದು, ಇದಕ್ಕೆ ಬೇಕಾದ ಹಣಕಾಸು ನೆರವು ವ್ಯವಸ್ಥೆ ಮಾಡಿಕೊಳ್ಳುವ ಸಂಬಂಧದ ಪ್ರಸ್ತಾವನೆ ಕುರಿತು ಚರ್ಚಿಸುವ ಪ್ರಮುಖ ಕಾರ್ಯಸೂಚಿಗೆ ರಾಜತಾಂತ್ರಿಕರು ಅನುಮೋದನೆ ನೀಡಿದರು.

ಶ್ರೀಮಂತ ರಾಷ್ಟ್ರಗಳ ಮಾಲಿನ್ಯ ಹೊರಸೂಸುವಿಕೆಯಿಂದ ಉಂಟಾಗುವ ಹವಾಮಾನ ಬದಲಾವಣೆಯಿಂದಾಗುವ ನಷ್ಟಗಳಿಗೆ ಪರಿಹಾರದ ಜತೆಗೆ ಬಡ ದೇಶಗಳ ಒಗ್ಗಟ್ಟನ್ನು ತೋರಿಸಲು ಜರ್ಮನಿ ಸಿದ್ಧ ಎಂದು ಜರ್ಮನಿಯ ವಿದೇಶಾಂಗ ಸಚಿವೆ ಅನ್ನಾಲೆನಾ ಬೇರ್ಬಾಕ್ ತಿಳಿಸಿದರು.

ಸಿಒಪಿ27ರಲ್ಲಿ ಭಾಗವಹಿಸಲು 40 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ನೋಂದಾಯಿಸಿದ್ದಾರೆ. 120ಕ್ಕೂ ಹೆಚ್ಚು ವಿಶ್ವ ನಾಯಕರೂ ಪಾಲ್ಗೊಳ್ಳಲಿದ್ದಾರೆ. ಇವರಲ್ಲಿ ಹಲವರು ನವೆಂಬರ್ 7 ಮತ್ತು 8ರಂದು ನಡೆಯುವ ಉನ್ನತ ಮಟ್ಟದ ಕಾರ್ಯಕ್ರಮದಲ್ಲಿ ಮಾತನಾಡುತ್ತಾರೆ. ಅಮೆರಿಕ ಅಧ್ಯಕ್ಷ ಜೋ ಬೈಡನ್ ವಾರದ ನಂತರ ಬರುವ ನಿರೀಕ್ಷೆ ಇದೆ ಎಂದು ಈಜಿಪ್ಟ್ ಹೇಳಿದೆ.

ಭಾರತದ ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಸಭೆಯಲ್ಲಿ ಪಾಲ್ಗೊಳ್ಳಲು ಯೋಜಿಸಿಲ್ಲ. ಈ ಎರಡು ದೇಶಗಳ ಪಾಲ್ಗೊಳ್ಳುವಿಕೆ ಇಲ್ಲದೇ ಮಾಲಿನ್ಯ ಹೊರಸೂಸುವಿಕೆ ತಗ್ಗಿಸಲು ಯಾವುದೇ ದೊಡ್ಡ ಒಪ್ಪಂದಗಳು ಏರ್ಪಡುವ ಕುರಿತು ಅನುಮಾನ ವ್ಯಕ್ತವಾಗಿದೆ.

ವಿಶ್ವ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್: ನಿತೀಶ್ ಕುಮಾರ್‌ಗೆ ಬೆಳ್ಳಿ

ಪ್ರಮೋದ್, ಮನೀಷಾಗೆ ಚಿನ್ನ

ಟೋಕಿಯೊ (ಪಿಟಿಐ): ಪ್ಯಾರಾಲಿಂಪಿಕ್ ಚಾಂಪಿಯನ್, ಭಾರತದ ಪ್ರಮೋದ್ ಭಗತ್ ಮತ್ತು ಮನೀಷಾ ರಾಮದಾಸ್ ಅವರು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕಗಳಿಗೆ ಕೊರಳೊಡ್ಡಿದ್ದಾರೆ. ಭಾರತದ ಪಟುಗಳು ಒಟ್ಟು 16 ಪದಕಗಳನ್ನು ತಮ್ಮದಾಗಿಸಿಕೊಂಡಿದ್ದಾರೆ.

ಇಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ಎಸ್‌ಎಲ್3 ವಿಭಾಗದಲ್ಲಿ ಪ್ರಮೋದ್ ಪ್ರಶಸ್ತಿ ಉಳಿಸಿಕೊಂಡರು. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಅವರು 21-19, 21-19ರಿಂದ ಭಾರತದವರೇ ಆದ ನಿತೀಶ್ ಕುಮಾರ್ ಅವರಿಗೆ ಸೋಲುಣಿಸಿದರು.

ಮಹಿಳಾ ಸಿಂಗಲ್ಸ್‌ನ ಎಸ್‌ಯು5 ವಿಭಾಗದಲ್ಲಿ ಕಣಕ್ಕಿಳಿದಿದ್ದ ಮನೀಷಾ 21-15, 21-15ರಿಂದ ಮಾಮಿಕೊ ತೊಯೊಡಾ ಅವರನ್ನು ಪರಾಭವಗೊಳಿಸಿದರು. ಈ ವರ್ಷದ ಮಾರ್ಚ್‌ನಲ್ಲಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್‌ಗೆ ಪದಾರ್ಪಣೆ ಮಾಡಿದ್ದ 17 ವರ್ಷದ ಮನೀಷಾ ಅವರಿಗೆ ಇದು ಸ್ಮರಣೀಯ ಚಾಂಪಿಯನ್‌ಷಿಪ್ ಎನಿಸಿತು.

ಪದಕಗಳೊಂದಿಗೆ ಪ್ರಮೋದ್ ಭಗತ್– ಪಿಟಿಐ ಚಿತ್ರ

> ಮತ್ತೊಮ್ಮೆ ವಿಶ್ವ ಚಾಂಪಿಯನ್ ಆಗಿದ್ದು ಸಂತಸದ ಸಂಗತಿ. ಮಹತ್ವದ ಮೈಲುಗಲ್ಲಿನೊಂದಿಗೆ ವರ್ಷಾಂತ್ಯವಾಗಿದ್ದು ಹೆಮ್ಮೆ ಎನಿಸಿದೆ. ಈ ಗೆಲುವಿಗಾಗಿ ಬಹಳ ಪರಿಶ್ರಮಪಟ್ಟಿದ್ದೆ
> **ಪ್ರಮೋದ್ ಭಗತ್**

ಮುಖ್ಯಾಂಶಗಳು

- ವಿಶ್ವಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 11ನೇ ಪದಕ ಜಯಿಸಿದ ಪ್ರಮೋದ್
- ಭಾರತದ ಪಟುಗಳಿಗೆ ಒಟ್ಟು 16 ಪದಕಗಳು

ಈ ಜಯದೊಂದಿಗೆ ಪ್ರಮೋದ್ ಅವರು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಗೆದ್ದ ಒಟ್ಟು ಪದಕಗಳ ಸಂಖ್ಯೆ 11ಕ್ಕೇರಿತು. ಅದರಲ್ಲಿ ಆರು ಚಿನ್ನ, ಎರಡು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳಿವೆ.

ಪುರುಷರ ಡಬಲ್ಸ್‌ನ ಎಸ್‌ಎಲ್3–ಎಸ್‌ಎಲ್4 ವಿಭಾಗದಲ್ಲಿ ಪ್ರಮೋದ್ ಭಗತ್ ಮತ್ತು ಮನೋಜ್ ಸರ್ಕಾರ್ ಜೋಡಿಯು ಬೆಳ್ಳಿ ಪದಕ ಗೆದ್ದುಕೊಂಡಿತು. ಫೈನಲ್‌ನಲ್ಲಿ ಮೊದಲ ಗೇಮ್ ಜಯದ ನಡುವೆಯೂ ಭಾರತದ ಆಟಗಾರರು 21-14, 18-21, 13-21ರಿಂದ ಇಂಡೊನೇಷ್ಯಾದ ಹಿಕಾಮತ್ ರಾಮ್‌ದಾನಿ ಮತ್ತು ಉಕುನ್ ರುಕಾಂಡಿ ಎದುರು ಸೋಲನುಭವಿಸಿದರು.

2019ರ ಬಾಸೆಲ್ ವಿಶ್ವ ಚಾಂಪಿಯನ್ ಮಾನಸಿ ಜೋಷಿ ಮತ್ತು ನಿತ್ಯಶ್ರೀ ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಕಬಡ್ಡಿ: ಜೈಂಟ್ಸ್‌ಗೆ ಮಣಿದ ಬುಲ್ಸ್

ಪುಣೆ (ಪಿಟಿಐ): ವೀರೋಚಿತ ಹೋರಾಟ ನಡೆಸಿದ ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್‌ನಲ್ಲಿ ಗುಜರಾತ್ ಜೈಂಟ್ಸ್ ಕೈಯಲ್ಲಿ ಪರಾಭವಗೊಂಡರು.

ಬಾಳೇವಾಡಿಯ ಶಿವಛತ್ರಪತಿ ಕ್ರೀಡಾ ಸಂಕೀರ್ಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಜೈಂಟ್ಸ್ 46–44 ರಲ್ಲಿ ಬುಲ್ಸ್ ತಂಡವನ್ನು ಮಣಿಸಿತು. 16 ಪಾಯಿಂಟ್ಸ್ ಗಳಿಸಿದ ಪ್ರತೀಕ್ ದಹಿಯಾ ಅವರು ಜೈಂಟ್ಸ್ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಪ್ರತೀಕ್‌ಗೆ ತಕ್ಕ ಬೆಂಬಲ ನೀಡಿದ ರಾಕೇಶ್ 10 ಪಾಯಿಂಟ್ಸ್ ತಂದಿತ್ತರು.

ವಿರಾಮದ ವೇಳೆಗೆ 16–21 ರಲ್ಲಿ ಹಿನ್ನಡೆಯಲ್ಲಿದ್ದ ಬುಲ್ಸ್, ದ್ವಿತೀಯಾರ್ಧದಲ್ಲಿ ಮರುಹೋರಾಟ ನಡೆಸಿದರೂ ಗೆಲುವು ದಕ್ಕಲಿಲ್ಲ. 14 ಪಾಯಿಂಟ್ಸ್ ಕಲೆಹಾಕಿದ ಬುಲ್ಸ್ ತಂಡದ ಭರತ್ ಸೋಲಿನ ನಡುವೆಯೂ ಮಿಂಚಿದರು.

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	11	6	3	2	38
ಬೆಂಗಳೂರು	11	6	4	1	36
ತಲೈವಾಸ್	11	5	4	2	33
ಜೈಪುರ	10	6	4	0	32
ಮುಂಬಾ	10	6	4	0	32
ಗುಜರಾತ್	11	5	5	1	31

ವಿಕಾಸ್ ಖಂಡೋಲ 9 ಹಾಗೂ ನೀರಜ್ ನರ್ವಾಲ್ 8 ಪಾಯಿಂಟ್ಸ್ ತಂದಿತ್ತರು.

ಆರಂಭದಲ್ಲಿ ಎಚ್ಚರಿಕೆಯ ಆಟವಾಡಿದ ಜೈಂಟ್ಸ್ ಮೊದಲ ಏಳು ನಿಮಿಷಗಳಲ್ಲಿ 5–2 ರಲ್ಲಿ ಮುನ್ನಡೆ ಪಡೆಯಿತು. ಆ ಬಳಿಕ ಪ್ರತೀಕ್ ಮಿಂಚಿನ ರೇಡಿಂಗ್‌ನಲ್ಲಿ ಬುಲ್ಸ್ ತಂಡವನ್ನು ಆಲೌಟ್ ಮಾಡಿ ಮುನ್ನಡೆಯನ್ನು 12–5ಕ್ಕೆ ಹೆಚ್ಚಿಸಿದರು.

ಭರತ್ ಅವರ ಉತ್ತಮ ಆಟದಿಂದ ಎರಡನೇ ಅವಧಿಯ ಆರಂಭದಲ್ಲಿ ಬುಲ್ಸ್ 24–24 ರಲ್ಲಿ ಸಮಬಲ ಸಾಧಿಸಿತ್ತು. ಅನಂತರ ಮತ್ತೊಮ್ಮೆ ಎದುರಾಳಿ ತಂಡವನ್ನು ಆಲೌಟ್ ಮಾಡಿ 34–29 ರಲ್ಲಿ ಮೇಲುಗೈ ಪಡೆದಿತ್ತು. ಆದರೆ ಕೊನೆಯ ಕೆಲವು ನಿಮಿಷಗಳಲ್ಲಿ ಪ್ರತೀಕ್ ಅವರು ಪಾಯಿಂಟ್ಸ್ ಕಲೆಹಾಕಿ ಜೈಂಟ್ಸ್‌ಗೆ ಗೆಲುವು ತಂದಿತ್ತರು.

ದಿನದ 2ನೇ ಪಂದ್ಯದಲ್ಲಿ ತಮಿಳ್ ತಲೈವಾಸ್ 35–34 ರಲ್ಲಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿತು.

ಇಂದಿನ ಪಂದ್ಯಗಳು

ಯು ಮುಂಬಾ– ಜೈಪುರ ಪಿಂಕ್ ಪ್ಯಾಂಥರ್ಸ್

ಪಟ್ನಾ ಪೈರೇಟ್ಸ್– ಹರಿಯಾಣ ಸ್ಟೀಲರ್ಸ್

ಹಾಕಿ: ಹಾವೇರಿ ಸ್ಪೋರ್ಟ್ಸ್‌ಗೆ ಜಯ

ಬೆಂಗಳೂರು: ಕುಮಾರ್ ಎಲ್. ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಹಾವೇರಿ ಸ್ಪೋರ್ಟ್ಸ್ ಕ್ಲಬ್ ತಂಡವು ಕರ್ನಾಟಕ ರಾಜ್ಯ ಹಾಕಿ ಸಂಸ್ಥೆಯ ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಭಾನುವಾರ ಇಲ್ಲಿ ನಡೆದ ಪಂದ್ಯದಲ್ಲಿ ಹಾವೇರಿ ಸ್ಪೋರ್ಟ್ಸ್ 6-0ಯಿಂದ ಲಿಯೊ ಸ್ಪೋರ್ಟ್ಸ್ ಕ್ಲಬ್ ತಂಡವನ್ನು ಪರಾಭವಗೊಳಿಸಿತು. ಕುಮಾರ್ 16, 38 ಮತ್ತು 45ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ವರುಣ್ (7, 13ನೇ ನಿಮಿಷ), ಅಭಿಷೇಕ್ (27ನೇ ನಿ.) ವಿಜೇತ ತಂಡಕ್ಕಾಗಿ ಕೈಚಳಕ ತೋರಿದರು.

ಇನ್ನುಳಿದ ಪಂದ್ಯಗಳಲ್ಲಿ ಸಾಮಂತ್ ಸ್ಪೋರ್ಟ್ಸ್ ಅಕಾಡೆಮಿ 4–1ರಿಂದ ಜಾಯ್ಸ್ ಹಾಕಿ ಕ್ಲಬ್ ಎದುರು, ನ್ಯೂ ಅಶೋಕ ಹಾಕಿ ಕ್ಲಬ್ 4–0ಯಿಂದ ಬಿಜಾಪುರ ಹಾಕಿ ಕ್ಲಬ್ ಎದುರು ಗೆದ್ದವು.

ಈಜು ಸಂಸ್ಥೆ: ಗೋಪಾಲ್ ಹೊಸೂರ್ ಪುನರಾಯ್ಕೆ

ಗೋಪಾಲ್ ಹೊಸೂರ್

ಬೆಂಗಳೂರು: ನಿವೃತ್ತ ಐಪಿಎಸ್ ಅಧಿಕಾರಿ ಗೋಪಾಲ್ ಬಿ. ಹೊಸೂರ್ ಅವರು ಕರ್ನಾಟಕ ಈಜು ಸಂಸ್ಥೆಯ ಅಧ್ಯಕ್ಷರಾಗಿ ಪುನರಾಯ್ಕೆಯಾದರು.

ಭಾನುವಾರ ನಡೆದ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳ ವಿವರ: ಟಿ.ಡಿ. ವಿಜಯರಾಘವನ್ (ಗೌರವಾಧ್ಯಕ್ಷ); ಗೋಪಾಲ್ ಬಿ.ಹೊಸೂರ್ (ಅಧ್ಯಕ್ಷ); ರಕ್ಷಿತ್ ಎನ್.ಜಗದಾಳೆ, ಅರುಣ್ ಅಡ್ವಾಣಿ, ಸುನಿಲ್ ಕುಮಾರ್ (ಉಪಾಧ್ಯಕ್ಷರು); ಸಂದೀಪ್ ಪಾಟೀಲ್, ಐಪಿಎಸ್, ಎಂ.ಎನ್.ಅನುಚೇತ್, ಐಪಿಎಸ್, ಎಸ್.ಆರ್.ಸಿಂಧ್ಯಾ (ಸಹ ಉಪಾಧ್ಯಕ್ಷರು), ಎಂ.ಸತೀಶ್ ಕುಮಾರ್ (ಕಾರ್ಯದರ್ಶಿ); ತ್ರಿವಿಕ್ರಮ್ ನಿಕಂ (ಖಜಾಂಚಿ); ಬಿ.ರಮ್ಯಾ, ಎಸ್. ಸುಂದರೇಶ್ (ಜಂಟಿ ಕಾರ್ಯದರ್ಶಿ); ಕೇತನ್ ವ್ಯಾಸ್, ಎಂ.ಪಿ.ನಾಭಿರಾಜ್ (ಸಹ ಜಂಟಿ ಕಾರ್ಯದರ್ಶಿ); ಮಾಳವಿಕಾ ಗುಬ್ಬಿ, ಗೌರವ್ ಸಿಂಧ್ಯಾ (ಕಾರ್ಯಕಾರಿ ಸಮಿತಿ ಸದಸ್ಯರು, ಕೇಂದ್ರ ಕಚೇರಿ); ಸುಧೀರ್ ಕುಸಾನೆ, ಪ್ರತಿಮಾ ಹೆಗ್ಡೆ (ಕಾರ್ಯಕಾರಿ ಸಮಿತಿ ಸದಸ್ಯರು, ಇತರ ಜಿಲ್ಲೆ); ಗೋಪಾಲ್ ರಾವ್ (ಆಜೀವ ಸದಸ್ಯ ಪ್ರತಿನಿಧಿ)

ಟೆನಿಸ್: ಗುರ್ಲೀನ್, ನವೀನ್‌ಗೆ ಪ್ರಶಸ್ತಿ

ಬೆಂಗಳೂರು: ಗುರ್ಲೀನ್ ಕೌರ್ ಮತ್ತು ನವೀನ್ ಸುಂದರಂ ಅವರು ಎಐಟಿಎ ಚಾಂಪಿಯನ್‌ಷಿಪ್ ಸಿರೀಸ್ 14 ವರ್ಷದೊಳಗಿನವರ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಬಾಲಕಿ ಮತ್ತು ಬಾಲಕರ ವಿಭಾಗದಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿದರು.

ಸ್ಯಾಟ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ನಡೆದ ಟೂರ್ನಿಯ ಬಾಲಕಿಯರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಗುರ್ಲೀನ್ 3-6, 6-2, 6-2ರಿಂದ ದೀಪ್ತಿಕಾ ಅವರನ್ನು ಮಣಿಸಿದರು.

ಬಾಲಕಿಯರ ಡಬಲ್ಸ್‌ನಲ್ಲೂ ಗುರ್ಲೀನ್ ಅವರು ಗೀತಿಕಾ ಗದ್ದಂ ಅವರ ಜೊತೆಗೂಡಿ ಪ್ರಶಸ್ತಿ ಜಯಿಸಿದರು. ಫೈನಲ್ ಹಣಾಹಣಿಯಲ್ಲಿ ಈ ಜೋಡಿ 6-2, 3-6, 10-6 ರಿಯಾ ಪುದಿಯೊಕ್ಕಾ ಮತ್ತು ಯಹಾನಾ ಅರೋರಾ ಅವರನ್ನು ಸೋಲಿಸಿದರು.

ಬಾಲಕರ ಸಿಂಗಲ್ಸ್ ಪ್ರಶಸ್ತಿ ಸುತ್ತಿನಲ್ಲಿ ನವೀನ್ 6-1, 6-0ರಿಂದ ಶ್ರೇಯಾಂತ್ ಎಂ. ಅವರನ್ನು ಮಣಿಸಿದರು. ಡಬಲ್ಸ್‌ನಲ್ಲಿ ಶ್ರೇಯಾಂತ್ ಎಂ. ಮತ್ತು ತರುಣ್ ಎಚ್. ಅವರು 6-2, 6-3ರಿಂದ ಮೋಹಿತ್ ರೆಡ್ಡಿ ಮತ್ತು ಶಿವ ಸಂಪ್ರೀತ್ ಅವರನ್ನು ಸೋಲಿಸಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಪ್ರಶಸ್ತಿಯೊಂದಿಗೆ ನವೀನ್ ಸುಂದರಂ ಮತ್ತು ಗುರ್ಲೀನ್ ಕೌರ್

ಶ್ರೀಕಾಂತ್, ತ್ರಿಶಾ–ಗಾಯತ್ರಿಗೆ ಸೋಲು

ಸಾರ್‌ಬ್ರೂಕನ್, ಜರ್ಮನಿ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್, ಗಾಯತ್ರಿ ಗೋಪಿಚಂದ್– ತ್ರಿಶಾ ಜೋಲಿ ಅವರು ಇಲ್ಲಿ ನಡೆಯುತ್ತಿರುವ ಹೈಲೊ ಓಪನ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸೋಲನುಭವಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ದೇಶದ ಆಟಗಾರರ ಸವಾಲು ಅಂತ್ಯವಾಗಿದೆ.

ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಶ್ರೀಕಾಂತ್ 18-21, 15-21ರಿಂದ ಇಂಡೊನೇಷ್ಯಾದ ಆ್ಯಂಟನಿ ಗಿಂಟಿಂಗ್ ಅವರಿಂದ ಪರಾಭವಗೊಂಡರು. ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ– ಗಾಯತ್ರಿ 21-17, 14-21 18-21ರಿಂದ ಥಾಯ್ಲೆಂಡ್ ಸಹೋದರಿಯರಾದ ಬೆನ್ಯಾಪಾ ಐಮ್‌ಸಾರ್ಡ್ ಮತ್ತು ನೂಂತ್‌ಕರ್ನ್ ಐಮ್‌ಸಾರ್ಡ್ ಅವರಿಗೆ ಮಣಿದರು.

ಲೈಂಗಿಕ ದೌರ್ಜನ್ಯ ಆರೋಪ: ಧನುಷ್ಕಾ ಬಂಧನ

ಧನುಷ್ಕಾ

ಸಿಡ್ನಿ (ಪಿಟಿಐ): ಶ್ರೀಲಂಕಾ ಕ್ರಿಕೆಟಿಗ ಧನುಷ್ಕಾ ಗುಣತಿಲಕ ಅವರನ್ನು ಲೈಂಗಿಕ ದೌರ್ಜನ್ಯದ ಪ್ರಕರಣದಲ್ಲಿ ಆಸ್ಟ್ರೇಲಿಯಾ ಪೊಲೀಸರು ಬಂಧಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ ಶ್ರೀಲಂಕಾ ತಂಡದಲ್ಲಿ ಧನುಷ್ಕಾ ಇದ್ದರು. ನವೆಂಬರ್ 2ರಂದು ಅವರು ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆಂದು ಸಿಡ್ನಿ ನಗರ ಠಾಣೆ ಪೊಲೀಸರು ಭಾನುವಾರ ಬಂಧಿಸಿದರು.

‘ಅತ್ಯಾಚಾರ ಪ್ರಕರಣದಲ್ಲಿ ಧನುಷ್ಕಾ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಆದ್ದರಿಂದ ಶ್ರೀಲಂಕಾ ತಂಡವು ಅವರನ್ನು ಬಿಟ್ಟು ತವರಿಗೆ ಮರಳಿ ಪ್ರಯಾಣಿಸಿದೆ’ ಎಂದು ಮೂಲಗಳು ತಿಳಿಸಿವೆ. ಶನಿವಾರ ಇಂಗ್ಲೆಂಡ್ ವಿರುದ್ಧದ ಪಂದ್ಯದಲ್ಲಿ ಶ್ರೀಲಂಕಾ ಸೋತಿತ್ತು. ಅದರೊಂದಿಗೆ ಸೆಮಿಫೈನಲ್ ಹಾದಿಯಿಂದ ಹೊರ ಬಿದ್ದಿತ್ತು.

‘ಧನುಷ್ಕಾ ಆರೋಪ ಸಾಬೀತಾದರೆ ಕಠಿಣ ಕ್ರಮ ಕೈಗೊಳ್ಳುತ್ತೇವೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಜೊತೆಗೆ ಈ ಕುರಿತು ಚರ್ಚೆ ನಡೆಸುತ್ತಿದ್ದೇವೆ. ತಪ್ಪಿತಸ್ಥ ಆಟಗಾರನ ವಿರುದ್ಧ ಸಮಗ್ರ ತನಿಖೆ ನಡೆಸಬೇಕು ಎಂದು ಕೋರಿದ್ದೇವೆ’ ಎಂದು ಶ್ರೀಲಂಕಾ ಕ್ರಿಕೆಟ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

ಟೂರ್ನಿಯ ಮೊದಲ ಪಂದ್ಯದಲ್ಲಿ ನಮಿಬಿಯಾ ವಿರುದ್ಧ ಶ್ರೀಲಂಕಾ ತಂಡದಲ್ಲಿ ಎಡಗೈ ಬ್ಯಾಟರ್ ಧನುಷ್ಕಾ ಆಡಿದ್ದರು. ಗಾಯಗೊಂಡಿದ್ದರಿಂದ ಅವರನ್ನು ಸೂಪರ್ 12ರ ಹಂತದಲ್ಲಿ ವಿಶ್ರಾಂತಿ ನೀಡಲಾಗಿತ್ತು.

ಆನ್‌ಲೈನ್ ಡೇಟಿಂಗ್ ಆ್ಯಪ್‌ನಲ್ಲಿ ಧನುಷ್ಕಾ ಅವರಿಗೆ ಮಹಿಳೆಯೊಬ್ಬರು ಪರಿಚಿತರಾಗಿದ್ದರು. ನಂತರ ಅವರೊಂದಿಗೆ ಕೆಲವು ದಿನಗಳಿಂದ ಸಂಪರ್ಕದಲ್ಲಿದ್ದರು ಎಂದು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ಪತ್ರಿಕೆಯು ವರದಿ ಮಾಡಿದೆ. ಧನುಷ್ಕಾ ಈ ಹಿಂದೆಯು ಕೆಲವು ವಿವಾದಗಳಲ್ಲಿ ಸಿಲುಕಿದ್ದರು. 2021ರಲ್ಲಿ ಇಂಗ್ಲೆಂಡ್ ಪ್ರವಾಸದಲ್ಲಿ ಬಯೊ ಬಬಲ್ ನಿಯಮ ಉಲ್ಲಂಘನೆ ಮಾಡಿದ್ದರು. ಆಗ ಅವರನ್ನು ಒಂದು ವರ್ಷ ತಂಡದಿಂದ ಅಮಾನತು ಮಾಡಲಾಗಿತ್ತು. 2018ರಲ್ಲಿಯೂ ತಂಡದ ನಿಯಮವನ್ನು ಉಲ್ಲಂಘಿಸಿದ್ದ ಕಾರಣಕ್ಕೆ 6 ತಿಂಗಳು ಅಮಾನತಾಗಿದ್ದರು. ಅದೇ ವರ್ಷ ನಾರ್ವೆಯ ಮಹಿಳೆ ಮೇಲೆ ಅತ್ಯಾಚಾರದ ಆರೋಪಕ್ಕೊಳಗಾಗಿದ್ದರು.

ಬಾಕ್ಸಿಂಗ್: ಸೆಮಿಗೆ ಶಿವ, ಲವ್ಲಿನಾ, ಹುಸಾಮುದ್ದೀನ್

ಲವ್ಲಿನಾ

ನವದೆಹಲಿ (ಪಿಟಿಐ): ಭಾರತದ ಶಿವ ಥಾಪಾ, ಲವ್ಲಿನಾ ಬೊರ್ಗೊಹೈನ್ ಮತ್ತು ಮೊಹಮ್ಮದ್ ಹುಸಾಮುದ್ದೀನ್ ಅವರು ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದ್ದು ಪದಕ ಖಚಿತಪಡಿಸಿದ್ದಾರೆ.

ಜೋರ್ಡಾನ್‌ನ ಅಮ್ಮಾನ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಇದೇ ಮೊದಲ ಬಾರಿ 75 ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ಲವ್ಲಿನಾ, ಮಹಿಳೆಯರ ಎಂಟರಘಟ್ಟದ ಬೌಟ್‌ನಲ್ಲಿ 3-2ರಿಂದ ಕಜಕಸ್ತಾನದ ವ್ಯಾಲೆಂಟೀನ್ ಕಜಲೊವಾ ಸವಾಲು ಮೀರಿದರು.

63.5 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಶಿವ 4–1ರಿಂದ ದಕ್ಷಿಣ ಕೊರಿಯಾದ ಮಿನ್ಸು ಚೊಯಿ ಅವರನ್ನು ಮಣಿಸಿದರು.

ಅಂಕುಷಿತಾ ಬೋರೊ (66 ಕೆಜಿ) ಅವರೂ ನಾಲ್ಕರ ಘಟ್ಟ ತಲುಪಿದರು. ಕ್ವಾರ್ಟರ್‌ಫೈನಲ್ ಬೌಟ್‌ನಲ್ಲಿ ಅವರು 5–0ಯಿಂದ ಜಪಾನ್‌ನ ಸುಬತಾ ಆರ್ಸಿಯಾ ಅವರನ್ನು ಪರಾಭವಗೊಳಿಸಿದರು. ಪುರುಷರ 57 ಕೆಜಿ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಹುಸಾಮುದ್ದೀನ್ 5–0ಯಿಂದ ದಕ್ಷಿಣ ಕೊರಿಯಾದ ಹ್ಯಾಂಗ್‌ಸೆಕ್ ಲೀ ವಿರುದ್ಧ ಗೆದ್ದರು.

ಹಾಕಿ: ಭಾರತ ಜಯಭೇರಿ

ಭುವನೇಶ್ವರ (ಪಿಟಿಐ): ಭಾರತ ತಂಡವು ಎಫ್‌ಐಎಚ್ ಪ್ರೊ ಲೀಗ್ ಹಾಕಿ ಟೂರ್ನಿಯಲ್ಲಿ ಪೆನಾಲ್ಟಿ ಶೂಟೌಟ್‌ನಲ್ಲಿ ಸ್ಪೇನ್ ತಂಡವನ್ನು 3–1 ರಲ್ಲಿ ಮಣಿಸಿತು.

ಭಾನುವಾರ ನಡೆದ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 2–2 ಗೋಲುಗಳಿಂದ ಸಮಬಲ ಸಾಧಿಸಿದ್ದವು. ಶೂಟೌಟ್‌ನಲ್ಲಿ ಹರ್ಮನ್‌ಪ್ರೀತ್, ರಾಜ್‌ಕುಮಾರ್ ಪಾಲ್ ಮತ್ತು ಅಭಿಷೇಕ್ ಅವರು ಭಾರತದ ಪರ ಗೋಲು ಗಳಿಸಿದರು. ಸ್ಪೇನ್ ಪರ ಗೆರಾರ್ಡ್ ಕ್ಲೆಪ್ಸ್ ಮಾತ್ರ ಯಶ ಕಂಡರು. ನಿಗದಿತ ಅವಧಿಯಲ್ಲಿ ಭಾರತ ತಂಡದ ಎರಡೂ ಗೋಲುಗಳನ್ನು ಹರ್ಮನ್‌ಪ್ರೀತ್ (12, 32ನೇ ನಿ.) ಗಳಿಸಿದರು. ಸ್ಪೇನ್ ತಂಡಕ್ಕೆ ಮಿರಾಲೆಸ್ (43 ನೇ ನಿ.) ಹಾಗೂ ಪಿಯರ್ ಅಮಾಟ್ (55ನೇ ನಿ.) ಚೆಂಡನ್ನು ಗುರಿ ಸೇರಿಸಿದರು.

ಜೋಕಿನ್ ಮೆನಿನಿ, ರಫಾಯೆಲ್ ವಿಲಾಲೊಂಗ ಮತ್ತು ಮಾರ್ಕ್ ಮಿರಾಲೆಸ್ ಅವರ ಪ್ರಯತ್ನವನ್ನು ತಡೆದ ಗೋಲ್‌ಕೀಪರ್ ಪಾಠಕ್, ಗೆಲುವಿನ ರೂವಾರಿ ಎನಿಸಿಕೊಂಡರು.

ರೈಲ್ವೇಸ್ ಕ್ರಿಕೆಟಿಗ ಸಯ್ಯದ್ ನಿಧನ

ನವದೆಹಲಿ (ಪಿಟಿಐ): ರೈಲ್ವೇಸ್ ಪರ ಆಡಿದ್ದ ಸ್ಪಿನ್ ದಿಗ್ಗಜ ಸಯ್ಯದ್ ಹೈದರ್ ಅಲಿ (79) ದೀರ್ಘಕಾಲದ ಅನಾರೋಗ್ಯದ ಹಿನ್ನೆಲೆಯಲ್ಲಿ ಪ್ರಯಾಗ್‌ರಾಜ್‌ನಲ್ಲಿ ಶನಿವಾರ ನಿಧನರಾದರು.

1963–64ರ ಸಾಲಿನಲ್ಲಿ ರೈಲ್ವೇಸ್ ಪರ ಪ್ರಥಮದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಸಯ್ಯದ್ 25 ವರ್ಷ ತಂಡವನ್ನು ಪ್ರತಿನಿಧಿಸಿದ್ದರು. 113 ಪ್ರಥಮದರ್ಜೆ ಪಂದ್ಯಗಳಲ್ಲಿ 366 ವಿಕೆಟ್ ಗಳಿಸಿದ್ದರು.

ನ್ಯೂಯಾರ್ಕ್ ಮ್ಯಾರಥಾನ್: ಇವಾನ್ಸ್, ಶರೋನ್‌ಗೆ ಪ್ರಶಸ್ತಿ

ನ್ಯೂಯಾರ್ಕ್ (ರಾಯಿಟರ್ಸ್): ಕೆನ್ಯಾದ ಇವಾನ್ಸ್ ಚೆಬೆಟ್ ಮತ್ತು ಶರೋನ್ ಲೊಕೆಡಿ ಅವರು ನ್ಯೂಯಾರ್ಕ್ ಮ್ಯಾರಥಾನ್‌ನಲ್ಲಿ ಪ್ರಶಸ್ತಿ ಜಯಿಸಿದರು.

ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಇವಾನ್ಸ್ 2 ತಾಸು 8 ನಿಮಿಷ 41 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇಥಿಯೋಪಿಯಾದ ಶುರಾ ಕಿಟಾಟಾ ಎರಡು ಮತ್ತು ನೆದರ್ಲೆಂಡ್ಸ್‌ನ ಅಬ್ದಿ ನಗಿಯೇ ಮೂರನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಲೊಕೆಡಿ 2 ತಾಸು 23 ನಿ. 23 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಇಸ್ರೇಲ್‌ನ ಲೊನಾಹ್ ಚೆಮ್ಟಾಯಿ ಎರಡು ಮತ್ತು ಇಥಿಯೋಪಿಯಾದ ಗೊಟಿಟೊಮ್ ಗೆಬ್ರೆಸ್‌ಲೇಸ್ ಮೂರನೇ ಸ್ಥಾನ ತಮ್ಮದಾಗಿಸಿಕೊಂಡರು.

ಬ್ರೆಜಿಲ್‌ನ ಡೇನಿಯಲ್ ಡೊ ನಶಿಮೆಂಟೊ ಅವರು ತಾಪಮಾನದಿಂದಾಗಿ ಕುಸಿದು ಬಿದ್ದರು. ಅಧಿಕಾರಿಗಳು ಅವರಿಗೆ ಆರೈಕೆ ಮಾಡಿದರು,

ಇವಾನ್ಸ್

ಶರೋನ್

ಹಾಫ್ ಮ್ಯಾರಥಾನ್: ದೀಪಾಗೆ ಪ್ರಶಸ್ತಿ

ಮಂಗಳೂರು: ಉಡುಪಿಯ ಸಚಿನ್ ಮತ್ತು ಬೆಂಗಳೂರಿನ ದೀಪಾ ನಾಯಕ್ ಅವರು ಮಂಗಳೂರು ರನ್ನರ್ಸ್ ಕ್ಲಬ್ ಮಂಗಳೂರಿನಲ್ಲಿ ಭಾನುವಾರ ಆಯೋಜಿಸಿದ್ದ ಹಾಫ್ ಮ್ಯಾರಥಾನ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ವಿಭಾಗದ ಚಾಂಪಿಯನ್ ಪಟ್ಟ ತಮ್ಮದಾಗಿಸಿಕೊಂಡರು.

ಸಚಿನ್ 1 ತಾಸು 14.12 ನಿಮಿಷಗಳಲ್ಲಿ ಗುರಿ ಮುಟ್ಟಿದರು. 1 ತಾಸು 15.48 ನಿಮಿಷಗಳಲ್ಲಿ ಗುರಿ ಸೇರಿದ ಬೆಂಗಳೂರಿನ ರಾಹುಲ್ ಶುಕ್ಲಾ ಎರಡನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದ ಚಾಂಪಿಯನ್ ದೀಪಾ 1 ತಾಸು 44.55 ನಿಮಿಷಗಳಲ್ಲಿ ಗುರಿ ಮುಟ್ಟಿದರು.

ಅರ್ಜಿದಾರರ ₹1 ಲಕ್ಷ ವೆಚ್ಚ ಪಾವತಿಸಲು ಬೆಂಗಳೂರು ಸಿಐಡಿಗೆ ‘ಸುಪ್ರೀಂ’ ನಿರ್ದೇಶನ

ಎಂಬಿಬಿಎಸ್ ವಿದ್ಯಾರ್ಥಿ ಸಾವು: ಸಿಬಿಐ ತನಿಖೆಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: 2014ರಲ್ಲಿ ಮಂಗಳೂರಿನಲ್ಲಿ ನಡೆದ ಎಂಬಿಬಿಎಸ್ ವಿದ್ಯಾರ್ಥಿಯ ನಿಗೂಢ ಸಾವಿನ ಪ್ರಕರಣದ ಬಗ್ಗೆ ಸೂಕ್ತ ತನಿಖೆ ನಡೆಸಿಲ್ಲ ಎಂದು ಸಿಬಿಐ ತನಿಖೆಗೆ ವಹಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ.

ಹೆಚ್ಚಿನ ತನಿಖೆಗೆ ನಿರ್ದೇಶಿಸಿರುವ ಬೆಂಗಳೂರು ಸಿಐಡಿ, ದುಡುಕಿನ ಮತ್ತು ನಿರ್ಲಕ್ಷ್ಯದ ಚಾಲನೆಗಾಗಿ ಮೃತನ ವಿರುದ್ಧ ಚಾರ್ಜ್ ಶೀಟ್ ದಾಖಲಿಸಿದೆ.

‘ಬೆಂಗಳೂರಿನ ಸಿಐಡಿ ನಡೆಸಿದ ತನಿಖೆಯಿಂದ ನಮಗೆ ತೃಪ್ತಿ ಇಲ್ಲ. ಸಮಗ್ರ ಮತ್ತು ಸೂಕ್ತ ತನಿಖೆ ನಂತರ ಸತ್ಯ ಹೊರಬರಬೇಕು. ಪ್ರಸ್ತುತ ಪ್ರಕರಣದಲ್ಲಿ ಸಿಐಡಿ ಸಮಗ್ರ ತನಿಖೆ ನಡೆಸದೆ ತನ್ನ ಕರ್ತವ್ಯ ನಿರ್ವಹಿಸುವಲ್ಲಿ ವಿಫಲವಾಗಿದೆ’ ಎಂದು ನ್ಯಾಯಮೂರ್ತಿಗಳಾದ ಎಂ.ಆರ್.ಷಾ ಮತ್ತು ಎಂ.ಎಂ.ಸುಂದ್ರೇಶ್ ಅವರ ಪೀಠ ಹೇಳಿದೆ.

ಈ ಪರಿಸ್ಥಿತಿಯಲ್ಲಿ ಸಂವಿಧಾನದ 32ನೇ ವಿಧಿ ಅಡಿ ಅಧಿಕಾರ ಚಲಾಯಿಸಲು ಮತ್ತು ತನಿಖೆಯನ್ನು ಬೆಂಗಳೂರಿನ ಸಿಬಿಐಗೆ ವರ್ಗಾಯಿಸಲು ಇದು ಸೂಕ್ತ ಪ್ರಕರಣವಾಗಿದೆ ಎಂದು ನ್ಯಾಯಪೀಠ ಹೇಳಿದೆ.

ಮೃತ ವಿದ್ಯಾರ್ಥಿ ತಂದೆ ಎಂ.ಎಸ್. ರಾಧಾಕೃಷ್ಣನ್ ಪರ ವಕೀಲ ಜೋಗಿ ಸ್ಕಾರಿಯಾ ಅವರ ವಾದ ಆಲಿಸಿದ ನಂತರ ಸುಪ್ರೀಂ ಕೋರ್ಟ್ ನ. 3 ರಂದು ಆದೇಶ ನೀಡಿತು. ಎರಡು ವಾರಗಳಲ್ಲಿ ಎಲ್ಲಾ ವಸ್ತುಗಳನ್ನು ಸಿಬಿಐಗೆ ಹಸ್ತಾಂತರಿಸುವಂತೆ ಸಿಐಡಿಗೆ ನಿರ್ದೇಶಿಸಿತು.

ಅಲ್ಲದೆ, ಮೃತರ ವಿರುದ್ಧದ ಚಾರ್ಜ್ ಶೀಟ್ ಅನ್ನು ಬದಿಗಿಟ್ಟು, ನಾಲ್ಕು ವಾರಗಳಲ್ಲಿ ಅರ್ಜಿದಾರರಿಗೆ ಒಂದು ಲಕ್ಷ ರೂಪಾಯಿ ವೆಚ್ಚ ಪಾವತಿಸುವಂತೆ ಸಿಐಡಿಗೆ ಆದೇಶಿಸಿದೆ.

ಮಂಗಳೂರಿನ ಎಜೆ ಮೆಡಿಕಲ್ ಇನ್‌ಸ್ಟಿಟ್ಯೂಟ್ ಕುಂಟಿಕಾನದಲ್ಲಿ ಎಂಬಿಬಿಎಸ್ ವಿದ್ಯಾರ್ಥಿ, ತಮ್ಮ ಮಗ ರೋಹಿತ್ ರಾಧಾಕೃಷ್ಣನ್ 2014ರ ಮಾರ್ಚ್ 22ರಂದು ನಿಗೂಢವಾಗಿ ಸಾವನ್ನಪ್ಪಿದ್ದರು. ಆತನ ದೇಹವು ತಲೆಯಿಂದ ಬೇರ್ಪಟ್ಟ ಸ್ಥಿತಿಯಲ್ಲಿ ಪತ್ತೆಯಾಗಿದೆ. ಹೋಂಡಾ ಸಿಟಿ ಕಾರ್ ಹೊಂದಿದ್ದು, ಅವನಿಗೆ ಮೋಟಾರ್ ಸೈಕಲ್ ಓಡಿಸುವ ಅಭ್ಯಾಸವನ್ನು ಹೊಂದಿರಲಿಲ್ಲ ಎಂದು ಅರ್ಜಿದಾರರಾದ ರಾಧಕೃಷ್ಣನ್ ತಿಳಿಸಿದರು.

ಮೃತ ಸ್ನೇಹಿತರ ಪಾತ್ರ ಸೇರಿದಂತೆ ಹಲವಾರು ಸಂದರ್ಭಗಳನ್ನು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಸ್ನೇಹಿತರ ಪಾತ್ರವು ಹೆಚ್ಚು ಅನುಮಾನಾಸ್ಪದವಾಗಿದೆ ಮತ್ತು ಅವರು ನೀಡಿದ ವಿವರಣೆಗಳು ವಿರೋಧಾಭಾಸಗಳಿಂದ ಕೂಡಿದೆ ಎಂದು ತಂದೆ ಹೇಳಿದ್ದಾರೆ.

ಕ್ವಾರಂಟೈನ್ ಪೂರ್ಣಗೊಳಿಸಿದ ಎರಡು ಚೀತಾಗಳು ವಿಶಾಲ ಅರಣ್ಯಕ್ಕೆ

ನವದೆಹಲಿ (ಪಿಟಿಐ): ನಮೀಬಿಯಾದಿಂದ ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನಕ್ಕೆ ಆಗಮಿಸಿರುವ ಎಲ್ಲಾ ಎಂಟು ಚೀತಾಗಳು ಆರೋಗ್ಯಕರ ಮತ್ತು ಸಕ್ರಿಯವಾಗಿದ್ದು, ಈ ಪರಿಸರಕ್ಕೆ ಹೊಂದಿಕೊಳ್ಳುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಸಂತಸ ವ್ಯಕ್ತಪಡಿಸಿದ್ದಾರೆ.

ಸೆಪ್ಟೆಂಬರ್ ಮಧ್ಯಭಾಗದಲ್ಲಿ ನಮೀಬಿಯಾದಿಂದ ತಂದಿದ್ದ ಅವುಗಳನ್ನು ಇರಿಸಲಾಗಿದ್ದ ಕ್ವಾರಂಟೈನ್ ಪ್ರದೇಶದಿಂದ ಎರಡು ಚೀತಾಗಳನ್ನು ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಿರುವುದು ಒಳ್ಳೆಯ ಸುದ್ದಿ ಎಂದು ಅವರು ಬಣ್ಣಿಸಿದ್ದಾರೆ.

‘ಕ್ವಾರಂಟೈನ್ ಅವಧಿ ಪೂರ್ಣಗೊಳಿಸಿದ ಹಿನ್ನೆಲೆಯಲ್ಲಿ ಎರಡು ಚೀತಾಗಳನ್ನು ಕುನೊ ರಾಷ್ಟ್ರೀಯ ಉದ್ಯಾನದ ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಲಾಗಿದೆ. ಉಳಿದವುಗಳನ್ನು ಶೀಘ್ರದಲ್ಲೇ ಬಿಡುಗಡೆ ಮಾಡಲಾಗುವುದು’ ಎಂದು ಮೋದಿ ಟ್ವೀಟ್ ಮಾಡಿದ್ದಾರೆ. ಎರಡು ಚೀತಾಗಳ ವಿಡಿಯೊ ಹಂಚಿಕೊಂಡಿದ್ದಾರೆ.

ಸೆ.17ರಂದು ನಮೀಬಿಯಾದಿಂದ ಐದು ಹೆಣ್ಣು ಮತ್ತು ಮೂರು ಗಂಡು ಚೀತಾಗಳನ್ನು ಭಾರತಕ್ಕೆ ತರಲಾಗಿತ್ತು.

ಕ್ವಾರಂಟೈನ್ ಅವಧಿ ಪೂರ್ಣಗೊಳಿಸಿದ ಎರಡು ಚೀತಾಗಳನ್ನು ಕುನೊ ರಾಷ್ಟ್ರೀಯ ಉದ್ಯಾನದ ಅರಣ್ಯ ಪ್ರದೇಶಕ್ಕೆ ಬಿಡುಗಡೆ ಮಾಡಲಾಯಿತು –ಪಿಟಿಐ ಚಿತ್ರ

‘ಚಿರತೆಗಳ ಸಂಖ್ಯೆ ಅಧಿಕ– ಚೀತಾಗಳಿಗೆ ಆತಂಕ’ (ಭೋಪಾಲ್ ವರದಿ): ‘ನಮೀಬಿಯಾದಿಂದ ತರಲಾದ 8 ಚೀತಾಗಳು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಒಟ್ಟು 50 ದಿನಗಳನ್ನು ಪೂರೈಸಿವೆ. ಕುನೊ ಉದ್ಯಾನದಲ್ಲಿ ಚಿರತೆಗಳ ಸಂಖ್ಯೆ ಹೆಚ್ಚಿದ್ದು, ಇದು ಈ ಚೀತಾಗಳ ಪಾಲಿಗೆ ಆತಂಕದ ವಿಷಯವಾಗಿದೆ’ ಎಂದು ದಕ್ಷಿಣ ಆಫ್ರಿಕಾದ ಪ್ರಾಣಿ ಸಂರಕ್ಷಕ ವಿನ್ಸೆಂಟ್ ವಾನ್ ಡರ್ ಮರ್ವ್ ಹೇಳಿದ್ದಾರೆ.

‘ಮಾಂಸಹಾರಿಯಾಗಿರುವ ಉಭಯ ಪ್ರಾಣಿಗಳು ಪರಸ್ಪರ ಸಂಘರ್ಷಕ್ಕೆ ಇಳಿಯುವ ಸಾಧ್ಯತೆ ಇರುತ್ತದೆ. ಇವು ಸಹಬಾಳ್ವೆ ನಡೆಸಿರುವ ಹಲವು ನಿದರ್ಶನಗಳೂ ಇವೆ. ಇದು ಸಮಾಧಾನಕರ ವಿಷಯ’ ಎಂದಿದ್ದಾರೆ.

‘ವಯಸ್ಕ ಚೀತಾಗಳು 40 ರಿಂದ 50 ಕೆ.ಜಿ ತೂಕ ಹೊಂದಿರುತ್ತವೆ. ಆದರೆ ಚಿರತೆಗಳು 50 ರಿಂದ 60 ಕೆ.ಜಿ ತೂಕವಿರುತ್ತವೆ. ಅತಿ ವೇಗವಾಗಿ ಓಡುವ ವಯಸ್ಕ ಚೀತಾಗಳು ಚಿರತೆ ದಾಳಿಯಿಂದ ತಪ್ಪಿಸಿಕೊಳ್ಳಬಲ್ಲವು. ಆದರೆ ಅವುಗಳ ಮರಿಗಳು ಚಿರತೆಗಳ ದಾಳಿಗೆ ಸಿಲುಕಿ ಸಾಯುವ ಅಪಾಯ ಹೆಚ್ಚಿರುತ್ತದೆ’ ಎಂದು ಹೇಳಿದ್ದಾರೆ.

ತಿರುಪತಿ ತಿಮ್ಮಪ್ಪನ ಆಸ್ತಿ ₹2.5 ಲಕ್ಷ ಕೋಟಿ

ತಿರುಪತಿ (ಆಂಧ್ರಪ್ರದೇಶ) (ಪಿಟಿಐ): ವಿಶ್ವದಲ್ಲೇ ಅತ್ಯಂತ ಶ್ರೀಮಂತವಾದ ತಿರುಪತಿ ವೆಂಕಟೇಶ್ವರ ದೇಗುಲವು ಚರಾಸ್ತಿ, ಸ್ಥಿರಾಸ್ತಿ ಸೇರಿ ಒಟ್ಟು ₹2.5 ಲಕ್ಷ ಕೋಟಿಯಷ್ಟು ಆಸ್ತಿಯನ್ನು ಹೊಂದಿದೆ.

ದೇಗುಲದ ಆಳಿತ ಮಂಡಳಿ ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ತನ್ನ ಒಟ್ಟು ಆಸ್ತಿ ವಿವರಗಳ ಶ್ವೇತಪತ್ರ ಹೊರಡಿಸಿದೆ.

ಸದ್ಯ ಟಿಟಿಡಿ ಬಳಿ ಇರುವ ಒಟ್ಟು ಆಸ್ತಿ 2022–23ನೇ ಸಾಲಿನ ಕರ್ನಾಟಕದ ಬಜೆಟ್‌ಗಿಂತ ಸ್ವಲ್ಪ ಕಡಿಮೆ ಅಷ್ಟೇ. 2022–23ರ ಕರ್ನಾಟಕ ಬಜೆಟ್‌ನ ಗಾತ್ರ ₹2.65 ಲಕ್ಷ ಕೋಟಿ.

ಬೆಟ್ಟದ ಮೇಲಿರುವ ತಿಮ್ಮಪ್ಪನ ದೇಗುಲದ ಹುಂಡಿಗೆ ವರ್ಷದಿಂದ ವರ್ಷಕ್ಕೆ ಭಕ್ತರಿಂದ ಬರುತ್ತಿರುವ ನಗದು, ಬಂಗಾರದ ಕಾಣಿಕೆಯ ಪ್ರಮಾಣ ಏರುತ್ತಲೇ ಸಾಗಿದೆ. ವಿವಿಧ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಒಟ್ಟು 10.25 ಟನ್‌ನಷ್ಟು ಬಂಗಾರ ಠೇವಣಿ ಇದೆ. ಇದರ ಒಟ್ಟು ಮೌಲ್ಯ ₹5,300 ಕೋಟಿ. ಸುಮಾರು 15,938 ಕೋಟಿಯಷ್ಟು ನಗದು ಠೇವಣಿ ಇದೆ.

ದೇಶದಾದ್ಯಂತ 960 ಕಡೆಗಳಲ್ಲಿ ಸುಮಾರು 7,123 ಎಕರೆ ಭೂಮಿ ದೇಗುಲದ ಟ್ರಸ್ಟ್ ಹೆಸರಿನಲ್ಲಿ ಇರುವುದಾಗಿ ಶ್ವೇತಪತ್ರದಲ್ಲಿ ಹೇಳಿದೆ ಎಂದು ‘ಎನ್‌ಡಿಟಿವಿ’ ವರದಿ ಮಾಡಿದೆ.

ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ, ಒಡಿಶಾ, ಹರಿಯಾಣ, ಮಹಾರಾಷ್ಟ್ರ ಮತ್ತು ನವದೆಹಲಿಯಲ್ಲಿ ದೇಗುಲದ ಟ್ರಸ್ಟ್ ಹೊಂದಿರುವ ಭೂಮಿಯ ಮಾರುಕಟ್ಟೆ ಮೌಲ್ಯ ₹2 ಲಕ್ಷ ಕೋಟಿಗೂ ಅಧಿಕ ಇರಬಹುದು ಎಂದು ಅಂದಾಜಿಸಲಾಗಿದೆ.

2019ರಲ್ಲಿ ₹13,025 ಕೋಟಿ ಇದ್ದ ನಿಶ್ಚಿತ ಠೇವಣಿ ಈಗ ₹15,938 ಕೋಟಿಗೆ ಏರಿಕೆಯಾಗಿದೆ. ಕೇವಲ 3 ವರ್ಷಗಳಲ್ಲಿ ಕೋವಿಡ್ ಸಾಂಕ್ರಾಮಿಕದ ಹೊರತಾಗಿಯೂ ₹2,900 ಕೋಟಿ ಹೆಚ್ಚಳವಾಗಿದೆ. ವಿವಿಧ ಬ್ಯಾಂಕ್‌ಗಳಲ್ಲಿಟ್ಟಿರುವ ನಗದು ಠೇವಣಿಯಿಂದ ವಾರ್ಷಿಕ ₹668 ಕೋಟಿ ಬಡ್ಡಿ ಆದಾಯವಾಗಿ ಬರುತ್ತಿದೆ.

ಅಲ್ಲದೇ ಸುಮಾರು 2.5 ಕೋಟಿ ಭಕ್ತರಿಂದ ಅಂದಾಜು ಒಂದು ಸಾವಿರ ಕೋಟಿ ರೂಪಾಯಿ ಹುಂಡಿಗೆ ಬರುತ್ತಿದೆ. 2019ರಲ್ಲಿ 7.3 ಟನ್‌ನಷ್ಟು ಬಂಗಾರದ ದಾಸ್ತಾನು ಇತ್ತು. 2022ರ ವೇಳೆಗೆ 10.25 ಟನ್ ಬಂಗಾರಕ್ಕೆ ಕಾಣಿಕೆ ಏರಿಕೆಯಾಗಿದೆ.

ಸಂಕ್ಷಿಪ್ತ ಸುದ್ದಿ

ಪೇರಲೆ ಹಣ್ಣು ಕಿತ್ತನೆಂದು ಕೊಂದರು!

ಲಖನೌ: ಪೇರಲೆ ಹಣ್ಣು ಕಿತ್ತು ತಿಂದನೆಂದು ಮನೇನಾ ಗ್ರಾಮದ ಓಂ ಪ್ರಕಾಶ್ ಎಂಬ ಪರಿಶಿಷ್ಟ ಜಾತಿಯ ಯುವಕನನ್ನು ಹೊಡೆದು ಕೊಂದಿರುವ ಆಘಾತಕಾರಿ ಘಟನೆ ಉತ್ತರ ಪ್ರದೇಶದ ಅಲಿಗಢ ಜಿಲ್ಲೆಯಲ್ಲಿ ನಡೆದಿದೆ.

ಬನ್ವರಿಲಾಲ್ ಮತ್ತು ಭೀಮ್‌ಸೇನ್ ಎಂಬ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಹೆಣ್ಣು ಮಗುವಿಗೆ ಜನ್ಮ ನೀಡಿದ ಆಲಿಯಾ ಭಟ್

ಮುಂಬೈ(ಪಿಟಿಐ): ಬಾಲಿವುಡ್‌ನ ಜನಪ್ರಿಯ ತಾರಾ ದಂಪತಿ ಆಲಿಯಾ ಭಟ್ ಮತ್ತು ರಣಬೀರ್ ಕಪೂರ್ ಅವರಿಗೆ ಹೆಣ್ಣು ಮಗು ಜನಿಸಿದೆ. ಈ ಸಂಭ್ರಮವನ್ನು ಆಲಿಯಾ ಮತ್ತು ರಣಬೀರ್ ಅವರು ಭಾನುವಾರ ಇನ್‌ಸ್ಟಾಗ್ರಾಮ್ ಪೋಸ್ಟ್ ಮೂಲಕ ಹಂಚಿಕೊಂಡಿದ್ದಾರೆ.

ಮುಂಬೈನ ಎಚ್.ಎನ್. ರಿಲಯನ್ಸ್ ಆಸ್ಪತ್ರೆಯಲ್ಲಿ ಆಲಿಯಾ ಭಟ್ ಅವರು ಮಗುವಿಗೆ ಜನ್ಮನೀಡಿದ್ದು, ತಾಯಿ–ಮಗು ಇಬ್ಬರೂ ಆರೋಗ್ಯವಾಗಿದ್ದಾರೆ ಎಂದು ಮೂಲಗಳು ಹೇಳಿವೆ.

‘ವೈದ್ಯರ ಬಾಂಡ್ ನೀತಿ ರದ್ದತಿಗೆ ಮಾರ್ಗಸೂಚಿ’

ನವದೆಹಲಿ (ಪಿಟಿಐ):ವೈದ್ಯರ ಕಡ್ಡಾಯ ಸೇವೆಗೆ ಜಾರಿಗೊಳಿಸಿದ್ದ ಬಾಂಡ್ ನೀತಿಯನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗದ (ಎನ್‌ಎಂಸಿ) ಶಿಫಾರಸುಗಳ ಆಧಾರದ ಮೇಲೆ ತೆಗೆದುಹಾಕುವ ಸಲುವಾಗಿ ಮಾರ್ಗಸೂಚಿ ಗಳನ್ನು ಅಂತಿಮಗೊಳಿಸಲು ಕೇಂದ್ರ ಆರೋಗ್ಯ ಸಚಿವಾಲಯವು ಕಾರ್ಯನಿರತವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಬಾಂಡ್ ನೀತಿ ಪ್ರಕಾರ, ವೈದ್ಯಕೀಯ ಪದವಿ ಮತ್ತು ವೈದ್ಯಕೀಯ ಸ್ನಾತಕೋತ್ತರ ಪದವಿ ಪಡೆದ ನಂತರ ವೈದ್ಯರು ರಾಜ್ಯ ಸರ್ಕಾರದ ಆಸ್ಪತ್ರೆಗಳಲ್ಲಿ ನಿರ್ದಿಷ್ಟ ಅವಧಿಗೆ ಸೇವೆ ಸಲ್ಲಿಸಲೇಬೇಕು. ಇದರಲ್ಲಿ ವಿಫಲವಾದರೆ ಸರ್ಕಾರಕ್ಕೆ ಅಥವಾ ವೈದ್ಯಕೀಯ ಕಾಲೇಜಿಗೆ ದಂಡ ಪಾವತಿಸಬೇಕು.

ಬೇಟಿ ಬಚಾವೋ: ಉಚಿತ ಹೆರಿಗೆಯ ಅಭಿಯಾನ

ಪುಣೆ: ಇಲ್ಲಿಯ ವೈದ್ಯರೊಬ್ಬರು ತಮ್ಮ ‘ಬೇಟಿ ಬಚಾವೋ ಜನಾಂದೋಲನ’ದ ಭಾಗವಾಗಿ, ಹೆಣ್ಣು ಮಗುವಿಗೆ ಜನ್ಮ ನೀಡಿದವರಿಂದ ಹೆರಿಗೆ ಶುಲ್ಕ ಪಡೆಯದೆ ಸೇವೆ ಸಲ್ಲಿಸುತ್ತಿದ್ದಾರೆ.

ಡಾ. ಗಣೇಶ್ ರಾಖ ಅವರು ಮಹಾರಾಷ್ಟ್ರದ ಹಡಪ್‌ಸರ ಪ್ರದೇಶದಲ್ಲಿ ‘ಮೆಡಿಕೇರ್ ಹಾಸ್ಪಿಟಲ್’ ಹೆರಿಗೆ ಆಸ್ಪತ್ರೆ ನಡೆಸುತ್ತಿದ್ದು 11 ವರ್ಷಗಳಿಂದ 2,400 ಹೆರಿಗೆಗಳನ್ನು ಉಚಿತವಾಗಿ ಮಾಡಿಸಿದ್ದಾರೆ.

ಕ್ಯಾಮೆರಾದಲ್ಲಿ ಸೆರೆಯಾಗಿರುವ ಹಿಮ ಚಿರತೆ

ಕಾಶ್ಮೀರದಲ್ಲಿ ಹಿಮ ಚಿರತೆ ಪತ್ತೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಕಾಶ್ಮೀರದ ಅತಿ ಎತ್ತರದ ಬಾಲ್‌ಟಾಲ್–ಝೋಜಿಲಾ ಪ್ರದೇಶದಲ್ಲಿ ಇದೇ ಮೊದಲ ಬಾರಿಗೆ ಹಿಮ ಚಿರತೆ ಪತ್ತೆಯಾಗಿದೆ.

ಪರಿಸರ ಸಂರಕ್ಷಣಾ ಫೌಂಡೇಷನ್‌ನ (ಭಾರತ) ಸಂಶೋಧಕರು ಜಮ್ಮು ಮತ್ತು ಕಾಶ್ಮೀರದ ವನ್ಯಜೀವಿ ರಕ್ಷಣಾ ಇಲಾಖೆಯ ಸಹಯೋಗದೊಂದಿಗೆ ಕಣಿವೆ ರಾಜ್ಯದ ಗುಡ್ಡಗಾಡು ಪ್ರದೇಶಗಳಲ್ಲಿ ಕ್ಯಾಮೆರಾಗಳನ್ನು ಅಳವಡಿಸುವ ಕಾರ್ಯ ಕೈಗೊಂಡಿದ್ದು, ಹೀಗೆ ಅಳವಡಿಸಲಾಗಿರುವ ಕ್ಯಾಮೆರಾವೊಂದರಲ್ಲಿ ಹಿಮ ಚಿರತೆಯ ದೃಶ್ಯ ಸೆರೆಯಾಗಿದೆ.

ಭಾರತದಲ್ಲಿ ಹಿಮ ಚಿರತೆಗಳ ಇರುವಿಕೆ ಹಾಗೂ ಅವುಗಳ ಸಂಖ್ಯೆ ಪತ್ತೆ ಹಚ್ಚುವುದಕ್ಕಾಗಿ ಹಿಮ ಚಿರತೆಗಳ ಸಂಖ್ಯೆ ಮೌಲ್ಯಮಾಪನ ಯೋಜನೆ ಕೈಗೊಳ್ಳಲಾಗಿದೆ. ಇದಕ್ಕೆ ಕೇಂದ್ರ ಪರಿಸರ ಸಚಿವಾಲಯವು ಹಣಕಾಸಿನ ನೆರವು ನೀಡಿದೆ.

ಕೇರಳ: ರಬ್ಬರ್ ಶೀಟ್ ಕಳವು; 37 ವರ್ಷದ ಬಳಿಕ ಆರೋಪಿ ಸೆರೆ

ಪತ್ತನಂತಿಟ್ಟ: ರಬ್ಬರ್ ಶೀಟ್ ಕಳವು ಪ್ರಕರಣಕ್ಕೆ ಸಂಬಂಧಿಸಿ 37 ವರ್ಷಗಳ ಬಳಿಕ ಆರೋಪಿಯನ್ನು ಬಂಧಿಸಿದ ಘಟನೆ ಕೇರಳದಲ್ಲಿ ವರದಿಯಾಗಿದೆ. ಅರಣ್ಯ ಪ್ರದೇಶದಲ್ಲಿ ತಲೆಮರೆಸಿಕೊಂಡಿದ್ದ ದಕ್ಷಿಣ ಕೇರಳದ ವೆಚ್ಚೂಚಿರಾ ಗ್ರಾಮದ ನಿವಾಸಿ ಪೊಡಿಯನ್ ಎಂಬಾತನನ್ನು ಈಗ ಪೊಲೀಸರು ಬಂಧಿಸಿದ್ದಾರೆ.

ದೆಹಲಿ: ಗಾಳಿ ಗುಣಮಟ್ಟ ‘ತೀರಾ ಕಳಪೆ’

ನವದೆಹಲಿ (ಪಿಟಿಐ): ‘3 ದಿನಗಳ ಹಿಂದಿನ ಪರಿಸ್ಥಿತಿಗೆ ಹೋಲಿಸಿದರೆ ಭಾನುವಾರ ದೆಹಲಿಯಲ್ಲಿ ಗಾಳಿಯ ಗುಣಮಟ್ಟ ಕೊಂಚ ಸುಧಾರಿಸಿದೆ. ಅತಿ ಹೆಚ್ಚು ಮಾಲಿನ್ಯ ಸ್ಥಿತಿಯಿಂದ ‘ಅತ್ಯಂತ ಕಳಪೆ’ ಸ್ಥಿತಿಗೆ ತಗ್ಗಿದೆ. ಕನಿಷ್ಠ ತಾಪಮಾನವು 17.5 ಡಿಗ್ರಿ ಸೆಲ್ಸಿಯಸ್‌ನಷ್ಟು ವರದಿಯಾಗಿದೆ’ ಎಂದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿ ತಿಳಿಸಿದೆ.

ದೆಹಲಿ–ಎನ್‌ಸಿಆರ್‌ನಲ್ಲಿ ಡೀಸೆಲ್ ಚಾಲಿತ ಲಘು ವಾಹನಗಳ ಸಂಚಾರಕ್ಕೆ ಹೇರಿದ್ದ ನಿರ್ಬಂಧ ತೆರವುಗೊಳಿಸುವಂತೆ ಕೇಂದ್ರದ ಗಾಳಿ ಗುಣಮಟ್ಟ ಸಮಿತಿಯು ದೆಹಲಿಯ ಆಡಳಿತಕ್ಕೆ ನಿರ್ದೇಶಿಸಿದೆ.

‘2015ರಿಂದ 2022ರಲ್ಲಿ ಹೆಚ್ಚು ಉಷ್ಣಾಂಶ’

ನವದೆಹಲಿ (ಪಿಟಿಐ): 2015ರಿಂದ 2022ರ ವರೆಗಿನ 8 ವರ್ಷಗಳು ವಾತಾವರಣದಲ್ಲಿ ಅತ್ಯಂತ ಹೆಚ್ಚು ಉಷ್ಣಾಂಶ ದಾಖಲಾದ ವರ್ಷಗಳು. 2022ರ ಸರಾಸರಿ ಉಷ್ಣಾಂಶವು ಕೈಗಾರಿಕಾ ಪೂರ್ವ(1985–1900) ಕಾಲದ ಸರಾಸರಿಗಿಂತ 1.15 ಡಿಗ್ರಿ ಸೆಲ್ಸಿಯಸ್ ಹೆಚ್ಚು ಎಂದು ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಭಾನುವಾರ ತಿಳಿಸಿದೆ.

ಸದ್ಯದ ಪರಿಸ್ಥಿತಿಯೇ ಮುಂದುವರೆದರೆ 1850ರಿಂದ ಈವರೆಗಿನ ಅತಿ ಹೆಚ್ಚು ಉಷ್ಣಾಂಶ ದಾಖಲಾದ ವರ್ಷಗಳಲ್ಲಿ 2022ನೇ ಇಸವಿಯು 5 ಅಥವಾ 6ನೇ ಸ್ಥಾನ ಪಡೆಯಲಿದೆ ಮತ್ತು 2021ಕ್ಕಿಂತ ಅತಿ ಹೆಚ್ಚು ಉಷ್ಣಾಂಶ ದಾಖಲಾದ ವರ್ಷ ಎಂದು ಕರೆಸಿಕೊಳ್ಳುತ್ತದೆ ಎಂದು ‘ಡಬ್ಲ್ಯುಎಂಒ ಜಾಗತಿಕ ವಾತಾವರಣ–2022ರ ತಾತ್ಕಾಲಿಕ ಸ್ಥಿತಿಗತಿ’ವರದಿ ಹೇಳಿದೆ.

ಕೇರಳ ರಾಜ್ಯಪಾಲರ ವಿರುದ್ಧ ಪ್ರತಿಭಟನೆ: ಇತರ ಪಕ್ಷಗಳನ್ನೂ ಸೆಳೆಯಲು ಸಿಪಿಎಂ ಯತ್ನ

ತಿರುವನಂತಪುರ: ಬಿಜೆಪಿಯೇತರ ಸರ್ಕಾರವಿರುವ ರಾಜ್ಯಗಳ ರಾಜ್ಯಪಾಲರನ್ನು ಅಲ್ಲಿನ ಸರ್ಕಾರಗಳ ವಿರುದ್ಧ ಬಿಜೆಪಿಯು ಬಳಸಿಕೊಳ್ಳುತ್ತಿದೆ ಎಂದು ಆರೋಪಿಸಿ ನ. 15ರಂದು ಇಲ್ಲಿನ ರಾಜಭವನಕ್ಕೆ ಹಮ್ಮಿಕೊಂಡಿರುವ ಪ್ರತಿಭಟನಾ ಮೆರವಣಿಗೆಯಲ್ಲಿ ಭಾಗಿಯಾಗುವಂತೆ ಇತರ ವಿರೋಧ ಪಕ್ಷಗಳನ್ನೂ ಸೆಳೆಯಲು ಸಿಪಿಎಂ ಯತ್ನಿಸುತ್ತಿದೆ.

ಎಲ್‌ಡಿಎಫ್ ಆಯೋಜಿಸಿರುವ ಮೆರವಣಿಗೆಗೆ ಪಕ್ಷದ ರಾಜ್ಯಸಭಾ ಸದಸ್ಯ ತಿರುಚಿ ಶಿವ ಅವರನ್ನು ಕಳುಹಿಸಲು ತಮಿಳುನಾಡಿನ ಡಿಎಂಕೆ ಈಗಾಗಲೇ ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಸಿಪಿಎಂ ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚೂರಿ ಅವರು ಪ್ರತಿಭಟನಾ ಮೆರವಣಿಗೆಯನ್ನು ಉದ್ಘಾಟಿಸುವರು.

ಶುಕ್ರನಲ್ಲಿಗೆ ಸಂಶೋಧನಾ ನೌಕೆ– ಇಸ್ರೊ ಮುಂದಿನ ಯೋಜನೆ

ಡೆಹ್ರಾಡೂನ್ (ಪಿಟಿಐ): ಮಂಗಳಯಾನ ಮತ್ತು ಚಂದ್ರಯಾನ ಕೈಗೊಂಡ ಬಳಿಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತನ್ನ ದೃಷ್ಟಿಯನ್ನು ಶುಕ್ರನೆಡೆಗೆ ನೆಟ್ಟಿದೆ. ಜೊತೆಗೆ, ಜಪಾನ್ ಸಹಯೋಗದೊಂದಿಗೆ ಚಂದ್ರನ ಶಾಶ್ವತ ಕಪ್ಪು ಭಾಗವನ್ನೂ ಸಂಶೋಧಿಸಲು ಚಿಂತನೆ ನಡೆಸಿದೆ.

ಇಲ್ಲಿ ನಡೆದ ‘ಆಕಾಶ್ ತತ್ವಾ’ ಸಮ್ಮೇಳನದಲ್ಲಿ ಅಹಮದಾಬಾದ್ ಮೂಲದ ಭೌತ ವಿಜ್ಞಾನ ಸಂಶೋಧನಾ ಪ್ರಯೋಗಾಲಯದ ನಿರ್ದೇಶಕ ಅನಿಲ್ ಭಾರದ್ವಾಜ್ ಅವರು ಇಸ್ರೊದ ಮುಂದಿನ ಯೋಜನೆಗಳ ಕುರಿತು ವಿಷಯ ಮಂಡಿಸಿದರು. ಮಂಗಳ ಗ್ರಹಕ್ಕೂ ಪುನಃ ಉಪಗ್ರಹ ಕಳಿಸುವ ಯೋಜನೆ ಇಸ್ರೊಗೆ ಇದೆ ಎಂದು ಹೇಳಿದರು.

ಮುಂದಿನ ವರ್ಷವೇ ಆದಿತ್ಯ ಎಲ್–1 ಉಡ್ಡಯನ: ಸೂರ್ಯನಲ್ಲಿಗೆ ಕಳಿಸಲಾಗುತ್ತಿರುವ 400 ಕೆ.ಜಿ. ತೂಕದ ಉಪಗ್ರಹ ಆದಿತ್ಯ ಎಲ್–1 ಕುರಿತು ಇದೇ ವೇಳೆ ಮಾಹಿತಿ ನೀಡಿದ ಅವರು, ಭೂಮಿಯಿಂದ 15 ಲಕ್ಷ ಕಿ.ಮೀ.ದೂರದಲ್ಲಿ ಸೂರ್ಯನ ಕಕ್ಷೆ ಸುತ್ತ ಸುತ್ತುವ ಈ ಉಪಗ್ರಹವು ಲಾಗ್ರೇಂಜ್ ಪಾಯಿಂಟ್ ಎಲ್–1 ಎಂಬ ಬಿಂದುವಿಂದ ಸೂರ್ಯನ ಅಧ್ಯಯನ ನಡೆಸಲಿದೆ ಎಂದು ಹೇಳಿದರು.

ಆದಿತ್ಯ–ಎಲ್1 ಮತ್ತು ಚಂದ್ರಯಾನ–3 ಯೋಜನೆಗಳನ್ನು ಮುಂದಿನ ವರ್ಷವೇ ಕೈಗೊಳ್ಳಲಾಗುವುದು ಎಂದರು.

ಭಾರತಕ್ಕೆ ಸೆಮಿಫೈನಲ್‌ನಲ್ಲಿ ಇಂಗ್ಲೆಂಡ್ ಎದುರಾಳಿ; ನ್ಯೂಜಿಲೆಂಡ್‌ಗೆ ಪಾಕ್ ಸವಾಲು

ಬೆಳಗಿದ ಸೂರ್ಯ; ರಾಹುಲ್ ಅಬ್ಬರ

• ಆರ್. ಕೌಶಿಕ್

ಮೆಲ್ಬರ್ನ್: ಭಾನುವಾರ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಕಣಕ್ಕಿಳಿಯುವ ಮುನ್ನವೇ ರೋಹಿತ್ ಶರ್ಮಾ ನಾಯಕತ್ವದ ಭಾರತ ತಂಡವು ಟಿ20 ವಿಶ್ವಕಪ್ ಟೂರ್ನಿ ಸೆಮಿಫೈನಲ್‌ನಲ್ಲಿ ತನ್ನ ಸ್ಥಾನವನ್ನು ಖಚಿತಪಡಿಸಿಕೊಂಡಿತ್ತು.

ಸೂಪರ್ 12ರ ಹಂತದ ಎರಡನೇ ಗುಂಪಿನಲ್ಲಿ ಬೆಳಿಗ್ಗೆ (ಭಾರತೀಯ ಕಾಲಮಾನದ ಪ್ರಕಾರ) ನಡೆದ ಪಂದ್ಯದಲ್ಲಿಯೇ ನೆದರ್ಲೆಂಡ್ಸ್ ದಕ್ಷಿಣ ಆಫ್ರಿಕಾಕ್ಕೆ ಸೋಲಿನ ಆಘಾತ ನೀಡಿದ್ದರಿಂದ ಭಾರತದ ನಾಲ್ಕರ ಘಟ್ಟದ ಹಾದಿ ಸುಲಭವಾಯಿತು. ಸೆಮಿ ಹಾದಿಯಿಂದ ಈಗಾಗಲೇ ಹೊರಬಿದ್ದಿರುವ ಜಿಂಬಾಬ್ವೆಯಿಂದಲೂ ಹೆಚ್ಚು ಪ್ರತಿರೋಧ ಕಂಡುಬರದ ಪಂದ್ಯದಲ್ಲಿ ಭಾರತ ತಂಡವು 'ಅಭ್ಯಾಸ' ಮಾಡಿತು. 71 ರನ್‌ಗಳಿಂದ ಜಯಿಸಿದ ತಂಡವು ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿತು.

ಅಡಿಲೇಡ್‌ನಲ್ಲಿ ಗುರುವಾರ ನಡೆಯುವ ನಾಲ್ಕರ ಘಟ್ಟದ ಎರಡನೇ ಪಂದ್ಯದಲ್ಲಿ ಭಾರತವು ಇಂಗ್ಲೆಂಡ್ ಎದುರು ಕಣಕ್ಕಿಳಿಯಲಿದೆ. ಅದಕ್ಕೂ ಮುನ್ನಾದಿನ ಪಾಕಿಸ್ತಾನ ತಂಡವು ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ರಾಹುಲ್–ಸೂರ್ಯ ಮಿಂಚು

ಆರಂಭಿಕ ಬ್ಯಾಟರ್ ಕೆ.ಎಲ್. ರಾಹುಲ್ ಟೂರ್ನಿಯಲ್ಲಿ ಸತತ ಎರಡನೇ ಅರ್ಧಶತಕ ಗಳಿಸಿದರು. ಸೂರ್ಯಕುಮಾರ್ ಯಾದವ್ ಮತ್ತೊಮ್ಮೆ ಪ್ರಜ್ವಲಿಸಿದರು. ಅಜೇಯ 61 ರನ್ ಗಳಿಸಿದ ಮುಂಬೈಕರ್ 2022ರ ಕ್ಯಾಲೆಂಡರ್ ವರ್ಷದಲ್ಲಿ ಅಂತರರಾಷ್ಟ್ರೀಯ ಟಿ20 ಮಾದರಿಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ರನ್ ಗಳಿಸಿದ ವಿಶ್ವದಾಖಲೆ ಮಾಡಿದರು. ಕ್ರೀಡಾಂಗಣದಲ್ಲಿ ಸೇರಿದ್ದ 82,507 ಪ್ರೇಕ್ಷಕರಿಗೆ ಭರಪೂರ ಮನರಂಜನೆ ನೀಡಿದರು. ಕನ್ನಡಿಗ ರಾಹುಲ್ ಹಾಗೂ ಸೂರ್ಯ ಅವರ ಅಮೋಘ ಬ್ಯಾಟಿಂಗ್‌ನಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 186 ರನ್ ಗಳಿಸಿತು. ರೋಹಿತ್, ವಿರಾಟ್ ಮತ್ತು ಹಾರ್ದಿಕ್ ಅಲ್ಪ ಕಾಣಿಕೆ ನೀಡಿದರು.

ಈ ಗುರಿ ಬೆನ್ನಟ್ಟಿದ ಜಿಂಬಾಬ್ವೆ ತಂಡದ ಸಿಕಂದರ್ ರಝಾ (34 ರನ್) ಹಾಗೂ ರಿಯಾನ್ ಬರ್ಲ್ (35; 22ಎಸೆತ) ಬಿಟ್ಟರೆ ಉಳಿದವರು ಹೆಚ್ಚು ಪ್ರತಿರೋಧ ತೋರಲಿಲ್ಲ. ಮೊಹಮ್ಮದ್ ಶಮಿ, ಅರ್ಷದೀಪ್, ಆರ್. ಅಶ್ವಿನ್ ಹಾಗೂ ಆರ್. ಅಶ್ವಿನ್ ಅವರಂತಹ ಅನುಭವಿಗಳ ಬೌಲಿಂಗ್ ಎದುರಿಸಲು ಬ್ಯಾಟರ್‌ಗಳು ಪಟ್ಟ ಪ್ರಯತ್ನ ಫಲಿಸಲಿಲ್ಲ. 36 ರನ್‌ಗಳಿಗೆ ಐದು ವಿಕೆಟ್‌ಗಳನ್ನು ತಂಡವು ಕಳೆದುಕೊಂಡಿತು. ಆದರೂ ದಿಟ್ಟ ಹೋರಾಟ ಮಾಡಿದ ರಝಾ ಹಾಗೂ ರಿಯಾನ್ ಅವರಿಂದಾಗಿ 17.2 ಓವರ್‌ಗಳಲ್ಲಿ 115 ರನ್ ಕಲೆಹಾಕಲು ತಂಡಕ್ಕೆ ಸಾಧ್ಯವಾಯಿತು.

ಈ ಪಂದ್ಯದಲ್ಲಿ ದಿನೇಶ್ ಕಾರ್ತಿಕ್ ಅವರಿಗೆ ವಿಶ್ರಾಂತಿ ನೀಡಿ, ರಿಷಭ್ ಪಂತ್‌ಗೆ ಅವಕಾಶ ನೀಡಲಾಯಿತು.

ಕೆ.ಎಲ್ ರಾಹುಲ್ ಬ್ಯಾಟಿಂಗ್ ಸೊಬಗು –ಎಎಫ್‌ಪಿ ಚಿತ್ರ

ವಿಕೆಟ್ ಗಳಿಸಿದ ಮೊಹಮ್ಮದ್ ಶಮಿಯನ್ನು ಅಭಿನಂದಿಸಿದ ಸೂರ್ಯಕುಮಾರ್ ಯಾದವ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಭಾರತ 5ಕ್ಕೆ 186 (20 ಓವರ್)
ರಾಹುಲ್ ಸಿ ಮಸಕಜಾ ಬಿ ಸಿಕಂದರ್ 51 (35ಎ, 4X3, 6X3), ರೋಹಿತ್ ಸಿ ಮಸಕಜಾ ಬಿ ಮುಜರ್‌ಬಾನಿ 15 (13ಎ, 4X2), ವಿರಾಟ್ ಸಿ ಬರ್ಲ್ ಬಿ ವಿಲಿಯಮ್ಸ್ 26 (25ಎ, 4X2), ಸೂರ್ಯಕುಮಾರ್ ಔಟಾಗದೆ 61 (25ಎ, 4X6, 6X4), ರಿಷಭ್ ಸಿ ಬರ್ಲ್ ಬಿ ವಿಲಿಯಮ್ಸ್ 3 (5ಎ), ಹಾರ್ದಿಕ್ ಸಿ ಮುಜರ್‌ಬಾನಿ ಬಿ ಗರವಾ 18 (18ಎ, 4X2), ಅಕ್ಷರ್ ಔಟಾಗದೆ 0 (0ಎ)
ಇತರೆ 12 (ಲೆಗ್‌ಬೈ 5, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-27 (ರೋಹಿತ್ ಶರ್ಮಾ, 3.5), 2-87 (ವಿರಾಟ್ ಕೊಹ್ಲಿ, 11.5), 3-95 (ಕೆ.ಎಲ್. ರಾಹುಲ್, 12.2), 4-101 (ರಿಷಭ್ ಪಂತ್, 13.3), 5-166 (ಹಾರ್ದಿಕ್ ಪಾಂಡ್ಯ, 19.2)
ಬೌಲಿಂಗ್: ರಿಚರ್ಡ್ ಗರವಾ 4–1–44–1, ಟೆಂಡಾಯ್ ಚಟಾರ 4–0–34–0, ಬ್ಲೆಸಿಂಗ್ ಮುಜರ್‌ಬಾನಿ 4–0–50–1, ವೆಲ್ಲಿಂಗ್ಟನ್ ಮಸಕಜಾ 2–0–12–0, ರ್‍ಯಾನ್ ಬರ್ಲ್ 1–0–14–0, ಸಿಕಂದರ್ ರಾಜಾ 3–0–18–1, ಸೀನ್ ವಿಲಿಯಮ್ಸ್ 2–0–9–2

ಜಿಂಬಾಬ್ವೆ 115 (17.2 ಓವರ್)
ಮದೆವೆರೆ ಸಿ ವಿರಾಟ್ ಬಿ ಭುವನೇಶ್ವರ್ 0 (1ಎ), ಕ್ರೆಗ್ ಸಿ ಮತ್ತು ಬಿ ಹಾರ್ದಿಕ್ 13 (15ಎ, 4X2), ಚಕಾಬ್ವಾ ಬಿ ಅರ್ಷದೀಪ್ 0 (6ಎ), ವಿಲಿಯಮ್ಸ್ ಸಿ ಭುವನೇಶ್ವರ್ ಬಿ ಶಮಿ 11 (18ಎ, 6X1), ಸಿಕಂದರ್ ಸಿ ಸೂರ್ಯಕುಮಾರ್ ಬಿ ಬಿ ಹಾರ್ದಿಕ್ 34 (24ಎ, 4X3), ಟೋನಿ ಎಲ್‌ಬಿಡಬ್ಲ್ಯು ಶಮಿ 5 (4ಎ, 4X1), ಬರ್ಲ್ ಬಿ ಅಶ್ವಿನ್ 35 (22ಎ, 4X5, 6X1), ಮಸಕಜಾ ಸಿ ರೋಹಿತ್ ಬಿ ಅಶ್ವಿನ್ 1 (7ಎ), ಗರವಾ ಬಿ ಅಶ್ವಿನ್ 1 (2ಎ), ಚಟಾರ ಸಿ ಮತ್ತು ಅಕ್ಷರ್ 4 (4ಎ, 4X1), ಮುಜರ್‌ಬಾನಿ ಔಟಾಗದೆ 0 (2ಎ)
ಇತರೆ 11 (ಲೆಗ್‌ಬೈ 3, ನೋಬಾಲ್ 1, ವೈಡ್ 7)
ವಿಕೆಟ್ ಪತನ: 1-0 (ವೆಸ್ಲೆ ಮದೆವೆರೆ, 0.1), 2-2 (ರೆಗಿಸ್ ಚಕಾಬ್ವಾ, 1.4), 3-28 (ಸೀನ್ ವಿಲಿಯಮ್ಸ್, 5.6), 4-31 (ಕ್ರೇಗ್ ಇರ್ವಿನ್, 6.4), 5-36 (ಟೋನಿ ಮುನ್ಯೊಂಗಾ, 7.3), 6-96 (ರ್‍ಯಾನ್ ಬರ್ಲ್, 13.2), 7-104 (ವೆಲ್ಲಿಂಗ್ಟನ್ ಮಸಕಜಾ, 15.1), 8-106 (ರಿಚರ್ಡ್ ಗವಾರ, 15.5), 9-111 (ಸಿಕಂದರ್ ರಾಜಾ, 16.4), 10-115 (ಟೆಂಡಾಯ್ ಚಟಾರ, 17.2)
ಬೌಲಿಂಗ್: ಭುವನೇಶ್ವರ್ ಕುಮಾರ್ 3–1–11–1, ಅರ್ಷದೀಪ್ ಸಿಂಗ್ 2–0–9–1, ಮೊಹಮ್ಮದ್ ಶಮಿ 2–0–14–2, ಹಾರ್ದಿಕ್ ಪಾಂಡ್ಯ 3–0–16–2, ರವಿಚಂದ್ರನ್ ಅಶ್ವಿನ್ 4–0–22–3, ಅಕ್ಷರ್ ಪಟೇಲ್ 3.2–0–40–1

ಫಲಿತಾಂಶ: ಭಾರತಕ್ಕೆ 71 ರನ್‌ಗಳ ಗೆಲುವು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಫಲಿತಾಂಶವಿಲ್ಲ	ಪಾಯಿಂಟ್ಸ್	ರನ್ ರೇಟ್
ಗುಂಪು 1						
ನ್ಯೂಜಿಲೆಂಡ್	5	3	1	1	7	2.113
ಇಂಗ್ಲೆಂಡ್	5	3	1	1	7	0.473
ಆಸ್ಟ್ರೇಲಿಯಾ	5	3	1	1	7	-0.173
ಶ್ರೀಲಂಕಾ	5	2	3	0	4	-0.422
ಐರ್ಲೆಂಡ್	5	1	3	1	3	-1.615
ಅಫ್ಗಾನಿಸ್ತಾನ	5	0	3	2	2	-0.571
ಗುಂಪು 2						
ಭಾರತ	5	4	1	0	8	1.319
ಪಾಕಿಸ್ತಾನ	5	3	2	0	6	1.028
ದಕ್ಷಿಣ ಆಫ್ರಿಕಾ	5	2	2	1	5	0.874
ನೆದರ್ಲೆಂಡ್ಸ್	5	2	3	0	4	-0.849
ಬಾಂಗ್ಲಾದೇಶ	5	2	3	0	4	-1.176
ಜಿಂಬಾಬ್ವೆ	5	1	3	1	3	-1.138

ದಕ್ಷಿಣ ಆಫ್ರಿಕಾಕ್ಕೆ ಆಘಾತ

ನೆದರ್ಲೆಂಡ್ಸ್ ವಿರುದ್ಧ ಸೋಲು; ಸೆಮಿಫೈನಲ್ ಕನಸು ಭಗ್ನ

ಅಡಿಲೇಡ್ (ಪಿಟಿಐ): ವಿಶ್ವಕಪ್ ಒಳಗೊಂಡಂತೆ ಐಸಿಸಿಯ ಪ್ರಮುಖ ಟೂರ್ನಿಗಳಲ್ಲಿ ಪದೇ ಪದೇ ವೈಫಲ್ಯ ಅನುಭವಿಸುವುದಕ್ಕೆ ದಕ್ಷಿಣ ಆಫ್ರಿಕಾ ತಂಡಕ್ಕೆ 'ಚೋಕರ್' ಎಂಬ ಹಣೆಪಟ್ಟಿ ಲಭಿಸಿತ್ತು. ಈ ಬಾರಿಯೂ ಆ ಹಣೆಪಟ್ಟಿ ಕಳಚುವಲ್ಲಿ ತಂಡ ಎಡವಿತು.

ಭಾನುವಾರ ನಡೆದ ಟಿ20 ವಿಶ್ವಕಪ್‌ನ ಕೊನೆಯ ಲೀಗ್ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು 13 ರನ್‌ಗಳಿಂದ ಆಘಾತ ಅನುಭವಿಸಿದ ತೆಂಬಾ ಬವುಮಾ ಬಳಗ, ಸೆಮಿಫೈನಲ್ ಕಾಣದೆಯೇ ಟೂರ್ನಿಯಿಂದ ಹೊರಬಿತ್ತು.

ಅಡಿಲೇಡ್ ಓವಲ್‌ನಲ್ಲಿ ಮೊದಲು ಬ್ಯಾಟ್ ಮಾಡಿದ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 158 ರನ್ ಗಳಿಸಿತು. ಅಗ್ರ ಕ್ರಮಾಂಕದ ನಾಲ್ವರು ಬ್ಯಾಟರ್‌ಗಳಾದ ಸ್ಟೀಫನ್ ಮೈಬರ್ಗ್ (37 ರನ್, 30 ಎ.), ಮ್ಯಾಕ್ಸ್ ಒಡೌಡ್ (29 ರನ್, 31 ಎ.) ಟಾಮ್ ಕೂಪರ್ (35 ರನ್, 19 ಎ.) ಹಾಗೂ ಕಾಲಿನ್ ಆ್ಯಕರ್‌ಮನ್ (ಔಟಾಗದೆ 41, 21 ಎ.) ಉಪಯುಕ್ತ ಕೊಡುಗೆ ನೀಡಿ ದರು.

ದಕ್ಷಿಣ ಆಫ್ರಿಕಾ ತಂಡ ನಿಗದಿತ ಓವರ್‌ಗಳಲ್ಲಿ 8 ವಿಕೆಟ್‌ಗೆ ಗಳಿಸಿದ್ದು 145 ರನ್ ಮಾತ್ರ. ಸೆಮಿ ಪ್ರವೇಶಿಸಲು ಗೆಲುವು ಅನಿವಾರ್ಯವಾಗಿದ್ದ ಪಂದ್ಯದಲ್ಲಿ ಕ್ವಿಂಟನ್ ಡಿಕಾಕ್ (13 ಎಸೆತಗಳಲ್ಲಿ 13) ಮತ್ತು ಬವುಮಾ (20 ಎಸೆತಗಳಲ್ಲಿ 20) ಬಿರುಸಿನ ಆರಂಭ ನೀಡುವಲ್ಲಿ ವಿಫಲರಾದರು.

ಮಧ್ಯಮ ಕ್ರಮಾಂಕದಲ್ಲಿ ರಿಲೀ ರೂಸೊ (25 ರನ್, 19 ಎ.), ಏಡನ್ ಮರ್ಕರಂ (17 ರನ್, 13 ಎ.) ಮತ್ತು ಡೇವಿಡ್ ಮಿಲ್ಲರ್ (17 ರನ್, 17 ಎ.) ಉತ್ತಮ ಆರಂಭ ಪಡೆದರೂ, ಅದನ್ನು ದೊಡ್ಡ ಮೊತ್ತವಾಗಿ ಪರಿವರ್ತಿಸುವಲ್ಲಿ ವಿಫಲರಾದರು. ಕೊನೆಯ ಕ್ರಮಾಂಕದ ಬ್ಯಾಟರ್‌ಗಳು ಒತ್ತಡ ಮೆಟ್ಟಿನಿಲ್ಲಲು ವಿಫಲವಾದ್ದರಿಂದ ತಂಡ ಸೋಲಿನ ಹಾದಿ ಹಿಡಿಯಿತು.

ಬ್ರೆಂಡನ್ ಗ್ಲೋವರ್ (9ಕ್ಕೆ 3) ಮತ್ತು ಫ್ರೆಡ್ ಕ್ಲಾಸೆನ್ (20ಕ್ಕೆ 2) ಸೇರಿದಂತೆ ನೆದರ್ಲೆಂಡ್ಸ್ ಬೌಲರ್‌ಗಳು ಬಿಗುವಾದ ದಾಳಿ ನಡೆಸಿ, ಎದುರಾಳಿ ಬ್ಯಾಟರ್‌ಗಳಿಗೆ ಬಿರುಸಿನ ಹೊಡೆತ ಗಳಿಸಲು ಅವಕಾಶ ನೀಡಲಿಲ್ಲ.

ನೆದರ್ಲೆಂಡ್ಸ್ ತಂಡಕ್ಕೆ ಯಾವುದೇ ಮಾದರಿಯಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ಲಭಿಸಿದ ಮೊದಲ ಗೆಲುವು ಇದು.

ಸಂಕ್ಷಿಪ್ತ ಸ್ಕೋರ್: ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 158 (ಸ್ಟೀಫನ್ ಮೈಬರ್ಗ್ 37, ಮ್ಯಾಕ್ಸ್ ಒಡೌಡ್ 29, ಟಾಮ್ ಕೂಪರ್ 35, ಕಾಲಿನ್ ಆ್ಯಕರ್‌ಮನ್ ಔಟಾಗದೆ 41, ಕೇಶವ್ ಮಹಾರಾಜ್ 27ಕ್ಕೆ 2, ಎನ್ರಿಚ್ ನಾಕಿಯಾ 10ಕ್ಕೆ 1, ಏಡನ್ ಮರ್ಕರಂ 16ಕ್ಕೆ 1). ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 145 (ತೆಂಬಾ ಬವುಮಾ 20, ರಿಲೀ ರೊಸೊ 25, ಹೆನ್ರಿಚ್ ಕ್ಲಾಸೆನ್ 21, ಬ್ರೆಂಡನ್ ಗ್ಲೋವರ್ 9ಕ್ಕೆ 3, ಫ್ರೆಡ್ ಕ್ಲಾಸೆನ್ 20ಕ್ಕೆ 2, ಬಸ್ ಡಿ ಲೀಡ್ 25ಕ್ಕೆ 2) ಫಲಿತಾಂಶ: ನೆದರ್ಲೆಂಡ್ಸ್‌ಗೆ 13 ರನ್ ಗೆಲುವು

ನೆದರ್ಲೆಂಡ್ಸ್ ಆಟಗಾರರ ಸಂಭ್ರಮ –ಎಪಿ ಚಿತ್ರ

ಪಾಕಿಸ್ತಾನ ಕೈಹಿಡಿದ ಅದೃಷ್ಟ

ಅಡಿಲೇಡ್ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯ ಲೀಗ್ ಹಂತ ದಲ್ಲೇ ಹೊರಬೀಳುವ ಆತಂಕದಲ್ಲಿದ್ದ ಪಾಕಿಸ್ತಾನ ತಂಡ, ಅದೃಷ್ಟದ ನೆರವಿನೊಂದಿಗೆ ಸೆಮಿಫೈನಲ್ ಪ್ರವೇಶಿಸಿತು.

ಅಡಿಲೇಡ್ ಓವಲ್‌ನಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಬಾಬರ್ ಅಜಂ ಬಳಗ ಬಾಂಗ್ಲಾದೇಶ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿತು.

ಇದೇ ತಾಣದಲ್ಲಿ ಬೆಳಿಗ್ಗೆ ನಡೆದಿದ್ದ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ತಂಡ ದಕ್ಷಿಣ ಆಫ್ರಿಕಾವನ್ನು ಮಣಿಸಿದ್ದು ಕೂಡಾ, ಪಾಕ್ ಸೆಮಿ ಹಾದಿಯನ್ನು ಸುಗಮಗೊಳಿಸಿತು. ಮೊದಲ ಪಂದ್ಯದ ಫಲಿತಾಂಶದಿಂದ ಪಾಕ್– ಬಾಂಗ್ಲಾ ಹಣಾಹಣಿ 'ಕ್ವಾರ್ಟರ್ ಫೈನಲ್' ಎನಿಸಿಕೊಂಡಿತ್ತು. ಗೆದ್ದ ತಂಡಕ್ಕೆ ಸೆಮಿಯಲ್ಲಿ ಸ್ಥಾನ ಖಚಿತವಾಗಿತ್ತು.



ಮೊಹಮ್ಮದ್ ಹ್ಯಾರಿಸ್

ಮೊದಲು ಬ್ಯಾಟ್ ಮಾಡಿದ ಶಕೀಬ್ ಅಲ್ ಹಸನ್ ಬಳಗವನ್ನು 8 ವಿಕೆಟ್‌ಗಳಿಗೆ 127 ರನ್‌ಗಳಿಗೆ ನಿಯಂತ್ರಿಸಿದ ಪಾಕ್, ಬಳಿಕ 18.1 ಓವರ್‌ಗಳಲ್ಲಿ 5 ವಿಕೆಟ್ ಕಳೆದುಕೊಂಡು ಗೆಲುವು ಸಾಧಿಸಿತು. 22 ರನ್‌ಗಳಿಗೆ ನಾಲ್ಕು ವಿಕೆಟ್ ಪಡೆದು ಎದುರಾಳಿ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದ ವೇಗಿ ಶಾಹೀನ್ ಶಾ ಅಫ್ರಿದಿ, ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು.

ಸುಲಭ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಮೊಹಮ್ಮದ್ ರಿಜ್ವಾನ್ (32 ರನ್, 32 ಎ.) ಮತ್ತು ಬಾಬರ್ (25 ರನ್, 33 ಎ.) ಮೊದಲ ವಿಕೆಟ್‌ಗೆ 57 ರನ್ ಸೇರಿಸಿದರು. ಮಧ್ಯಮ ಕ್ರಮಾಂಕದಲ್ಲಿ ಮೊಹಮ್ಮದ್ ಹ್ಯಾರಿಸ್ (31 ರನ್, 18 ಎ.) ಹಾಗೂ ಶಾನ್ ಮಸೂದ್ (ಔಟಾಗದೆ 24, 14 ಎ.) ಜವಾಬ್ದಾರಿಯುತ ಆಟವಾಡಿ ಗೆಲುವಿಗೆ ಕಾರಣರಾದರು.

ಸಂಕ್ಷಿಪ್ತ ಸ್ಕೋರ್: ಬಾಂಗ್ಲಾದೇಶ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 127 (ನಜ್ಮುಲ್ ಹೊಸೇನ್ ಶಾಂತೊ 54, ಸೌಮ್ಯ ಸರ್ಕಾರ್ 20, ಅಫೀಫ್ ಹೊಸೇನ್ ಔಟಾಗದೆ 24, ಶಾಹೀನ್ ಶಾ ಅಫ್ರಿದಿ 22ಕ್ಕೆ 4, ಶಾದಾಬ್ ಖಾನ್ 30ಕ್ಕೆ 2, ಇಫ್ತಿಕಾರ್ ಅಹ್ಮದ್ 15ಕ್ಕೆ 1). ಪಾಕಿಸ್ತಾನ 18.1 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 128 (ಮೊಹಮ್ಮದ್ ರಿಜ್ವಾನ್ 32, ಬಾಬರ್ ಅಜಂ 25, ಮೊಹಮ್ಮದ್ ಹ್ಯಾರಿಸ್ 31, ಶಾನ್ ಮಸೂದ್ ಔಟಾಗದೆ 24, ಮುಸ್ತಫಿಜುರ್ ರಹ್ಮಾನ್ 21ಕ್ಕೆ 1, ನಸುನ್ ಅಹ್ಮದ್ 14ಕ್ಕೆ 1) ಫಲಿತಾಂಶ: ಪಾಕಿಸ್ತಾನಕ್ಕೆ 5 ವಿಕೆಟ್ ಗೆಲುವು

BOOK NOW: 7065233336 | Book Nissan Magnite | ALSO AVAILABLE IN CSD. | www.nissan.in | /NissanIndia | /Nissan _ India | /Nissan _ India

AUTHORIZED NISSAN DEALERS: KARNATAKA: BANGALORE: BRIGADE ROAD: SURYA NISSAN- 9731161303, HOSUR ROAD: SURYA NISSAN- 9731161784, KANAKAPURA ROAD: SURYA NISSAN 9731161104, HBR LAYOUT: SURYA NISSAN- 9731161202, WHITEFIELD: SURYA NISSAN- 9731161885, HOSPET: RAYSLINE NISSAN- 9108992650, BELGAUM: SWASTI NISSAN- 9731162374, HUBLI: SWASTI NISSAN- 9731162488, MYSORE: HONNASIRI NISSAN- 9731153151.

SCAN To Request A Call

*Terms & Conditions apply. All prices ex-showroom Delhi. Finance is at sole discretion of finance partners and NRFSI. Features may vary from variant to variant. Colours are indicative only and may vary due to printing constraints. Accessories shown may not be part of standard fitment. The scheme is applicable on vehicles invoiced on or before 30th November'22. Please visit your nearest Nissan dealer for more information.

NISSAN FINANCE